ವಿರೋಧ ಪಕ್ಷದ ನಾಯಕ ಮಾಡುತ್ತಿರುವುದೆಲ್ಲ ಬರೀ ದೊಂಬರಾಟ: ಬಿ.ಎಸ್. ಯಡಿಯೂರಪ್ಪ ಟೀಕೆ

‘ಕೋಲಾರದಿಂದ ಸ್ಪರ್ಧೆ: ಸಿದ್ದರಾಮಯ್ಯ ನಾಟಕ’

ಪ್ರಜಾ ಮತ ಜನತಂತ್ರದ ಹಬ್ಬ — ಕರ್ನಾಟಕ ವಿಧಾನಸಭಾ ಚುನಾವಣೆ - 2023

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಸಿದ್ದರಾಮಯ್ಯ ಅವರು ಕೋಲಾರದಿಂದ ಯಾವುದೇ ಕಾರಣಕ್ಕೂ ಸ್ಪರ್ಧಿಸುವುದಿಲ್ಲ. ಅವರು ನಾಟಕ ಮಾಡುತ್ತಿದ್ದಾರೆ. ಮೈಸೂರಿಗೆ ಬರಲು ಯತ್ನ ನಡೆಸಿದ್ದಾರೆ’ ಎಂದು ಶಾಸಕ ಬಿ.ಎಸ್. ಯಡಿಯೂರಪ್ಪ ಹೇಳಿದರು.

ನಗರದಲ್ಲಿ ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ನಾನೇನು ಭವಿಷ್ಯ ಹೇಳುತ್ತಿಲ್ಲ. ಖಚಿತವಾಗಿ ಮಾತನಾಡುತ್ತಿದ್ದೇನೆ. ಸಿದ್ದರಾಮಯ್ಯ ಮಾಡುತ್ತಿರುವುದೆಲ್ಲ ಬರೀ ದೊಂಬರಾಟ. ಕೋಲಾರದಲ್ಲಿ ಚುನಾವಣೆಗೆ ನಿಂತರೆ ಅವರು ಮನೆ ಹಾದಿ ಹಿಡಿಯುವುದು ನಿಶ್ಚಿತ. ಅವರು ಎಲ್ಲೇ ಸ್ಪರ್ಧಿಸಲಿ; ಈ ಬಾರಿ ಅವರನ್ನು ಸೋಲಿಸಿ ಮನೆಗೆ ಕಳಿಸುವುದು ನಮ್ಮ ಗುರಿ’ ಎಂದರು.


ಬಿ.ಎಸ್. ಯಡಿಯೂರಪ್ಪ

‘ಬಿಜೆಪಿಯಲ್ಲಿ ಮಾಸ್ ಲೀಡರ್ ಇಲ್ಲ’ ಎಂಬ ಸಿದ್ದರಾಮಯ್ಯ ಹೇಳಿಕೆ ಹಾಸ್ಯಾಸ್ಪದ. ನಮಗೆ ವಿಶ್ವನಾಯಕ ನರೇಂದ್ರ ಮೋದಿ ಇದ್ದಾರೆ. ಅವರಿಗೆ ಯಾರಿದ್ದಾರೆ? ಇದೇ ಸಿದ್ದರಾಮಯ್ಯ ರಾಹುಲ್ ಗಾಂಧಿ ಅವರ ಹಿಂದೆ- ಹಿಂದೆ ಓಡುತ್ತಿಲ್ಲವೇ? ಬಲಿಷ್ಠ ನಾಯಕ ಇಲ್ಲದ ಕಾರಣವೇ ಕಾಂಗ್ರೆಸ್ ಎಲ್ಲ ಕಡೆ ಸೋಲು ಕಾಣುತ್ತಿದೆ’ ಎಂದು ಕುಟುಕಿದ ಅವರು, ‘ನಾವು 140 ಸೀಟ್ ಗೆಲ್ಲುವುದು ನಿಶ್ಚಿತ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೂರು ದಿನಗಳಲ್ಲಿ ರಾಜ್ಯ ಪ್ರವಾಸ: ‘ರಾಜ್ಯ ಬಿಜೆಪಿ ನಾಯಕರು ನಿಮ್ಮಿಂದ ಅಂತರ ಕಾಯ್ದುಕೊಂಡಿದ್ದಾರೆಯೇ’ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಮೂರು ದಿನಗಳಲ್ಲಿ ನಾನು ಮತ್ತೆ ರಾಜ್ಯ ಪ್ರವಾಸ ಆರಂಭಿಸುತ್ತೇನೆ. ಬಿಜೆಪಿ ಅಧಿಕಾರಕ್ಕೆ ತರುವವರೆಗೂ ವಿಶ್ರಮಿಸುವುದಿಲ್ಲ’ ಎಂದರು.

‘ಸಿದ್ದರಾಮಯ್ಯ ಸ್ಪರ್ಧೆಗೆ ಪಾಕಿಸ್ತಾನವೇ ಸೇಫ್’

ಹಾವೇರಿ: ‘ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನವರ ಸ್ಪರ್ಧೆಗೆ ಪಾಕಿಸ್ತಾನವೇ ಸುರಕ್ಷಿತ. ಅಲ್ಲಿ ಮೋದಿ, ಬೊಮ್ಮಾಯಿ, ಯಡಿಯೂರಪ್ಪನವರಿಲ್ಲ. ಅಲ್ಲಿಗೆ ಹೋದರೆ ಕಾಟ ಕೊಡೋದಕ್ಕೆ ಡಿ.ಕೆ. ಶಿವಕುಮಾರ್ ಮತ್ತು ಖರ್ಗೆ ಇಬ್ಬರೂ ಇರಲ್ಲ’ ಎಂದು ಶಾಸಕ ಸಿ.ಟಿ. ರವಿ ಅವರು ವ್ಯಂಗ್ಯವಾಡಿದರು.

ಸಿ.ಟಿ.ರವಿ

ರಾಣೆಬೆನ್ನೂರಿನಲ್ಲಿ ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿ, ‘ಬಿಜೆಪಿ ಹಾಲಿ ಶಾಸಕರೇ ಕಾಂಗ್ರೆಸ್ ಸೇರಲು ಸಿದ್ಧವಿದ್ದಾರೆ ಎಂಬ ಡಿ.ಕೆ. ಶಿವಕುಮಾರ್ ಹೇಳಿಕೆ ಸತ್ಯಕ್ಕೆ ದೂರ. ಕಾಂಗ್ರೆಸ್ ತೊರೆದು ಬಿಜೆಪಿ ಸೇರಲು ಆ ಪಕ್ಷದವರು ತುದಿಗಾಲ ಮೇಲೆ ನಿಂತಿದ್ದಾರೆ. ನಾವು ಆಯ್ಕೆ ಮಾಡಿ ಸೇರ್ಪಡೆ ಮಾಡಿಕೊಳ್ಳುತ್ತೇವೆ’ ಎಂದು ತಿರುಗೇಟು ನೀಡಿದರು.

ವಿಧಾನ ಪರಿಷತ್ ಸದಸ್ಯ ಆರ್. ಶಂಕರ್ ಕಾಂಗ್ರೆಸ್ ಸೇರುವ ವಿಚಾರಕ್ಕೆ ಪ್ರತಿಕ್ರಿಯಿಸಿ, ‘ಶಂಕರ್ ಅನರ್ಹ ಆದಾಗ ಎಂಎಲ್‌ಸಿ ಮಾಡಿದ್ದೇವೆ. ಅವರಿಗೆ ಮಂತ್ರಿ ಆಗಬೇಕು ಅಂತ ಆಸೆ ಇತ್ತು. ತಾಳ್ಮೆಯಿಂದ ಇದ್ದು ಬಿಜೆಪಿಯಲ್ಲಿ ಉಳಿದುಕೊಂಡು ಬಿಜೆಪಿ ಅಭ್ಯರ್ಥಿ ಗೆಲ್ಲಿಸಿದರೆ ಬಡ್ಡಿ ಸಮೇತ ಬರುತ್ತೆ, ಬಿಟ್ಟು ಹೋದರೆ ಠೇವಣಿ ಕೂಡ ಹೋಗುತ್ತೆ’ ಎಂದರು.

‘ನಮ್ಮದು ತತ್ವದ ರಾಜಕಾರಣ, ಹಿಂದುತ್ವದ ರಾಜಕಾರಣ. ಚುನಾವಣೆ ಹಿಂದೂಗಳು ನಾವಲ್ಲ, ಆ ವೇಷಾನೂ ಹಾಕಲ್ಲ’ ಎಂದು ಅವರು ಪ್ರತಿಕ್ರಿಯಿಸಿದರು.

ಸುದ್ದಿ 2 ನಿಮಿಷ

ಕಾರ್ಕಳದಿಂದ ಸ್ಪರ್ಧೆ: ಮುತಾಲಿಕ್

ಕಾರ್ಕಳ (ಉಡುಪಿ): ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾರ್ಕಳದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಶ್ರೀರಾಮ ಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಸಾವಿರಾರು ಹಿಂದೂ ಕಾರ್ಯಕರ್ತರ ನೋವಿನ ಧ್ವನಿಯಾಗಿ ನಾನು ಸ್ಪರ್ಧಿಸುತ್ತಿದ್ದೇನೆ’ ಎಂದು ಹೇಳಿದ ಅವರು ‘ಉಡುಪಿ ಜಿಲ್ಲೆಯಲ್ಲಿ ಅತಿ ಹೆಚ್ಚು ಗೋಕಳ್ಳತನ ನಡೆಯುತ್ತಿರುವುದು ಕಾರ್ಕಳ ಕ್ಷೇತ್ರದಲ್ಲಿ. ಇಲ್ಲಿನ ಹಿಂದೂ ಕಾರ್ಯಕರ್ತರ ಹೆಸರನ್ನು ಗೂಂಡಾ ಮತ್ತು ರೌಡಿ ಪಟ್ಟಿಯಲ್ಲಿ ಸೇರಿಸಲಾಗಿದೆ’ ಎಂದು ದೂರಿದರು.



‘12 ಕ್ಷೇತ್ರಗಳಲ್ಲಿ ಪ್ರವಾಸ ಮಾಡಿ ಕಾರ್ಯಕರ್ತರು ಸಲ್ಲಿಸಿರುವ ವರದಿಯ ಆಧಾರದಲ್ಲಿ ಕಾರ್ಕಳವನ್ನು ಸ್ಪರ್ಧೆಗೆ ಆಯ್ಕೆ ಮಾಡಲಾಗಿದೆ. ಈ ಕ್ಷೇತ್ರದಲ್ಲಿ ಭ್ರಷ್ಟಾಚಾರ ತುಂಬಿದ್ದು ಅದರ ವಿರುದ್ಧ ಹೋರಾಟ ಹಾಗೂ ಹಿಂದುತ್ವವೇ ನನ್ನ ಧ್ಯೇಯ. ಕಾರ್ಕಳದಲ್ಲಿ ಫೆಬ್ರುವರಿ 5ರಂದು ಕಾರ್ಯಾಲಯ ಉದ್ಘಾಟನೆಯಾಗಲಿದ್ದು ಕಲಬುರಗಿ ಜಿಲ್ಲೆ ಆಂದೋಲದ ಸಿದ್ಧಲಿಂಗ ಶ್ರೀ ಸೇರಿದಂತೆ ಎಂಟಕ್ಕೂ ಹೆಚ್ಚು ಸ್ವಾಮೀಜಿಗಳು ಭಾಗವಹಿಸಿ ಗೋಪೂಜೆ ನೆರವೇರಿಸಲಿದ್ದಾರೆ’ ಎಂದರು.

ನಾಲ್ವರು ‘ಕೈ’ ಮುಖಂಡರಿಗೆ ತಲಾ ₹ 50 ಸಾವಿರ ದಂಡ

ಕುಣಿಗಲ್: ಅನುಮತಿ ಇಲ್ಲದೆ ಗೋದಾಮಿನಲ್ಲಿ ಕುಕ್ಕರ್, ಡಿನ್ನರ್ ಸೆಟ್ ಸಂಗ್ರಹ ಮಾಡಿದ್ದ ನಾಲ್ವರು ಕಾಂಗ್ರೆಸ್ ಮುಖಂಡರಿಗೆ ವಾಣಿಜ್ಯ ತೆರಿಗೆ ಇಲಾಖೆಯು ತಲಾ ₹50 ಸಾವಿರ ದಂಡ ವಿಧಿಸಿದೆ.

ತಾಲ್ಲೂಕಿನ ನಾಲ್ಕು ಕಡೆಗಳಲ್ಲಿ ಕಾಂಗ್ರೆಸ್ ಮುಖಂಡರು ವಿಧಾನಸಭಾ ಚುನಾವಣೆಗೂ ಮುನ್ನ ಮತದಾರರಿಗೆ ವಿತರಿಸಲು ನಾಲ್ಕು ಲಾರಿ ಲೋಡ್ ಡಿನ್ನರ್ ಸೆಟ್ ದಾಸ್ತಾನು ಮಾಡಿದ್ದರು. ಈ ಬಗ್ಗೆ ಜೆಡಿಎಸ್ ತಾಲ್ಲೂಕು ಘಟಕದ ಅಧ್ಯಕ್ಷ ಬಿ.ಎನ್. ಜಗದೀಶ್ ನೀಡಿದ ದೂರಿನ ಮೇರೆಗೆ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು.

ಈ ವೇಳೆ ಬಿಲ್‌ನಲ್ಲಿ ನಮೂದಾಗಿರುವ ಗೋದಾಮಿನ ಸ್ಥಳಕ್ಕೂ ಹಾಗೂ ಸಂಗ್ರಹವಾಗಿರುವ ಸ್ಥಳಕ್ಕೂ ತಾಳೆಯಾಗಿರಲಿಲ್ಲ. ಹಾಗಾಗಿ, ಸ್ಥಳೀಯ ಕಾಂಗ್ರೆಸ್ ಮುಖಂಡರಾದ ರಂಗಣ್ಣಗೌಡ, ಚೇತನ್, ಹುಲ್ಲೂರಯ್ಯ ಮತ್ತು ಎಸ್.ಎಚ್. ಎಂಟರ್ ಪ್ರೈಸಸ್‌ಗೆ ದಂಡ ವಿಧಿಸಲಾಗಿದೆ ಎಂದು ವಾಣಿಜ್ಯ ತೆರಿಗೆ ಇಲಾಖೆಯ ಸಹಾಯಕ ಆಯುಕ್ತ ನಾಗರಾಜು ತಿಳಿಸಿದ್ದಾರೆ. ತಾಳೆಯಾದ ಡಿನ್ನರ್ ಬಾಕ್ಸ್‌ಗಳ ಬಗ್ಗೆ ಕಾರಣ ಕೇಳಿ ನೋಟಿಸ್ ಜಾರಿಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

‘ಆತ್ಮಾವಲೋಕನ ಮಾಡಿಕೊಳ್ಳಲಿ’

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲು ಕಾರಣರಾದವರ ಬಗ್ಗೆ ಎಚ್‌ಡಿಕೆ ಟೀಕೆ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ‘ಬಿಜೆಪಿ ಸರ್ಕಾರದ ದುರಾಡಳಿತವನ್ನು ಕಾಂಗ್ರೆಸ್ ನಾಯಕರು ಟೀಕೆ ಮಾಡುತ್ತಿದ್ದಾರೆ. ಆದರೆ, ಇಂತಹ ಸರ್ಕಾರ ಬರಲು ಕಾರಣರಾದವರು ಆತ್ಮಾವಲೋಕನ ಮಾಡಿಕೊಳ್ಳಬೇಕು’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.


ಕುಮಾರಸ್ವಾಮಿ

ಗುಳೇದಗುಡ್ಡದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸರ್ಕಾರ ರಚನೆಗೆ ಸಹಕರಿಸಿ, ಈಗ ಟೀಕೆ ಮಾಡಿಕೊಂಡು ತಿರುಗಾಡುತ್ತಿದ್ದಾರೆ’ ಎಂದು ಲೇವಡಿ ಮಾಡಿದರು.

‘ಸಚಿವ ಮಾಧುಸ್ವಾಮಿ ಮಾನಸಿಕ ಸ್ಥಿಮಿತಕಳೆದುಕೊಂಡಿದ್ದಾರೆ.ಕುಟುಂಬದವರೆಲ್ಲ ಲೂಟಿ ಹೊಡೆಯುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.ಯಾರುಲೂಟಿಮಾಡುತ್ತಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಜನ ತೀರ್ಮಾನ ಮಾಡಲಿದ್ದಾರೆ’ ಎಂದರು.

‘ದೇವೇಗೌಡ್ರು ಹೇಮಾವತಿ ಜಲಾಶಯ ಕಟ್ಟದಿದ್ದರೆ ಏನಾಗುತ್ತಿತ್ತು? ಜಲಾಶಯ ಇರದಿದ್ದರೆ ಇವರೆಲ್ಲಿಂದ ನೀರು ತರುತ್ತಿದ್ದರು’ ಎಂದರು.

ಬಿಜೆಪಿ ಕೌಂಟರ್ ಅಟ್ಯಾಕ್ ಮಾಡುತ್ತಿಲ್ಲ: ಮಾಧುಸ್ವಾಮಿ

ತುಮಕೂರು: ‘ಸರ್ಕಾರ, ಬಿಜೆಪಿ ವಿರುದ್ಧ ಬೇರೆಯವರು ಆರೋಪ ಮಾಡುತ್ತಿದ್ದರೂ ನಾವು ‘ಕೌಂಟರ್ ಅಟ್ಯಾಕ್’ (ಪ್ರತಿ ದಾಳಿ) ಮಾಡುತ್ತಿಲ್ಲ. ತೀವ್ರತರವಾಗಿ ವಾಗ್ದಾಳಿ ನಡೆಸುತ್ತಿಲ್ಲ’ ಎಂದು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಅಳಲು ತೋಡಿಕೊಂಡಿದ್ದಾರೆ.

ಚಿಕ್ಕನಾಯಕನಹಳ್ಳಿ ತಾಲ್ಲೂಕು ಮತಿಘಟ್ಟ ಗ್ರಾಮದಲ್ಲಿ ಭಾನುವಾರ ಬಿಜೆಪಿ ಹಮ್ಮಿಕೊಂಡಿದ್ದ ವಿಜಯ ಸಂಕಲ್ಪ ಯಾತ್ರೆ ಕಾರ್ಯಕ್ರಮದಲ್ಲಿ ಮಾತನಾಡುವ ಸಮಯದಲ್ಲಿ ತಮ್ಮದೇ ಪಕ್ಷದ ಮುಖಂಡರ ವಿರುದ್ಧ ಅವರು ಅಸಮಾಧಾನ ವ್ಯಕ್ತಪಡಿಸಿದರು.

> ಕಾಂಗ್ರೆಸ್ ವಿರುದ್ಧ ಮೊದಲು ಮಾಧುಸ್ವಾಮಿ ಮಾತನಾಡಲಿ. ಸದನದ ಒಳಗೆ ಆಕ್ರಮಣಕಾರಿಯಾಗಿ ಮಾತನಾಡುವಂತೆ ಹೊರಗೂ ಮಾತಾಡಲಿ
>
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

‘ನಮ್ಮ ವಿರುದ್ಧ ಮಾಡುತ್ತಿರುವ ಆರೋಪ, ಟೀಕೆಗಳಿಗೆ ಉತ್ತರ ಕೊಡದಿರುವುದನ್ನು ನೋಡಿದರೆ ಅವರು ಹೇಳಿದ್ದೇ ಸತ್ಯ ಎನ್ನುವಂತಾಗಿದೆ. ಯಾರೋ ಬಾಯಿಗೆ ಬಂದಂತೆ ಮಾತನಾಡುತ್ತಾರೆ. ಅದನ್ನು ಕೇಳಿಸಿಕೊಂಡು ಹೌದು ಎನ್ನುತ್ತಿರುವುದನ್ನು ನೋಡಿದರೆ ನಾವೇ ಜಿಜ್ಞಾಸೆಗೆ ಒಳಗಾಗಿದ್ದೇವೆ. ಗಟ್ಟಿ ಧ್ವನಿಯಲ್ಲಿ ನಮ್ಮ ಸಾಧನೆಗಳನ್ನು ಹೇಳಿಕೊಳ್ಳಬೇಕಿದೆ’ ಎಂದರು.

‘ಪ್ರಚಾರ ಗಿಟ್ಟಿಸಲು ಮಾಧುಸ್ವಾಮಿ ಮಾತು’

ಬೆಂಗಳೂರು: ‘ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಅವರಿಗೆ ಎಚ್.ಡಿ. ದೇವೇಗೌಡರ ಬಗ್ಗೆ ಮಾತನಾಡದಿದ್ದರೆ ತಿಂದ ಅನ್ನ ಜೀರ್ಣವಾಗುವುದಿಲ್ಲವೇ? ಮಾತಿನ ಭೇದಿಯಿಂದ ಪ್ರಚಾರ ಗಿಟ್ಟಿಸಿಕೊಳ್ಳಲು ಅವರು ಹುನ್ನಾರ ಮಾಡಿದ್ದಾರೆಯೇ’ ಎಂದು ಜೆಡಿಎಸ್ ಪ್ರಶ್ನಿಸಿದೆ.

ದೇವೇಗೌಡ ಮತ್ತು ಅವರ ಕುಟುಂಬ ಸದಸ್ಯರ ವಿರುದ್ಧ ಸಚಿವರು ನೀಡಿದ್ದ ಹೇಳಿಕೆಗೆ ಜೆಡಿಎಸ್ ಅಧಿಕೃತ ಟ್ವಿಟರ್ ಖಾತೆಯಿಂದ ಸೋಮವಾರ ಪ್ರತಿಕ್ರಿಯೆ ನೀಡಲಾಗಿದೆ. ‘ನೆಟ್ಟಗೆ ಆಡಳಿತ ನಡೆಸಲು ಬಾರದ ರಾಜ್ಯದ ಬಿಜೆಪಿ ಸರ್ಕಾರದ ಕುಕೃತ್ಯಗಳಿಗೆ ಬೌದ್ಧಿಕ ಪೋಷಾಕು ತೊಡಿಸಿ, ಸಮರ್ಥನೆಗೆ ಇಳಿಯುವ ಮೊಂಡುವಾದಿ ಸಚಿವ ಮಾಧುಸ್ವಾಮಿ’ ಎಂದು ಟೀಕಿಸಿದೆ.

‘ಆಡಳಿತ ನಡೆಸುವ ಬದಲು ಸರ್ಕಾರವು ಏನೋ ಒಂದು ನಿಭಾವಣೆ ಮಾಡುತ್ತಾ, ಕಾಲತಳ್ಳುತಿದೆ ಎಂದು ಹೇಳಿದ ಭೂಪ ನೀವೇ ಅಲ್ಲವೆ? ಶೇಕಡ 40ರಷ್ಟು ಕಮಿಷನ್ ಸರ್ಕಾರ ಎಂದೇ ಕುಖ್ಯಾತವಾಗಿರುವ ನಿಮ್ಮ ಸರ್ಕಾರ ದೋಚುತ್ತಿರುವ ಸಾರ್ವಜನಿಕರ ಹಣದ ಬಗ್ಗೆ ಲೆಕ್ಕ ಇದೆಯೆ? ಯಾವ ಮುಖ ಇಟ್ಟುಕೊಂಡು ದೇವೇಗೌಡರ ಕುಟುಂಬದ ಬಗ್ಗೆ ಜನತೆಯ ಮುಂದೆ ಹಸಿಸುಳ್ಳು ಹೇಳುತ್ತಿದ್ದೀರಿ’ ಎಂದು ಪ್ರಶ್ನಿಸಿದೆ.

‘ರಾಜ್ಯ ಕಾಂಗ್ರೆಸ್ ವಿಸರ್ಜಿಸಿ’

ಹಾಸನ: ‘ಮಹಾತ್ಮ ಗಾಂಧೀಜಿಯವರ ಸಲಹೆಯಂತೆ ರಾಹುಲ್ ಗಾಂಧಿ, ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವನ್ನು ವಿಸರ್ಜಿಸುವುದು ಒಳ್ಳೆಯದು. ಈಗಿರುವ ಕಾಂಗ್ರೆಸ್ ಆಗಿನದ್ದಲ್ಲ. ಇಲ್ಲಿರುವುದು ಹೊಂದಾಣಿಕೆಯ, ಕೋಮುವಾದಿ ಪಕ್ಷಗಳ ಜೊತೆ ಕೈಜೋಡಿಸಿರುವ ಕಾಂಗ್ರೆಸ್’ ಎಂದು ಶಾಸಕ ಎಚ್.ಡಿ. ರೇವಣ್ಣ ಹೇಳಿದರು.


ಎಚ್.ಡಿ.ರೇವಣ್ಣ

ನಗರದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಷ್ಟ್ರೀಯ ಕಾಂಗ್ರೆಸ್‌ನ ಗೌರವ ಉಳಿಯಬೇಕಾದರೆ, ಕರ್ನಾಟಕದ ಕಾಂಗ್ರೆಸ್ ಅನ್ನು ವಿಸರ್ಜಿಸಿ, ಕೋಮುವಾದಿಗಳ ಜೊತೆಗೆ ವಿಲೀನ ಮಾಡುವುದು ಒಳ್ಳೆಯದು’ ಎಂದರು.

‘ಕೆ.ಎಚ್. ಮುನಿಯಪ್ಪ, ಡಾ.ಜಿ. ಪರಮೇಶ್ವರ, ಮಲ್ಲಿಕಾರ್ಜುನ ಖರ್ಗೆ ಅವರಂತಹ ದಲಿತ ಮುಖಂಡರನ್ನು ಸೋಲಿಸಿದವರು ಯಾರು? ದೇವೇಗೌಡರು, ನಿಖಿಲ್ ಕುಮಾರಸ್ವಾಮಿ ಸೋಲಿಗೆ ಯಾರು ಕಾರಣ? ರಾಜ್ಯಸಭೆ ಚುನಾವಣೆಯಲ್ಲಿ ಬಿಜೆಪಿಯ ನಾಲ್ಕನೇ ಅಭ್ಯರ್ಥಿ ಗೆಲುವಿಗೆ ಕಾರಣ ಯಾರು? ಇದಕ್ಕೆ ನಾವು ಕಾರಣರಲ್ಲ ಎಂದು ಕಾಂಗ್ರೆಸ್ ನಾಯಕರು ಧರ್ಮಸ್ಥಳದಲ್ಲಿ ಆಣೆ ಪ್ರಮಾಣ ಮಾಡಲಿ’ ಎಂದು ಸವಾಲು ಹಾಕಿದರು.

‘ಇಂತಹ ದುಸ್ಥಿತಿಯಲ್ಲಿರುವ ರಾಜ್ಯದ ಕಾಂಗ್ರೆಸ್ ನಾಯಕರಿಗೆ, ಜೆಡಿಎಸ್ ಅನ್ನು ಬಿಜೆಪಿಯ ಬಿ ಟೀಂ ಎಂದು ಹೇಳಲು ಯಾವ ನೈತಿಕತೆ ಇದೆ?’ ಎಂದು ಹೇಳಿದರು.

ಡಿನೋಟಿಫಿಕೇಷನ್ ಪ್ರಕರಣ: ಬಿಎಸ್‌ವೈ ನಿರಾಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಕ್ರಮ ಡಿನೋಟಿಫಿಕೇಷನ್ ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರಿಗೆ ನೀಡಲಾಗಿದ್ದ ಮಧ್ಯಂತರ ರಕ್ಷಣೆ ಆದೇಶವನ್ನು ರದ್ದುಗೊಳಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ.

ಡಿನೋಟಿಫಿಕೇಷನ್ ಪ್ರಕರಣದಲ್ಲಿ ಯಡಿಯೂರಪ್ಪ ಅವರನ್ನು ಬಂಧಿಸದಂತೆ ಸುಪ್ರೀಂ ಕೋರ್ಟ್ ಈ ಹಿಂದೆ ಮಧ್ಯಂತರ ರಕ್ಷಣೆ ನೀಡಿತ್ತು. ಇದನ್ನು ಪ್ರಶ್ನಿಸಿ ಉದ್ಯಮಿ ಆಲಂ ಪಾಷಾ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ಕೈಗೆತ್ತಿಕೊಂಡ ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಹಾಗೂ ವಿಕ್ರಮ್‌ನಾಥ್ ಅವರನ್ನು ಒಳಗೊಂಡ ಪೀಠ, ಅರ್ಜಿಯನ್ನು ವಜಾಗೊಳಿಸಿದೆ. ಪ್ರಕರಣದ ಮುಖ್ಯ ಅರ್ಜಿಯ ವಿಚಾರಣೆ ಜನವರಿ 30ರಂದು ನಡೆಯಲಿದೆ.

ದೇವನಹಳ್ಳಿಯಲ್ಲಿ 2011ರಲ್ಲಿ 26 ಎಕರೆ ಡಿನೋಟಿಫಿಕೇಷನ್ ಮಾಡಿ ಅಕ್ರಮ ನಡೆಸಲಾಗಿದೆ ಎಂದು ಆರೋಪಿಸಿ ಆಲಂ ಪಾಷಾ ದೂರು ನೀಡಿದ್ದರು.

ಈ ದೂರಿನ ಮೇರೆಗೆ ದಾಖಲಾದ ಪ್ರಕರಣದಲ್ಲಿ, ಯಡಿಯೂರಪ್ಪ ಅವರ ವಿರುದ್ಧದ ವಿಚಾರಣೆಯನ್ನು ವಿಶೇಷ ನ್ಯಾಯಾಲಯ ಕೈಬಿಟ್ಟಿತ್ತು. ಈ ಆದೇಶವನ್ನು ಕರ್ನಾಟಕ ಹೈಕೋರ್ಟ್ ವಜಾಗೊಳಿಸಿತ್ತು. ಕೂಡಲೇ ವಿಚಾರಣೆ ಕೈಗೆತ್ತಿಕೊಳ್ಳುವಂತೆಯೂ ಆದೇಶಿಸಿತ್ತು.

ಬೆಳಗಾವಿ ನಗರದಲ್ಲಿ ಸೋಮವಾರ ನಡೆದ ವಿಧಾನ ಪರಿಷತ್ ಸದಸ್ಯ ಲಕ್ಷ್ಮಣ ಸವದಿ ಅವರ ಪುತ್ರರ ಮದುವೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪಾಲ್ಗೊಂಡರು. ನವದಂಪತಿ ಸಮಿತ್–ರಚನಾ ಹಾಗೂ ಶಶಿಕಾಂತ–ಸ್ನೇಹಲ್ ಇದ್ದಾರೆ

ಪೋಷಕ ನಟ ಲಕ್ಷ್ಮಣ್ ನಿಧನ

ಬೆಂಗಳೂರು: ಚಂದನವನದ ಖ್ಯಾತ ಪೋಷಕ ನಟ ಲಕ್ಷ್ಮಣ್ (74) ಅವರು ಸೋಮವಾರ ನಿಧನರಾಗಿದ್ದಾರೆ. ಅವರಿಗೆ ಪತ್ನಿ, ಮೂವರು ಮಕ್ಕಳು ಇದ್ದಾರೆ.

ಸೋಮವಾರ ಮುಂಜಾನೆ ಲಕ್ಷ್ಮಣ್ ಅವರಿಗೆ ಹೃದಯದಲ್ಲಿ ನೋವು ಕಾಣಿಸಿಕೊಂಡಿತ್ತು. ಆಸ್ಪತ್ರೆಗೆ ಕರೆದೊಯ್ಯುವ ವೇಳೆಯೇ ಅವರು ಕೊನೆಯುಸಿರೆಳೆದಿದ್ದರು. ಬೆಂಗಳೂರಿನಲ್ಲೇ ಜನಿಸಿದ ಲಕ್ಷ್ಮಣ್ ಅವರು ರಂಗಭೂಮಿ ಮೂಲಕ ಸಿನಿಮಾ ರಂಗಕ್ಕೆ ಕಾಲಿಟ್ಟವರು.

ಲಕ್ಷ್ಮಣ್

‘ಉಷಾ ಸ್ವಯಂವರ’ ಎಂಬ ಸಿನಿಮಾ ಮೂಲಕ ನಾಯಕರಾಗಿ ಬೆಳ್ಳಿತೆರೆ ಪ್ರವೇಶಿಸಿದ್ದರು. ಬಳಿಕ ನೂರಾರು ಸಿನಿಮಾಗಳಲ್ಲಿ ಖಳನಾಯಕನಾಗಿ ಮಿಂಚಿದ್ದರು. ‘ಅಂತ’ ಸಿನಿಮಾದಲ್ಲಿ ನಟ ಅಂಬರೀಷ್ ಅವರ ಸ್ನೇಹಿತನ ಪಾತ್ರದಲ್ಲಿ ಲಕ್ಷ್ಮಣ್ ನಟಿಸಿದ್ದರು. ಇದಾದ ಬಳಿಕ ನಿರ್ದೇಶಕ ಎ.ಟಿ.ರಘು ಅವರು ನಿರ್ದೇಶಿಸಿದ್ದ ಬಹುತೇಕ ಸಿನಿಮಾಗಳಲ್ಲಿ ಅಂಬರೀಷ್ ಜೊತೆಗೆ ಬಣ್ಣಹಚ್ಚಿದ್ದರು. ‘ಮಲ್ಲ’, ‘ಯಜಮಾನ’, ‘ಸೂರ್ಯವಂಶ’, ‘ಸಾಂಗ್ಲಿಯಾನ’ ಸೇರಿದಂತೆ 300ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದ ಲಕ್ಷ್ಮಣ್, ಪೊಲೀಸ್ ಅಧಿಕಾರಿ ಪಾತ್ರದಲ್ಲೂ ನಟಿಸಿದ್ದರು. ಅಂಬರೀಷ್, ವಿಷ್ಣುವರ್ಧನ್, ಶಂಕರ್‌ನಾಗ್ ಮುಂತಾದ ದಿಗ್ಗಜರೊಂದಿಗೂ ನಟಿಸಿದ್ದರು.

ಎಎಪಿ: ಪೃಥ್ವಿ ರೆಡ್ಡಿ ಮರುನೇಮಕ

ಬೆಂಗಳೂರು: ಆಮ್ ಆದ್ಮಿ ಪಕ್ಷದ(ಎಎಪಿ) ನೂತನ ಪದಾಧಿಕಾರಿಗಳ ಪಟ್ಟಿಯನ್ನು ಪಕ್ಷದ ರಾಜ್ಯ ಚುನಾವಣಾ ಉಸ್ತುವಾರಿ ಹಾಗೂ ದೆಹಲಿ ಶಾಸಕ ದಿಲೀಪ್ ಪಾಂಡೆ ಘೋಷಿಸಿದರು.

ಎಎಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ಪೃಥ್ವಿ ರೆಡ್ಡಿ ಅವರನ್ನು ಮರುನೇಮಕ ಮಾಡಲಾಗಿದೆ.

‘ಸಂಚಿತ್ ಸಹಾನಿ(ಪ್ರಧಾನ ಕಾರ್ಯದರ್ಶಿ), ಜೆ. ಹರಿಹರನ್ (ಖಜಾಂಚಿ), ‘ಮುಖ್ಯಮಂತ್ರಿ’ ಚಂದ್ರು (ಪ್ರಚಾರ ಮತ್ತು ಜನಸಂಪರ್ಕ ಸಮಿತಿ ಅಧ್ಯಕ್ಷ), ಭಾಸ್ಕರ್ ರಾವ್ (ಪ್ರಣಾಳಿಕೆ ಸಮಿತಿಯ ಅಧ್ಯಕ್ಷ), ಬ್ರಿಜೇಶ್ ಕಾಳಪ್ಪ (ಮಾಧ್ಯಮ ಮತ್ತು ಸಂವಹನಾ ಉಸ್ತುವಾರಿ), ಜಗದೀಶ್ ವಿ. ಸದಂ (ಮಾಧ್ಯಮ ಉಸ್ತುವಾರಿ), ಬಿ.ಟಿ. ನಾಗಣ್ಣ, ಮೋಹನ್ ದಾಸರಿ, ರವಿಚಂದ್ರ ನೆರಬೆಂಚಿ, ಶಿವರಾಯಪ್ಪ ಜೋಗಿನ್, ಜಾಫರ್ ಮೊಯಿನುದ್ದೀನ್ (ಕಾರ್ಯಾಧ್ಯಕ್ಷರು) ಅವರನ್ನು ಪದಾಧಿಕಾರಿಗಳನ್ನಾಗಿ ನೇಮಿಸಲಾಗಿದೆ’ ಎಂದು ದಿಲೀಪ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ವಿಜಯ ಶರ್ಮಾ, ಚೆನ್ನಪ್ಪ ಗೌಡ, ವೆಂಕಟೇಶ್, ವಿಶ್ವನಾಥ್ ಬಿ.ಎಲ್., ರೋಹನ್ ಐನಾಪುರ, ರುದ್ರಯ್ಯ ನವಲಿ ಹಿರೇಮಠ, ಸಾ.ಸಿ. ಬೆನಕನಹಳ್ಳಿ, ಉಮಾಶಂಕರ್, ವಿ. ಲಕ್ಷ್ಮೀಕಾಂತ ರಾವ್, ವಿವೇಕಾನಂದ ಸಾಲಿನ್ಸ್ ಅವರನ್ನು ಉಪಾಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಜಿಲ್ಲಾಧ್ಯಕ್ಷರು: ‘ಶಂಕರ ಹೆಗಡೆ (ಬೆಳಗಾವಿ), ಕೆ.ಎಂ. ಕಲಾದಗಿ(ಬಾಗಲಕೋಟೆ), ಅನಂತ್ ಕುಮಾರ್ ಬುಗಡಿ(ಧಾರವಾಡ), ಸಂಜೀವ ಕುಲಕರ್ಣಿ(ಗದಗ), ಫರೀದ್ ನದಾಫ್(ಹಾವೇರಿ), ಬಾಲಕೃಷ್ಣ ನಾಯಕ(ಉತ್ತರ ಕನ್ನಡ), ಡಾಲ್ಫಿನ್ ಡಿಸೋಜಾ (ಉಡುಪಿ), ಅಶೋಕ ಅಡಮಲೆ(ದಕ್ಷಿಣ ಕನ್ನಡ), ಅವಿನಾಶ ಕಮಲಾಪುರ (ಬೀದರ್), ಎಲ್.ಎಸ್. ಪಾಟೀಲ (ಕಲಬುರಗಿ), ಮರಗೆಪ್ಪ ಸಾಲಿಕೇರಿ(ಯಾದಗಿರಿ), ಭೋಗೇಶ್ ಸೊಲ್ಲಾಪುರ (ವಿಜಯಪುರ), ಬಸವರಾಜ ಗುತ್ತೇದಾರ(ರಾಯಚೂರ),ಹುಸೇನಸಾಬ್ ಗಂಗ್ನಾಳ(ಕೊಪ್ಪಳ), ಕಾಳಿದಾಸ ಜೊನ್ನಾಳ(ವಿಜಯನಗರ), ಟಿ. ಕಿರಣಕುಮಾರ (ಬಳ್ಳಾರಿ), ಚಂದ್ರು ಬಿ (ದಾವಣಗೆರೆ), ಫಾರೂಕ್ ಅಲಿ(ಚಿತ್ರದುರ್ಗ), ಪ್ರೇಮಕುಮಾರ್ ಎ.ಆರ್.(ತುಮಕೂರು), ಮಳ್ಳೂರು ಶಿವಣ್ಣ(ಚಿಕ್ಕಬಳ್ಳಾಪುರ), ವಿಜಯ ಕುಮಾರ್(ಕೋಲಾರ), ಲೋಹಿತ್(ಬೆಂಗಳೂರು ಗ್ರಾಮಾಂತರ), ಶಿವಕುಮಾರ್(ಮಂಡ್ಯ), ನಾಗೇಂದ್ರಗೌಡ (ರಾಮನಗರ), ರಂಗಯ್ಯ ಎಲ್(ಮೈಸೂರು), ಭೋಜಣ್ಣ ಸೋಮಯ್ಯ(ಕೊಡಗು), ರಾಜಶೇಖರ(ಚಾಮರಾಜನಗರ), ಕೆ. ಕಿರಣ(ಶಿವಮೊಗ್ಗ), ಹೇಮಂತ್ ಕುಮಾರ್ ಎಂ.ಎಸ್. (ಚಿಕ್ಕಮಗಳೂರು), ಆನಂದ ಟಿ.ಪಿ(ಹಾಸನ), ಸತೀಶ್ ಮೋಹನ್(ಬೆಂಗಳೂರು ನಗರ).

ಸರ್ವೋದಯ ಕರ್ನಾಟಕ ಪಕ್ಷಕ್ಕೆ ಮರು ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ವೋದಯ ಕರ್ನಾಟಕ ಪಕ್ಷಕ್ಕೆ ಮರು ಚಾಲನೆ ದೊರೆತಿದ್ದು, ಮೊದಲ ಹಂತದಲ್ಲಿ ರಾಜ್ಯದ ಐದು ವಿಧಾನಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ.

ನಗರದಲ್ಲಿ ಸೋಮವಾರ ನಡೆದ ಚಾಲನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಸಮಾಜವಾದಿ ಮುಖಂಡ ಮೈಕಲ್ ಫರ್ನಾಂಡಿಸ್, ‘ದೇಶದ ಸಂಪತ್ತು ಕೆಲವೇ ಕೆಲವರ ಪಾಲಾಗುತ್ತಿದೆ. ಇದಕ್ಕೆ ಜನವಿರೋಧಿ ನೀತಿಗಳೇ ಕಾರಣವಾಗಿವೆ. ಈ ನೀತಿಗಳನ್ನು ಬದಲಿಸಲು ಜನಪರ ಕಾಳಜಿವುಳ್ಳ ಎಲ್ಲ ಪಕ್ಷಗಳು ಒಗ್ಗೂಡುವ ಅಗತ್ಯವಿದೆ. ಪ್ರತ್ಯೇಕ ಹೋರಾಟ ನಡೆಸಿದರೆ ಅದು ಜನವಿರೋಧಿಗಳಿಗೆ ಮತ್ತಷ್ಟು ಲಾಭವಾಗುವ ಸಾಧ್ಯತೆ ಇದೆ’ ಎಂದು ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ‘ದೇವನೂರ ಮಹಾದೇವ ಮತ್ತು ಕೆ.ಎಸ್. ಪುಟ್ಟಣ್ಣಯ್ಯ ಅವರ ಒತ್ತಾಸೆಯಂತೆ 2005ರಲ್ಲಿ ಆರಂಭವಾದ ಕರ್ನಾಟಕಸರ್ವೋದಯಪಕ್ಷವುನಂತರದದಿನಗಳಲ್ಲಿ ಸ್ವರಾಜ್ ಇಂಡಿಯಾ ಜತೆ ವಿಲೀನವಾಗಿತ್ತು. ಸ್ವರಾಜ್ ಇಂಡಿಯಾ ಪಕ್ಷವು 2024ರ ತನಕ ಚುನಾವಣಾ ರಾಜಕಾರಣದಿಂದ ದೂರ ಇರಲು ನಿರ್ಧರಿಸಿರುವುದರಿಂದ ಸರ್ವೋದಯ ಪಕ್ಷಕ್ಕೆ ಮರು ಚಾಲನೆ ನೀಡಲಾಗಿದೆ’ ಎಂದರು.

ಪಕ್ಷದ ಸಂಸ್ಥಾಪಕರಲ್ಲಿ ಒಬ್ಬರಾದ ದೇವನೂರ ಮಹದೇವ ಮತ್ತು ಅವರ ಪತ್ನಿ ಕೆ. ಸಾವಿತ್ರಾಬಾಯಿ ಅವರು ವೇದಿಕೆಗೆ ಏರದೆ ಕಾರ್ಯಕರ್ತರ ಸಾಲಿನಲ್ಲೇ ಕುಳಿತು ಕಾರ್ಯಕ್ರಮ ವೀಕ್ಷಿಸಿದರು.

ಐದು ಕ್ಷೇತ್ರಕ್ಕೆ ಅಭ್ಯರ್ಥಿಗಳ ಹೆಸರು ಪ್ರಕಟ

ವಿಧಾನಸಭೆ ಚುನಾವಣೆಯಲ್ಲಿ ಸರ್ವೋದಯ ಪಕ್ಷದಿಂದ ಸ್ಪರ್ಧಿಸಲಿರುವ ಅಭ್ಯರ್ಥಿಗಳ ಪೈಕಿ ಮೊದಲ ಹಂತದಲ್ಲಿ ಐವರ ಹೆಸರನ್ನು ಪಕ್ಷದ ಅಧ್ಯಕ್ಷ ಚಾಮರಸ ಮಾಲಿಪಾಟೀಲ ಬಿಡುಗಡೆ ಮಾಡಿದರು.

ಮೇಲುಕೋಟೆ ಕ್ಷೇತ್ರಕ್ಕೆ ದರ್ಶನ್ ಪುಟ್ಟಣ್ಣಯ್ಯ, ಮಂಡ್ಯಕ್ಕೆ ಮಧುಚಂದನ್ ಎಸ್.ಸಿ., ವಿರಾಜಪೇಟೆಗೆ ಮನುಸೋಮಯ್ಯ, ಬೆಳ್ತಂಗಡಿಗೆ ಆದಿತ್ಯ ಕೊಲ್ಲಾಜೆ, ಬೀಳಗಿ ಕ್ಷೇತ್ರಕ್ಕೆ ಶೈಲಾ ನಾಯಕ್ ಅವರ ಅಭ್ಯರ್ಥಿಯಾಗಲಿದ್ದಾರೆ ಎಂದರು.

53 ಕ್ಷೇತ್ರಗಳಿಗೆ ಅಕಾಂಕ್ಷಿಗಳು ಮುಂದೆ ಬಂದಿದ್ದಾರೆ. ಅದರಲ್ಲಿ ಶೇ 70ರಷ್ಟು ಯುವಕರಿದ್ದು, 7 ಮಂದಿ ಮಹಿಳೆಯರೂ ಇದ್ದಾರೆ ಎಂದು ಬಡಗಲಪುರ ನಾಗೇಂದ್ರ ತಿಳಿಸಿದರು.

ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣ

ಆರ್‌.ಡಿ. ಪಾಟೀಲ ಮತ್ತೆ ಜೈಲಿಗೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನ್ಯಾಯಾಲಯದಲ್ಲಿ ಶರಣಾದ ಆರೋಪಿ
- 14 ದಿನ ನ್ಯಾಯಾಂಗ ಬಂಧನ
- ಕಲಬುರಗಿಗೆ ಬಂದಿರುವ ಸಿಐಡಿ ಅಧಿಕಾರಿಗಳು

ಕಲಬುರಗಿ: ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಬಂಧನಕ್ಕೆ ಒಳಗಾಗಿ ಜಾಮೀನಿನ ಮೇಲೆ ಹೊರಗಿದ್ದ ವೇಳೆ ಸಿಐಡಿ ವಿಚಾರಣೆಗೆ ಹಾಜರಾಗದೇ ತಲೆಮರೆಸಿ ಕೊಂಡಿದ್ದ ಆರೋಪಿ ಆರ್.ಡಿ. ಪಾಟೀಲ ಸೋಮವಾರ ಇಲ್ಲಿನ ಐದನೇ ಹೆಚ್ಚುವರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ಎದುರು ಶರಣಾದ. ವಿಚಾರಣೆ ಬಳಿಕ ಆತನನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ, ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಯಿತು.


ಆರ್.ಡಿ. ಪಾಟೀಲ

ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳು ಜನವರಿ 19ರಂದು ರಾತ್ರಿ ವಿಚಾರಣೆಗೆ ಕರೆದೊಯ್ಯಲು ಮನೆಗೆ ತೆರಳಿದಾಗ, ಆತ ಪರಾರಿಯಾಗಿದ್ದ. ಈ ಕುರಿತು ಸಿಐಡಿ ಅಧಿಕಾರಿಗಳು ಅಶೋಕ ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ವಕೀಲರೊಂದಿಗೆ ನ್ಯಾಯಾಲಯಕ್ಕೆ ಶರಣಾದ ಆರೋಪಿಯನ್ನು ವಿಚಾರಣೆಗಾಗಿ ತಮ್ಮ ವಶಕ್ಕೆ ನೀಡಲು ಅಶೋಕ ನಗರ ಠಾಣೆ ಪೊಲೀಸರು ಮನವಿ ಸಲ್ಲಿಸಿದರು. ಇದನ್ನು 5ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ಪ್ರಭಾರ ನ್ಯಾಯಾಧೀಶ ದಸ್ತಗೀರಸಾಬ್ ಅಬ್ದುಲ್ ರಜಾಕ್ ಮುಲ್ಲಾ ಅವರು ತಿರಸ್ಕರಿಸಿದರು.

ಕಲಬುರಗಿಯ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ನಡೆದ ಪರೀಕ್ಷಾ ಅಕ್ರಮಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ತಮ್ಮ ಎದುರು ಸೋಮವಾರ ಹಾಜರಾಗುವಂತೆ ಸಿಐಡಿ ತನಿಖಾಧಿಕಾರಿ ಪ್ರಕಾಶ್ ರಾಠೋಡ್ ಅವರು ಆರ್.ಡಿ. ಪಾಟೀಲಗೆ ನೋಟಿಸ್ ಜಾರಿಗೊಳಿಸಿದ್ದರು.

ಬೆಂಗಳೂರಿನ ರಾಮಮೂರ್ತಿ ನಗರ ಮತ್ತು ತುಮಕೂರಿನ ಕ್ಯಾತ್ಸಂದ್ರ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಒಳಪಡಿಸಲು ಸಿಐಡಿ ಅಧಿಕಾರಿಗಳು ಕಲಬುರಗಿಗೆ ಬಂದಿದ್ದಾರೆ.

ಕಲಬುರಗಿ ಜಿಲ್ಲೆಯ ದೇವಲ ಗಾಣಗಾಪುರದಲ್ಲಿ ಮುಖ್ಯಮಂತ್ರಿ ಭಾಗವಹಿಸುವ ಕಾರ್ಯಕ್ರಮಕ್ಕೆ ಆರೋಪಿಗಳಾದ ಮಹಾಂತೇಶ ಪಾಟೀಲ, ಆರ್.ಡಿ. ಪಾಟೀಲ ಚಿತ್ರವಿರುವ ಸ್ವಾಗತ ಕಮಾನು ಅಳವಡಿಸಿರುವುದು

ಸಿ.ಎಂ ಸ್ವಾಗತ ಕಮಾನಿನಲ್ಲಿ ಆರೋಪಿಗಳ ಚಿತ್ರ

ಕಲಬುರಗಿ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜನವರಿ 24ರಂದು ಭಾಗವಹಿಸುವ ದೇವಲ ಗಾಣಗಾಪುರದ ಕಾರ್ಯಕ್ರಮದ ಸ್ವಾಗತ ಕಮಾನಿನಲ್ಲಿ, ಪಿಎಸ್‌ಐ ನೇಮಕಾತಿ ಅಕ್ರಮದ ಪ್ರಮುಖ ಆರೋಪಿಗಳಾದ ಅಫಜಲಪುರ ತಾಲ್ಲೂಕಿನ ಆರ್.ಡಿ. ಪಾಟೀಲ ಮತ್ತು ಆತನ ಅಣ್ಣ ಮಹಾಂತೇಶ ಪಾಟೀಲ ಅವರ ಚಿತ್ರಗಳನ್ನು ಹಾಕಲಾಗಿದೆ.

ಕೋಲಿ ಸಮಾಜದ ಹಿರಿಯ ಧುರೀಣರಾಗಿದ್ದ ದಿ. ವಿಠ್ಠಲ ಹೇರೂರ ಅವರ ಕಂಚಿನ ಮೂರ್ತಿ ಅನಾವರಣ ಕಾರ್ಯಕ್ರಮ ದೇವಲ ಗಾಣಗಾಪುರದಲ್ಲಿ ನಡೆಯಲಿದೆ. ಮುಖ್ಯಮಂತ್ರಿ, ಸಚಿವರು, ಸಂಸದರು ಮತ್ತು ಶಾಸಕರು ಭಾಗವಹಿಸುವರು.

ದೇವಲ ಗಾಣಗಾಪುರ ಗ್ರಾಮವನ್ನು ಪ್ರವೇಶಿಸುವ ಕೆಲವೆಡೆ ಸ್ವಾಗತ ಕಮಾನು, ಬ್ಯಾನರ್‌ಗಳನ್ನು ಅಳವಡಿಸಲಾಗಿದೆ. ಈ ಬಾರಿ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಸಿದ್ಧತೆ ಮಾಡಿಕೊಂಡಿರುವ ಆರ್.ಡಿ. ಪಾಟೀಲ ಸೂಚನೆ ಮೇರೆಗೆ ಈ ಸ್ವಾಗತ ಕಮಾನು ಅಳವಡಿಸಲಾಗಿದೆ ಎನ್ನಲಾಗಿದೆ.

ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗನವಾಡಿ ಕಾರ್ಯಕರ್ತೆಯರನ್ನು ಸರ್ಕಾರಿ ಶಿಕ್ಷಕಿಯರೆಂದು ಪರಿಗಣಿಸಬೇಕು. ಗ್ರ್ಯಾಚ್ಯುಟಿ ಪಾವತಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ನಗರದಲ್ಲಿ ಸೋಮವಾರ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿದರು.

ವಿವಿಧ ಜಿಲ್ಲೆಗಳಿಂದ ನಗರಕ್ಕೆ ಬಂದಿರುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು, ಸ್ವಾತಂತ್ರ್ಯ ಉದ್ಯಾನದಲ್ಲಿ ಕುಳಿತು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಚಳಿಯನ್ನೂ ಲೆಕ್ಕಿಸದೇ ಸೋಮವಾರ ಅಹೋರಾತ್ರಿ ಉದ್ಯಾನದಲ್ಲೇ ಮಲಗಿದರು.

ಸಿಐಟಿಯು (ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್) ಅಧೀನದ ರಾಜ್ಯ ಅಂಗನವಾಡಿ ನೌಕರರ ಸಂಘದ ನೇತೃತ್ವದಲ್ಲಿ ಈ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

‘ರಾಜ್ಯದ ಮಕ್ಕಳ ಬೆಳವಣಿಗೆಗೆ ಅಂಗನವಾಡಿಗಳು ಕೊಡುಗೆ ನೀಡುತ್ತಿವೆ. ಅನ್ನದ ಕೇಂದ್ರಗಳಾಗಿರುವ ಅಂಗನವಾಡಿಗಳನ್ನು ಅಕ್ಷರ ಕೇಂದ್ರಗಳಾಗಿ ಮಾರ್ಪಡಿಸಬೇಕು. ಕಾರ್ಯಕರ್ತೆಯರನ್ನು ಸರ್ಕಾರಿ ಶಿಕ್ಷಕಿಯರೆಂದು ಪರಿಗಣಿಸಿ, ಎಲ್ಲ ಸೌಲಭ್ಯಗಳನ್ನು ಕಲ್ಪಿಸಬೇಕು’ ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷೆ ಎಸ್. ವರಲಕ್ಷ್ಮಿ ಹೇಳಿದರು.

ಪ್ರತಿಭಟನೆಯಲ್ಲಿ ತೊಡಗಿದ್ದ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದ ಹೊರಭಾಗದಲ್ಲಿ ಮಲಗಿದ್ದರು – ಪ್ರಜಾವಾಣಿ ಚಿತ್ರ

‘ಪ್ರತಿಭಟನೆ ಕೈಬಿಟ್ಟಿದ್ದ ಬಣ’

‘ಸರ್ಕಾರಿ ಶಿಕ್ಷಕರ ಸ್ಥಾನಮಾನ ನೀಡಿ, ಸೇವಾ ಭದ್ರತೆ ಒದಗಿಸಬೇಕು’ ಎಂದು ಒತ್ತಾಯಿಸಿ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘದಿಂದ ಇತ್ತೀಚೆಗಷ್ಟೇ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆದಿತ್ತು.

ಸಚಿವ ಡಾ. ಸಿ.ಎನ್. ಅಶ್ವತ್ಥ ನಾರಾಯಣ ಭರವಸೆ ಮೇರೆಗೆ ಶನಿವಾರ (ಜ. 21) ಪ್ರತಿಭಟನೆ ಅಂತ್ಯಗೊಂಡಿತ್ತು. ಇದೀಗ, ಸಿಐಟಿಯು ರಾಜ್ಯ ಅಂಗನವಾಡಿ ನೌಕರರ ಸಂಘದಿಂದ ಪುನಃ ಸೋಮವಾರದಿಂದ ಪ್ರತಿಭಟನೆ ಆರಂಭವಾಗಿದೆ.

‘ಬೇಡಿಕೆ ಈಡೇರಿಸುವಂತೆ ಹಲವು ಬಾರಿ ಪ್ರತಿಭಟನೆ ನಡೆಸಿದ್ದೇವೆ. ಆದರೆ, ಸರ್ಕಾರ ಸ್ಪಂದಿಸುತ್ತಿಲ್ಲ. ಹೀಗಾಗಿ, ಪುನಃ ಪ್ರತಿಭಟನೆ ಆರಂಭಿಸಿದ್ದೇವೆ. ಲಿಖಿತ ಭರವಸೆ ಸಿಗುವವರೆಗೂ ಪ್ರತಿಭಟನೆ ಮುಂದುವರಿಸಲಿದ್ದೇವೆ’ ಎಂದು ಹೇಳಿದರು.

ಪ್ರಧಾನ ಕಾರ್ಯದರ್ಶಿ ಎಚ್.ಎಸ್. ಸುನಂದಾ, ‘ರಾಜ್ಯದ ಬಹುತೇಕ ಅಂಗನವಾಡಿ ಸಹಾಯಕಿಯರು ಹಾಗೂ ಕಾರ್ಯಕರ್ತೆಯರು ಕೆಲಸಕ್ಕೆ ಗೈರಾಗಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ. ನಿತ್ಯವೂ ಬೇರೆ ಬೇರೆ ಜಿಲ್ಲೆಗಳಿಂದ ಪ್ರತಿಭಟನಕಾರರು ಬೆಂಗಳೂರಿಗೆ ಬರಲಿದ್ದಾರೆ’ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕಿ ಕೆ.ಎನ್. ಅನುರಾಧಾ ಅವರು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಮನವಿ ಸ್ವೀಕರಿಸಿದರು.

‘ಬೇಡಿಕೆಗಳನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತರುತ್ತೇನೆ. ಸದ್ಯಕ್ಕೆ ಪ್ರತಿಭಟನೆ ಕೈಬಿಡಿ’ ಎಂದು ಅನುರಾಧಾ ಕೋರಿದರು.

ಅದಕ್ಕೆ ಒಪ್ಪದ ಮುಖಂಡರು, ‘ಬೇಡಿಕೆ ಈಡೇರಿಸುವವರೆಗೂ ಪ್ರತಿಭಟನೆ ಸ್ಥಗಿತಗೊಳಿಸುವುದಿಲ್ಲ’ ಎಂದರು. ನಂತರ, ಪ್ರತಿಭಟನೆ ಮುಂದುವರಿಸಿದರು.

ಕ್ಷೇಮ ಕುಶಲ

ಮಧುಮೇಹಿಗಳಿಗೆ ವರದಾನ

ಆರ್ಟಿಫಿಶಿಯಲ್ ಪ್ಯಾಂಕ್ರಿಯಾಸ್

ಡಾ. ವಿನಯ ಶ್ರೀನಿವಾಸ್

ವಿಶ್ವದಾದ್ಯಂತ ಮಧುಮೇಹಿಗಳ ಸಂಖ್ಯೆ ಏರುತ್ತಲೇ ಇರುವುದು ಆರೋಗ್ಯವಲಯದಲ್ಲಿ ನಿಜಕ್ಕೂ ಆತಂಕ ಸೃಷ್ಟಿ ಮಾಡಿದೆ. ಅಲ್ಲದೆ, ದೀರ್ಘಕಾಲದಲ್ಲಿ ಇದರಿಂದ ಉಂಟಾಗುವ ಸಂಭವನೀಯ ಅಪಾಯಕರ ಪರಿಣಾಮಗಳೂ ವೈದ್ಯರಿಗೆ ಸವಾಲೆನಿಸುತ್ತವೆ. ಭಾರತವೂ ಇದಕ್ಕೆ ಹೊರತಾಗಿಲ್ಲ. ಭಾರತದಲ್ಲಿ ಏರುತ್ತಿರುವ ಮಧುಮೇಹಿಗಳ ಸಂಖ್ಯೆಯನ್ನು ಗಮನಿಸಿದಾಗ ಇನ್ನು ಸ್ವಲ್ಪವೇ ಕಾಲದಲ್ಲಿ ಇದು ಮಧುಮೇಹದ ರಾಜಧಾನಿ ಎಂದೆನಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ ಎನ್ನುತ್ತಾರೆ, ವೈದ್ಯವಿಜ್ಞಾನಿಗಳು.

ಮಧುಮೇಹದ ಚಿಕಿತ್ಸೆ ಹಾಗೂ ನಿರ್ವಹಣೆಯಲ್ಲಿ ವೈದ್ಯವಿಜ್ಞಾನವು ನಿರಂತರವಾಗಿ ಹೊಸ ಹೊಸ ಆವಿಷ್ಕಾರಗಳನ್ನು ನಡೆಸುತ್ತಲೇ ಬಂದಿದೆ. ಜೀವನಶೈಲಿ ಹಾಗೂ ಆಹಾರಶೈಲಿಯೂ ಮಧುಮೇಹವನ್ನು ನಿಯಂತ್ರಿಸುವಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಆ ಬಗ್ಗೆಯೂ ಹೆಚ್ಚಿನ ಗಮನ ವಹಿಸಲು ವೈದ್ಯರು ಸೂಚಿಸುತ್ತಾರೆ. ಆದರೆ ಅದರ ಜೊತೆಯಲ್ಲಿಯೇ ವ್ಯಕ್ತಿಯೋರ್ವನಲ್ಲಿ ಈ ಸಮಸ್ಯೆಯ ನಿಯಂತ್ರಣ ಹಾಗೂ ಚಿಕಿತ್ಸೆಯ ಪರಿಣಾಮವು ಅನುವಂಶಿಕ ಅಂಶಗಳ ಮೇಲೆಯೂ ಅವಲಂಬಿತವಾಗಿರುವುದನ್ನು ನಾವು ನೆನಪಿನಲ್ಲಿಡಬೇಕು. ಅಲ್ಲದೆ ವ್ಯಕ್ತಿಯ ವಯಸ್ಸು, ಮಧುಮೇಹದ ಬಗೆ, ಆತನ ಇತರ ಆರೋಗ್ಯ ಸಮಸ್ಯೆಗಳು ಮೊದಲಾದ ಅಂಶಗಳೂ ಸಕ್ಕರೆಯ ಅಂಶದ ಮಟ್ಟ ಮತ್ತು ಚಿಕಿತ್ಸೆಯನ್ನು ನಿರ್ಧರಿಸುತ್ತವೆ.

ಕೆಲವು ಸಂದರ್ಭಗಳಲ್ಲಿ ದಿಢೀರೆಂದು ಹೆಚ್ಚಾಗುವ ಅಥವಾ ಕಡಿಮೆಯಾಗುವ ರಕ್ತದ ಸಕ್ಕರೆಯ ಅಂಶವು ತಕ್ಷಣದ ಚಿಕಿತ್ಸೆಯನ್ನು ಬೇಡುತ್ತವೆ. ಕಡಿಮೆಯಾದಾಗ ವ್ಯಕ್ತಿಗೆ ಕಣ್ಣು ಕತ್ತಲಾದಂತಾಗಿ ಬಿದ್ದು ಅನಾಹುತವಾಗಬಹುದಾದರೆ, ಹೆಚ್ಚಾದಾಗ ವ್ಯಕ್ತಿ ತೀವ್ರತರ ನಿತ್ರಾಣಕ್ಕೂ ಒಳಗಾಗಬಹುದು. ಅಷ್ಟೇ ಅಲ್ಲದೆ ದೀರ್ಘಕಾಲಿಕ ಅಪಾಯಗಳಿಗೂ ತುತ್ತಾಗುತ್ತಾನೆ. ಸಾಮಾನ್ಯವಾಗಿ ಪ್ರಯೋಗಾಲಯದಲ್ಲಿ ಅಥವಾ ಮನೆಯಲ್ಲಿಯೇ ಇರಿಸಿಕೊಂಡ ಚಿಕ್ಕ ಉಪಕರಣದ (ಗ್ಲುಕೋಮೀಟರ್) ನೆರವಿನಿಂದಲೋ ಸಕ್ಕರೆಯ ಅಂಶವನ್ನು ಪತ್ತೆ ಮಾಡಲಾಗುತ್ತದೆ. ಆದರೆ ದಿನವೊಂದರಲ್ಲಿಯೇ ವಿಪರೀತ ಏರಿಳಿತಕ್ಕೆ ಒಳಾಗಾಗುವ ಸಕ್ಕರೆ ಅಂಶವನ್ನು ಈ ವಿಧಾನಗಳಿಂದ ಪತ್ತೆ ಮಾಡುವುದು ಪ್ರಾಯೋಗಿಕವಾಗಿ ಕಷ್ಟವೆನಿಸಬಹುದು. ಅಲ್ಲದೆ, ಆ ವರದಿಯನ್ನು ವೈದ್ಯರಿಗೆ ತಿಳಿಸಿ ಅವರ ಸಲಹೆಯಂತೆ ಇಂತಿಷ್ಟೇ ಪ್ರಮಾಣದ ಇನ್ಸುಲಿನ್ ಚುಚ್ಚುಮದ್ದನ್ನು ತೆಗೆದುಕೊಳ್ಳಲು ಸಮಯವೂ ತಗುಲಬಹುದು. ಇಂತಹ ಸನ್ನಿವೇಶಗಳನ್ನು ಸುಲಭವಾಗಿ ನಿರ್ವಹಿಸಲು ಮತ್ತು ಸುದೀರ್ಘ ಸಮಯದವರೆಗೆ ಸಕ್ಕರೆಯ ಅಂಶವನ್ನು ಸ್ಥಿರವಾಗಿರಿಸಲು ತಂತ್ರಜ್ಞಾನವನ್ನು ಬಳಸಿ ಹೊರ ತಂದಿರುವ ವ್ಯವಸ್ಥೆಯೇ 'ಕೃತಕ ಮೇದೋಜೀರಕ ಗ್ರಂಥಿಯ ವ್ಯವಸ್ಥೆ' (ಆರ್ಟಿಫಿಶಿಯಲ್ ಪ್ಯಾಂಕ್ರಿಯಾಸ್). ಸಾಮಾನ್ಯವಾಗಿ ಶರೀರದಲ್ಲಿ ಮೇದೋಜೀರಕಗ್ರಂಥಿಯು ದೇಹದ ಸಕ್ಕರೆಯ ಅಂಶದ ನಿಯಂತ್ರಣದಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸುವುದರಿಂದ ಈ ವ್ಯವಸ್ಥೆಯನ್ನು ಆ ರೀತಿ ಹೆಸರಿಸಲಾಗಿದೆ.

ಏನಿದು?

ಇದರಲ್ಲಿ ಮುಖ್ಯವಾಗಿ ಮೂರು ಭಾಗಗಳಿರುತ್ತವೆ. ಮೊದಲನೆಯದು, ಸಕ್ಕರೆಯ ಅಂಶವನ್ನು ಅಳೆಯುವ ಮಾಪಕ. ಚರ್ಮದ ಕೆಳಭಾಗದಲ್ಲಿ ಅಳವಡಿಸಲ್ಪಟ್ಟ ನಾಣ್ಯದ ಗಾತ್ರದ ಈ ಮಾಪಕದ ಸಂವೇದಕ ಸೂಚಿಯು ನಿರಂತರವಾಗಿ ಜೀವಕೋಶಗಳ ಸುತ್ತಲಿನ ದ್ರವಾಂಶದಲ್ಲಿ ಸಕ್ಕರೆಯ ಅಂಶವನ್ನು ಕಂಡುಹಿಡಿಯುತ್ತಿರುತ್ತದೆ. ಎರಡನೆಯದು, ಈ ಪ್ರಮಾಣದ ಸಕ್ಕರೆಯ ಅಂಶಕ್ಕೆ ಎಷ್ಟು ಅಳತೆಯ ಇನ್ಸುಲಿನ್ ಬೇಕಾಗಬಹುದು ಎಂಬುದನ್ನು ನಿರ್ಧರಿಸಿ, ಸಂದೇಶವನ್ನು ಇನ್ಸುಲಿನ್ ಪೂರೈಸುವ ಉಪಕರಣಕ್ಕೆ (ಇನ್ಸುಲಿನ್ ಪಂಪ್) ಕಳುಹಿಸುವ ತಂತ್ರಜ್ಞಾನದ ಒಂದು ವ್ಯವಸ್ಥೆ (ಸಾಫ್ಟ್‌ವೇರ್). ಮೂರನೆಯದು, ಇನ್ಸುಲಿನ್ ಪೂರೈಸುವ ಉಪಕರಣ. ಇದು ಚರ್ಮದ ಮೇಲ್ಭಾಗದಲ್ಲಿದ್ದರೂ, ಇದರ ಅತಿ ಸಣ್ಣನಾಳಗಳು ಚರ್ಮದ ಒಳಗೆ ತೂರಿರುತ್ತವೆ. ಇದು ತನಗೆ ಬಂದ ಸಂದೇಶದ ಆಧಾರದ ಮೇಲೆ ನಿರ್ದಿಷ್ಟ ಪ್ರಮಾಣದ ಇನ್ಸುಲಿನ್ ಅನ್ನು ತಕ್ಷಣವೇ ಶರೀರಕ್ಕೆ ಪೂರೈಸುತ್ತದೆ.

ದಿನದ ಯಾವುದೇ ಸಮಯದಲ್ಲಿಯೂ ಈ ಉಪಕರಣಗಳು ಶರೀರದ ಸಕ್ಕರೆಯ ಅಂಶವನ್ನು ಅಳೆಯುತ್ತಲೇ ಇರುತ್ತವೆ. ವ್ಯಕ್ತಿಯು ಯಾವುದೇ ಕೆಲಸದಲ್ಲಿ ಮಗ್ನನಾಗಿದ್ದಾಗಲೂ, ಉದಾಹರಣೆಗೆ ಆತ ಸ್ನಾನ ಮಾಡುವಾಗ, ನಿದ್ದೆ ಮಾಡುವಾಗ ಅಥವಾ ವ್ಯಾಯಾಮ ಮಾಡುವಾಗ – ಹೀಗೆ ದಿನದ ಇಪ್ಪತ್ನಾಲ್ಕು ತಾಸುಗಳಲ್ಲಿಯೂ ವ್ಯಕ್ತಿಯ ಶರೀರದ ಸಕ್ಕರೆಯ ಅಂಶದ ಮಟ್ಟವನ್ನು ತಿಳಿದು, ಸಾಮಾನ್ಯಕ್ಕಿಂತ ಹೆಚ್ಚಿದ್ದಾಗ, ಸ್ವಯಂಚಾಲಿತ ವ್ಯವಸ್ಥೆಯೇ ಇನ್ಸುಲಿನ್ ಪೂರೈಸುವುದರಿಂದ ವ್ಯಕ್ತಿ ನಿರಾತಂಕವಾಗಿರಬಹುದು. ಆತನಿಗೆ ಪದೇ ಪದೇ ಸಕ್ಕರೆಯ ಅಂಶವನ್ನು ಪತ್ತೆ ಮಾಡಿಕೊಳ್ಳುವ ಮತ್ತು ಇನ್ಸುಲಿನ್ ಚುಚ್ಚುಮದ್ಧನ್ನು ಚುಚ್ಚಿಕೊಳ್ಳುವ ಗೋಜಲಿರುವುದಿಲ್ಲ. ವ್ಯಕ್ತಿಯ ಯಾವ ಚಟುವಟಿಕೆ ಅಥವಾ ಆಹಾರಸೇವನೆ ಸಕ್ಕರೆಯ ಅಂಶವನ್ನು ಹೆಚ್ಚಿಸುವುದು ಎಂಬ ಮಾಹಿತಿಯೂ ತಿಳಿಯುವುದರಿಂದ ಅದರ ಮಾರ್ಪಾಡೂ ಸಾಧ್ಯ. ಹಾಗೆಯೇ, ಸಕ್ಕರೆಯ ಅಂಶ ಕಡಿಮೆಯಾಗುವ ಸೂಕ್ಷ್ಮವಿದ್ದಾಗಲೂ ಅದಕ್ಕೆ ತಕ್ಕಂತೆ ಇನ್ಸುಲಿನ್ ಪೂರೈಕೆಯನ್ನು ನಿಯಂತ್ರಿಸುವುದರಿಂದ ವ್ಯಕ್ತಿ ಸಕ್ಕರೆಯ ಅಂಶ ಕಡಿಮೆಯಾಗಿ (ಹೈಪೋಗ್ಲೈಸೀಮಿಯ) ಕಣ್ಣು ಕತ್ತಲು ಬರುವ ಸನ್ನಿವೇಶಗಳೂ ಸಂಪೂರ್ಣ ಇಲ್ಲದಂತಾಗುತ್ತವೆ.

ಎರಡು ರಸದೂತಗಳನ್ನು ಪೂರೈಸುವ ಕೃತಕ ವ್ಯವಸ್ಥೆ: ಮೇದೋಜೀರಕ ಗ್ರಂಥಿಯು ರಕ್ತದ ಸಕ್ಕರೆಯ ಅಂಶವನ್ನು 'ಇನ್ಸುಲಿನ್' ಮತ್ತು 'ಗ್ಲುಕಾಗನ್' ಎಂಬ ಎರಡು ರಸದೂತಗಳ ಮೂಲಕ ನಿಯಂತ್ರಿಸುತ್ತದೆ. ಇನ್ಸುಲಿನ್, ರಕ್ತದಲ್ಲಿ ಹೆಚ್ಚಾದ ಸಕ್ಕರೆ ಅಂಶವನ್ನು ಕಡಿಮೆ ಮಾಡಿದರೆ ಗ್ಲುಕಾಗನ್, ಅದಕ್ಕೆ ಪ್ರತಿಯಾಗಿ ಸಕ್ಕರೆಯ ಅಂಶವನ್ನು ಹೆಚ್ಚಿಸುವ ಕಾರ್ಯವನ್ನು ನಿರ್ವಹಿಸುತ್ತದೆ. ಗ್ಲುಕಾಗನ್ ಯಕೃತ್ತಿನಲ್ಲಿ ಶೇಖರವಾದ ಸಕ್ಕರೆಯ ಅಂಶವನ್ನು ಬೇಡಿಕೆಗೆ ತಕ್ಕಂತೆ ರಕ್ತ ಪರಿಚಲನಾ ವ್ಯವಸ್ಥೆಗೆ ಸೇರುವಂತೆ ಪ್ರಚೋದಿಸುತ್ತದೆ. ಇದೀಗ ಹೊಸದಾಗಿ ಆವಿಷ್ಕಾರಗೊಂಡ ಕೃತಕ ಮೇದೋಜೀರಕ ಗ್ರಂಥಿ ವ್ಯವಸ್ಥೆಯಲ್ಲಿ ಈ ಎರಡೂ ರಸದೂತಗಳನ್ನು ಅವಶ್ಯಕತೆಯ ಮೇರೆಗೆ ಪೂರೈಸುವ ವ್ಯವಸ್ಥೆಯಿದ್ದು, ಮಧುಮೇಹಿಗಳು ರಕ್ತದ ಸಕ್ಕರೆಯ ಅಂಶವನ್ನು ಪೂರ್ಣವಾಗಿ ನಿಯಂತ್ರಣದಲ್ಲಿಡುವಲ್ಲಿ ನೆರವಾಗುತ್ತದೆ. ಹೀಗೆ, ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆಯ ಬಳಕೆ ವೈದ್ಯಕೀಯ ವಲಯದಲ್ಲಿ ಒಂದು ಬಗೆಯ ಸಂಚಲನವನ್ನು ಮೂಡಿಸುತ್ತಿದೆ.

ಪ್ರಾಯೋಗಿಕ ಸಮಸ್ಯೆಗಳೇನು?

- ಇದರ ಬೆಲೆಯು ಸುಮಾರು ಮೂರರಿಂದ ಹತ್ತು ಲಕ್ಷದವರೆಗೂ ಇದೆ. ಎಲ್ಲರಿಗೂ ಕೈಗೆಟಕುವ ದರದಲ್ಲಿ ಲಭ್ಯವಿಲ್ಲದಿರುವುದು ಮೊದಲ ಸಮಸ್ಯೆ.
- ಪ್ರತಿ ಮೂರರಿಂದ ನಾಲ್ಕು ದಿನಗಳಿಗೊಮ್ಮೆ ಇನ್ಸುಲಿನ್ ಪೂರೈಸುವ ಉಪಕರಣದ ನಾಳಗಳನ್ನು ಬದಲಿಸಬೇಕು. ಇದರ ವೆಚ್ಚವೂ ತಿಂಗಳಿಗೆ ಸುಮಾರು ಹತ್ತು ಸಾವಿರದ ತನಕ ಬರಬಹುದು.
- ಉಪಕರಣವನ್ನು ಅಳವಡಿಸಿಕೊಳ್ಳಲು ತರಬೇತಿ ಕೊಡಬೇಕಾಗಬಹುದು. ಕೆಲವೊಮ್ಮೆ ಹಿರಿಯರಿಗೆ ಪ್ರತಿಬಾರಿಯೂ ಇನ್ನೊಬ್ಬರ ಸಹಾಯ ಬೇಕಾಗಬಹುದು.

ಹೆಚ್ಚುವರಿ ಉಪಯೋಗಗಳು



- ದೀರ್ಘಕಾಲಿಕ ಸಕ್ಕರೆಯ ಅಂಶದ ಸಮರ್ಪಕ ನಿಯಂತ್ರಣ ಸಾಧ್ಯ.
- ಪದೇ ಪದೇ ಸಕ್ಕರೆಯ ಅಂಶ ಪತ್ತೆ ಮಾಡುವುದನ್ನು ತಪ್ಪಿಸಬಹುದು.
- ಪದೇ ಪದೇ ಇನ್ಸುಲಿನ್ ಚುಚ್ಚುಮದ್ದು ತೆಗೆದುಕೊಳ್ಳುವುದನ್ನು ತಪ್ಪಿಸಬಹುದು.
- ಸಕ್ಕರೆಯ ಅಂಶ ದಿಢೀರ್ ಕಡಿಮೆಯಾಗುವುದನ್ನು ಬಹುತೇಕ ಸಂಪೂರ್ಣ ತಪ್ಪಿಸಬಹುದು. ಮಧುಮೇಹಿಗಳ ಜೀವನಶೈಲಿಯಲ್ಲಿ ಸುಧಾರಣೆಯನ್ನು ತರಬಹುದು.
- ದೀರ್ಘಕಾಲಿಕ ಸಂಭವನೀಯ ಅಪಾಯಗಳಾದ ಮೂತ್ರಪಿಂಡಗಳ ವೈಫಲ್ಯ, ಹೃದಯದ ಸಮಸ್ಯೆ, ನರಗಳ ಉರಿಯೂತ ಮತ್ತು ದೃಷ್ಟಿಗೆ ಸಂಬಂಧಿಸಿದ ಸಮಸ್ಯೆಗಳನ್ನು ತಪ್ಪಿಸಬಹುದು.
- ಚಿಕ್ಕ ವಯಸ್ಸಿನವರಲ್ಲಿ ಕಂಡು ಬರುವ ಇನ್ಸುಲಿನ್ ಮೇಲೆಯೇ ಅವಲಂಬಿತವಾದ ಒಂದನೇ ಬಗೆಯ ಮಧುಮೇಹಿಗಳಿಗೆ ಇದು ವರದಾನವೆಂದೇ ಹೇಳಬಹುದು. ಇನ್ಸುಲಿನ್ ಚುಚ್ಚುಮದ್ಧನ್ನು ಉಪಯೋಗಿಸುವ ಎರಡನೆಯ ಬಗೆಯ ಮಧುಮೇಹಿಗಳಿಗೂ ಇದು ಸಾಕಷ್ಟು ಪ್ರಯೋಜನಕಾರಿಯಾಗಿದೆ.

ಚರ್ಮ ಬಿರುಸಾಗುವ ಚಳಿದಿನಗಳು

ಡಾ. ಸತ್ಯನಾರಾಯಣ ಭಟ್ ಪಿ.

ಆಯುರ್ವೇದ ಸಂಹಿತೆಗಳ ಪ್ರಕಾರ ಹೇಮಂತ ಮತ್ತು ಶಿಶಿರ ಋತುಗಳ ಆಹಾರಪದ್ಧತಿ ಮತ್ತು ಆಚರಣೆಗಳು ಒಂದೇ ತರಹದ್ದು. ಆದರೆ ಒಂದು ಬಹು ದೊಡ್ಡ ವ್ಯತ್ಯಾಸವಿದೆ. ಶಿಶಿರ ಋತುವು ಮನುಷ್ಯರ ಬಲ ಕುಂದಿಸುವ ಆದಾನ ಕಾಲದ್ದು. ಹಾಗಾಗಿ ತುಂಬ ಎಚ್ಚರಿಕೆಯ ಜೀವನಶೈಲಿ ನಮ್ಮದಾಗಿಸಿಕೊಳ್ಳಬೇಕು. ಹಗಲಿನಲ್ಲಿ ಪ್ರಖರ ಸೂರ್ಯಸಂತಾಪ. ಆದರೆ ಇರುಳಲ್ಲಿ ಉದುರುವ ಇಬ್ಬನಿ ಹನಿ. ಇದಿರು ಬೀಸುವ ಕುಳಿರ್ಗಾಳಿ. ಹೇಮಂತಕ್ಕೂ ಮಿಗಿಲಾದ ಶೈತ್ಯ. ಚಳಿ, ಹಿಮ, ಇಬ್ಬನಿಗೆ ಮೈ ಒಡ್ಡಿದರೆ ಅನಾಹುತ. ಇವೆಲ್ಲವನ್ನು ಆರೋಗ್ಯ ಕಾಪಾಡುವ ಸಲುವಾಗಿ ನಾವು ತಪ್ಪಿಸಿಕೊಳ್ಳಲೇಬೇಕಾಗಿದೆ. ನನಗೆ ವಾಕಿಂಗ್ ತುಂಬ ಇಷ್ಟ. ನನ್ನ ದಿನಚರಿಯ ಆರಂಭದ ರಿವಾಜು ಎಂಬ ಹಟಮಾರಿತನ ಸಲ್ಲದು. ಮುಂಜಾವಿನ ಮಂಜಿನ, ಇದಿರುಗಾಳಿಗೆ ಮೈ ಒಡ್ಡಿಕೊಳ್ಳದಿರಿ. ಇದನ್ನು 'ಪ್ರಾಗ್ವಾತ' ಎನ್ನುತ್ತಾರೆ, ಚರಕರು. ಇಂತಹ ಗಾಳಿಗೆ ಎದುರು ನಡಿಗೆಯಿಂದ ಖಂಡಿತ ಅಪಾಯವಿದೆ. ಮಂಜು ಹನಿಗಳ ನಡುವಿನ ರವಿಕಿರಣ ಸಂತಾಪ ಮೈ ಸುಡುವಷ್ಟು ಪ್ರಖರ. ಆದರೆ ಅದರ ಅರಿವು ನಿಮಗಾಗದು.

ನನಗೆ ಮೈ ದಣಿವಾಗುವಂತಹ ಆಟೋಟ ತುಂಬ ಇಷ್ಟ. 'ಆಡಿದರೆ ಮಾತ್ರ ನಾನು ಫಿಟ್'. ಹೀಗೆ ವಾದಿಸುವವರೂ ಇದ್ದಾರೆ. ಮುಟ್ಟು ತೀರುವಳಿಯ ಮಹಿಳೆಯರು, ಐವತ್ತು ದಾಟಿದ ಪುರುಷರು ಅಂತಹ ಫಿಟ್ನೆಸ್ ಬಗ್ಗೆ ಖಂಡಿತ ದುಂಬಾಲು ಬೀಳುವುದು ತರವಲ್ಲ. ಏಕೆಂದರೆ ಆದಾನ ಕಾಲದ ಮನುಷ್ಯಬಲ ನಿಧಾನವಾಗಿ ಇಳಿಮುಖ. ಚರಕ ಸಂಹಿತೆಯ ಕಿವಿ ಮಾತೊಂದು ಇಲ್ಲಿ ಪ್ರಸ್ತುತ. ಕ್ರಮೇಣ ದೇಹದ ಶ್ರಮಸಹಿಷ್ಣುತೆ ಕುಂದುವುದು ಬಹುತೇಕ ಇದೇ ಕಾಲದಲ್ಲಿ. ದೇಹದಲ್ಲಿ ನಮಗೆಷ್ಟು ಕಸುವು ಇದೆ ಎಂಬ ಅಂದಾಜು ನಮಗಿದೆ. ಅದರ ಅರ್ಧಶಕ್ತಿ ಮಾತ್ರ ನಾವು ವ್ಯಯ ಮಾಡೋಣ; ಉಳಿದರ್ಧವನ್ನು ನಾವು ಜತನ ಮಾಡೋಣ. ಅದು ನಮ್ಮ ರೋಗನಿರೋಧಕ ಶಕ್ತಿ ಕಾಪಾಡುವ ಭೀಮಬಲ. ಅದು ಸೂರೆಯಾಗದಂತೆ ನಾವು ನಮ್ಮ ಕಾರ್ಯಚಟುವಟಿಕೆಗಳನ್ನು ರೂಢಿಸಿಕೊಳ್ಳೋಣ. ಚರಕರಿತ್ತ ಒಂದು ನಿದರ್ಶನ ಬಲು ಸೂಕ್ತ. ಆನೆ ಮತ್ತು ಸಿಂಹಗಳೆರಡೂ ಬಲವಂತ ಮೃಗಗಳು. ಆದರೆ ಅತಿಯಾಗಿ ನಮ್ಮ ಶಕ್ತಿ ವ್ಯಯವಾಯಿತೆ? ಆಗ ಬಲಿಷ್ಠ ಆನೆಯನ್ನು ಸಿಂಹ ನಿಗ್ರಹಿಸಿದ ಹಾಗೆ ಏಕಾಏಕಿ ನಾವು ರೋಗಕ್ಕೆ ತುತ್ತಾಗುವ ಭಯವಿದೆ. ಇದನ್ನು ಮರೆಯದೆ ಶಿಶಿರದ ಸ್ವಾಸ್ಥ್ಯ ಸಂಹಿತೆಯನ್ನು ಅಳವಡಿಸಿಕೊಳ್ಳೋಣ.

ಶಿಶಿರದ ಚಳಿಗೆ ಚರ್ಮ ಹೆಚ್ಚು ಒಣಗುತ್ತದೆ; ಬಿರಿಯುತ್ತದೆ. ಅಂಗೈ-ಅಂಗಾಲು ಸಹ ಒಡೆದು ರಕ್ತ ಒಸರುವ ಪ್ರಮೇಯ. ಇದರಲ್ಲಿದೆ ವಾತದ ಕಾರುಬಾರು. ವಾತವನ್ನು ಹದ್ದುಬಸ್ತಿನಲ್ಲಿಡಲು ಮುಖ್ಯವಾಗಿ 'ಸ್ನೇಹ'ದ ಬಳಕೆಗೆ ಒತ್ತು ನೀಡಬೇಕು. ಅಂದರೆ, ಒಳ ಹೊರಗೆಗೆ ಬಳಸುವ ಜಿಡ್ಡು. ಅಂದರೆ ಆಹಾರದಲ್ಲಿ ಸಾಕಷ್ಟು ಜಿಡ್ಡಿನಂಶ ಸೇರಿಸಿಕೊಳ್ಳಬೇಕು. ತೆಂಗಿನೆಣ್ಣೆ, ಎಳ್ಳೆಣ್ಣೆ, ಶೇಂಗಾ ಎಣ್ಣೆಗಳು ಆಹಾರದ ಸಂಗಡ ಕೂಡಿಸಿ ಬಳಸಬೇಕು. ತುಪ್ಪದ ಬಳಕೆಗೆ ಒತ್ತು ಕೊಡಬೇಕು. ಹಸಿವೆಯಂತೂ ಚಳಿಯ ದಿನಗಳಲ್ಲಿ ತುಸು ಹೆಚ್ಚೇ ಸೈ. ಹಾಗಾಗಿ ಜಿಡ್ಡಿನ ಬಳಕೆಗೆ ಒತ್ತು ಕೊಡುವುದು ಸಮಂಜಸ. ಎಳ್ಳಿನ ಹಬ್ಬ ಸಂಕ್ರಾಂತಿ. ಎಳ್ಳಮಾವಾಸ್ಯೆಯ ತೀರ್ಥಸ್ನಾನದಿಂದ ಪುಣ್ಯ ಪ್ರಾಪ್ತಿ. ಪಿತೃಗಳಿಗೆ ಸದ್ಗತಿ. ಆದರೆ ಎಳ್ಳಿನ ಹೇರಳ ಬಳಕೆಗೆ ಒತ್ತು ಗಮನಿಸಿರಿ. ಆದಾನದ ದೇಹರೂಕ್ಷತೆ ತಪ್ಪಿಸಲು ಎಳ್ಳು ತಿನ್ನಿರಿ. ಎಳ್ಳೆಣ್ಣೆ ಬಳಿದುಕೊಳ್ಳಿರಿ. ನೆತ್ತಿಗೆ ಒತ್ತುವ ಎಣ್ಣೆಯ ಬಳಕೆಗೆ 'ಮೂರ್ಧ್ನಿತೈಲ' ಎಂಬ ಪರಿಭಾಷೆ. ನಿತ್ಯವೂ ಇದರಿಂದ ಲಾಭವಿದೆ. ಬರಿ ನೆತ್ತಿಗೆ ಮೀಯಬಾರದೆಂಬ ಜನಪದ ನಂಬಿಕೆ ಇದೆ. ಅನಂತರ ಹದ ಬಿಸಿನೀರಲ್ಲಿ ಮೀಯಿರಿ. 'ಪೊಂಗಲ್' ಎಂದರೆ ಹೆಸರು ಧಾನ್ಯದ ಆಹಾರ. ಹೆಸರನ್ನು ಅತಿಶಯ ಪಥ್ಯದ ದ್ವಿದಳ ಎನ್ನುತ್ತದೆ, ಆಯುರ್ವೇದ. ಕೇವಲ ಸಂಕ್ರಮಣಕ್ಕೆ ಮಾತ್ರ ಪೊಂಗಲ್ ಬಳಕೆ ಅಲ್ಲ. ಅಂದಿನಿಂದ ಶಿಶಿರ ಋತು ಪರ್ಯಂತ ಹೆಸರುಬೇಳೆಯನ್ನು ಬಳಸೋಣ.

ಕಹಿರಸವು ಶಿಶಿರದಲ್ಲಿ ಹೆಚ್ಚು ಬಲ. ಹಾಗಾಗಿ ಕಹಿ ತರಕಾರಿ ಬಳಸಬೇಕು. ಹೇಮಂತದಿಂದ ಕೊಂಚ ಕೊಂಚವೇ ದೇಹದಲ್ಲಿ ಕಫ ಸೇರಲು ಆರಂಭ. ಅದನ್ನು ತಡೆಯಲು ಮತ್ತು ನಿಗ್ರಹಿಸಲು ಕಹಿ ಬಳಕೆಗೆ ಆದ್ಯತೆ ಇರಲಿ. ಮೆಂತ್ಯ, ಧನಿಯಾ, ಸಾಸಿವೆ ಕಹಿರಸದ ಸಂಭಾರಗಳು; ಇವನ್ನು ಬಳಸಲು ಅಡ್ಡಿಯಿಲ್ಲ. ನಿಮಗೆ ಈಗಲೇ ಅರಿವಾಗಿರುತ್ತದೆ. ಗಂಟೆ ಏಳಾದರೂ ಹೊತ್ತು ಹಗಲಾಗದು. ಚಳಿಯ ದಿನಗಳೇ ಹೀಗೆ. ಸುದೀರ್ಘ ಇರುಳಿನ ಬೆಚ್ಚನೆಯ ಮನೆ ವಾಸಕ್ಕೆ ಹೇಮಂತ, ಶಿಶಿರದಲ್ಲಿದೆ ಬಹಳ ಒತ್ತು. ಅಷ್ಟೆ ಅಲ್ಲ. ಮುಖಾದಿ ಸಕಲ ಪ್ರಕ್ಷಾಲನಕ್ಕೆ ಕೂಡ ಹಿತೋಷ್ಣ ಜಲ ಬಳಸಿರಿ ಎನ್ನುತ್ತದೆ ಆಯುರ್ವೇದ. ಧರಿಸುವ ಬಟ್ಟೆ, ಮಲಗುವ ಹಾಸಿಗೆ, ಹೊದಿಕೆಯ ಬಟ್ಟೆಗೆ ಸಹ ಇದಮಿತ್ಥಂ ಎಂಬ ಸೂಚನೆಗಳು ಇವೆ. ಉಣ್ಣೆಯ, ರೇಷ್ಮೆಯ ಬಟ್ಟೆಗೆ ಹೆಚ್ಚಿನ ಮಾನ್ಯತೆ.

ಈಗಂತೂ ಮಾರುಕಟ್ಟೆಯ ತುಂಬ ಯಾವು ಹಣ್ಣು ಬೇಕಾದರೂ ಇಡೀ ವರ್ಷ ಸಿಗುತ್ತದೆ. ಆಯುರ್ವೇದದ ಆಯಾ ಋತುವಿನಲ್ಲಿ ಲಭ್ಯವಾಗುವ ಹಣ್ಣು ಆಯಾ ಋತುವಿಗೆ ತಿನ್ನಲು ಯೋಗ್ಯ. ಎಲಚಿ ಅಥವಾ ಬೋರೆಯ ಹಣ್ಣು ಸಂಕ್ರಾಂತಿಯ ಎಳ್ಳು ಬೀರುವ ತಟ್ಟೆಗಷ್ಟೆ ಮೀಸಲಾಗಬಾರದು. ಇದೀಗ ಎಲಚಿಯ ಸೋದರ ಹಣ್ಣು ಬೋರೆ ಅಥವಾ ಬೇರ್ ಲಭ್ಯ. ಅದನ್ನು ಹೆಚ್ಚು ಬಳಸಿದರೆ ಆರೋಗ್ಯ ಎಂಬ ಸೂಚ್ಯಾರ್ಥ ಸಂಕ್ರಾಂತಿ ಎಳ್ಳು ತಟ್ಟೆಯಲ್ಲಿರುವ ಎಲಚಿಯ ಸಂದೇಶ. ದೋರೆಗಾಯಿ ಪಪಾಯಿಯು ಕೊಂಚ ಕಹಿ. ಆಗ ಅದರ ಬಳಕೆಗೆ ಅಡ್ಡಿಯಿಲ್ಲ. ಹೀಗೆ ಕಹಿಯ ಬಳಕೆ ಬೇವಿನ ಹಬ್ಬ ಯುಗಾದಿಯ ಪರ್ಯಂತ ಮರೆಯದಿರೋಣ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾದರಿ ಪ್ರಶ್ನೋತ್ತರ

ಗಣಿತ

ಎಸ್ಸೆಸ್ಸೆಲ್ಸಿ

17) ಚಿತ್ರದಲ್ಲಿ ABಮತ್ತು ACಗಳು Oಕೇಂದ್ರವಿರುವ ವೃತ್ತಕ್ಕೆ Aಬಿಂದುವಿನಿಂದ ಸ್ಪರ್ಶಕಗಳು ∠BOC=130° ಆದರೆ ∠BACಯನ್ನು ಕಂಡುಹಿಡಿಯಿರಿ



ಪರಿಹಾರ:=

$\angle BAC = 180^0 - 13^0 = 50^0$

18) $\frac{x+1}{2} = \frac{1}{x}$ ನ್ನು ವರ್ಗಸಮೀಕರಣದ ಆದರ್ಶ ರೂಪದಲ್ಲಿ ಬರೆಯಿರಿ

ಪರಿಹಾರ:-

$\frac{x+1}{2} = \frac{1}{x}$

$x^2 + x = 2$

$x^2 + x - 2 = 0$

19) ಬಿರುಗಾಳಿಗೆ ಸಿಕ್ಕಿ ಒಂದು ಮರವು ಮುರಿದು ನೆಲಕ್ಕೆ ತಾಗಿದಾಗ ನೆಲದೊಂದಿಗೆ 30° ಕೋನವನ್ನು ಉಂಟು ಮಾಡಿದೆ. ಮತ್ತು ಮರದ ತುದಿಯು ಮರದ ಬುಡದಿಂದ 8 ಮೀ. ದೂರದಲ್ಲಿ ನೆಲಕ್ಕೆ ತಾಗಿದೆ. ಹಾಗಾದರೆ ಮುರಿದು ಬೀಳುವ ಮುನ್ನ ಮರದ ಎತ್ತರ ಎಷ್ಟಿತ್ತು ಎಂಬುದನ್ನು ಕಂಡುಹಿಡಿಯಿರಿ.

ಪರಿಹಾರ:-

ಚಿತ್ರದಲ್ಲಿ ACಯನ್ನು ಬಿರುಗಾಳಿಗೆ ಸಿಕ್ಕಿ ಒಂದು ಮರವು ಮುರಿದು ನೆಲಕ್ಕೆ ತಾಗಿದಾಗ ಕೊಂಬೆ ಎಂದು ಭಾವಿಸೋಣ. ಇಲ್ಲಿ ಕೋನ C = 30° ಮತ್ತು BC = 8 m (ದತ್ತ)



ಮುರಿದು ಬೀಳುವ ಮುನ್ನ ಮರದ ಎತ್ತರ = AB+AC

ಲಂಬಕೋನ ತ್ರಿಭುಜ ΔABCದಲ್ಲಿ,

Using Cosine and tangent angles,

cos 30° = BC/AC

ನಮಗೆ ಗೊತ್ತಿರುವಂತೆ cos 30° = √3/2

√3/2 = 8/AC

AC = 16/√3 ....(1)

ಇದೇ ರೀತಿ

tan 30° = AB/BC

1/√3 = AB/8

AB = 8/√3 ....(2)

ಮುರಿದು ಬೀಳುವ ಮುನ್ನ ಮರದ ಎತ್ತರ = AB + AC

= 16/√3 + 8/√3

= 24/√3

= 8√3 m.

20) ತ್ರಿಭುಜದ ಎರಡು ಬಾಹುಗಳನ್ನು ಎರಡು ವಿಭಿನ್ನ ಬಿಂದುಗಳಲ್ಲಿ ಛೇದಿಸುವಂತೆ ಒಂದು ಬಾಹುವಿಗೆ ಸಮಾನಾಂತರವಾಗಿ ಎಳೆದ ಸರಳರೇಖೆಯು ಉಳಿದೆರಡು ಬಾಹುಗಳನ್ನು ಸಮಾನುಪಾತದಲ್ಲಿ ವಿಭಾಗಿಸುತ್ತದೆ. ಎಂಬುದನ್ನು ಸಾಧಿಸಿ

ರಚನೆ: ΔABC ಯಲ್ಲಿ BC ಗೆ ಸಮಾನಾಂತರವಾಗಿರುವಂತೆ ಎಳೆದ ರೇಖೆಯು AB ಮತ್ತು AC ಗಳನ್ನು ಕ್ರಮವಾಗಿ D ಮತ್ತು E ಬಿಂದುಗಳಲ್ಲಿ ಛೇದಿಸಿವೆ (ಚಿತ್ರ ನೋಡಿ)



ನಾವು ಸಾಧಿಸಬೇಕಾಗಿರುವುದು $\frac{AD}{AE} = \frac{DB}{EC}$,

ಸಾಧನೆ:- BE ಮತ್ತು CD ಗಳನ್ನು ಸೇರಿಸಬೇಕು. ಮತ್ತು DM ⊥ AC ಮತ್ತು EN ⊥ AB ಎಳೆಯಬೇಕು

ΔADEಯ ವಿಸ್ತೀರ್ಣ ($\frac{1}{2}$ ಪಾದ × ಎತ್ತರ) = $= \frac{1}{2} AD \times EN$

ಯ ವಿಸ್ತೀರ್ಣವನ್ನು ವಿ(ADE) ಎಂದು ಸೂಚಿಸಬಹುದು

ಆದ್ದರಿಂದ ವಿ(ADE) $= \frac{1}{2} AD \times EN$

ಆದೇ ರೀತಿ ವಿ(BDE) = $= \frac{1}{2} DB \times EN$

ವಿ(ADE) $= \frac{1}{2} AE \times DM$ ಮತ್ತು

ವಿ(DEC) = $= \frac{1}{2} EC \times DM$

ಆದ್ದರಿಂದ

$= \frac{ar(ADE)}{ar(BDE)} = \frac{\frac{1}{2} \times AD \times EN}{\frac{1}{2} \times DB \times EN} = \frac{AD}{DB}$ ....(1)

and

$\frac{ar(ADE)}{ar(DEC)} = \frac{\frac{1}{2} \times AE \times DM}{\frac{1}{2} \times EC \times DM} = \frac{AE}{EC}$ ....(2)

ΔBDE ಮತ್ತು DECಗಳು ಒಂದೇ ಪಾದ DF ಮತ್ತು BC‖DE ರೇಖೆಗಳ ನಡುವೆ ಇರುವುದನ್ನು ಗಮನಿಸಿ

. ಆದ್ದರಿಂದ ವಿ(ΔBDE) = ವಿ(ΔDEC) ....(3)

ಆದ್ದರಿಂದ (1), (2) ಮತ್ತು 3 ರಿಂದ

$\frac{AD}{AE} = \frac{DB}{EC}$

ಪ್ರಜಾವಾಣಿ ನೋಡಿಯೊ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾದರಿ ಪ್ರಶ್ನೋತ್ತರ

ಭೌತವಿಜ್ಞಾನ

ಪಿಯುಸಿ

1) ಎರಡು ಸ್ಥಿರ ಆವೇಶಗಳ ನಡುವಿನ ಕೂಲಂಬ್ ಬಲವೂ ಕೂಡ ....ಬಲವೇ ಆಗಿದೆ

ಉತ್ತರ:- ಸಂರಕ್ಷೀ

2) ಸ್ಥಿರ ವಿದ್ಯುತ್ ವಿಭವದ ಬಗ್ಗೆ ಬರೆಯಿರಿ

ಉತ್ತರ:- ಯಾವುದೇ ಪರೀಕ್ಷಕ ಆವೇಶ q ನ ಮೇಲೆ ಮಾಡಿದ ಕೆಲಸದಿಂದ ವಿಭವಶಕ್ತಿಯನ್ನು ವ್ಯಾಖ್ಯಾನಿಸುತ್ತೇವೆ. ಈ ಕಾರ್ಯವು ಸ್ಪಷ್ಟವಾಗಿ q ನ ಸಮಾನಪಾತಿಯಾಗಿರುತ್ತದೆ. ಏಕೆಂದರೆ ಆವೇಶ q ನ ಮೇಲೆ ಯಾವುದೇ ಬಿಂದುವಿನಲ್ಲಿ ಬಲವು qE, ಆಗಿರುತ್ತದೆ. ಇಲ್ಲಿ Eಯ ಆವೇಶ ವಿನ್ಯಾಸದ ಕಾರಣ ಆ ಬಿಂದುವಿನಲ್ಲಿ ವಿದ್ಯುತ್ ಕ್ಷೇತ್ರವಾಗಿರುತ್ತದೆ. ಆದ್ದರಿಂದ ಮಾಡಿದ ಕೆಲಸವನ್ನು ಆವೇಶ q ನಿಂದ ಭಾಗಿಸುವುದು ಸೂಕ್ತವೆನಿಸುತ್ತದೆ. ಏಕೆಂದರೆ ಪರಿಣಾಮ ರೂಪದಲ್ಲಿ ಬಂದ ಪರಿಣಾಮವು q ನಿಂದಸ್ವತಂತ್ರವಾಗಿರುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಪ್ರತಿಯೊಂದು ಏಕಮಾನ ಆವೇಶದ ಮೇಲೆ ಮಾಡಿದ ಕೆಲಸವು ಆವೇಶ ವಿನ್ಯಾಸಕ್ಕೆ ಸಂಬಂಧಿಸಿದ ವಿದ್ಯುತ್‌ಕ್ಷೇತ್ರದ ಪ್ರಮುಖ ಲಕ್ಷಣವಾಗಿರುತ್ತದೆ .ಇದರಲ್ಲಿ ನೀಡಿವ ಆವೇಶ ವಿನ್ಯಾಸದ ಕಾರಣ ಉಂಟಾದ ಸ್ಥಿರವಿದ್ಯುತ್ ವಿಭವ V ಯ ಬಗ್ಗೆ ಕಲ್ಪನೆಯನ್ನು ನೀಡುತ್ತದೆ. ಒಂದು ಏಕಮಾನ ಧನ ಆವೇಶವನ್ನು R ರಿಂದ P ಗೆ ಬಾಹ್ಯಬಲದ ಸಹಾಯದಿಂದ ಕೊಂಡೊಯ್ಯಲು ಉಂಟಾದ ಕೆಲಸ

$$= V_P - V_R \left(= \frac{U_P - U_R}{q} \right)$$

ಇಲ್ಲಿ ಮತ್ತು VP ಕ್ರಮವಾಗಿ ಬಿಂದು VRಮತ್ತು P ಮತ್ತು Rನ ವಿಭವಶಕ್ತಿಯಾಗಿರುತ್ತದೆ. ಗಮನಿಸಿ, ಮೊದಲಿನಂತೆಯೇ ಇಲ್ಲೂ ಸಹ ವಿಭವದ ವಾಸ್ತವಿಕ ಮಾನಕ್ಕಿಂತ, ವಿಭವದ ಅಂತರವೇ ಭೌತಿಕವಾಗಿ ಹೆಚ್ಚು ಮಹತ್ವದಾಗಿದೆ. ಬಾಹ್ಯ ಬಲದಿಂದ ಯಾವುದೇ ಏಕಮಾನ ಧನಾವೇಶವನ್ನು ಅನಂತದಿಂದ ಯಾವುದೇ ಬಿಂದುವಿನವರೆಗೆ ಕೊಂಡೊಯ್ಯಲು ಮಾಡಿರುವ ಕೆಲಸ = ಆ ಬಿಂದುವಿನಲ್ಲಿಯ ಸ್ಥಿರ ವಿದ್ಯುತ್ ವಿಭವ(V) ಬೇರೆ ರೀತಿಯಲ್ಲಿ ಹೇಳುವುದಾದರೆ, ಸ್ಥಿರವಿದ್ಯುತ್ ಕ್ಷೇತ್ರ ಪ್ರದೇಶದ ಯಾವುದೇ ಬಿಂದುವಿನಲ್ಲಿ ಸ್ಥಿರ ವಿದ್ಯುತ್ ವಿಭವವು ಯಾವುದೇ ಏಕಮಾನ ಧನಾವೇಶವನ್ನು ಅನಂತದಿಂದ ನಿರ್ದಿಷ್ಟ ಬಿಂದುವಿಗೆ (ವೇಗೋತ್ಕರ್ಷವಿಲ್ಲದೆಯೇ) ತೆಗೆದುಕೊಂಡು ಹೋಗಲು ಮಾಡಿದ ಕೆಲಸವೆನಿಸುತ್ತವೆ.

3) 3) 3 × 10–8 C ಮತ್ತು –2 × 10–8 C

ಎರಡು ಆವೇಶಗಳು 15cm ಅಂತರದಲ್ಲಿವೆ. ಈ ಎರಡು ಆವೇಶಗಳನ್ನು ಸೇರಿಸುವ ರೇಖೆಯ ಮೇಲಿನ ಯಾವ ಬಿಂದುವಿನಲ್ಲಿ ವಿದ್ಯುತ್ ವಿಭವವು ಸೊನ್ನೆಯಾಗಿರುತ್ತದೆ? (ಅನಂತದಲ್ಲಿ ವಿಭವವು ಸೊನ್ನೆ ಎಂದು ತೆಗೆದುಕೊಳ್ಳಿ.)

ಉತ್ತರ: ಧನಾವೇಶವು ಮೂಲ ಬಿಂದು Oದಲ್ಲಿದೆ ಎಂದುಕೊಳ್ಳೋಣ. ಎರಡೂ ಆವೇಶಗಳನ್ನು ಸೇರಿಸುವ ರೇಖೆಯನ್ನು xಅಕ್ಷ ಎಂದುಕೊಳ್ಳೋಣ ಮತ್ತು ಋಣಾವೇಶ ಮೂಲಬಿಂದುವಿನಬಲಭಾಗದಲ್ಲಿರುತ್ತದೆ.



Xಅಕ್ಷದ ಮೇಲೆ ನಮಗೆ ಬೇಕಾಗಿರುವ ಬಿಂದು P ಎಂದುಕೊಳ್ಳೋಣ. ಇಲ್ಲಿ ವಿದ್ಯುತ್ ವಿಭವವು ಶೂನ್ಯವಾಗಿದೆ. Pಯ ನಿರ್ದೇಶಾಂಕವು xಆಗಿದ್ದರೆ, ಧನಾತ್ಮಕವಾಗಿರಬೇಕೆಂಬುದುಸ್ಪಷ್ಟವಾಗುತ್ತದೆ. (x < 0)ಇದ್ದಾಗ ಇದುಸಾಧ್ಯವಿಲ್ಲ. ಏಕೆಂದರೆ ಎರಡುಆವೇಶಗಳ ಕಾರಣ ಉಂಟಾದ 2 ವಿದ್ಯುತ್ ವಿಭವವು ಒಟ್ಟಾಗಿ ಸೊನ್ನೆಯಾಗುವುದಿಲ್ಲ) x ಮೂಲಬಿಂದು 0 ಮತ್ತು Aಯ ಮಧ್ಯದಲ್ಲಲ್ಲೋ ಇದ್ದಾಗ,

ಈ ಪ್ರಕಾರ ಧನಾವೇಶದಿಂದ 9 cm ಮತ್ತು45 cm ಋಣಾವೇಶದ

$$\frac{1}{4\pi\varepsilon_0}\left[\frac{3\times10^{-8}}{x\times10^{-2}} - \frac{2\times10^{-8}}{(15-x)\times10^{-2}}\right] = 0$$

ಇಲ್ಲಿ x ನ್ನು cm ನಲ್ಲಿ ಇಡಲಾಗಿದೆ. ಅರ್ಥಾತ್,

$$\frac{3}{x} - \frac{2}{15-x} = 0$$ ಅಥವಾ $x = 9$ cm.

ಬಿಂದು Pಯು OAಯ ಮುಂದುವರೆದ ರೇಖೆಯಲ್ಲಿದ್ದರೆ

$$\frac{3}{x} - \frac{2}{x-15} = 0$$

$x = 45$ cm

ಕಡೆಗೆ ವಿದ್ಯುತ್ವಿಭವವು ಶೂನ್ಯವಾಗಿದೆ. ಇಲ್ಲಿ ಬೇಕಾದ ಸೂತ್ರವನ್ನು ಅನಂತದಲ್ಲಿ ವಿದ್ಯುತ್ ವಿಭವವು ಶೂನ್ಯವೆಂದು ಪರಿಗಣಿಸಿಯೇತೆಗೆದುಕೊಳ್ಳಲಾಗಿದೆ.

4) ಲೇಸರ್ ಬಗ್ಗೆ ತಿಳಿಸಿ

ಉತ್ತರ:- ಲೈಟ್ ಆ್ಯಂಪ್ಲಿಫಿಕೇಶನ್ ಬೈ ಸ್ಟಿಮ್ಯುಲೇಟೆಡ್ ಎಮಿಷನ್ ಆಫ್ರೇಡಿಯೇಶನ್‌ದ ಪ್ರಥಮಾಕ್ಷರಿ. (ವಿಕಿರಣದಉದ್ದೀಪಿತ ಉತ್ಸರ್ಜನೆಯಿಂದ ಬೆಳಕಿನಪ್ರವರ್ಧನೆ). ಇದು 1960ರಲ್ಲಿ ಅಭಿವೃದ್ಧಿಹೊಂದಿ ವಿಜ್ಞಾನ ಹಾಗೂ ತಂತ್ರಜ್ಞಾನದ ಎಲ್ಲಾ ಕ್ಷೇತ್ರಗಳಲ್ಲಿ ಪ್ರವೇಶಿಸಿತು. ಇದುಭೌತವಿಜ್ಞಾನ, ರಸಾಯನವಿಜ್ಞಾನ,ಜೀವವಿಜ್ಞಾನ, ವೈದ್ಯಕೀಯ ಶಸ್ತ್ರಚಿಕಿತ್ಸೆ,ಹಾಗೂ ಎಂಜಿನಿಯರಿAಗ್ ಮುಂತಾದವುಗಳಲ್ಲಿಅನ್ವಯಗಳನ್ನು ಹೊಂದುತ್ತಿದೆ. 0.5 mW, ರಷ್ಟು ಕಡಿಮೆ ಸಾಮರ್ಥ್ಯದ ಪೆನ್ಸಿಲ್ಲೇಸ್ಟರ್‌ಗಳು ಪಾಯಿಂಟರ್‌ನAತೆ ಕೆಲಸಮಾಡುತ್ತವೆ. ವಿವಿಧ ಸಾಮರ್ಥ್ಯದಲೇಸ್ಟರ್‌ಗಳು ದೊರಕುತ್ತವೆ. ಕಣ್ಣಿನಅಥವಾ ಉದರ ಗ್ರಂಥಿsಗಳಶಸ್ತ್ರಚಿಕಿತ್ಸೆಗೆ ಸೂಕ್ತವಾಗುವಸೂಕ್ಷ್ಮಬಿ ಲೇಸ್ಟರ್‌ಗಳು ಕೂಡಾಲಭ್ಯವಿದೆ. ಉಕ್ಕನ್ನು ಕತ್ತರಿಸುವ ಅಥವಾಬೆಸೆಯಬಲ್ಲ ಲೇಸ್ಟರ್‌ಗಳೂ ಉಂಟು.

ಒಂದು ಆಕರದಿಂದ ಬೆಳಕು,ತರಂಗದ ಕಟ್ಟುಗಳಾಗಿಹೊರಸೂಸಲ್ಪಡುತ್ತದೆ. ಸಾಮಾನ್ಯ ಆಕರದಿಂದ ಬರುವ ಬೆಳಕು ಹಲವುತರಂಗಾಂತರಗಳ ಮಿಶ್ರಣವಾಗಿದೆ. ಹಲವುತರಂಗಗಳ ನಡುವೆ ಪರಸ್ಪರ ಯಾವುದೇ ಅವಸ್ಥೆಯ ಸಂಬಂಧವಿರುವದಿಲ್ಲ. ಆದ್ದರಿಂದ ಅಂತಹಬೆಳಕನ್ನು ಒಂದು ದ್ಯುತಿ ರಂಧ್ರದ ಮೂಲಕ ಹಾಯಿಸಿದಾಗ, ಬೆಳಕಿನ ಕಿರಣದಗಾತ್ರ ಕ್ಷಿಪ್ರಗತಿಯಲ್ಲಿ ಹೆಚ್ಚುತ್ತದೆ.ಆದರೆ ಲೇಸ್ಟರ್ ಬೆಳಕಿನ ಪ್ರತಿಕಟ್ಟಿನಲ್ಲಿಯೂ ತರಂಗಾಂತರಗಳುಬಹುತೇಕ ಸಮವಾಗಿವೆ. ಅದೂ ಅಲ್ಲದೆತರಂಗಗಳ ಕಟ್ಟಿನ ಉದ್ದ ಬಹುಪಾಲುಸಮವಾಗಿರುತ್ತವೆ. ಇದರರ್ಥ ಸುದೀರ್ಘಅವಧಿಯವರಗೆ ಅವುಗಳ ನಡುವಿನಅವಸ್ಥೆಯ ಸಹ ಸಂಬಂಧ ಉಳಿಯುತ್ತದೆ.ಇದರಿಂದಾಗಿ ಲೇಸ್ಟರ್ ಅಪಸರಣ ಗಣನೀಯವಾಗಿಕಡಿಮೆಯಾಗುತ್ತದೆ.ಸಾಮಾನ್ಯ ಆಕರದಲ್ಲಿ N ಪರಮಾಣುಗಳಿದ್ದು, ಪ್ರತಿ ಪರಮಾಣು Iತೀವ್ರತೆಯ ಬೆಳಕನ್ನುಹೊರಸೂಸುತ್ತಿದ್ದರೆ ಆಗ ಸಾಮಾನ್ಯಆಕರದ ಒಟ್ಟು ತೀವ್ರತೆಯು NI ಕ್ಕೆಅನುಪಾತದಲ್ಲಿರುತ್ತದೆ. ಆದರೆಲೇಸ್ಟರ್‌ನಲ್ಲಿ ತೀವ್ರತೆಯು N2I ಕ್ಕೆಅನುಪಾತದಲ್ಲಿರುತ್ತದೆ. N ಬಹಳ ದೊಡ್ಡಸಂಖ್ಯೆಯಾಗಿರುವುದನ್ನು ಗಮನಿಸಿದರೆಲೇಸ್ಟರ್‌ದಿಂದ ಬರುವ ಬೆಳಕು ಸಾಮಾನ್ಯಆಕರದಿಂದ ಬರುವ ಬೆಳಕಿಗಿಂತ ಹೆಚ್ಚುಪ್ರಬಲವಾಗಿರುತ್ತದೆ.

ಅಪೋಲೋ ಗಗನಯಾತ್ರಿಗಳುಚಂದ್ರನಿಗೆ ಭೇಟಿ ನೀಡಿದಾಗ ಭೂಮಿಗೆಮುಖ ಮಾಡಿದ ಕನ್ನಡಿಯೊಂದನ್ನು ಇಟ್ಟಿದ್ದರು. ನಂತರ ಭೂಮಿಯ ಮೇಲಿನವಿಜ್ಞಾನಿಗಳು ಪ್ರಬಲವಾದ ಲೇಸರ್ ಕನ್ನಡಿ ಎಡೆಗೆ ಬಿಟ್ಟು ಪ್ರತಿಫಲಿಸಿದ ಕಿರಣವನ್ನು ಭೂಮಿಯಮೇಲೆ ಮರಳಿ ಪಡೆದರು. ಪ್ರತಿಫಲಿತಕಿರಣದ ಅಪಸರಣದ ಅಳತೆಯನ್ನು ಮತ್ತು ಅದರ ಸುತ್ತು ಪ್ರವಾಸಕ್ಕೆತೆಗೆದುಕೊಂಡ ಸಮಯವನ್ನುಅಳೆದರು. ಇದು

(a) ಲೇಸ್ಟರ್ ಬೆಳಕಿನ ಅತ್ಯಂತ ಕಡಿಮೆ ಅಪಸರಣೆಯನ್ನುಸಾಧಿಸಲು ಮತ್ತು

(b) ಭೂಮಿಯಿಂದ ಚಂದ್ರನ ದೂರವನ್ನು ನಿಖರವಾಗಿ ನಿರ್ಣಯಿಸಲು ಅವಕಾಶ ಕಲ್ಪಿಸಿತು.

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ, ಬೆಂಗಳೂರು

ಪ್ರಜಾವಾಣಿ ನೋಡಿಯೊ

ಪಿಯುಸಿ ಭೌತವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಂಗಳವಾರ, ಜನವರಿ 24, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 24 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಟ್ರೇಲರ್ ಬಿಡುಗಡೆ
ಮುಂಬೈನಲ್ಲಿ ಸೋಮವಾರ ತಮ್ಮ ಹೊಸ ಸಿನಿಮಾದ ಟ್ರೇಲರ್ ಬಿಡುಗಡೆ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ಶ್ರದ್ಧಾ ಕಪೂರ್ ಕಾಣಿಸಿಕೊಂಡಿದ್ದು ಹೀಗೆ

ಆಳ-ಅಗಲ
'ರಸ್ತೆಯಲ್ಲಿ ರೋಷಾವೇಶ' ನಿಯಂತ್ರಣಕ್ಕೆ ಕಾನೂನಿಲ್ಲ
ಅರಣ್ಯದಲ್ಲಿ ವೃದ್ಧೆ ಬಿಟ್ಟು ಹೋದ ಸಂಬಂಧಿ 4
ಚಿರತೆ ಸೆರೆಗೆ ಬಿರುಸಿನ ಕಾರ್ಯಾಚರಣೆ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,941 ▲	18,118 ▲	₹58,750 (ಬೆಂಗಳೂರು)	₹70,600 (ಬೆಂಗಳೂರು)	81.38 ▼

ಬಿಜೆಪಿ ವಿರುದ್ಧ ಶೇ 40, ಕಾಂಗ್ರೆಸ್ ವಿರುದ್ಧ ಶೇ 60 ಲಂಚದ ಆರೋಪ

ಭ್ರಷ್ಟಾಚಾರ: ಕೈ–ಕಮಲ ಜಟಾಪಟಿ

ಭ್ರಷ್ಟಾಚಾರದ ವಿಚಾರವನ್ನು ಮುಂದಿಟ್ಟುಕೊಂಡು ಆಡಳಿತಾರೂಢ ಬಿಜೆಪಿ ಮತ್ತು ಪ್ರಮುಖ ಪ್ರತಿಪಕ್ಷ ಕಾಂಗ್ರೆಸ್ ಜಟಾಪಟ ತೀವ್ರಗೊಳಿಸಿವೆ. ಸರ್ಕಾರದ ವಿರುದ್ಧ ಬೆಂಗಳೂರಿನ 350ಕ್ಕೂ ಹೆಚ್ಚು ಕಡೆ ಕಾಂಗ್ರೆಸ್ ಸೋಮವಾರ ಪ್ರತಿಭಟನೆ ನಡೆಸಿದ ಬೆನ್ನಲ್ಲೇ, ಬಿಜೆಪಿ ಪ್ರತಿಪಕ್ಷದ ನಾಯಕರ ವಿರುದ್ಧ ಆರೋಪಗಳ ಮಳೆಗರೆದಿದೆ. ಈ ಮೂಲಕ ಚುನಾವಣಾ ಕಣ ರಂಗೇರಿದೆ. ರಾಜ್ಯ ಸರ್ಕಾರದ ವಿರುದ್ಧದ ಭ್ರಷ್ಟಾಚಾರ ಆರೋಪಗಳ ಕುರಿತು ಜನಜಾಗೃತಿ ಮೂಡಿಸುವ ಉದ್ದೇಶದಿಂದ ಕಾಂಗ್ರೆಸ್ ನಾಯಕರು, ಕಾರ್ಯಕರ್ತರು ರಾಜಧಾನಿಯ 280 ಟ್ರಾಫಿಕ್ ಸಿಗ್ನಲ್‌ಗಳು, 51 ಮೆಟ್ರೊ ರೈಲು ನಿಲ್ದಾಣಗಳು ಮತ್ತು 26 ಮೇಲ್ಸೇತುವೆಗಳ ಬಳಿ ಸೋಮವಾರ ಬೆಳಿಗ್ಗೆ ಏಕಕಾಲಕ್ಕೆ ಮೌನ ಪ್ರತಿಭಟನೆ ನಡೆಸಿದರು.

'ಲಂಚ ಪಡೆದಿರುವುದಾಗಿ ಹೇಳಿದರೆ ರಾಜಕೀಯ ಸನ್ಯಾಸ'

ಪ್ರಜಾವಾಣಿ ವಾರ್ತೆ

ಕೋಲಾರ: 'ನಾನು ಮುಖ್ಯಮಂತ್ರಿಯಾಗಿದ್ದಾಗ ಹಣ ಖಾತರಿ ಪತ್ರ (ಎಲ್‌ಒಸಿ) ಬಿಡುಗಡೆ ಮಾಡಲು ಒಂದೇ ಒಂದು ರೂಪಾಯಿ ಲಂಚ ಪಡೆದಿರುವುದಾಗಿ ಒಬ್ಬ ಗುತ್ತಿಗೆದಾರ ಹೇಳಿದರೂ ರಾಜಕೀಯ ನಿವೃತ್ತಿ ಪಡೆದು, ಸನ್ಯಾಸ ಪಡೆಯುತ್ತೇನೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸವಾಲು ಹಾಕಿದ್ದಾರೆ.

ಸೋಮವಾರ ಇಲ್ಲಿ ಕಾಂಗ್ರೆಸ್ 'ಪ್ರಜಾಧ್ವನಿ' ಸಮಾವೇಶದಲ್ಲಿ ಮಾತನಾಡಿದ ಅವರು,'40 ಪರ್ಸೆಂಟ್ ಕಮಿಷನ್ ಬಗ್ಗೆ ಅಧಿವೇಶನದಲ್ಲಿ ಪ್ರಸ್ತಾಪ ಮಾಡಲು ಮೂರು ಬಾರಿ ಮುಂದಾಗಿದ್ದೆ' ಎಂದರು.

4ನೇ ಪುಟ ನೋಡಿ

'ಭ್ರಷ್ಟಾಚಾರ ತೊಲಗಿಸಿ ಬೆಂಗಳೂರು ಉಳಿಸಿ' ಎಂಬ ಘೋಷಣೆಯೊಂದಿಗೆ ಬೆಂಗಳೂರಿನ 350 ಕ್ಕೂ ಹೆಚ್ಚು ಕಡೆಗಳಲ್ಲಿ ಕಾಂಗ್ರೆಸ್ ಪ್ರತಿಭಟನೆ ನಡೆಸಿತು. ಇದರಲ್ಲಿ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಇದ್ದರು

ಕಾಂಗ್ರೆಸ್ ಅವಧಿಯಲ್ಲಿ ಶೇ 60 ಪ್ರೀಮಿಯಂ: ಬೊಮ್ಮಾಯಿ

ಬೆಂಗಳೂರು: 'ಕಾಂಗ್ರೆಸ್‌ನವರು ಲೋಕಾಯುಕ್ತ ಮುಚ್ಚಿದ ಪುಣ್ಯಾತ್ಮರು. ಅವರ ಕರ್ಮಕಾಂಡ ಮುಚ್ಚಿ ಹಾಕಲೆಂದೇ ಸ್ವತಂತ್ರ, ಸಂವಿಧಾನಬದ್ಧ ಸಂಸ್ಥೆಯಾದ ಲೋಕಾಯುಕ್ತವನ್ನು ಸಿದ್ದರಾಮಯ್ಯ ಸರ್ಕಾರ ಮುಚ್ಚಿತು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಕ್ರೋಶ ವ್ಯಕ್ತಪಡಿಸಿದರು.

ಬೆಂಗಳೂರಿನಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಭ್ರಷ್ಟಾಚಾರದ ಬಗ್ಗೆ ಕಾಂಗ್ರೆಸ್‌ನವರು ಮಾತನಾಡುವುದು ಹಾಸ್ಯಾಸ್ಪದ' ಎಂದರು.

4ನೇ ಪುಟ ನೋಡಿ

'₹ 35 ಸಾವಿರ ಕೋಟಿ ಹಗರಣ'

ಬೆಂಗಳೂರು: 'ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ 'ರೀಡೂ' ಹೆಸರಿನಲ್ಲಿ ಡಿನೋಟಿಫಿಕೇಷನ್ ಸೇರಿದಂತೆ ₹ 35,000 ಕೋಟಿ ಮೊತ್ತದ ಹಗರಣಗಳು ನಡೆದಿವೆ. ಬಡವರಿಗಾಗಿ ಮನೆ ನಿರ್ಮಾಣದ ಗುತ್ತಿಗೆಯಲ್ಲೂ ಭ್ರಷ್ಟಾಚಾರ ನಡೆದಿತ್ತು' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಆರೋಪಿಸಿದರು.

4ನೇ ಪುಟ ನೋಡಿ

ಹಿಜಾಬ್: ಮಧ್ಯಂತರ ಆದೇಶ ನೀಡಲು 'ಸುಪ್ರೀಂ'ಗೆ ಮನವಿ

ತ್ರಿಸದಸ್ಯ ಪೀಠ ರಚನೆಗೆ ಸಮ್ಮತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಪದವಿ ಪೂರ್ವ ಕಾಲೇಜುಗಳಲ್ಲಿ ಹಿಜಾಬ್ ನಿಷೇಧಿಸಿರುವ ಹೈಕೋರ್ಟ್ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿರುವ ಮೇಲ್ಮನವಿ ಪ್ರಕರಣದ ವಿಚಾರಣೆಗೆ ತ್ರಿಸದಸ್ಯ ಪೀಠ ಸ್ಥಾಪಿಸುವ ಮನವಿಯನ್ನು ಪರಿಗಣಿಸಲು ಸುಪ್ರೀಂ ಕೋರ್ಟ್ ಸೋಮವಾರ ಸಮ್ಮತಿಸಿದೆ.

ವಿದ್ಯಾರ್ಥಿಗಳ ಪರವಾಗಿ ಹಾಜರಾದ ಹಿರಿಯ ವಕೀಲರಾದ ಮೀನಾಕ್ಷಿ ಅರೋರಾ ಅವರು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ವಿ.ರಾಮಸುಬ್ರಮಣಿಯನ್, ಜೆ.ಬಿ.ಪಾರ್ದಿವಾಲಾ ಪೀಠದ ಎದುರು ವಿಷಯವನ್ನು ಪ್ರಸ್ತಾಪಿಸಿದರು.

'ಸುಪ್ರೀಂ ಕೋರ್ಟ್ ಭಿನ್ನಮತದ ತೀರ್ಪು ನೀಡಿದ ಬಳಿಕ ಹಲವು ವಿದ್ಯಾರ್ಥಿಗಳು ಖಾಸಗಿ ಕಾಲೇಜುಗಳಿಗೆ ತೆರಳಿದ್ದಾರೆ. ಆದರೆ, ಅವರು ಸರ್ಕಾರಿ ಕಾಲೇಜುಗಳಲ್ಲೇ ಪರೀಕ್ಷೆ ಬರೆಯಬೇಕಿದೆ. ಕೆಲವು ಕಾಲೇಜುಗಳ ತರಗತಿಗಳಿಗೆ ಫೆಬ್ರುವರಿ 6ರಿಂದ ನಿಗದಿಯಾಗಿರುವ ಪ್ರಾಯೋಗಿಕ ಪರೀಕ್ಷೆಗಳನ್ನು ಗಮನದಲ್ಲಿಟ್ಟುಕೊಂಡು ಮಧ್ಯಂತರ ಆದೇಶ ಹೊರಡಿಸುವ ಅಗತ್ಯ ಇದೆ' ಎಂದು ಪೀಠದ ಗಮನಕ್ಕೆ ತಂದರು.

'ಇದು ಸ್ಕಾರ್ಫ್‌ಗೆ ಸಂಬಂಧಿಸಿದ ವಿಷಯ. ಫೆಬ್ರುವರಿ 6ರಿಂದ ಪ್ರಾಯೋಗಿಕ ಪರೀಕ್ಷೆಗಳು ನಡೆಯಲಿವೆ. ಹಿಜಾಬ್ ಧರಿಸಿ ಪರೀಕ್ಷೆಗೆ ಹಾಜರಾಗಲು ಮಧ್ಯಂತರ ನಿರ್ದೇಶನ ನೀಡಬೇಕು' ಎಂದು ಅವರು ಮನವಿ ಮಾಡಿದರು.

'ಇದನ್ನು ನಾವು ಪರಿಶೀಲಿಸುತ್ತೇವೆ. ಇದು ತ್ರಿಸದಸ್ಯ ಪೀಠಕ್ಕೆ ಸಂಬಂಧಿಸಿದ ವಿಚಾರ. ಪ್ರಕರಣದ ವಿಚಾರಣೆಗೆ ದಿನಾಂಕ ನಿಗದಿಪಡಿಸುತ್ತೇವೆ' ಎಂದು ಮುಖ್ಯ ನ್ಯಾಯಮೂರ್ತಿಯವರು ಹೇಳಿದರು.

ಹಿಜಾಬ್ ಮೇಲ್ಮನವಿ ಪ್ರಕರಣದಲ್ಲಿ 2022ರ ಅಕ್ಟೋಬರ್ 13ರಂದು ಭಿನ್ನಮತದ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠವು, ಪ್ರಕರಣವನ್ನು ವಿಸ್ತೃತ ಪೀಠಕ್ಕೆ ವರ್ಗಾಯಿಸಿತ್ತು.

ನ್ಯಾಯಮೂರ್ತಿ ಹೇಮಂತ್ ಗುಪ್ತ ಅವರು ವಿದ್ಯಾರ್ಥಿನಿಯರ ಮೇಲ್ಮನವಿಗಳನ್ನು ತಿರಸ್ಕರಿಸಿದ್ದರು. ನ್ಯಾಯಮೂರ್ತಿ ಸುಧಾಂಶು ಧುಲಿಯಾ ಅವರು ಹಿಜಾಬ್ ನಿಷೇಧಿಸಿ ಕರ್ನಾಟಕ ಸರ್ಕಾರ ಹೊರಡಿಸಿರುವ ಫೆಬ್ರುವರಿ 5ರ ಅಧಿಸೂಚನೆಯನ್ನು ರದ್ದುಪಡಿಸಿದ್ದರು.

'ಅಗತ್ಯ ಧಾರ್ಮಿಕ ಪದ್ಧತಿ ಕುರಿತು ವಿವಾದ ಸೃಷ್ಟಿಸುವ ಅಗತ್ಯ ಇರಲಿಲ್ಲ ಮತ್ತು ಹೈಕೋರ್ಟ್ ತಪ್ಪು ನಿರ್ಧಾರ ಕೈಗೊಂಡಿದೆ' ಎಂದು ಸುಧಾಂಶು ಧುಲಿಯಾ ಅಭಿಪ್ರಾಯಪಟ್ಟಿದ್ದರು. 'ಹಿಜಾಬ್ ಧರಿಸುವುದು ಆಯ್ಕೆಗೆ ಬಿಟ್ಟಿದ್ದು. ಅದಕ್ಕಿಂತ ಹೆಚ್ಚೂ ಅಲ್ಲ ಕಡಿಮೆಯೂ ಅಲ್ಲ. ಇಂತಹ ನಿರ್ಬಂಧಗಳನ್ನು ಹೇರುವ ಮೂಲಕ ನಾವು ವಿದ್ಯಾರ್ಥಿನಿಯರ ಜೀವನ ಸುಧಾರಿಸುತ್ತಿದ್ದೇವೆಯೇ ಎಂಬ ಪ್ರಶ್ನೆ ನನ್ನನ್ನು ಕಾಡುತ್ತಿದೆ' ಎಂದು ಹೇಳಿದ್ದರು.

5ನೇ ಪುಟ ನೋಡಿ

ಸಮಿತಿಗೆ ಮೇರಿ ಕೋಮ್ ನೇತೃತ್ವ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಮೇಲಿನ ಆರೋಪಗಳ ತನಿಖೆಗೆ ಕ್ರೀಡಾ ಸಚಿವಾಲಯ ನೇಮಿಸಿರುವ ಐವರು ಸದಸ್ಯರ ಮೇಲುಸ್ತುವಾರಿ ಸಮಿತಿಯನ್ನು ಮಹಿಳಾ ಬಾಕ್ಸರ್ ಎಂ.ಸಿ.ಮೇರಿ ಕೋಮ್ ಮುನ್ನಡೆಸಲಿದ್ದಾರೆ. 10

'ಚುನಾವಣೆ ಹಂಗಿಲ್ಲದ ನ್ಯಾಯಮೂರ್ತಿಗಳು'

ನವದೆಹಲಿ: 'ನ್ಯಾಯಮೂರ್ತಿಗಳು ಚುನಾವಣೆಗೆ ನಿಲ್ಲುವುದಿಲ್ಲ. ಹೀಗಾಗಿ ಸಾರ್ವಜನಿಕರ ವಿಮರ್ಶೆಯನ್ನೂ ಎದುರಿಸುವುದಿಲ್ಲ' ಎಂದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಸೋಮವಾರ ಹೇಳಿದ್ದಾರೆ. ಆ ಮೂಲಕ ನ್ಯಾಯಾಂಗ ವ್ಯವಸ್ಥೆ ಮೇಲಿನ ವಾಗ್ದಾಳಿ ಮುಂದುವರಿಸಿದ್ದಾರೆ. 8

ಒಳ ಪುಟ
'ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನಕ್ಕೆ ಯತ್ನ' 8

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸಾರಿಗೆ ಸಂಘಟನೆಗಳ ಧರಣಿ ಇಂದು: ಬಸ್ ವ್ಯತ್ಯಯ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇತನ ಹೆಚ್ಚಳ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ರಸ್ತೆ ಸಾರಿಗೆ ನೌಕರರ ವಿವಿಧ ಸಂಘಟನೆಗಳು ಮಂಗಳವಾರ ಪ್ರತಿಭಟನೆ ನಡೆಸಲು ನಿರ್ಧರಿಸಿವೆ. ಆದರೆ, ಬಸ್‌ಗಳ ಸಂಚಾರದಲ್ಲಿ ಯಾವುದೇ ವ್ಯತ್ಯಯ ಇರುವುದಿಲ್ಲ ಎಂದು ಸ್ಪಷ್ಟಪಡಿಸಿವೆ.

'ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸಂಘಟನೆಗಳ ಮುಖಂಡರು, ಸ್ವಯಂಸೇವಕರು ಧರಣಿ ನಡೆಸಲು ನಿರ್ಧರಿಸಿದ್ದೇವೆ. ಎಲ್ಲ ವಿಭಾಗೀಯ ಕಚೇರಿಗಳ ಎದುರು ಸಂಘಟನೆಗಳ ಪ್ರತಿನಿಧಿಗಳು ಧರಣಿ ನಡೆಸಲಿದ್ದಾರೆ. ಬಸ್‌ಗಳ ಸಂಚಾರವನ್ನು ಸ್ಥಗಿತಗೊಳಿಸಿ ಸಾರ್ವನಿಕರಿಗೆ ತೊಂದರೆ ನೀಡುವ ಉದ್ದೇಶ ಇಲ್ಲ. ಮೊದಲ ಹಂತದಲ್ಲಿ ಸಾಂಕೇತಿಕ ಧರಣಿಯನ್ನಷ್ಟೇ ನಡೆಸಲಾಗುವುದು' ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷ ಎಚ್.ವಿ. ಅನಂತಸುಬ್ಬರಾವ್ 'ಪ್ರಜಾವಾಣಿ'ಗೆ ತಿಳಿಸಿದರು.

> **ವೇತನ ಪರಿಷ್ಕರಣೆ ಸೇರಿದಂತೆ ನೌಕರರ ಬೇಡಿಕೆಗಳನ್ನು ಸಿ.ಎಂ ಜತೆ ಚರ್ಚಿಸಿ ಈಡೇರಿಸಲಾಗುವುದು. ಹೀಗಾಗಿ ಮುಷ್ಕರ ಕೈಬಿಡಿ**
> **ಎಂ.ಚಂದ್ರಪ್ಪ,** ಕೆಎಸ್‌ಆರ್‌ಟಿಸಿ ಅಧ್ಯಕ್ಷ

'14 ಬೇಡಿಕೆಗಳನ್ನು ಮುಂದಿಟ್ಟು ಆರು ಕಾರ್ಮಿಕ ಸಂಘಟನೆಗಳು ಒಟ್ಟಾಗಿ ಈ ಹೋರಾಟ ನಡೆಸುತ್ತಿದ್ದೇವೆ. ವೇತನ ಹೆಚ್ಚಳ ಒಪ್ಪಂದ 2020ರ ಜ.1ರಿಂದ ಬಾಕಿ ಉಳಿದಿದೆ' ಎಂದು ಹೇಳಿದರು.

'ಪ್ರತಿಭಟನೆಯಿಂದ ಬಸ್‌ಗಳ ಕಾರ್ಯಾಚರಣೆಯಲ್ಲಿ ಯಾವುದೇ ವ್ಯತ್ಯಯ ಆಗುವುದಿಲ್ಲ. ಎಂದಿನಂತೆ ಸಂಚರಿಸಲಿವೆ' ಎಂದು ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಸ್ಪಷ್ಟಪಡಿಸಿವೆ.

'ಗರ್ಭಾವಸ್ಥೆ ತೀರ್ಮಾನ ಕೈಗೊಳ್ಳುವ ಹಕ್ಕು ಮಹಿಳೆಗೆ ಇದೆ'

ಮುಂಬೈ (ಪಿಟಿಐ): 'ಗರ್ಭಾವಸ್ಥೆಯನ್ನು ಮುಂದುವರಿಸಬೇಕೊ, ಬೇಡವೊ ಎಂಬುದನ್ನು ನಿರ್ಧರಿಸುವ ಹಕ್ಕು ಮಹಿಳೆಗೆ ಇದೆ. ಅದು ಆಕೆ ಮಾತ್ರ ಕೈಗೊಳ್ಳಬಹುದಾದ ತೀರ್ಮಾನ' ಎಂದು ಬಾಂಬೆ ಹೈಕೋರ್ಟ್ ಹೇಳಿದೆ.

ಭ್ರೂಣವು ಅಸಹಜವಾಗಿ ಬೆಳವಣಿಗೆ ಹೊಂದಿರುವುದು 'ಸೋನೊಗ್ರಫಿ' ಪರೀಕ್ಷೆಯಿಂದ ದೃಢಪಟ್ಟಿತ್ತು. ಜನಿಸುವ ಮಗುವು ದೈಹಿಕ ಹಾಗೂ ಮಾನಸಿಕ ನ್ಯೂನತೆಯಿಂದ ಬಳಲಿದೆ ಎಂಬುದು ಖಾತರಿಯಾಗಿದ್ದರಿಂದ ವಿವಾಹಿತ ಮಹಿಳೆಯೊಬ್ಬರು ಗರ್ಭಪಾತ ಮಾಡಿಸಿಕೊಳ್ಳಲು ನಿರ್ಧರಿಸಿದ್ದರು. ಆದರೆ 32 ವಾರಗಳ ಭ್ರೂಣವನ್ನು ತೆಗೆಸುವುದಕ್ಕೆ ವೈದ್ಯಕೀಯ ಮಂಡಳಿ ಅನುಮತಿ ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿ ಮಹಿಳೆ ಹೈಕೋರ್ಟ್ ಮೊರೆ ಹೋಗಿದ್ದರು.

5ನೇ ಪುಟ ನೋಡಿ

ದೈತ್ಯ ಸಂಸ್ಥೆಗಳಿಂದ ಉದ್ಯೋಗಕ್ಕೆ ಕತ್ತರಿ • ನಿರುದ್ಯೋಗಿಗಳಾದ 2 ಲಕ್ಷ ಮಂದಿ

ಸಿಬ್ಬಂದಿ ಕಡಿತ: ಐ.ಟಿ ಕ್ಷೇತ್ರದ ವೃತ್ತಿಪರರು ಅತಂತ್ರ

ವಾಷಿಂಗ್ಟನ್ (ಪಿಟಿಐ): ಸಿಬ್ಬಂದಿ ಸಂಖ್ಯೆ ಕಡಿತಗೊಳಿಸುವ ದೈತ್ಯ ಐ.ಟಿ. ಕಂಪನಿಗಳ ದಿಢೀರ್ ಕ್ರಮದಿಂದಾಗಿ ಅಮೆರಿಕದಲ್ಲಿ ನೆಲೆಯೂರಿರುವ ಭಾರತದ ಸಾವಿರಾರು ಐ.ಟಿ ಉದ್ಯೋಗಿಗಳು ಈಗ ಅತಂತ್ರರಾಗಿದ್ದಾರೆ.

ವಾಷಿಂಗ್ಟನ್ ಪೋಸ್ಟ್ ದೈನಿಕದ ಪ್ರಕಾರ, 2022ರ ನವೆಂಬರ್‌ನಿಂದ ಈವರೆಗೆ ಸುಮಾರು 2 ಲಕ್ಷ ಮಂದಿ ಕೆಲಸ ಕಳೆದುಕೊಂಡಿದ್ದಾರೆ. ಇವರಲ್ಲಿ ಶೇ 30ರಿಂದ 40ರಷ್ಟು ಮಂದಿ ಭಾರತೀಯರು. ಬಹುತೇಕ ಮಂದಿ ಗೂಗಲ್, ಮೈಕ್ರೊಸಾಫ್ಟ್, ಫೇಸ್‌ಬುಕ್ ಮತ್ತು ಅಮೆಜಾನ್ ಸಂಸ್ಥೆಗಳಲ್ಲಿ ಕೆಲಸದಲ್ಲಿ ಇದ್ದರು. ಹೆಚ್ಚಿನವರು ಎಚ್–1ಬಿ ಮತ್ತು ಎಲ್1 ವೀಸಾ ಹೊಂದಿದವರಾಗಿದ್ದಾರೆ.

ಗೂಗಲ್, ಮೈಕ್ರೊಸಾಫ್ಟ್, ಅಮೆಜಾನ್ ಸೇರಿದಂತೆ ಪ್ರಮುಖ ಐ.ಟಿ. ಕಂಪನಿಗಳು ಇತ್ತೀಚಿನ ದಿನಗಳಲ್ಲಿ ಸಿಬ್ಬಂದಿ ಸಂಖ್ಯೆಯನ್ನು ಭಾರಿ ಪ್ರಮಾಣದಲ್ಲಿ ಕಡಿತಗೊಳಿಸಿವೆ. ದೇಶದಲ್ಲಿಯೇ ಉಳಿಯಲು ವೀಸಾ ಊರ್ಜಿತವಿರುವ ಅವಧಿಯೊಳಗೆ ಹೊಸ ಉದ್ಯೋಗ ಹುಡುಕಿಕೊಳ್ಳಲೇಬೇಕಾದ ಹೊಸ ಸವಾಲು ಈಗ ಅವರ ಮುಂದಿದೆ.

ಎಚ್–1ಬಿ ವಲಸಿಗಯೇತರ ವೀಸಾ ಆಗಿದೆ. ಅಮೆರಿಕದ ಕಂಪನಿಗಳು ವಿಶೇಷ ಪರಿಣತಿ ಬಯಸುವ ಹುದ್ದೆಗಳಿಗೆ ತಾಂತ್ರಿಕ ಪರಿಣತಿಯನ್ನು ಆಧರಿಸಿ ವಿದೇಶಿಯರನ್ನು ನೇಮಿಸಿಕೊಳ್ಳಲು ಇದು ಅನುವು ಮಾಡಿಕೊಡಲಿದೆ. ಇಂತಹ ಹುದ್ದೆಗಳಿಗೆ ತಾಂತ್ರಿಕ ಪರಿಣತಿ ಆಧರಿಸಿ ಭಾರತ, ಚೀನಾದ ಸಾವಿರಾರು ಮಂದಿ ನೇಮಕಗೊಳ್ಳುತ್ತಾರೆ.

ವಿಶೇಷ ಜ್ಞಾನ ಅಥವಾ ವ್ಯವಸ್ಥಾಪನಾ ವಿಭಾಗದಲ್ಲಿನ ಹುದ್ದೆಗಳಲ್ಲಿ ಇರುವವರನ್ನು ಕಂಪನಿಗಳು ತಾತ್ಕಾಲಿಕವಾಗಿ ತನ್ನ ವಿವಿಧ ಶಾಖೆಗಳಿಗೆ ವರ್ಗಾವಣೆ ಮಾಡಲು ಪೂರಕವಾಗಿ ಎಲ್–1ಎ ಮತ್ತು ಎಲ್ -1ಬಿ ವೀಸಾ ನೀಡಲಾಗುತ್ತದೆ.

9ನೇ ಪುಟ ನೋಡಿ

ಕೆಲಸ ಹುಡುಕಲು ಸಂಘಟನೆಗಳ ನೆರವು

ಅತಂತ್ರ ಸ್ಥಿತಿಯಲ್ಲಿರುವ ಭಾರತೀಯ ವೃತ್ತಿಪರರಿಗೆ ನೆರವಾಗಲು ವಿವಿಧ ಉದ್ಯಮ ಮತ್ತು ಸಮುದಾಯ ಆಧರಿತ ಸಂಘಟನೆಗಳು ಮುಂದಾಗಿವೆ.

ಉದ್ಯೋಗಾಕಾಂಕ್ಷಿಗಳು ಮತ್ತು ಉದ್ಯೋಗದಾತ ಸಂಸ್ಥೆಗಳ ನಡುವೆ ಸಂಪರ್ಕ ಸೇತುವಾಗಲು ಕ್ರಮವಹಿಸಿವೆ. ಭಾರತೀಯ ಜಾಗತಿಕ ತಾಂತ್ರಿಕ ವೃತ್ತಿಪರರ ಸಂಘಟನೆ (ಜಿಐಟಿಪಿಆರ್‌ಒ), ಭಾರತ ಮತ್ತು ಭಾರತ ಮೂಲದವರ ಅಧ್ಯಯನ ಪ್ರತಿಷ್ಠಾನವು (ಎಫ್‌ಐಐಡಿಎಸ್) ಭಾನುವಾರವಷ್ಟೇ ಇಂಥದೊಂದು ಕಾರ್ಯಕ್ಕೆ ಮುಂದಾಗಿವೆ.

ಅಲ್ಲದೆ, ಪರಿಹಾರ ಮಾರ್ಗೋಪಾಯಗಳನ್ನು ಹುಡುಕಲು ಭಾರತೀಯ ಐ.ಟಿ. ಉದ್ಯೋಗಿಗಳು ವಾಟ್ಸ್‌ಆ್ಯಪ್ ಗುಂಪುಗಳನ್ನು ರಚಿಸಿಕೊಂಡಿದ್ದಾರೆ. ಇಂತದೊಂದು ಗುಂಪಿನಲ್ಲಿ ಕೆಲಸ ಕಳೆದುಕೊಂಡಿರುವ 800 ಮಂದಿ ಇದ್ದಾರೆ. ಉದ್ಯೋಗಾವಕಾಶ ಕುರಿತ ಸಂದೇಶಗಳು ಈ ಗುಂಪಿನಲ್ಲಿ ಹಂಚಿಕೆ ಆಗುತ್ತಿವೆ.



ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು-560064.
ವೆಬ್‌ಸೈಟ್: www.rwf.indianrailways.gov.in

ಇ-ಟೆಂಡರ್ ಸಂಖ್ಯೆ : ಆರ್‌ಡಬ್ಲ್ಯೂಎಫ್/ಪಿಸಿಇಇ/ಇಎಲ್/ಟಿ.ಡಿ/2022-23/04 ದಿನಾಂಕ : 19/01/2023

ಭಾರತದ ರಾಷ್ಟ್ರಪತಿಗಳ ಪರವಾಗಿ ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್ ಈ ಕೆಳಕಂಡ ಕೆಲಸಕ್ಕೆ ಎಲೆಕ್ಟ್ರಾನಿಕ್ ಟೆಂಡರ್‌ನ್ನು ಆನ್‌ಲೈನ್ ವೆಬ್‌ಸೈಟ್ http://www.ireps.gov.in ಮೂಲಕ ಆಹ್ವಾನಿಸಿದ್ದಾರೆ.

ಟೆಂಡರ್‌ನ ಸಂಕ್ಷಿಪ್ತ ವಿವರ	
ಟೆಂಡರ್.ನಂ : ಪಿಸಿಇಇ/ಇಎಲ್/ಟಿ.ಡಿ/2022-23/04 ದಿನಾಂಕ : 19/01/2023, ಬೆಂಗಳೂರಿನ ಯಲಹಂಕದ ರೈಲು ಗಾಲಿ ಕಾರ್ಖಾನೆಯಲ್ಲಿ ಅರ್ಥ್-ಪಿಟ್‌ನ ಮರುಪರಿಶೀಲನೆ, ಬದಲಾಯಿಸುವುದು/ ದುರಸ್ತಿಯಾದ ಪಿಟ್‌ಗಳನ್ನು ಸರಿಪಡಿಸುವುದು & WSP, AXP & DG ಪ್ರದೇಶಗಳಲ್ಲಿ ಹೊಸ ಪಿಟ್‌ಗಳನ್ನು ಒದಗಿಸುವುದು.	
ಅಂದಾಜು ವೆಚ್ಚ ರೂ.ಗಳಲ್ಲಿ : 21,77,100/-	ಇ.ಎಂ.ಡಿ ರೂ ಗಳಲ್ಲಿ : 43,600/-
ಟೆಂಡರ್ ಕೊನೆಗೊಳ್ಳುವ ದಿನಾಂಕ & ಸಮಯ : 10/02/2023ರ 3.30 ಗಂಟೆಯವರೆಗೆ	

ಟೆಂಡರ್ ಸೂಚನೆಗಳನ್ನು ನಮ್ಮ ವೆಬ್‌ಸೈಟ್ www.rwf.indianrailways.gov.in ನಲ್ಲಿ ನೋಡಬಹುದು.
ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, (ವಿದ್ಯುತ್), ದಕ್ಷಿಣ ವಲಯ, ಜಯನಗರ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು.
ಸಂಖ್ಯೆ: ಬೃ.ಬೆಂ.ಮ.ಪಾ/ಕಾಪಾಅ/ವಿ/ದ/ಟೆಂಡರ್/16/2022-23 ದಿನಾಂಕ:21.01.2023

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಐಟಿಟಿ ಕೆಡಬ್ಲ್ಯೂ-1/2)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ವಿದ್ಯುತ್) ದಕ್ಷಿಣ ವಲಯ, ಇವರು ಕೆಟಿಪಿಪಿ ಕಾಯಿದೆ 2000ರನ್ವಯ, ಬೃ.ಬೆಂ.ಮ.ಪಾಲಿಕೆ ಇವರ ಪರವಾಗಿ, ಬೃ.ಬೆಂ.ಮ.ಪಾಲಿಕೆ/ಕೆ.ಪಿ.ಡಬ್ಲ್ಯೂ.ಡಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು/ವರ್ಗೀಕರಣ	ಕಾಮಗಾರಿಯ ಅಂದಾಜು ಮೊತ್ತ (₹ ಲಕ್ಷಗಳಲ್ಲಿ)	ಇಎಂಡಿ (₹ ಗಳಲ್ಲಿ)
ದಕ್ಷಿಣ ವಲಯದಡಿಯಲ್ಲಿ ಸಂಚಾರ ಪೊಲೀಸರ ಕೋರಿಕೆಯಂತೆ ಪ್ರಮುಖ ಜಂಕ್ಷನ್‌ಗಳಲ್ಲಿ ಹೈ ಇಂಟೆನ್ಸಿಟಿ ಇಲ್ಯೂಮಿನೇಷನ್ ಒದಗಿಸುವುದು (ಸಾಮಾನ್ಯರಿಗೆ)	50.00	100000/-

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ **24.01.2023**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಆನ್‌ಲೈನ್ ಮೂಲಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ **04.02.2023**ರ ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ ಆರ್ಥಿಕ ಬಿಡ್ಡನ್ನು ದಿನಾಂಕ **06.02.2023**ರ ಸಂಜೆ **5:30** ಗಂಟೆಗೆ ತೆರೆಯಲಾಗುವುದು. (3) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ **www.bbmp.gov.in**. ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, (ವಿದ್ಯುತ್) ದಕ್ಷಿಣ ವಲಯ

ಆರ್‌ಪಿಐ(ಬಿ) ಪಕ್ಷದ ಚಿಹ್ನೆ ಬಿಡುಗಡೆ ಜನವರಿ 26ಕ್ಕೆ

ಬೆಂಗಳೂರು: 'ಗಣರಾಜ್ಯೋತ್ಸವದ ಅಂಗವಾಗಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಬಿ) ಪಕ್ಷದ ಚಿಹ್ನೆಯ ಉದ್ಘಾಟನೆ ಮತ್ತು ಕೆಲವು ಕ್ಷೇತ್ರಗಳಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಲಾಗುವುದು' ಎಂದು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎನ್. ಮೂರ್ತಿ ತಿಳಿಸಿದರು.

ಜ. 26ರಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸಹಯೋಗದಲ್ಲಿ ವಸಂತನಗರದ ಲಿಡ್ಕರ್ ಭವನದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಆರೋಗ್ಯಾಧಿಕಾರಿ (ಪಶ್ಚಿಮ)ರವರ ಕಛೇರಿ, ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು
ನಂ.: ಆ.ಅ(ಪ)/ಪಿಆರ್/2369/2022-23 ದಿನಾಂಕ: 23.01.2023

ಪ್ರಕಟಣೆ

ಪಶ್ಚಿಮ ವಲಯದ ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಹೊಸದಾಗಿ ಪ್ರಾರಂಭವಾಗುವ ಸುಬ್ರಹ್ಮಣ್ಯನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜನೌಷಧಿ ಮಳಿಗೆಯನ್ನು ಪ್ರಾರಂಭಿಸುವ ಬಗ್ಗೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಲ್ಲೇಶ್ವಂ ವಿಧಾನಸಭಾ ಕ್ಷೇತ್ರದ ಸುಬ್ರಹ್ಮಣ್ಯನಗರ, ವಾರ್ಡ್ ಸಂಖ್ಯೆ 62 (ಹಳೆಯ ವಾರ್ಡ್ 66), ಗರಡಿಮನೆ ಹತ್ತಿರ, 8ನೇ ಅಡ್ಡರಸ್ತೆ, ಬಿ ಬ್ಲಾಕ್, ಸುಬ್ರಹ್ಮಣ್ಯನಗರ, ಬೆಂಗಳೂರು-560021. ಇಲ್ಲಿ ಸಾಮಾನ್ಯ ಬಡ ಜನರಿಗೆ ಉತ್ತಮ ಗುಣಮಟ್ಟದ ಜೆನರಿಕ್ ಔಷಧಿಗಳನ್ನು ಕಡಿಮೆ ಕೈಗೆಟಕುವ ದರದಲ್ಲಿ ಕೇಂದ್ರ ಸರ್ಕಾರದ ಜನೌಷಧಿ ಕಾರ್ಯಕ್ರಮದಡಿ ಜನೌಷಧಿ ಮಳಿಗೆಗಳ ಮೂಲಕ ಸಾರ್ವಜನಿಕರಿಗೆ ತಲುಪಿಸುವ ಉದ್ದೇಶದಿಂದ, ಜನೌಷಧಿ ಕಾರ್ಯಕ್ರಮದಡಿ ಜನೌಷಧಿ ಮಳಿಗೆಗಳನ್ನು ಪ್ರಾರಂಭಿಸಲು ಅರ್ಹ ಸರ್ಕಾರೇತರ ಸಂಸ್ಥೆಗಳು, ದತ್ತಿ ಸಂಸ್ಥೆಗಳು, ನಿರುದ್ಯೋಗಿ ಯುವಕರು, ಹಾಗೂ ಪದವಿ ಫಾರ್ಮಸಿಸ್ಟ್‌ರವರು ಈ ಕೆಳಕಂಡ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಈ ಮೂಲಕ ಪ್ರಕಟಣೆ ನೀಡಲಾಗಿದೆ.

ದಾಖಲಾತಿಗಳು:

1. ಸರ್ಕಾರೇತರ ಸಂಸ್ಥೆಗಳು, ದತ್ತಿ ಸಂಸ್ಥೆಗಳು:
- ಎ. ಸದರಿ ಸಂಸ್ಥೆಯ ನೋಂದಣಿ ಪತ್ರ ಮತ್ತು ಸದರಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರ.
- ಬಿ. ಫಾರ್ಮಸಿಸ್ಟ್‌ಗಳ ಫಾರ್ಮಸಿ ಪತ್ರ.
- ಸಿ. ಆಧಾರ್ ಮತ್ತು ಪ್ಯಾನ್ ಕಾರ್ಡ್.
- ಡಿ. ಅರ್ಜಿ ಸಲ್ಲಿಸುತ್ತಿರುವ ಜನೌಷಧಿ ಕೇಂದ್ರದ ವಿಳಾಸ.

2. ಪದವಿ ಫಾರ್ಮಸಿಸ್ಟ್‌ರವರು ಮತ್ತು ನಿರುದ್ಯೋಗಿ ಯುವಕರು:
- ಎ. ಫಾರ್ಮಸಿಸ್ಟ್‌ಗಳ ಫಾರ್ಮಸಿ ಪತ್ರ.
- ಬಿ. ಆಧಾರ್ ಮತ್ತು ಪ್ಯಾನ್ ಕಾರ್ಡ್.
- ಸಿ. ಅರ್ಜಿ ಸಲ್ಲಿಸುತ್ತಿರುವ ಜನೌಷಧಿ ಕೇಂದ್ರದ ವಿಳಾಸ.

ಅರ್ಜಿ ಸಲ್ಲಿಸುವ ಸ್ಥಳ: ಆರೋಗ್ಯಾಧಿಕಾರಿ (ಪಶ್ಚಿಮ)ರವರ ಕಛೇರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು-560020

ಅರ್ಜಿ ಸಲ್ಲಿಸಲು ನಿಗದಿಪಡಿಸುವ ದಿನಾಂಕ ಮತ್ತು ಸಮಯ: ದಿನಾಂಕ: **24.01.2023**, ಸಮಯ ಬೆಳಗ್ಗೆ **10:30** ರಿಂದ ಸಂಜೆ **5:00** ಗಂಟೆವರೆಗೆ.

ಸಹಿ/- ಆರೋಗ್ಯಾಧಿಕಾರಿ (ಪಶ್ಚಿಮ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬಮೂಲ್ ಸಂಧಾನ ಯಶಸ್ವಿ: ಹಾಲು ವಾಹನ ಮಾಲೀಕರ ಮುಷ್ಕರ ಅಂತ್ಯ

ಪ್ರಜಾವಾಣಿ ವಾರ್ತೆ

ಬಮೂಲ್ ಆಡಳಿತ ಮಂಡಳಿ ಕಚೇರಿ ಎದುರು ನಿಂತಿರುವ ಹಾಲಿನ ವಾಹನಗಳು

ಬೆಂಗಳೂರು: ಬೆಂಗಳೂರು ಹಾಲು ಒಕ್ಕೂಟದ (ಬಮೂಲ್) ಹಾಲು ಸರಬರಾಜು ಮಾಡುವ ವಾಹನಗಳ ಮಾಲೀಕರು ಆರಂಭಿಸಿದ್ದ ಮುಷ್ಕರವನ್ನು ಸೋಮವಾರ ಕೈಬಿಟ್ಟಿದ್ದಾರೆ.

ಬಮೂಲ್ ಆಡಳಿತ ಮಂಡಳಿ ನಡೆಸಿದ ಸಂಧಾನ ಸಭೆ ಯಶಸ್ವಿಯಾಗಿದ್ದು, ಮಂಗಳವಾರದಿಂದ ಹಾಲಿನ ವಾಹನಗಳು ಎಂದಿನಂತೆ ಕಾರ್ಯ ನಿರ್ವಹಿಸಲಿವೆ.

ನಂದಿನಿ ಹಾಲಿನ ಪ್ಯಾಕೇಟ್‌ಗಳನ್ನು ಸಾಗಿಸುವ 300ಕ್ಕೂ ಹೆಚ್ಚು ವಾಹನಗಳನ್ನು ಬಮೂಲ್ ಬಾಡಿಗೆಗೆ ಪಡೆದಿದ್ದು, ಕೆಲ ವಾಹನಗಳಿಗೆ ಟ್ರಿಪ್ ಲೆಕ್ಕದಲ್ಲಿ, ಮತ್ತೆ ಕೆಲವು ವಾಹನಗಳಿಗೆ ಕಿಲೋ ಮೀಟರ್ ಲೆಕ್ಕದಲ್ಲಿ ದರ ನಿಗದಿ ಮಾಡಿದೆ. ಹೊಸ ಟೆಂಡರ್‌ನಲ್ಲಿ 15 ವರ್ಷಕ್ಕೂ ಹಳೆಯ ವಾಹನಗಳಿಗೆ ಅವಕಾಶ ನೀಡುವುದಿಲ್ಲ ಎಂಬ ಷರತ್ತು ವಿಧಿಸಿತ್ತು. ಇದಕ್ಕೆ ಮಾಲೀಕರ ವಿರೋಧ ವ್ಯಕ್ತವಾಗಿತ್ತು. ಅಲ್ಲದೇ ವಾಹನ ಮಾಲೀಕರು ಮತ್ತು ಚಾಲಕರೊಂದಿಗೆ ಬಮೂಲ್ ಅಧಿಕಾರಿಗಳು ಸೌಜನ್ಯದಿಂದ ವರ್ತಿಸದೆ ದರ್ಪ ತೋರಿಸುತ್ತಿದ್ದಾರೆ ಎಂದು ಅವರು ಆರೋಪಿಸಿದ್ದರು.

ಬಮೂಲ್ ಅಧ್ಯಕ್ಷ ನರಸಿಂಹಮೂರ್ತಿ ಅವರ ನೇತೃತ್ವದಲ್ಲಿ ಸೋಮವಾರ ಬಮೂಲ್ ಆಡಳಿತ ಮಂಡಳಿ ಮತ್ತು ವಾಹನ ಮಾಲೀಕರ ಪ್ರತಿನಿಧಿಗಳು ಸಭೆ ನಡೆಯಿತು. 'ವಾಹನ ಮಾಲೀಕರ ಮನವೊಲಿಸಲಾಗಿದ್ದು, ಮಂಗಳವಾರದಿಂದ ಎಲ್ಲಾ ವಾಹನಗಳು ರಸ್ತೆಗೆ ಇಳಿಯಲಿವೆ' ಎಂದು ನರಸಿಂಹಮೂರ್ತಿ ತಿಳಿಸಿದರು.

'ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವ ತನಕ ಬಾಡಿಗೆ ಮೊತ್ತ ಕೊಂಚ ಹೆಚ್ಚಿಸುವ ಬೇಡಿಕೆಗೆ ಆಡಳಿತ ಮಂಡಳಿ ಒಪ್ಪಿಗೆ ಸೂಚಿಸಿತು. 15 ವರ್ಷ ಮೀರದ ವಾಹನಗಳನ್ನೇ ಒದಗಿಸಲು ನಾವು ಒಪ್ಪಿದ್ದೇವೆ. ಅಧಿಕಾರಿಗಳು ದರ್ಪದಿಂದ ವರ್ತಿಸದಂತೆ ನೋಡಿಕೊಳ್ಳುವುದಾಗಿ ಮಂಡಳಿ ಭರವಸೆ ನೀಡಿದೆ. ಆದ್ದರಿಂದ ಮುಷ್ಕರ ಕೈಬಿಡಲಾಗಿದೆ' ಎಂದು ವಾಹನ ಮಾಲೀಕರ ಸಂಘದ ಗೋವಿಂದಪ್ಪ ಹೇಳಿದರು.

26ರಂದು ಮೆಟ್ರೊ ಪ್ರಯಾಣಕ್ಕೆ ಪೇಪರ್ ಟಿಕೆಟ್

ಬೆಂಗಳೂರು: ಗಣರಾಜ್ಯೋತ್ಸವದ ಅಂಗವಾಗಿ ಲಾಲ್‌ಬಾಗ್‌ನಲ್ಲಿ ನಡೆಯಲಿರುವ ಫಲಪುಷ್ಪ ಪ್ರದರ್ಶನಕ್ಕೆ ಬರುವ ಪ್ರಯಾಣಿಕರ ಅನುಕೂಲಕ್ಕಾಗಿ ಜ.26ರಂದು ಪೇಪರ್ ಟಿಕೆಟ್ ವಿತರಿಸಲು ಬೆಂಗಳೂರು ಮೆಟ್ರೊ ರೈಲು ನಿಗಮ(ಬಿಎಂಆರ್‌ಸಿಎಲ್) ನಿರ್ಧರಿಸಿದೆ.

ಅಂದು ಬೆಳಿಗ್ಗೆ 10 ಗಂಟೆಯಿಂದ ರಾತ್ರಿ 8 ಗಂಟೆ ತನಕ ಲಾಲ್‌ಬಾಗ್ ಮೆಟ್ರೊ ನಿಲ್ದಾಣದಿಂದ ಯಾವುದೇ ನಿಲ್ದಾಣಕ್ಕೆ ಪ್ರಯಾಣಿಸಲು ₹30 ದರ ನಿಗದಿಪಡಿಸಲಾಗಿದೆ. ಈ ಪೇಪರ್ ಟಿಕೆಟ್ ಒಂದು ದಿನದ ಪ್ರಯಾಣಕ್ಕೆ ಮಾತ್ರ ಸೀಮಿತವಾಗಿದ್ದು, ಅದೇ ದಿನ ಬೆಳಿಗ್ಗೆ 8ರಿಂದ ಸಂಜೆ 6 ಗಂಟೆ ತನಕ ಎಲ್ಲಾ ಮೆಟ್ರೊ ನಿಲ್ದಾಣಗಳಲ್ಲಿ ಖರೀದಿಸಬಹುದಾಗಿದೆ.

ಲಾಲ್‌ಬಾಗ್ ಮೆಟ್ರೊ ನಿಲ್ದಾಣದ ಸ್ವಯಂ ಚಾಲಿತ ಶುಲ್ಕ ಸಂಗ್ರಹಣೆ(ಎಎಫ್‌ಸಿ) ಗೇಟ್‌ನಲ್ಲಿ ಸ್ಕ್ಯಾನ್ ಮಾಡಿ ಪ್ರವೇಶಿಸಬೇಕು. ಪ್ರಯಾಣ ಅಂತ್ಯಗೊಳಿಸುವ ನಿಲ್ದಾಣದಲ್ಲಿನ ಗೇಟ್‌ನಲ್ಲೂ ಸ್ಕ್ಯಾನ್ ಮಾಡಿ ನಿರ್ಗಮಿಸಬಹುದು ಎಂದು ಬಿಎಂಆರ್‌ಸಿಎಲ್ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

'ಸುಭಾಷ್ ಚಂದ್ರ ಬೋಸ್ ಪ್ರತಿಮೆ ಮರುಸ್ಥಾಪನೆ'

ಬೆಂಗಳೂರು: 'ಮೆಟ್ರೊ ಕಾಮಗಾರಿ ಕಾರಣಕ್ಕೆ ಸ್ಥಳಾಂತರಿಸಿದ್ದ ಸುಭಾಷ್ ಚಂದ್ರ ಬೋಸ್ ಪ್ರತಿಮೆಯನ್ನು ವಿಧಾನಸೌಧದ ಮುಂಭಾಗದಲ್ಲಿ ಮರುಸ್ಥಾಪಿಸಲು ತಕ್ಷಣ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುಭಾಷ್ ಚಂದ್ರ ಬೋಸ್ ಅವರ ಜನ್ಮದಿನಾಚರಣೆ ಅಂಗವಾಗಿ ಬೋಸ್ ಪ್ರತಿಮೆಗೆ ಸೋಮವಾರ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, 'ಸುಭಾಷ್ ಚಂದ್ರ ಬೋಸ್ ಅವರ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ರಾಜ್ಯದಲ್ಲಿ ಆಗುತ್ತಿದೆ. ಕಳೆದ ಬಾರಿ 75 ಎನ್‌ಸಿಸಿ ಪಡೆಗಳನ್ನು ಅವರ ಹೆಸರಿನಲ್ಲಿ ಹೆಚ್ಚು ಮಾಡಲಾಗಿದೆ' ಎಂದು ಅವರು ಹೇಳಿದರು.

'ಅನುಕಂಪದ ಆಧಾರದಡಿ ಉದ್ಯೋಗ ಹಕ್ಕಲ್ಲ'

ಬೆಂಗಳೂರು: 'ಕುಟುಂಬವೊಂದರ ಸದಸ್ಯರು ಈಗಾಗಲೇ ಸರ್ಕಾರದ ಅಧೀನದಲ್ಲಿರುವ ಯಾವುದಾದರೂ ಒಂದು ಸಂಸ್ಥೆಯಲ್ಲಿ ನೌಕರನಾಗಿ ಕಾರ್ಯ ನಿರ್ವಹಿಸುತ್ತಿದ್ದರೆ ಆ ಕುಟುಂಬದ ಮತ್ತೊಬ್ಬ ಸದಸ್ಯನಿಗೆ ಅದೇ ಸಂಸ್ಥೆಯಲ್ಲಿ ಅನುಕಂಪದ ಆಧಾರದಲ್ಲಿ ಉದ್ಯೋಗ ಕಲ್ಪಿಸಲಾಗದು' ಎಂದು ಹೈಕೋರ್ಟ್ ಆದೇಶಿಸಿದೆ.

ಅನುಕಂಪದ ಆಧಾರದಲ್ಲಿ ಉದ್ಯೋಗ ಕಲ್ಪಿಸಲು ನಿರಾಕರಿಸಿದ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ (ಕೆಪಿಟಿಸಿಎಲ್) ಕ್ರಮವನ್ನು ಪ್ರಶ್ನಿಸಿ ಬೆಂಗಳೂರಿನ ಉಲ್ಲಾಳ ಮುಖ್ಯ ರಸ್ತೆಯ ನಿವಾಸಿ ರಂಗನಾಥ್ ಎಂಬುವರು ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಅಲೋಕ್ ಅರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

'ಅನುಕಂಪದ ಆಧಾರದಡಿ ಉದ್ಯೋಗ ಪಡೆಯುವುದು ಹಕ್ಕು ಅಲ್ಲ. ಮೇಲ್ಮನವಿದಾರರ ಸಹೋದರ ಈಗಾಗಲೇ ಕೆಪಿಟಿಸಿಎಲ್‌ನಲ್ಲಿ ಉದ್ಯೋಗಿಯಾಗಿದ್ದಾರೆ. ರಂಗನಾಥ್ ಅವರಿಗೂ ಅದೇ ಸಂಸ್ಥೆಯಲ್ಲಿ ಅನುಕಂಪದ ಆಧಾರದಲ್ಲಿ ಮತ್ತೊಂದು ಉದ್ಯೋಗ ನೀಡಲಾಗದು' ಎಂದು ನ್ಯಾಯಪೀಠ ಹೇಳಿದೆ.

ಪ್ರಭಾ ಮೂರ್ತಿ ಆಯ್ಕೆ

ಬೆಂಗಳೂರು: 'ಭಾರತೀಯ ಮಹಿಳಾ ವಕೀಲರ ಒಕ್ಕೂಟ'ದ ಕರ್ನಾಟಕ ಘಟಕದ ಅಧ್ಯಕ್ಷೆಯಾಗಿ ಪ್ರಭಾ ಮೂರ್ತಿ, ಉಪಾಧ್ಯಕ್ಷೆಯಾಗಿ ಕವಿತಾ ಮಹೇಶ್ ಮತ್ತು ಖಜಾಂಚಿಯಾಗಿ ಉಷಾ ಸುನಿಲ್ ದೇವರು ಅವರು ಆಯ್ಕೆ ಆಗಿದ್ದಾರೆ.

'ಜೆ.ಹಂಸ ಅವರು ಕಾರ್ಯದರ್ಶಿಯಾಗಿ ಮತ್ತು ಡಿ.ಎನ್. ಮಮತಾ ಜಂಟಿ ಕಾರ್ಯದರ್ಶಿಯಾಗಿ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಡಿ.ಸುಧಾ, ಬಿ.ಪಿ.ರೂಪಾ, ಸಂಧ್ಯಾ ಯು ಪ್ರಭು, ಇ.ಸುಧಾ, ಫಿಲೊಮಿನಾ ರೋಸ್, ಕೆ.ಪ್ರಫುಲ್ಲಾ ಹಾಗೂ ನಿರ್ಮಲಾ ಪ್ರಶಾಂತ್ ಅವಿರೋಧ ಆಯ್ಕೆಯಾಗಿದ್ದಾರೆ' ಎಂದು ಚುನಾವಣಾಧಿಕಾರಿಯೂ ಆದ ಹಿರಿಯ ವಕೀಲ ಎ.ಜಿ.ಶಿವಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. 2023-24, 2024-25 ಹಾಗೂ 2025-26ನೇ ಸಾಲಿನ ಪದಾಧಿಕಾರಿಗಳ ಆಯ್ಕೆಗೆ ಇದೇ 21ರಂದು ಚುನಾವಣೆ ನಡೆಯಿತು. ಸಹಾಯಕ ಚುನಾವಣಾಧಿಕಾರಿಯಾಗಿ ಜಿ.ಎಂ. ಸುಮಿತ್ರಾ ಕಾರ್ಯ ನಿರ್ವಹಿಸಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020.
ಸಂ: ಬೆಂಅಪ್ರಾ/ನಯೋಸ/ಸಿಎಲ್‌ಯು-212/2828/2022-23 ದಿ: 23.01.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ.ನಂ	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ-2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಬಾಲ್ ರಾಜ್ ಗೌಡ.ಎಸ್	ಬೆಂಗಳೂರು ದಕ್ಷಿಣ	ತಾವರೆ ಕೆರೆ	ಚಿಕ್ಕಲ್ಲೂರು	11	3-00	ವ್ಯವಸಾಯ ವಲಯ	ವಸತಿ
	ಒಟ್ಟು					03-00		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ, ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ, ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಹಾಗೂ ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತ, ಪ್ರಶ್ನಿತ ಜಮೀನುಗಳನ್ನು **'ವ್ಯವಸಾಯ ವಲಯ'** ದಿಂದ **'ವಸತಿ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/382/2022-23 ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಆನೇಕಲ್ ಯೋಜನಾ ಪ್ರಾಧಿಕಾರ
"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯ ರಸ್ತೆ, ಬೆಂಗಳೂರು-560 099.
ಫೋನ್: 080-27835122, ಫ್ಯಾಕ್ಸ್: 080-27836569, www.anekal.tpa.gov.in, www.e-vinyasa.kar.nic.in
ಸಂ:ಆಯೋಪ್ರ/ಸಾ.ಪ್ರ/ನೋ.ಹಿ/01/2022-23 ದಿನಾಂಕ: 23.01.2023

ಸಾರ್ವಜನಿಕ ಪ್ರಕಟಣೆ

ವಿಷಯ: 2005ನೇ ಸಾಲಿನಿಂದ 2015ನೇ ಸಾಲಿನವರೆಗಿನ ಅವಧಿಯಲ್ಲಿ ಅನುಮೋದನೆಗೊಂಡಿರುವ ವಿನ್ಯಾಸಗಳಲ್ಲಿನ ನಿವೇಶನಗಳನ್ನು ಬಿಡುಗಡೆ ಪಡೆಯುವ ಬಗ್ಗೆ.

ಈ ಮೂಲಕ ವಿನ್ಯಾಸ ಅಭಿವೃದ್ಧಿದಾರರು/ಭೂ ಮಾಲೀಕರ ಗಮನಕ್ಕೆ ತರುವುದೇನೆಂದರೆ; ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರಡಿಯಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 112 ಬೆಂರೂಪ್ರಾ 2005 ದಿನಾಂಕ:26.05.2005, ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 599 ಮೈಅಪ್ರಾ 2012 ದಿನಾಂಕ:03.12.2012 ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 08 ಟಿಟಿಪಿ 2013 ದಿನಾಂಕ:24.05.2014ರನ್ವಯ, ಅನುಮೋದನೆಯಾಗಿರುವ ವಸತಿ ವಿನ್ಯಾಸಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿ, ಉಳಿಕೆ ನಿವೇಶನಗಳನ್ನು ಬಿಡುಗಡೆ ಪಡೆಯಬೇಕಾಗಿರುತ್ತದೆ.

ಮೇಲ್ಕಂಡ ಸರ್ಕಾರದ ಸುತ್ತೋಲೆಗಳನ್ವಯ, ಕೆಲವು ವಿನ್ಯಾಸ ಅಭಿವೃದ್ಧಿದಾರರು/ಭೂ ಮಾಲೀಕರು ಮೊದಲನೇ ಹಂತದ ಶೇ.60/ಶೇ.40ರಷ್ಟು ಹಾಗೂ ಎರಡನೇ ಹಂತದ ಶೇ.30ರಷ್ಟು ನಿವೇಶನಗಳನ್ನು ಬಿಡುಗಡೆ ಪಡೆದಿದ್ದು, ಉಳಿಕೆ(ಎರಡನೇ/ಅಂತಿಮ ಹಂತದ ಶೇ.40 / ಶೇ.30ರಷ್ಟು) ನಿವೇಶನಗಳನ್ನು ಬಿಡುಗಡೆ ಪಡೆದಿರುವುದಿಲ್ಲ.

ಕಾರಣ ವಿನ್ಯಾಸ ಅಭಿವೃದ್ಧಿದಾರರು/ಭೂ ಮಾಲೀಕರು ವಿನ್ಯಾಸದಲ್ಲಿನ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿ, ಸಕ್ಷಮ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಈ ಪ್ರಾಧಿಕಾರಕ್ಕೆ ಮನವಿ ಸಲ್ಲಿಸತಕ್ಕದ್ದು. ಸದರಿ ವಿನ್ಯಾಸಗಳಲ್ಲಿನ ನಿವೇಶನಗಳ ಬಿಡುಗಡೆಗೂ ಮುನ್ನ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 60 ಮೈಅಪ್ರಾ 2018 ದಿನಾಂಕ:22.11.2018ರನ್ವಯ, ಬಿಡುಗಡೆ ಪಡೆಯದ ನಿವೇಶನಗಳನ್ನು ಮಾರ್ಗಸೂಚಿ ಬೆಲೆಯ ಮೇಲೆ ಪ್ರತಿ ವರ್ಷಕ್ಕೆ ಶೇ.3ರಷ್ಟು ಮೊತ್ತವನ್ನು ದಂಡ ವಿಧಿಸಿ, ಮಾನ್ಯ ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಇವರ ಅನುಮೋದನೆ ಪಡೆದು, ಬಿಡುಗಡೆಗೆ ಕ್ರಮ ವಹಿಸಲಾಗುವುದು.

ಮೇಲ್ಕಂಡ ಸರ್ಕಾರದ ಅಧಿಸೂಚನೆಯನ್ವಯ, ಅನುಮೋದಿತ ವಸತಿ ವಿನ್ಯಾಸಗಳಲ್ಲಿ ಅಂತಿಮ ಹಂತದ ನಿವೇಶನಗಳನ್ನು ಬಿಡುಗಡೆ ಪಡೆಯದೇ ಇರುವ ವಿನ್ಯಾಸ ಅಭಿವೃದ್ಧಿದಾರರು/ಭೂ ಮಾಲೀಕರಿಗೆ ಪ್ರಾಧಿಕಾರದಿಂದ ನೋಟೀಸ್ ನೀಡಲಾಗಿದ್ದು, ಈ ಪೈಕಿ ಈ ಕೆಳಗಿನ ಅಭಿವೃದ್ಧಿದಾರರು ವಿಳಾಸದಲ್ಲಿ ಲಭ್ಯವಿಲ್ಲವೆಂದು ನೋಟೀಸ್‌ಗಳು ಪ್ರಾಧಿಕಾರಕ್ಕೆ ಹಿಂದಿರುಗಿ ಬಂದಿರುತ್ತದೆ.

ಈ ಕೆಳಕಂಡ ವಸತಿ ವಿನ್ಯಾಸಗಳ ವಿನ್ಯಾಸ ಅಭಿವೃದ್ಧಿದಾರರು/ಭೂ ಮಾಲೀಕರಿಗೆ ಪ್ರಕಟಣೆ ಮೂಲಕ ಈ ಕೆಳಗಿನ ಅಂಶಗಳನ್ನು ಗಮನಕ್ಕೆ ತರಲಾಗುತ್ತಿದೆ.

ಕ್ರ. ಸಂ	ವಿನ್ಯಾಸ ಅಭಿವೃದ್ಧಿಕಾರರ / ಮಾಲೀಕರ ಹೆಸರು / ವಿಳಾಸ	ವಿನ್ಯಾಸ ಪ್ರದೇಶದ ಸ್ಥಳ ವಿವರ (ತಾಲ್ಲೂಕು, ಹೋಬಳಿ, ಗ್ರಾಮ ಸ.ನಂ)	ವಿನ್ಯಾಸ ಪ್ರದೇಶದ ವಿಸ್ತೀರ್ಣ (ಎ/ಗುಂ)	ಕಡತದ ಸಂಖ್ಯೆ ಮತ್ತು ಅನುಮೋದನಾ ದಿನಾಂಕ	ಮೊದಲನೇ ಹಂತದ ಶೇ. 60/40ರಷ್ಟು ಬಿಡುಗಡೆಯಾದ ನಿವೇಶನಗಳ ವಿವರ
1	ಶ್ರೀ ರವೀಂದ್ರನಾಥ್ ಬಿನ್ ನಾರಾಯಣ ರಾವ್, ಶ್ರೀಮತಿ. ಸುಧಾ, ಟಿ.ನಾಗರಾಜ, ಹಾಗೂ ಗಿರಿಜಾ ನಾಗರಾಜ್, ನಂ.28/18, 7ನೇ ಬ್ಲಾಕ್, ಜಯನಗರ, ಬೆಂಗಳೂರು-04.	ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ವಡೇರ ಮಂಚನಹಳ್ಳಿ ಗ್ರಾಮದ ಸ.ನಂ.17/2, 17/3, 17/4, 17/5, 47/3	6-25	ಬಿಎಂಆರ್‌ಡಿಎ/ ಎಲ್‌ಎಓ/189/1997-98 ದಿ:01.04.2006	60%(59) ದಿ:01.04.2006
2	ಶ್ರೀ ಕೆ.ವೇಣುಗೋಪಾಲ ಸ್ವಾಮಿ, ಶ್ರೀ ಎಂ.ಜಯ ರಾಮ್, ಶ್ರೀ ಸಿ.ಮೋಹನ್ ಮತ್ತು ಇತರರು, ನಂ.112/143, 7ನೇ ಮುಖ್ಯರಸ್ತೆ, 26ನೇ ಅಡ್ಡರಸ್ತೆ, 4ನೇ ಬ್ಲಾಕ್, ಜಯನಗರ, ಬೆಂಗಳೂರು-560 011.	ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹರಪನಹಳ್ಳಿ ಗ್ರಾಮದ ಸ.ನಂ.21(ಪೈಕಿ), 141, 142, 143	8-24	ಬಿಎಂಆರ್‌ಡಿಎ/ಎಲ್‌ಎಓ/168/1997-98 ದಿ:31.07.1998	60%(93) ದಿ:23.08.2005
3	ಶ್ರೀ ಎನ್.ಹೆಚ್.ಭಾಸ್ಕರರೆಡ್ಡಿ, ಸಿ-17, ಕುದುರೆಮುಖ ಕಾಲೋನಿ, ಸರ್ಜಾಪುರ ರಸ್ತೆ, 2ನೇ ಅಡ್ಡರಸ್ತೆ, ಕೋರಮಂಗಲ, ಬೆಂಗಳೂರು.	ಆನೇಕಲ್ ತಾಲ್ಲೂಕು, ಕಸಬಾ ಹೋಬಳೀ, ಸೊಪ್ಪಹಳ್ಳಿ ಗ್ರಾಮದ ಸ.ನಂ.74, 68, 88,	6-04	ಬಿಎಂಆರ್‌ಡಿಎ/ಎಲ್‌ಎಓ/38/2003-04 ದಿ:14.07.2004	60%(49) ದಿ:13.07.2005
4	ಶ್ರೀ ವಿ.ಗುರುಸ್ವಾಮಿ ಪಾಂಡ್ಯನ್, ಬಿನ್ ಕೆ.ಪಿ. ಅರುಣಾಚಲಂ, ನಂ.1059, 22ನೇ ಮೈನ್, ಹೆಚ್.ಎಸ್.ಆರ್. ಲೇಔಟ್, ಬೆಂಗಳೂರು-34	ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಕಿತ್ತಿಗಾನಹಳ್ಳಿ ಗ್ರಾಮದ ಸ.ನಂ.110/1	2-01	ಬಿಎಂಆರ್‌ಡಿಎ/ಎಲ್‌ಎಓ/42/2003-04 ದಿ:18.03.2004	60%(22) ದಿ:29.06.2005
5	ಶ್ರೀ ಕೆ.ಆರೀಫ್ ಉದ್ದೀನ್, ನಂ.796, 7ನೇ ಸೆಕ್ಟರ್, 8-5ನೇ ಮುಖ್ಯರಸ್ತೆ, 23ನೇ ಅಡ್ಡರಸ್ತೆ, ಹೆಚ್.ಎಸ್.ಆರ್. ಲೇಔಟ್, ಬೆಂಗಳೂರು	ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಯಡವನಹಳ್ಳಿ ಗ್ರಾಮದ ಸ.ನಂ.37/1, 36/1	5-33	ಬಿಎಂಆರ್‌ಡಿಎ/ಎಲ್‌ಎಓ/36/2004-05 ದಿ:26.11.2005	60%(54) ದಿ:28.11.2006
6	ಶ್ರೀ ಎಸ್.ಜಗದೀಶ್ವರ ರೆಡ್ಡಿ, ನಂ.100, 5ನೇ ಬ್ಲಾಕ್, ಕೋರಮಂಗಲ, ಬೆಂಗಳೂರು - 560 085.	ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಮರಸೂರು ಗ್ರಾಮದ ಸ.ನಂ.7/2ಬಿ, 31	1-13	ಬಿಎಂಆರ್‌ಡಿಎ/ಎಲ್‌ಎಓ/90/2004-05 ದಿ:20.05.2005	60%(8) ದಿ:01.07.2005
7	ಶ್ರೀ ಕೆ.ಎಂ.ವೆಂಕಟಸ್ವಾಮಿ ರೆಡ್ಡಿ, ಕೂಡ್ಲು ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು.	ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಆವಡದೇನಹಳ್ಳಿ ಗ್ರಾಮದ ಸ.ನಂ.88, 89, 90/2	3-11	ಬಿಎಂಆರ್‌ಡಿಎ/ಎಲ್‌ಎಓ/37/2004-05 ದಿ:10.11.2004	60%(31) ದಿ:17.06.2005
8	ಶ್ರೀ ಕೆ.ಎಸ್.ಎಂ. ಷಬ್ಬಿರ್, ಶ್ರೀಮತಿ ಶಿರಬಾನು ಷಬ್ಬೀರ್, ನಂ.26/23, 4ನೇ ಕ್ರಾಸ್, ಸಿ.ವಿ. ಲೇಔಟ್, 4ನೇ ಬ್ಲಾಕ್, ಜಯನಗರ, ಬೆಂಗಳೂರು-560 011.	ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಕೊಪ್ಪ ಗ್ರಾಮದ ಸ.ನಂ.206/3, 206/2ಎ, 114, 111/2, 111/5	17-05	ಬಿಎಂಆರ್‌ಡಿಎ/ಎಲ್‌ಎಓ/25/2004-05 ದಿ:10.02.2006	--
9	ಮೆ॥ ಶರವಣ ಡೆವಲಪರ್ಸ್, ಪಾಲುದಾರರು ನಂ.1281/4, 5 ಮತ್ತು ಎಂ.ವೆಂಕಟೇಶ್ವರ ರಾವ್ (ಜಿಪಿಎ ಪಡೆದವರು) ನಂ.357, 3ನೇ ಕ್ರಾಸ್, ಕೇಂಬ್ರಿಡ್ಜ್ ಲೇಔಟ್, ಹಲಸೂರು, ಬೆಂಗಳೂರು.	ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಬಳಗಾರನಹಳ್ಳಿ ಮತ್ತು ನೆರಳೂರು ಗ್ರಾಮದ ಸ.ನಂ.52, 103, 106	16-34.08	ಬಿಎಂಆರ್‌ಡಿಎ/ಎಲ್‌ಎಓ/42/2004-05 ದಿ:13.12.2004	60%(119) ದಿ:23.06.2005
10	ಬಾಬಿ ಸಾಬಾಸ್ಟಿಯನ್, ನಂ.383, 9ನೇ ಮುಖ್ಯರಸ್ತೆ, 7ನೇ ಸೆಕ್ಟರ್, ಹೆಚ್.ಎಸ್‌ಆರ್ ಲೇಔಟ್, ಬೆಂಗಳೂರು.	ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ನೆರಳೂರು ಗ್ರಾಮದ ಸ.ನಂ.4/2, 63,	3-00	ಬಿಎಂಆರ್‌ಡಿಎ/ಎಲ್‌ಎಓ/81/2004-05 ದಿ:12.05.2005	60%(21) ದಿ:01.09.2005
11	ಶ್ರೀ ಎಸ್.ಅಶೋಕ್ ಕುಮಾರ್ ಮತ್ತು ಇತರರು, ನಂ.51, ಮಾಧ್ಯಮಿಕ ಶಾಲೆ ರಸ್ತೆ, ವಿ.ವಿ.ಪುರಂ, ಬೆಂಗಳೂರು-560004.	ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಯಡವನಹಳ್ಳಿ ಗ್ರಾಮದ ಸ.ನಂ.28/1	3-22	ಬಿಎಂಆರ್‌ಡಿಎ/ಎಲ್‌ಎಓ/29/2005-06 ದಿ:01.07.2005	60%(21) ದಿ:15.07.2005
12	ಶ್ರೀಎಂ.ನರಸಿಂಹಮೂರ್ತಿ, ನಂ.34, ಶಂಕರ ಲಿಂಗ ಪ್ರಸನ್ನ, 3ನೇ ಅಡ್ಡರಸ್ತೆ, ಹಾದನೂರು ಬಡಾವಣೆ, ನಾಗಸಂದ್ರ ಅಂಚೆ, ಬೆಂಗಳೂರು-560073	ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಜಿಗಣಿ ಗ್ರಾಮದ ಸ.ನಂ.145/1, 145/2,	6-11	ಬಿಎಂಆರ್‌ಡಿಎ/ಎಲ್‌ಎಓ/31/2005-06 ದಿ:07.07.2005 ಮಾರ್ಪಡಿತ ದಿ:25.11.2005	60%(50) ದಿ:23.01.2006
13	ಶ್ರೀ. ಆರ್.ಪ್ರಭಾಕರ ರೆಡ್ಡಿ, ನಂ.1051, 19ನೇ ಅಡ್ಡರಸ್ತೆ, 8ನೇ ಬಿ. ಮುಖ್ಯರಸ್ತೆ, ಹೆಚ್‌ಎಸ್‌ಆರ್ ಲೇಔಟ್, ಬೆಂಗಳುರು-34.	ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಚಿಕ್ಕಹಾಗಡೆ ಗ್ರಾಮದ ಸ.ನಂ.125(ಭಾಗ)	3-00	ಬಿಎಂಆರ್‌ಡಿಎ/ಎಲ್‌ಎಓ/39/2005-06 ದಿ:21.06.2005	60%(26) ದಿ:27.06.2005
14	ಶ್ರೀ ಬಿ.ಜ್ಯೋತಿ ಪ್ರಸಾದ್ ಬಿನ್ ಕೃಷ್ಣಯ್ಯ ಶೆಟ್ಟಿ, ನಂ.42, ಬಿ.ಟಿ.ಎಂ. 2ನೇ ಘಟ್ಟ, 2ನೇ ಹಂತ, ಮೈಕೋ ಲೇಔಟ್, 2ನೇ ಅಡ್ಡರಸ್ತೆ, ಮೊದಲನೇ ಮುಖ್ಯರಸ್ತೆ,, ಮೊಲದನೇ ಮಹಡಿ,45 ಬೆಂಗಳೂರು.	ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹರಪ್ಪನಹಳ್ಳಿ ಗ್ರಾಮದ ಸ.ನಂ.21, 123/1, 138, 139, 140, 152, 153	17-15	ಬಿಎಂಆರ್‌ಡಿಎ/ಎಲ್‌ಎಓ/43/2005-06 ದಿ:28.07.2005	60%(130) ದಿ:25.08.2005

ಮೇಲ್ಕಂಡ ವಿನ್ಯಾಸ ಅಭಿವೃದ್ಧಿದಾರರು/ಭೂ ಮಾಲೀಕರು ವಿನ್ಯಾಸ ಅನುಮೋದನೆ ಹಾಗೂ ಮೊದಲನೇ ಹಂತದ ನಿವೇಶನಗಳ ಬಿಡುಗಡೆ ಪೂರ್ವದಲ್ಲಿ ಈ ಪ್ರಾಧಿಕಾರಕ್ಕೆ ಕರಾರು ಪತ್ರ ನೀಡಿ, ಬಿಡುಗಡೆ ಪಡೆಯದ ನಿವೇಶನಗಳ ಮಾರಾಟದ ಹಕ್ಕು ಈ ಪ್ರಾಧಿಕಾರಕ್ಕೆ ನೀಡಲಾಗಿರುತ್ತದೆ. ಅಭಿವೃದ್ಧಿದಾರರು/ಭೂ ಮಾಲೀಕರು ನೀಡಿರುವ ಕರಾರಿನಂತೆ, ಬಿಡುಗಡೆ ಪಡೆಯದ ನಿವೇಶನಗಳ ಮಾಲೀಕತ್ವವನ್ನು ಈ ಪ್ರಾಧಿಕಾರಕ್ಕೆ ಹಸ್ತಾಂತರಿಸುವ ನಿಟ್ಟಿನಲ್ಲಿ ಖಾತೆಗಳನ್ನು ಈ ಪ್ರಾಧಿಕಾರದ ಹೆಸರಿಗೆ ದಾಖಲಿಸಲು ಸ್ಥಳೀಯ ಸಂಸ್ಥೆಗಳಿಗೆ ಕೋರಲಾಗುವುದು. ಸದರಿ ನಿವೇಶನಗಳ ಮಾಲೀಕತ್ವದ ಕರಾರು ಈ ಪ್ರಾಧಿಕಾರಕ್ಕೆ ಇರುವ ಬಗ್ಗೆ ಋಣಭಾರ ರಾಹಿತ್ಯ ಪ್ರಮಾಣ ಪತ್ರ (ಇ.ಸಿ.)ದಲ್ಲಿ ದಾಖಲಿಸಲು ನೋಂದಣಿ ಇಲಾಖೆಗೆ ಕೋರಲಾಗುವುದು.

ಆದ್ದರಿಂದ ಈಗಾಗಲೇ ವಿನ್ಯಾಸಗಳನ್ನು ಅಭಿವೃದ್ಧಿಪಡಿಸಲು ಸಾಕಷ್ಟು ಸಮಯ ಕಳೆದಿದ್ದು, ಕೂಡಲೇ ಅನುಮೋದನೆಯಾಗಿರುವ ವಸತಿ ವಿನ್ಯಾಸಗಳಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಸಕ್ಷಮ ಪ್ರಾಧಿಕಾರಗಳ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ಕೂಡಲೇ ಉಳಿಕೆ/ಅಂತಿಮ ಹಂತದ ನಿವೇಶನಗಳನ್ನು ಬಿಡುಗಡೆ ಪಡೆಯಬೇಕೆಂದು ಈ ಮೂಲಕ ಕೋರಲಾಗಿದೆ. ಈ ಪ್ರಕಟಣೆಯನ್ನು ನೋಟೀಸ್ ಎಂದು ಭಾವಿಸುವುದು.

ಸಹಿ/-
ಸದಸ್ಯ-ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,

ವಾಸಾಸಂಇ/ಬೆಂ.ನ/ಜಿಎ/4275/2022-23

ಆನೇಕಲ್ ಯೋಜನಾ ಪ್ರಾಧಿಕಾರ
"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560099.
ದೂ.: 080-27835122 ಫ್ಯಾಕ್ಸ್ : 080-27836569 www.anekal.tpa.gov.in www.e-vinyasa.kar.nic.in
ಸಂಖ್ಯೆ: ಆಯೋಪ್ರಾ/ಭೂ.ಬ/103/2022-23 ದಿನಾಂಕ: 20.01.2023

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69ರ ತಿದ್ದುಪಡಿ ಕಾಯ್ದೆಯಂತೆ)

ಆನೇಕಲ್ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 151 ಬಿಎಂಆರ್ 2013, ಬೆಂಗಳೂರು ದಿನಾಂಕ: 03.09.2014ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(2)ರನ್ವಯ ಮಹಾಯೋಜನೆಯಲ್ಲಿ ಸಾರ್ವಜನಿಕ ಉಪಯೋಗಗಳಿಗೆ ಕಾಯ್ದಿರಿಸಿರುವ ಪ್ರದೇಶದ ಭೂ ಉಪಯೋಗವು ರದ್ದಾಗುತ್ತದೆ. ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69ರನ್ವಯ ಈ ಕೆಳಕಂಡ ಭೂ ಉಪಯೋಗ ನಿಗದಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(3)ರ ಅಡಿಯಲ್ಲಿ ಈ ಕೆಳಕಂಡಂತೆ ಭೂ ಉಪಯೋಗ ನಿಗದಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 (ಹದಿನೈದು) ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ-ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ.	ವಿಸ್ತೀರ್ಣ ಎ/ಗು	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ	ಷರಾ
1	ಶ್ರೀ ಎ.ಸಿ. ಪ್ರಕಾಶರೆಡ್ಡಿ ಬಿನ್ ರಾಮಯ್ಯ ಮತ್ತು ಶ್ರೀ ಎ.ಸಿ. ಸುದರ್ಶನ್ ರೆಡ್ಡಿ ಬಿನ್ ಚಿಕ್ಕರಾಮರೆಡ್ಡಿ	ಆನೇಕಲ್	ಸರ್ಜಾಪುರ	ಚಿಕ್ಕದುನ್ನಸಂದ್ರ	76	2-20	ಸಾರ್ವಜನಿಕ / ಅರೆ ಸಾರ್ವಜನಿಕ	ವಸತಿ	

ಸಹಿ/-,
ಸದಸ್ಯ-ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ವಾಸಾಸಂಇ/ವಾಪ್ರ/ಎಲ್‌ಸಿ/4262/2022-23

ನಗರಸಭಾ ಕಾರ್ಯಾಲಯ, ಚಿಕ್ಕಬಳ್ಳಾಪುರ
ದೂರವಾಣಿ: 08156-275557, ಫ್ಯಾಕ್ಸ್: 08156-274742
ವೆಬ್‌ಸೈಟ್: www.chikkaballapurcity.gov.in ಇ-ಮೇಲ್: itstaff_ulb_chickballapur@yahoo.co.in
ಸಂಖ್ಯೆ: ನ.ಸ.ಚಿ/ತಾ.ಶಾ/ಟೆಂ.ಪ್ರ/ಸಿ.ಆರ್/28/2022-23 ದಿನಾಂಕ: 17.01.2023

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಪೌರಾಯುಕ್ತರು, ನಗರಸಭೆ, ಚಿಕ್ಕಬಳ್ಳಾಪುರ ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ 2020-21ನೇ ಮತ್ತು 2021-22ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಯೋಜನೆಯಡಿ ಉಳಿತಾಯ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿ ಕೆಲಸವನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿಸಿಕೊಂಡಿರುವ ಅಧಿಕೃತ ಅರ್ಹ ದರ್ಜೆಯ ಗುತ್ತಿಗೆದಾರರು ಗಳಿಂದ ಐಟಂವಾರು ದರಗಳ ಟೆಂಡರ್‌ನ್ನು (ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ) ಆಹ್ವಾನಿಸಲಾಗಿದೆ. ಇ-ವೆಬ್‌ಸೈಟ್:**www.eproc.karnataka.gov.in** ಮೂಲಕ ಅರ್ಜಿಯನ್ನು ಸಲ್ಲಿಸಲು ಈ ಮೂಲಕ ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ **www.chikkaballapurcity.gov.in** ನಲ್ಲಿ ಪರಿಶೀಲಿಸಬಹುದು.

(1) ಭರ್ತಿ ಮಾಡಿದ ಟೆಂಡರ್‌ಗಳ ಕುರಿತು ಆಕ್ಷೇಪಣೆಗಳನ್ನು ಸಲ್ಲಿಸಲು ಕಡೆಯ **ದಿನಾಂಕ: 02.02.2023 ರಂದು ಬೆಳಿಗ್ಗೆ 11.00 ಗಂಟೆಯವರೆಗೆ. (2)** ಭರ್ತಿ ಮಾಡಿದ ಟೆಂಡರ್‌ಗಳನ್ನು ಅಂತರ್ಜಾಲದ ಮುಖಾಂತರ ಸಲ್ಲಿಸುವ ಕಡೆಯ ದಿನಾಂಕ: **02.02.2023 ರಂದು ಸಂಜೆ 5.30 ಗಂಟೆಯವರೆಗೆ. (3)** ಟೆಂಡರ್ ತೆರೆಯುವ ದಿನಾಂಕ: **04.02.2023 ರಂದು ಬೆಳಿಗ್ಗೆ 11.00 ಗಂಟೆಗೆ.** ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವಜನಿಕ ರಜಾದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಗಳನ್ನು ಪರಿಗಣಿಸಲಾಗುವುದು.

(1) ಕಾಮಗಾರಿಯ ಹೆಸರು: ಪ್ಯಾಕೇಜ್-1: DMA/2022-23/OW/WORK_INDENT145422. ಕಾಮಗಾರಿ ಅಂದಾಜು ಮೊತ್ತ: **30.00 ಲಕ್ಷಗಳು. (2) ಕಾಮಗಾರಿಯ ಹೆಸರು:** DMA/2022-23/OW/WORK_INDENT145576. ಕಾಮಗಾರಿ ಅಂದಾಜು ಮೊತ್ತ: **17.67 ಲಕ್ಷಗಳು. (3) ಕಾಮಗಾರಿಯ ಹೆಸರು:** DMA/2022-23/OW/WORK_INDENT145579. ಕಾಮಗಾರಿ ಅಂದಾಜು ಮೊತ್ತ: **3.60 ಲಕ್ಷಗಳು. ಮೇಲಿನ ಎಲ್ಲಾ ಕಾಮಗಾರಿಗಳಿಗೆ ಲೆಕ್ಕ ಶೀರ್ಷಿಕೆ:** 2020-21 ಮತ್ತು 2021-22ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಯೋಜನೆಯಡಿ ಉಳಿತಾಯ. **ಅರ್ಹರಿರುವ ಗುತ್ತಿಗೆದಾರರ ದರ್ಜೆ: ಮೇಲಿನ ಎಲ್ಲಾ ಕಾಮಗಾರಿಗಳಿಗೆ** ಅರ್ಹ ದರ್ಜೆಯ ಪಿ.ಡಬ್ಲ್ಯೂ.ಡಿ. ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಅವಧಿ: **ಮೇಲಿನ ಎಲ್ಲಾ ಕಾಮಗಾರಿಗಳಿಗೆ 3 ತಿಂಗಳು** .

ಸಹಿ/- ಅಧ್ಯಕ್ಷರು, ನಗರಸಭೆ, ಚಿಕ್ಕಬಳ್ಳಾಪುರ

ಸಹಿ/- ಪೌರಾಯುಕ್ತರು, ನಗರಸಭೆ, ಚಿಕ್ಕಬಳ್ಳಾಪುರ.

ವಾ.ಸಾ.ಸಂ.ಇ/ ಚಿಕ್ಕಬಳ್ಳಾಪುರ/ ಆರ್.ಓ.ಸಂಖ್ಯೆ 464/ ಎಂಸಿಎ/ 2022-23

ಕೋವಿಡ್-19. ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

‘ಆಸ್ತಿ ತೆರಿಗೆ: ಈ ಬಾರಿ ದಾಖಲೆ ಸಂಗ್ರಹ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಸಂಗ್ರಹದಲ್ಲಿ ಈ ವರ್ಷ ದಾಖಲೆ ಬರೆಯುವ ನಿಟ್ಟಿನಲ್ಲಿ ಸಾಗಿದ್ದು, ₹4,189 ಕೋಟಿ ಗುರಿಯಲ್ಲಿ ಈಗಾಗಲೇ ₹2,890 ಕೋಟಿ ಸಂಗ್ರಹವಾಗಿದೆ’ ಎಂದು ಬಿಬಿಎಂಪಿ ಕಂದಾಯ ಇಲಾಖೆ ವಿಶೇಷ ಆಯುಕ್ತ ಡಾ. ದೀಪಕ್ ಹೇಳಿದರು.

2020–21ನೇ ಸಾಲಿನಲ್ಲಿ ₹2,800 ಕೋಟಿ, 2021–22ರಲ್ಲಿ ₹3,110 ಕೋಟಿ ಸಂಗ್ರಹವಾಗಿತ್ತು. ಕಳೆದ ಬಾರಿ ಪ್ರಥಮ ಬಾರಿಗೆ ಮೂರು ಸಾವಿರ ಕೋಟಿ ಸಂಗ್ರಹ ದಾಟಿತ್ತು. ಈ ವರ್ಷ ಜನವರಿಯಲ್ಲೇ ಮೂರು ಸಾವಿರ ಕೋಟಿ ಸಂಗ್ರಹದ ಹತ್ತಿರ ಇದ್ದೇವೆ. ₹3,500 ಕೋಟಿಗೂ ಹೆಚ್ಚು ಸಂಗ್ರಹ ಮಾಡುವ ಗುರಿ ಹೊಂದಿದ್ದೇವೆ’ ಎಂದರು.

‘ಬೆಸ್ಕಾಂ ಬಿಲ್‌ಗಳ ಆಧಾರದಲ್ಲಿ ಆಸ್ತಿ ತೆರಿಗೆ ವಿಮರ್ಶೆ ಮಾಡುತ್ತಿದ್ದೇವೆ. ಅಲ್ಲದೆ, ಸ್ವಾಧೀನಪತ್ರ ಪಡೆದುಕೊಂಡ ಆಧಾರದಲ್ಲಿ ತೆರಿಗೆ ಸಂಗ್ರಹ ಆರಂಭಿಸಲಾಗಿದೆ. ಪ್ರತಿ ವಲಯಕ್ಕೆ ಪ್ರತಿ ವಾರ ಸಂಗ್ರಹಿಸುವ ಗುರಿ ನೀಡಲಾಗಿದೆ. ಅದನ್ನು ಇದೀಗ ನಿತ್ಯ ಸಂಗ್ರಹದ ಆಧಾರದಲ್ಲಿ ವಿಭಾಗಿಸಿ ಜವಾಬ್ದಾರಿ ನೀಡಲಾಗಿದೆ. ಅದನ್ನು ಕೇಂದ್ರ ಕಚೇರಿಯಿಂದ ನಿಗಾವಹಿಸಲಾಗಿದೆ. ಭಾನುವಾರವೂ ಸೇರಿದಂತೆ ಪ್ರತಿ ದಿನ ಸುಮಾರು ₹20 ಕೋಟಿ ಸಂಗ್ರಹಿಸುವ ಗುರಿ ಹೊಂದಲಾಗಿದೆ.’ ಎಂದರು.

ಪೂರ್ವ ಪ್ರಥಮ: ವಲಯವಾರು ಆಸ್ತಿ ತೆರಿಗೆ ಸಂಗ್ರಹದಲ್ಲಿ ಮಹದೇವಪುರ ವಲಯದ ಪ್ರಥಮ ಸ್ಥಾನದಲ್ಲಿದ್ದರೆ, ಗುರಿ ಮೀರಿ ಸಾಧನೆ ಮಾಡಿದ ಸಾಲಿನಲ್ಲಿ ಪೂರ್ವ ವಲಯ ಅಗ್ರಸ್ಥಾನ ಪಡೆದಿದೆ. ರಾಜರಾಜೇಶ್ವರಿನಗರ ವಲಯ ₹392.17 ಕೋಟಿ ಮಾತ್ರ ಸಂಗ್ರಹಿಸಿದ್ದು, ಗುರಿ ಸಾಧನೆಯಲ್ಲಿ ಕೊನೆಯ ಸ್ಥಾನದಲ್ಲಿದೆ.

ಗುರಿ ಸಾಧನೆ (ಜ.16ರಿಂದ ಜ.22, ₹ಲಕ್ಷಗಳಲ್ಲಿ)

ವಲಯ	ವಾರದ ಗುರಿ	ಸಾಧನೆ	ಶೇಕಡವಾರು	ಸ್ಥಾನ
ಪೂರ್ವ	₹1,807.83	₹1,845.18	102.07	1
ಮಹದೇವಪುರ	₹3,304.92	₹3,086.63	93.39	2
ದಕ್ಷಿಣ	₹1,696.56	₹1,146.54	67.58	3
ಪಶ್ಚಿಮ	₹1,700.53	₹943.95	55.51	4
ದಾಸರಹಳ್ಳಿ	₹742.7	₹411.62	55.42	5
ಬೊಮ್ಮನಹಳ್ಳಿ	₹1,799.47	₹787.09	43.74	6
ಯಲಹಂಕ	₹1,619.96	₹663.84	40.98	7
ಆರ್.ಆರ್.ನಗರ	₹1,411.86	₹392.17	27.78	8

ಪುಸ್ತಕ ಬಿಡುಗಡೆ

ನಗರದಲ್ಲಿ ಸೋಮವಾರ ನಡೆದ ಪ್ರವೀಣಾ ಕುಲಕರ್ಣಿ ಅವರ ‘ಅನುಭವದ ಅಡುಗೆ’ ಪುಸ್ತಕವನ್ನು ಚಂದನ ವಾಹಿನಿ ನಿರ್ದೇಶಕಿ ನಿರ್ಮಲಾ ಸಿ. ಎಲಿಗಾರ್ ಬಿಡುಗಡೆಗೊಳಿಸಿದರು. ಜಾನಪದ ವಿದ್ವಾಂಸ ಎಂ. ಬೈರೇಗೌಡ, ಲೇಖಕಿ ಡಿ. ಕೋಮಲ, ಉಷಾಕಿಣಿ, ಲೇಖಕಿ ಪ್ರವೀಣಾ ಕುಲಕರ್ಣಿ, ವಗ್ಗರಣೆ ಡಬ್ಬಿ ಖ್ಯಾತಿಯ ಮುರುಳಿ ಇದ್ದರು.

ಲೋಕಾಯುಕ್ತ ಅಧಿಕಾರಿಗಳ ಮೇಲೆ ಸಿದ್ದರಾಮಯ್ಯ ಪ್ರಭಾವ: ದೂರು

ಬೆಂಗಳೂರು: ‘ದೂರುದಾರರ ಹೇಳಿಕೆಯನ್ನೂ ಪಡೆಯದೆ ತನಿಖೆಯನ್ನು ಮುಕ್ತಾಯಗೊಳಿಸಿದ್ದ ಲೋಕಾಯುಕ್ತ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಲೋಕಾಯುಕ್ತರಿಗೆ ದೂರು ಸಲ್ಲಿಸಲಾಗಿದೆ’ ಎಂದು ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷ ಎನ್.ಆರ್. ರಮೇಶ್ ಹೇಳಿದರು.

‘ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ 2013 ರಿಂದ 2018 ರವರೆಗೆ ನಡೆದ 121 ಹಗರಣಗಳ ತನಿಖೆಗೆ ದೂರು ನೀಡಲಾಗಿತ್ತು. ಸಿದ್ಧರಾಮಯ್ಯ ಸೇರಿದಂತೆ ಅವರ ಸಚಿವ ಸಂಪುಟದಲ್ಲಿ ಸಚಿವರಾಗಿದ್ದ ಕೆ.ಜೆ. ಜಾರ್ಜ್, ಕೃಷ್ಣ ಬೈರೇಗೌಡ ಮತ್ತು ಯು. ಟಿ. ಖಾದರ್ ಸೇರಿದಂತೆ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರ ಪ್ರಭಾವಗಳಿಗೆ ಒಳಗಾಗಿರುವ ಲೋಕಾಯುಕ್ತ ಸಂಸ್ಥೆಯ ಅಧಿಕಾರಿಗಳು ಮತ್ತು ಭ್ರಷ್ಟಾಚಾರ ನಿಗ್ರಹದಳ ಸಂಸ್ಥೆಯ ಅಧಿಕಾರಿಗಳು ದೂರುದಾರರಿಂದ ಯಾವುದೇ ಹೇಳಿಕೆಗಳನ್ನು ಪಡೆದುಕೊಳ್ಳದೇ ಏಕಾಏಕಿ 14 ಪ್ರಕರಣಗಳನ್ನು ಮುಕ್ತಾಯಗೊಳಿಸಿದ್ದರು’ ಎಂದು ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ದೂರಿದರು.

‘ಇದಲ್ಲದೆ, ಸಂಪೂರ್ಣ 121 ಹಗರಣಗಳ ಬಗ್ಗೆ ಸಿಐಡಿ ತನಿಖೆ ನಡೆಸಬೇಕು ಎಂದು ಮುಖ್ಯಮಂತ್ರಿ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಲಾಗಿದೆ. ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ದಾಖಲಿಸಲಾಗಿದೆ’ ಎಂದರು.

‘ಕೃಷಿ ಹೊಂಡ ಯೋಜನೆಯಲ್ಲಿ ₹ 800 ಕೋಟಿ, ಬಿಬಿಎಂಪಿಯಲ್ಲಿ ಸುರಂಗ ತ್ಯಾಜ್ಯ ಡಬ್ಬಿ ಅಳವಡಿಕೆಯಲ್ಲಿ ₹ 200 ಕೋಟಿ, ಬಸ್ ಶೆಲ್ಟರ್‌ಗಳಲ್ಲಿ ₹35 ಕೋಟಿ ಜಾಹೀರಾತು ಶುಲ್ಕ ವಂಚನೆ, ಇಂದಿರಾ ಕ್ಯಾಂಟೀನ್‌ನಲ್ಲಿ ₹560 ಕೋಟಿ, ಬಿಡಿಎಗೆ ಸೇರಿದ ಏಳು ವಾಣಿಜ್ಯ ಸಂಕೀರ್ಣಗಳ 65 ವರ್ಷಗಳ ಗುತ್ತಿಗೆ ಹಗರಣ, ಬೀದಿದೀಪದಲ್ಲಿ ಎಲ್‌ಇಡಿ ಅಳವಡಿಕೆಯಲ್ಲಿ ₹ 160 ಕೋಟಿ, ಪೌರಕಾರ್ಮಿಕರ ಹೆಸರಿನಲ್ಲಿ ನಕಲಿ ಇಎಸ್‌ಐ, ಪಿಎಫ್ ಪಾವತಿಯಲ್ಲಿ ₹ 934 ಕೋಟಿ ಸೇರಿದಂತೆ ಸರ್ಕಾರಿ ಭೂಕಬಳಿಕೆಯ ಹಗರಣಗಳ ಬಗ್ಗೆ ದಾಖಲೆ ಸಹಿತ ದೂರು ಸಲ್ಲಿಸಲಾಗಿದೆ’ ಎಂದು ಮಾಹಿತಿ ನೀಡಿದರು.

ಸ್ಪಿಕ್ ಮೆಕೆ: ‘ಯಾಮಿನಿ’ ಸಂಗೀತೋತ್ಸವ 25ಕ್ಕೆ

ಬೆಂಗಳೂರು: ಭಾರತೀಯ ಶಾಸ್ತ್ರೀಯ ಸಂಗೀತ ಹಾಗೂ ಸಂಸ್ಕೃತಿಯನ್ನು ಉತ್ತೇಜಿಸುವ ಉದ್ದೇಶದಿಂದ ರಚನೆಯಾಗಿರುವ ‘ಸ್ಪಿಕ್ ಮೆಕೆ’ ಸಂಸ್ಥೆಯು ಜ.25ರಂದು ‘ಯಾಮಿನಿ’ ಸಂಗೀತೋತ್ಸವ ಹಮ್ಮಿಕೊಂಡಿದೆ.

ಬನ್ನೇರುಘಟ್ಟದಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಹೋರಾಂಗಣ ಬಯಲು ರಂಗಮಂದಿರದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ಎಲ್ಲರಿಗೂ ಮುಕ್ತ ಪ್ರವೇಶವಿದೆ.

‘ಜ. 25ರಂದು ಸಂಜೆ 7.30ಕ್ಕೆ ರಾಜೇಂದ್ರ ಗಂಗಾನಿ ಅವರು ಕೃಥಕ್ ನೃತ್ಯ ಪ್ರಸ್ತುತ ಪಡಿಸಲಿದ್ದಾರೆ. ರಾತ್ರಿ 9ಕ್ಕೆ ನೈವೇಲಿ ಸಂತನಾಗೋಪಾಲ ಅವರು ಕರ್ನಾಟಕ ಶಾಸ್ತ್ರೀಯ ಸಂಗೀತ ನಡೆಸಿಕೊಡಲಿದ್ದಾರೆ. ರಾತ್ರಿ 11.15ಕ್ಕೆ ವಿಕ್ಕು ವಿನಾಯಕ ರಾಮ ಅವರು ಘಟ ವಾದನ ನುಡಿಸಲಿದ್ದು, ತಡರಾತ್ರಿ 2.45ಕ್ಕೆ ಮೈಸೂರು ಚಂದನ್ ಅವರಿಂದ ಕೊಳಲು ವಾದನ, ಬೆಳಿಗ್ಗೆ 4.30ಕ್ಕೆ ಮೇವಾತ ಘರಾಣದ ಸಂಜೀವ್ ಅಭ್ಯಂಕರ್ ಅವರು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಪ್ರಸ್ತುತ ಪಡಿಸಲಿದ್ದು ಸಂಗೀತ ಪ್ರಿಯರನ್ನು ರಂಜಿಸಲಿದ್ದಾರೆ’ಎಂದು ಸ್ಪಿಕ್ ಮೆಕೆ ಸಂಸ್ಥೆಯ ಕರ್ನಾಟಕ ಸಂಚಾಲಕಿ ಸುಪ್ರಿತಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಭ್ರಷ್ಟಾಚಾರ ತೊಲಗಿಸಿ, ಬೆಂಗಳೂರು ಉಳಿಸಿ: ಫಲಕಗಳ ಪ್ರದರ್ಶನ

357 ಕಡೆ ಕಾಂಗ್ರೆಸ್ ಮೌನ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭ್ರಷ್ಟಾಚಾರ ತೊಲಗಿಸಿ, ಬೆಂಗಳೂರು ಉಳಿಸಿ’ ಘೋಷವಾಕ್ಯದೊಂದಿಗೆ ನಗರದ 357 ಸ್ಥಳಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಬುಧವಾರ ಮೌನ ಪ್ರತಿಭಟನೆ ನಡೆಸಿದರು.

280 ವೃತ್ತಗಳು, 51 ಮೆಟ್ರೊ ನಿಲ್ದಾಣಗಳು ಹಾಗೂ 26 ಮೇಲ್ಸೇತುವೆ ಬಳಿ ಸೇರಿದ್ದ ಕಾರ್ಯಕರ್ತರು, ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು. ಶಾಸಕರು ಹಾಗೂ ಪಕ್ಷದ ಮುಖಂಡರು ಪ್ರತಿಭಟನೆ ನೇತೃತ್ವ ವಹಿಸಿದ್ದರು.

ಟ್ರಿನಿಟಿ ವೃತ್ತದಲ್ಲಿ ಜರುಗಿದ ಪ್ರತಿಭಟನೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲಾ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕೆಪಿಸಿಸಿ ಪ್ರಚಾರ ಸಮಿತಿಯ ಅಧ್ಯಕ್ಷ ಎಂ.ಬಿ. ಪಾಟೀಲ ಪಾಲ್ಗೊಂಡಿದ್ದರು.

‘ಬಿಜೆಪಿ ನೇತೃತ್ವದ ಸರ್ಕಾರ, ಶೇ 40 ಕಮಿಷನ್ ಸರ್ಕಾರ. ಈ ಸರ್ಕಾರದ ಭ್ರಷ್ಟಾಚಾರವನ್ನು ಜನರ ಎದುರು ತೆರೆದಿಡಲು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಜನರ ಧ್ವನಿಯಾಗಿ ಕೆಲಸ ಮಾಡಲು ಪ್ರಜಾಧ್ವನಿ ಯಾತ್ರೆ ಆರಂಭಿಸಿದ್ದೇವೆ’ ಎಂದು ಮುಖಂಡರು ಹೇಳಿದರು.

‘ಬೆಂಗಳೂರಿನ ಬಹುತೇಕ ರಸ್ತೆಗಳು ಗುಂಡಿಮಯವಾಗಿದ್ದು, ಮೇಲಿಂದ ಮೇಲೆ ಸಾವು–ನೋವುಗಳು ಸಂಭವಿಸುತ್ತಿವೆ. ಅಮಾಯಕರು ಪ್ರಾಣ ಕಳೆದುಕೊಳ್ಳುತ್ತಿದ್ದು, ಅವರ ಕುಟುಂಬಗಳು ಬೀದಿಗೆ ಬೀಳುತ್ತಿವೆ. ಕಸದ ಸಮಸ್ಯೆ ವಿಪರೀತವಾಗಿದ್ದು, ಅಭಿವೃದ್ಧಿ ಕೆಲಸಗಳೇ ಮರೀಚಿಕೆಯಾಗಿವೆ. ದುಡಿಯುವ ವರ್ಗದಿಂದ ಸುಲಿಗೆ ಮಾಡುವ ವ್ಯವಸ್ಥೆ ರಾಜ್ಯದಲ್ಲಿದೆ. ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದ್ದು, ಜನಸಾಮಾನ್ಯರೂ ಜೀವನ ನಡೆಸುವುದೇ ಕಷ್ಟವಾಗಿದೆ’ ಎಂದು ತಿಳಿಸಿದರು.

ಡಿ.ಕೆ. ಶಿವಕುಮಾರ್ ಮಾತನಾಡಿ, ‘ಕೆಲ ದಿನಗಳ ಹಿಂದೆ ಬೀದಿಬದಿ ವ್ಯಾಪಾರಿಗಳ ಸಮಾವೇಶದಲ್ಲಿ ಭಾಗವಹಿಸಿದ್ದೆ. ಅವರ ವ್ಯಾಪಾರಕ್ಕೆ ನಿತ್ಯವೂ ಪಾಲಿಕೆ ಅಧಿಕಾರಿಗಳು ಹಾಗೂ ಪೊಲೀಸರು ಕಿರುಕುಳ ನೀಡುತ್ತಿದ್ದಾರೆ. ಪ್ರತಿ ಕ್ಷೇತ್ರದಲ್ಲಿ ಬೀದಿ ವ್ಯಾಪಾರಿಗಳಿಂದ ತಿಂಗಳಿಗೆ ಒಂದು ಕೋಟಿಯಷ್ಟು ಹಣ ಸುಲಿಗೆ ಮಾಡಲಾಗುತ್ತಿದೆ’ ಎಂದು ದೂರಿದರು.

> **ತರಾತುರಿಯಲ್ಲಿ ಪ್ರತಿಭಟನೆ**
>
> ಕಾಂಗ್ರೆಸ್ ಪ್ರತಿಭಟನೆಗೆ ಪೊಲೀಸರು ಅನುಮತಿ ನೀಡಿರಲಿಲ್ಲ. ಹೆಚ್ಚು ಹೊತ್ತು ಪ್ರತಿಭಟನೆ ನಡೆಸಿ, ಸಾರ್ವಜನಿಕರಿಗೆ ತೊಂದರೆ ಉಂಟು ಮಾಡಿದರೆ ಕಾನೂನು ಕ್ರಮ ಜರುಗಿಸುವುದಾಗಿ ಕಮಿಷನರ್ ಪ್ರತಾಪ್ ರೆಡ್ಡಿ ಎಚ್ಚರಿಕೆ ನೀಡಿದ್ದರು. ಹೀಗಾಗಿ, ಕಾಂಗ್ರೆಸ್ ಕಾರ್ಯಕರ್ತರು ಕೆಲವೆಡೆ ತರಾತುರಿಯಲ್ಲಿ ಪ್ರತಿಭಟನೆ ನಡೆಸಿ ಮುಕ್ತಾಯಗೊಳಿಸಿದರು.

ಮೆಟ್ರೊ ಕಾಮಗಾರಿ ಪ್ರತಿ ಹಂತಕ್ಕೂ ಪ್ರತ್ಯೇಕ ಎಸ್‌ಒಪಿ: ಬಿಎಂಆರ್‌ಸಿಎಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರ್ಮಾಣ ಹಂತದ ಮೆಟ್ರೊ ಪಿಲ್ಲರ್ ಕಬ್ಬಿಣದ ಚೌಕಟ್ಟು ಉರುಳಿಬಿದ್ದು ತಾಯಿ–ಮಗು ಮೃತಪಟ್ಟ ಪ್ರಕರಣದಿಂದ ಎಚ್ಚೆತ್ತಿರುವ ಬಿಎಂಆರ್‌ಸಿಎಲ್, ಕಾಮಗಾರಿಯ ಎಲ್ಲಾ ಹಂತಗಳಿಗೆ ಪ್ರತ್ಯೇಕ ಪ್ರಮಾಣೀಕೃತ ಕಾರ್ಯಾಚರಣೆ ವಿಧಾನ(ಎಸ್‌ಒಪಿ) ರೂಪಿಸಲು ಮುಂದಾಗಿದೆ.

ಎತ್ತರಿಸಿದ ಮಾರ್ಗ ನಿರ್ಮಾಣದಲ್ಲಿ ಕಂಬಗಳ ಎತ್ತರ ಎಷ್ಟಿರಬೇಕು, ಕಂಬಗಳನ್ನು ಎಷ್ಟು ಹಂತಗಳಲ್ಲಿ ನಿರ್ಮಿಸಬೇಕು, ಸರಳುಗಳ ಗಾತ್ರ ಎಷ್ಟಿರಬೇಕು, ಆಸರೆ ಹೇಗಿರಬೇಕು ಎಂಬುದು ಸೇರಿದಂತೆ ಎಸ್‌ಒಪಿ ರೂಪಿಸಿ ಗುತ್ತಿಗೆದಾರರು ಮತ್ತು ನಿಗಮದ ಎಂಜಿನಿಯರ್‌ಗಳಿಗೆ ನೀಡಲು ನಿರ್ಧರಿಸಿದೆ.

ಈಗಾಗಲೇ ಎಸ್‌ಒಪಿಗಳಿದ್ದರೂ ಅವಘಡ ಸಂಭವಿಸಿದೆ. ಆದ್ದರಿಂದ ಕಾರ್ಯ ವಿಧಾನವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ರೂಪಿಸಲು ತಜ್ಞರೊಂದಿಗೆ ಚರ್ಚಿಸಲಾಗುವುದು. ಅಂತಿಮವಾಗಿ ಐಐಎಸ್‌ಸಿ ತಜ್ಞರೊಂದಿಗೂ ಸಮಾಲೋಚನೆ ನಡೆಸಿ ಎಸ್‌ಒಪಿ ಅಂತಿಮಗೊಳಿಸಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದರು.

ಚೌಕಟ್ಟಿಗೆ ಆಸರೆ ಹೇಗಿರಬೇಕು ಮತ್ತು ಅದನ್ನು ತೆರವುಗೊಳಿಸುವಾಗ ಕ್ರೇನ್ ಬಳಕೆ ಇರಬೇಕು ಎಂಬುದನ್ನೂ ತಿಳಿಸಲಾಗುವುದು ಎಂದು ಹೇಳಿದರು.

‘18 ಮೀಟರ್ ಎತ್ತರದ ಕಂಬಕ್ಕೆ ಯಾವುದೇ ಆಸರೆ ಇಲ್ಲದಿದ್ದರಿಂದ ರಸ್ತೆಗೆ ಬಿದ್ದಿತ್ತು. ಕ್ರೇನ್‌ನಿಂದ ತಾತ್ಕಾಲಿಕ ಆಸರೆ ನೀಡಿದ್ದರೆ ಅವಘಡ ಸಂಭವಿಸುತ್ತಿರಲಿಲ್ಲ’ ಎಂದು ಐಐಎಸ್‌ಸಿ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಪ್ರೊ. ಜೆ.ಎಂ. ಚಂದ್ರಕಿಶನ್ ನೇತೃತ್ವದ ತಂಡ 27 ಪುಟಗಳ ವರದಿಯನ್ನು ಇತ್ತೀಚೆಗೆ ಸಲ್ಲಿಸಿತ್ತು.

ಈ ರೀತಿಯ ಕಂಬ ನಿರ್ಮಾಣ ಮಾಡುವಾಗ ಆಸರೆಗಾಗಿ ಕಬ್ಬಿಣದ ಹಗ್ಗಗಳಿಂದ ಬಿಗಿಯಲಾಗುತ್ತದೆ. ಅದನ್ನು ತೆರವುಗೊಳಿಸಿದ ತಕ್ಷಣ ವೃತ್ತಾಕಾರದ ಕಬ್ಬಿಣದ ಪ್ಲೇಟ್‌ಗಳನ್ನು ಜೋಡಿಸಬೇಕು. ಅಲ್ಲಿಯ ತನಕ ಸುರಕ್ಷತೆ ದೃಷ್ಟಿಯಿಂದ ಕ್ರೇನ್‌ನಿಂದ ಆಸರೆ ನೀಡಬೇಕಿತ್ತು. ಈಗ ಬಿದ್ದಿರುವ ಚೌಕಟ್ಟಿಗೆ ಈ ರೀತಿಯ ಯಾವುದೇ ಆಸರೆ ಇರಲಿಲ್ಲ ಎಂದೂ ವರದಿಯಲ್ಲಿ ಉಲ್ಲೇಖಿಸಿತ್ತು.

ಗುತ್ತಿಗೆದಾರರ ವಿರುದ್ಧ ಕ್ರಮ: ಕಾಮಗಾರಿ ನಿರ್ವಹಿಸುತ್ತಿರುವ ಗುತ್ತಿಗೆದಾರರ ಲೋಪ ಯಾವ ನಿಯಮದಡಿ ಬರುತ್ತದೆ ಎಂಬುದನ್ನು ಪರಿಶೀಲಿಸಲಾಗುತ್ತಿದೆ ಎಂದು ಬಿಎಂಆರ್ ಸಿಎಲ್ ಅಧಿಕಾರಿಗಳು ತಿಳಿಸಿದರು. ವರದಿ ಈಗಷ್ಟೇ ತಲುಪಿದ್ದು, ಪರಿಶೀಲನೆ ಬಳಿಕ ಕ್ರಮ ಕೈಗೊಳ್ಳಲಾಗುವುದು ಎಂದರು.

ಪ್ಯಾರಾಗ್ಲೈಡರ್, ಡ್ರೋನ್ ಹಾರಾಟ ನಿಷೇಧ

ನವದೆಹಲಿ (ಪಿಟಿಐ): ಗಣರಾಜ್ಯೋತ್ಸವ ಹಿನ್ನೆಲೆಯಲ್ಲಿ ಭದ್ರತೆ ದೃಷ್ಟಿಯಿಂದ ಮುಂಜಾಗ್ರತೆಯಾಗಿ ರಾಜಧಾನಿಯಲ್ಲಿ ಡ್ರೋನ್, ಪ್ಯಾರಾಗ್ಲೈಡರ್, ಹಾಟ್ ಏರ್ ಬಲೂನ್‌ಗಳ ಹಾರಾಟವನ್ನು ದೆಹಲಿ ಪೊಲೀಸರು ನಿಷೇಧಿಸಿದ್ದಾರೆ.

ಫೆ.15ರವರೆಗೂ ನಿಷೇಧಾಜ್ಞೆ ಜಾರಿಯಲ್ಲಿರುತ್ತದೆ. ಅಸಾಂಪ್ರದಾಯಿಕ ವೈಮಾನಿಕ ಪರಿಕರ ಬಳಸಿ ವಿಧ್ವಂಸಕ ಶಕ್ತಿಗಳು ಜನತೆ, ಆಹ್ವಾನಿತರಿಗೆ ಅಪಾಯ ಒಡ್ಡಬಹುದು ಎಂಬ ಹಿನ್ನೆಲೆಯಲ್ಲಿ ಈ ಕ್ರಮವಹಿಸಿದೆ ಎಂದು ತಿಳಿಸಿದೆ.

ಬ್ಯಾಕ್‌ಲಾಗ್ ಹುದ್ದೆ ಮೀಸಲಾತಿ ಪರಿಷ್ಕರಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ಹುದ್ದೆಗಳಲ್ಲಿ ಪರಿಶಿಷ್ಟರಿಗೆ ಮೀಸಲಾತಿ ಪ್ರಮಾಣ ಹೆಚ್ಚಿಸಿ ಸರ್ಕಾರ ಇತ್ತೀಚೆಗೆ ಹೊರಡಿಸಿದ ಆದೇಶದ ಅನ್ವಯ, ಬ್ಯಾಕ್‌ಲಾಗ್ ಹುದ್ದೆಗಳಿಗೆ ಮುಂಬಡ್ತಿ ನೀಡುವಾಗ 100 ಹುದ್ದೆಗಳಲ್ಲಿ 29 ಹುದ್ದೆಗಳನ್ನು ಪರಿಶಿಷ್ಟ ಜಾತಿಗೆ (ಎಸ್‌ಸಿ), 7 ಹುದ್ದೆಗಳನ್ನು ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಮೀಸಲಿರಿಸಿ ಆದೇಶ ಹೊರಡಿಸಬೇಕು’ ಎಂದು ಆಗ್ರಹಿಸಿ ಮುಖ್ಯ ಕಾರ್ಯದರ್ಶಿಗೆ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘ ಮನವಿ ಸಲ್ಲಿಸಿದೆ.

‘2015 ಮಾರ್ಚ್ 4ರ ಸರ್ಕಾರಿ ಆದೇಶದಂತೆ, ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ಒಂದು ವೃತ್ತದ 33 ಹುದ್ದೆಗಳಲ್ಲಿ ಎಸ್‌ಸಿಗೆ 9 ಹುದ್ದೆ, ಎಸ್‌ಟಿಗೆ 1 ಹುದ್ದೆಯನ್ನು ನೀಡಲಾಗುತ್ತಿತ್ತು. ಅಂದರೆ, ಮೂರು ವೃತ್ತಗಳಲ್ಲಿ 99 ಹುದ್ದೆಗೆ ಎಸ್‌ಸಿ 27, ಎಸ್‌ಟಿ 3 ಹುದ್ದೆಗಳು ಲಭ್ಯ ಆಗುತ್ತಿದ್ದವು. ಪ್ರಸ್ತುತ 33 ಹುದ್ದೆಯ ಬದಲು 100 ಹುದ್ದೆಯನ್ನು ಒಂದು ವೃತ್ತ ಎಂದು ಪರಿಗಣಿಸಿ ಮೀಸಲಾತಿ ಪ್ರಮಾಣವನ್ನು ಎಸ್‌ಸಿಗೆ 15, ಎಸ್‌ಟಿಗೆ 7 ಆಗಿ ಹೆಚ್ಚಿಸಲಾಗಿದೆ. ಅದಕ್ಕೆ ಅನುಗುಣವಾಗಿ ಬ್ಯಾಕ್‌ಲಾಗ್ ಹುದ್ದೆಗಳಲ್ಲೂ ಮೀಸಲಾತಿ ಪ್ರಮಾಣ ಹೆಚ್ಚಿಸಬೇಕು’ ಎಂದು ಮನವಿಯಲ್ಲಿ ಸಂಘದ ಅಧ್ಯಕ್ಷ ಡಿ. ಚಂದ್ರಶೇಖರಯ್ಯ ಆಗ್ರಹಿಸಿದ್ದಾರೆ.

‘ಅರ್ಹ ಪರಿಶಿಷ್ಟ ಜಾತಿ, ಪಂಗಡದವರು ಲಭ್ಯ ಇಲ್ಲದೇ ಇದ್ದಾಗ, ಆ ಹುದ್ದೆಗಳನ್ನು ಮುಂಬಡ್ತಿ ಸಂದರ್ಭದಲ್ಲಿ ಸಾಮಾನ್ಯ ವರ್ಗದವರಿಗೆ ನೀಡಲಾಗುತ್ತಿದೆ. ಅಂಥ ಹುದ್ದೆಗಳನ್ನು ಬ್ಯಾಕ್‌ಲಾಗ್ ಹುದ್ದೆಗಳು ಎಂದು ಪರಿಗಣಿಸಲಾಗುತ್ತದೆ. ಇದೀಗ ಪರಿಷ್ಕೃತ ಮೀಸಲಾತಿ ಪ್ರಮಾಣವನ್ನು ಅನ್ವಯ ಮಾಡಿ ಬ್ಯಾಕ್‌ಲಾಗ್ ಹುದ್ದೆಗಳ ಮೀಸಲಾತಿ ಆದೇಶ ಹೊರಡಿಸಬೇಕು’ ಎಂದೂ ಅವರು ಮನವಿಯಲ್ಲಿ ಆಗ್ರಹಿಸಿದ್ದಾರೆ.

ಅತ್ಯಾಚಾರ: ಮೂವರು ಆರೋಪಿಗಳ ಸೆರೆ

ವಿಜಯಪುರ: ನಗರದಲ್ಲಿ ಜ.17ರಂದು ನರ್ಸ್ ಒಬ್ಬರ ಮೇಲೆ ನಡೆದ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಬಂಧಿಸಿರುವುದಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಚ್. ಡಿ.ಆನಂದಕುಮಾರ್ ತಿಳಿಸಿದ್ದಾರೆ.

ನಗರದ ನಿವಾಸಿಗಳಾದ ಅಯಾಜ್ ಅಹಮದ್ ಜಮಾದಾರ, ಉಮರ್ ಫಾರೂಕ್, ರಾಹಿಲ್ ಬಂಧಿತರು.

‘ರಾತ್ರಿ ಯುವತಿಯು ಇಂಡಿಗೆ ಹೋಗುವ ಬಸ್‌ಗಾಗಿ ಕಾಯುತ್ತಿದ್ದಾಗ ಆರೋಪಿಗಳು, ಯುವತಿಯನ್ನು ಪುಸಲಾಯಿಸಿ ಬಸ್ ನಿಲ್ದಾಣಕ್ಕೆ ಬಿಡುವುದಾಗಿ ಹೇಳಿ ಕರೆದುಕೊಂಡು ಹೋಗಿ ನಿರ್ಜನ ಪ್ರದೇಶದಲ್ಲಿ ಅತ್ಯಾಚಾರ ನಡೆಸಿದ್ದರು. ಯುವತಿ ಮಾನಸಿಕ ಅಸ್ವಸ್ಥೆ’ ಎಂದು ಎಸ್ಪಿ ತಿಳಿಸಿದರು.

ನಿಧನ ವಾರ್ತೆ

ಸತೀಶ್ ಬಕ್ಷಿ

ಬೆಂಗಳೂರು: ನಮ್ಮನೆ ಇಂಡಸ್ಟ್ರೀಸ್‌ನ ಸಹಸ್ಥಾಪಕ, ಬನಶಂಕರಿ ನಿವಾಸಿ ಸತೀಶ್ ಬಕ್ಷಿ (59) ಅವರು ಭಾನುವಾರ ನಿಧನರಾದರು.

ಅವರು ಅಲ್ಪಕಾಲದ ಅನಾರೋಗ್ಯದಿಂದ ಬಳಲುತ್ತಿದ್ದರು. ಸೋಮವಾರ ಅಂತ್ಯಕ್ರಿಯೆ ಜರುಗಿತು. ಅವರಿಗೆ ಪತ್ನಿ ಮತ್ತು ಪುತ್ರ ಇದ್ದಾರೆ.

2 ಎ ಮೀಸಲಾತಿಗೆ ಬಲಿಜರ ಆಗ್ರಹ

ಬೆಂಗಳೂರು: ಬಲಿಜ ಸಮುದಾಯಕ್ಕೆ ಪೂರ್ಣಪ್ರಮಾಣದ 2ಎ ಮೀಸಲಾತಿ ಸೌಲಭ್ಯ ಕಲ್ಪಿಸಬೇಕೆಂದು ಕರ್ನಾಟಕ ರಾಜ್ಯ ಸಮಗ್ರ ಬಲಿಜ ವೇದಿಕೆ ಆಗ್ರಹಿಸಿದೆ.

‘ಚನ್ನಪ್ಪರೆಡ್ಡಿ ಹಾಗೂ ಹಾವನೂರು ಆಯೋಗದ ವರದಿಯಲ್ಲಿ ಬಲಿಜ ಸಮುದಾಯಕ್ಕೆ ಪ್ರವರ್ಗ 2ಎ ಮೀಸಲಾತಿ ಸೌಲಭ್ಯವನ್ನು ನೀಡಬೇಕೆಂದು ಈಗಾಗಲೇ ಸರ್ಕಾರಕ್ಕೆ ಶಿಫಾರಸು ಮಾಡಿವೆ. ಆದ್ದರಿಂದ, ಸರ್ಕಾರ ಬಜೆಟ್‌ಗೂ ಮುನ್ನ ಪೂರ್ಣಪ್ರಮಾಣದ 2ಎ ಮೀಸಲಾತಿ ಘೋಷಿಸಬೇಕು’ ಎಂದು ವೇದಿಕೆ ಪ್ರಧಾನ ಕಾರ್ಯದರ್ಶಿ ಎಸ್. ರಮೇಶ ಆಗ್ರಹಿಸಿದ್ದಾರೆ.

‘ವಿಧಾನಸಭೆಯ ಚುನಾವಣೆಯ 54 ಕ್ಷೇತ್ರಗಳಲ್ಲಿ ಬಲಿಜ ಜನಾಂಗದ ಮತಗಳು ನಿರ್ಣಾಯಕ ಪಾತ್ರವಹಿಸುತ್ತವೆ. ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಸಮುದಾಯದ ಅಭ್ಯರ್ಥಿಗಳಿಗೆ ಸ್ಪರ್ಧಿಸಲು ಅವಕಾಶ ನೀಡಬೇಕು’ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

केनरा बैंक Canara Bank
A Government of India Undertaking
सिंडिकेट Syndicate
ನಿರ್ವಹಣಾ ವಿಭಾಗ, ಜಿಎ ವಿಂಗ್, ಮುಖ್ಯ ಕಚೇರಿ, 112, ಜೆ.ಸಿ.ರಸ್ತೆ, ಬೆಂಗಳೂರು-560002
ಕಾರುಗಳು ಮಾರಾಟಕ್ಕಿವೆ
5 ಬ್ಯಾಂಕ್ ಬಳಸಿದ ಕಾರುಗಳು ‘ಎಲ್ಲಿ ಹೇಗಿವೆಯೋ, ಅದೇ ರೀತಿ’ಯಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ. ಹೆಚ್ಚಿನ ವಿವರಗಳು ಹಾಗೂ ಇತರೆ ನಿಯಮ ಮತ್ತು ನಿಬಂಧನೆಗಳಿಗಾಗಿ https://canarabank.com/tenders.aspx ಗೆ ಭೇಟಿ ನೀಡಿ. ಯಾವುದೇ ಸ್ಪಷ್ಟೀಕರಣಗಳಿಗೆ ಸಂಪರ್ಕಿಸಿ: 080–22239079/22221581–ವಿಸ್ತರಣೆ 314/335. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14.02.2023ರ ಸಂಜೆ 5.00 ಗಂಟೆ.
ದಿ: 24.01.2023 ಸಹಿ/- ಸಹಾಯಕ ಪ್ರಧಾನ ವ್ಯವಸ್ಥಾಪಕರು





ಸುಳ್ಳು ಪ್ರಕರಣ: ಹೇಳಿಕೆ ದಾಖಲಿಸಿದ 'ಸ್ಯಾಂಟ್ರೊ' ಪತ್ನಿ

ಬೆಂಗಳೂರು: 'ಕಾಟನ್‌ಪೇಟೆ ಠಾಣೆಯಲ್ಲಿ ಸುಳ್ಳು ಪ್ರಕರಣ ದಾಖಲಿಸಿ ಸಹೋದರಿಯರನ್ನು ಬಂಧಿಸಿದ್ದ' ಪ್ರಕರಣದ ತನಿಖೆಯನ್ನು ಸಿಸಿಬಿ ಪೊಲೀಸರು ಚುರುಕುಗೊಳಿಸಿದ್ದು, ಪ್ರಕರಣದ ಸಂತ್ರಸ್ತೆ ವಿಚಾರಣೆಗೆ ಹಾಜರಾಗಿ ಹೇಳಿಕೆ ದಾಖಲಿಸಿದ್ದಾರೆ.

ಪರಿಶಿಷ್ಟ ಸಮುದಾಯದ ಮಹಿಳೆ ಮೇಲೆ ಅತ್ಯಾಚಾರವೆಸಗಿ ಹಲ್ಲೆ ಮಾಡಿ ಕೊಲೆ ಬೆದರಿಕೆಯೊಡ್ಡಿದ್ದ ಪ್ರಕರಣದ ಆರೋಪಿ ಕೆ.ಎಸ್. ಮಂಜುನಾಥ್ ಅಲಿಯಾಸ್ ಸ್ಯಾಂಟ್ರೊ ರವಿ ಸಂಚಿನಲ್ಲಿ ಭಾಗಿಯಾಗಿದ್ದ ಪೊಲೀಸ್ ಇನ್‌ಸ್ಪೆಕ್ಟರ್ ಪ್ರವೀಣ್, ಸುಳ್ಳು ಪ್ರಕರಣ ದಾಖಲಿಸಿದ್ದರು. ಈ ಸಂಬಂಧ ಪ್ರವೀಣ್ ಅವರನ್ನು ಈಗಾಗಲೇ ಸೇವೆಯಿಂದ ಅಮಾನತು ಮಾಡಲಾಗಿದ್ದು, ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿದೆ.

ಸುಳ್ಳು ಪ್ರಕರಣದಲ್ಲಿ ಬಂಧಿತರಾಗಿದ್ದ ಸ್ಯಾಂಟ್ರೊ ಪತ್ನಿ ಹಾಗೂ ಅವರ ಸಹೋದರಿ, ಚಾಮರಾಜಪೇಟೆಯಲ್ಲಿರುವ ಸಿಸಿಬಿ ಕಚೇರಿಗೆ ಸೋಮವಾರ ಹಾಜರಾಗಿ ಹೇಳಿಕೆ ದಾಖಲಿಸಿದರು.

'ಕೆನರಾ ಬ್ಯಾಂಕ್‌ನಲ್ಲಿ ಖಾತೆ ಹೊಂದಿದ್ದೇನೆ. ನನ್ನ ಖಾಲಿ ಚೆಕ್ ಹಾಗೂ ಮೊಬೈಲ್ ಕದ್ದಿದ್ದ ಪತಿ (ಸ್ಯಾಂಟ್ರೊ ರವಿ), ಅವುಗಳನ್ನೇ ಪುರಾವೆಯನ್ನಾಗಿ ಮಾಡಿಸಿ ಇನ್‌ಸ್ಪೆಕ್ಟರ್ ಮೂಲಕ ಸುಳ್ಳು ಪ್ರಕರಣ ದಾಖಲಿಸಿದ್ದರು. ನಮಗೆ ಸಂಬಂಧವಿಲ್ಲದ ಪ್ರಕರಣದಲ್ಲಿ ಸಿಲುಕಿಸಿ, ಜೈಲಿಗೆ ಕಳುಹಿಸಿದ್ದರು' ಎಂದು ಸಂತ್ರಸ್ತೆ ಹೇಳಿಕೆ ನೀಡಿರುವುದಾಗಿ ಗೊತ್ತಾಗಿದೆ.

'ಸುಳ್ಳು ಪ್ರಕರಣ ಸಂಬಂಧ ಈಗಾಗಲೇ ಹಲವರ ವಿಚಾರಣೆ ನಡೆಸಲಾಗಿದೆ. ಈಗ ಸಂತ್ರಸ್ತೆ ಹೇಳಿಕೆ ಪಡೆಯಲಾಗಿದೆ. ಇನ್‌ಸ್ಪೆಕ್ಟರ್ ಹಾಗೂ ಇತರರನ್ನು ಸದ್ಯದಲ್ಲೇ ವಿಚಾರಣೆ ಮಾಡಲಾಗುವುದು' ಎಂದು ಸಿಸಿಬಿ ಮೂಲಗಳು ಹೇಳಿವೆ.

IN THE COURT OF THE 39th ADDITIONAL CITY CIVIL AND SESSIONS JUDGE AT BANGALORE (CCH-40)

Miscellaneous. No. 20/2019

Between: Sri S. Ramesh, S/o late Shamanna, aged about 47 years, R/at. No. 129, 14th A Cross, Nagavarapalya, Yellamma Street, C.V. Raman Nagar Post, Bangalore-560094. **...Petitioner**

And: Smt. Krishnaveni ...Respondent

NOTICE TO RESPONDENT UNDER ORDER 5 RULE 20(2) OF CPC

Smt. Krishnaveni W/o late Rajamanickam, Ages about 66 years, R/at Nagavarapalya, C.V. Raman Nagar Post, Bangalore-560 093.

Whereas the petitioner has filed the above miscellaneous petition for the relief of set aside the order of dismissal in OS. No. 7703/2017 on 06.12.2018 against the respondent. The respondent hereby summoned to appear before the respondent Before the Hob'ble 39th Additional City Civil and Sessions Judge at Bangalore (CCH-40) **on 30.01.2023 at 11.00 A.M.** either in person or through Pleader in support of her case. Take notice, that in case of default the matter will be heard and decided in your absence.

Given under my hand and seal of this Authority, on this 27-09-2022 at Bangalore.

By order of the Court, Assistant Registrar, City Civil Court, Bengaluru.

Advocate for Petitioner:
S. RAMAMURTHY
Office at: No.57, 9th Cross, 2nd Block, Jayanagar, Bangalore - 560 027.

ತಿದ್ದುಪಡಿ

ಲಿಕ್ವಿಡೇಶನ್‌ನಲ್ಲಿರುವ ಕೊಟಕ್ ಊರ್ಜಾ ಪ್ರೈವೇಟ್ ಲಿಮಿಟೆಡ್ ಖಾತೆಗೆ ಸಂಬಂಧಿಸಿದಂತೆ ಈ ಪತ್ರಿಕೆಯಲ್ಲಿ ದಿನಾಂಕ **23.01.2023** ರಂದು ಪ್ರಕಟಗೊಂಡಿದ್ದ **ಇ-ಹರಾಜು ಮಾರಾಟ ಪ್ರಕಟಣೆ** ಸಂಬಂಧಿಸಿದಂತೆ ಈ ಮೂಲಕ ತಿಳಿಸುವುದು ಏನೆಂದರೆ, ಸದರಿ ಪ್ರಕಟಣೆಯ **ಕ್ರಮ.ಸಂ.5 ಪ್ರಾಪರ್ಟಿಯಲ್ಲಿ** ಒಂದು ದೋಷ ಉಂಟಾಗಿರುತ್ತದೆ: ನೀಲಮಂಗಲ ಕೈಗಾರಿಕಾ ನಿವೇಶನ (ಖಾಲಿ ಎನ್‌ಎ ಜಮೀನು) ಮೀಸಲು ಬೆಲೆ ಎಂಬುದನ್ನು ರೂ. ಎರಡು **ಕೋಟಿ ಹತ್ತು ಲಕ್ಷ (2,10,00,000)** ಮತ್ತು ಇಎಂಡಿ ಮೊತ್ತ ರೂ. **ಇಪ್ಪತ್ತು ಲಕ್ಷ (20,00,000)** ಎಂಬುದಾಗಿ ಓದಿಕೊಳ್ಳಬೇಕು. ಸದರಿ ನೋಟಿಸ್‌ನಲ್ಲಿ ಉಲ್ಲೇಖಿತ ಇನ್ನಿತರ ಅಂಶಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಮುಂಬೈ, 24-01-2023 ಸಹಿ/- ದೇವರಾಜನ್ ರಾಮನ್, ಲಿಕ್ವಿಡೇಟರ್

ನೈಋತ್ಯ ರೈಲ್ವೆ G20

ಟೆಂಡರ್ ಸೂಚನೆ ಸಂ. 20-S&T/MYS/2022
ದಿನಾಂಕ: 19.01.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	ಮೂರು ವರ್ಷಗಳ ಅವಧಿಗೆ ಮೈಸೂರು ವಿಭಾಗದ ಪಾಂಡವಪುರ ಮತ್ತು ಬ್ಯಾಡರಹಳ್ಳಿ ನಿಲ್ದಾಣದಲ್ಲಿ ಸ್ಥಾಪಿಸಲಾದ ಸೀಮೆನ್ಸ್ ನಿರ್ಮಾಣದ ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್ (ಇಐ) ಗೆ ಸಮಗ್ರ ವಾರ್ಷಿಕ ನಿರ್ವಹಣೆ ಒಪ್ಪಂದ.	ರೂ. 48,72,600/-
2	ಮೂರು ವರ್ಷಗಳ ಅವಧಿಗೆ ಚಿಕ್ಕಜಾಜೂರ್ ಜಂ. ನಿಲ್ದಾಣದಲ್ಲಿ ಸ್ಥಾಪಿಸಲಾದ ಮೇಧಾ ಸರ್ವೋ ಡ್ರೈವ್ಸ್ ಪ್ರೈವೇಟ್ ಲಿಮಿಟೆಡ್‌ನ ನಿರ್ಮಾಣದ ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್ ಸಿಸ್ಟಮ್ (ವಿತರಣಾ ಸ್ಥಾಪನೆ) ಗಾಗಿ ಸಮಗ್ರ ವಾರ್ಷಿಕ ನಿರ್ವಹಣೆ ಒಪ್ಪಂದ.	ರೂ. 33,03,900/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 13-02-2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಾಂ ಇಂಜಿನೀಯರ್ ಮೈಸೂರು

PUB/625/AAV/PRB/SWR/2022-23

S.W.Railways SWRRLY SWRRLY

12 ಅಲೆಕ್ಸಾಂಡ್ರಿಯಾ ಗಿಳಿಗಳ ರಕ್ಷಣೆ

ಬೆಂಗಳೂರು: ಚೆನ್ನೈನಿಂದ ಬೆಂಗಳೂರಿಗೆ ಖಾಸಗಿ ಬಸ್‌ಗಳಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ 12 ಅಲೆಕ್ಸಾಂಡ್ರಿಯಾ ಗಿಳಿಗಳನ್ನು ಸಿಐಡಿ ಅರಣ್ಯ ವಿಭಾಗದ ಪೊಲೀಸರು ರಕ್ಷಿಸಿದ್ದು, ಪ್ರಕರಣ ಸಂಬಂಧ ನಾಲ್ವರನ್ನು ಬಂಧಿಸಿದ್ದಾರೆ.

ತಮಿಳುನಾಡಿನ ಖಾಸಗಿ ಕಂಪನಿ ಉದ್ಯೋಗಿ ಅಬುರಾರ್ (27), ಬಸ್ ಚಾಲಕ ಗುರುವಾಯೂರಪ್ಪನ್ (40), ಬೆಂಗಳೂರು ನೀಲಸಂದ್ರದ ಬಿ.ಕಾಂ. ವಿದ್ಯಾರ್ಥಿ ಮಿರ್ಜಾ ಮೊಹಮ್ಮದ್ (20) ಹಾಗೂ ಮಂಡ್ಯ ಜಿಲ್ಲೆಯ ನಾಗಮಂಗಲದ ಕೃಷ್ಣ (24) ಬಂಧಿತರು.

'ಗಿಳಿಗಳನ್ನು ಹಿಡಿಯುತ್ತಿದ್ದ ಆರೋಪಿಗಳು, ಬೆಂಗಳೂರು ಹಾಗೂ ವಿವಿಧ ನಗರಗಳ ವ್ಯಾಪಾರಿಗಳಿಗೆ ಪೂರೈಕೆ ಮಾಡುತ್ತಿದ್ದರು. ರಕ್ಷಿಸಲಾದ ಗಿಳಿಗಳನ್ನು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಸುಪರ್ದಿಗೆ ನೀಡಲಾಗಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಅಖಂಡ' ಕೋಟೆ ಕೆಡವಲು ಇನ್ನಿಲ್ಲದ ಕಸರತ್ತು'

• ರಾಜೇಶ್ ರೈ ಚಟ್ಲ

ಪ್ರಜಾ ಮತ ಜನತಂತ್ರದ ಹಬ್ಬ — ಕರ್ನಾಟಕ ವಿಧಾನಸಭಾ ಚುನಾವಣೆ - 2023

ಕ್ಷೇತ್ರ ಸ್ಥಿತಿ–ಗತಿ

ಬೆಂಗಳೂರು: ಯಲಹಂಕ ವಿಧಾನಸಭಾ ಕ್ಷೇತ್ರದ ಭಾಗವಾಗಿದ್ದ ಪುಲಕೇಶಿನಗರ, ಕ್ಷೇತ್ರ ಪುನರ್ ವಿಂಗಡಣೆ ಬಳಿಕ, 2008ರಲ್ಲಿ ಪ್ರತ್ಯೇಕ ವಿಧಾನಸಭಾ ಕ್ಷೇತ್ರವಾಯಿತು. ಅವಿಭಜಿತ ಯಲಹಂಕ ಕ್ಷೇತ್ರವನ್ನು ಬೂಸಾ ಚಳವಳಿಯ ಹರಿಕಾರ ದಿವಂಗತ ಬಸವಲಿಂಗಪ್ಪ ಪ್ರತಿನಿಧಿಸಿದ್ದರು. ಸದ್ಯ ಕಾಂಗ್ರೆಸ್‌ನ ಅಖಂಡ ಶ್ರೀನಿವಾಸಮೂರ್ತಿ ಇಲ್ಲಿನ ಶಾಸಕರು. ಕ್ಷೇತ್ರ ವ್ಯಾಪ್ತಿಯ ಕೆ.ಜಿ. ಹಳ್ಳಿ, ಡಿ.ಜೆ. ಹಳ್ಳಿಯಲ್ಲಿ 2020ರಲ್ಲಿ ನಡೆದ ಗಲಾಟೆಯನ್ನು ಯಾರೂ ಮರೆಯಲು ಸಾಧ್ಯ ಇಲ್ಲ.

ವಿಧಾನಸೌಧದಿಂದ ಕೆಲವೇ ಕಿಲೋಮೀಟರ್ ದೂರದಲ್ಲಿ ಈ ಕ್ಷೇತ್ರ ಇದ್ದರೂ, ಶೇ 65 ರಷ್ಟು ಭಾಗ ಕೊಳೆಗೇರಿಯಿಂದಲೇ ತುಂಬಿದೆ. ಅದೇ ದೊಡ್ಡ ಸಮಸ್ಯೆ. ಮುಖ್ಯರಸ್ತೆಗಳನ್ನು ಹೊರತುಪಡಿಸಿದರೆ, ಇತರ ಭಾಗಗಳು ಸಮರ್ಪಕವಾಗಿ ಅಭಿವೃದ್ಧಿಗೊಂಡಿಲ್ಲ. ಶೇ 80ರಷ್ಟು ಪ್ರದೇಶ ಯೋಜನಾಬದ್ಧವಾಗಿಲ್ಲ. ಚಾಲುಕ್ಯವಂಶದ ರಾಜ 'ಪುಲಕೇಶಿ' ಹೆಸರಿನ ಕ್ಷೇತ್ರ ಒಂದು ಕಾಲದಲ್ಲಿ ಚರ್ಮೋದ್ಯಮಕ್ಕೆ ಹೆಸರಾಗಿತ್ತು. ಇಲ್ಲಿನ ಟ್ಯಾನರಿ (ಚರ್ಮ) ರಸ್ತೆಯುದ್ದಕ್ಕೂ ಗುಜರಿ, ಮಾಂಸದ ಅಂಗಡಿಗಳ ಸಾಲು. ಇಲ್ಲಿ ಕನ್ನಡಕ್ಕಿಂತ ಅನ್ಯ ಭಾಷಿಗರದ್ದೇ ಪ್ರಾಬಲ್ಯ.

ಬಿ. ಬಸವಲಿಂಗಪ್ಪನವರ ಅವರ ಮಗ ಬಿ. ಪ್ರಸನ್ನಕುಮಾರ್ ಇಲ್ಲಿ ಕಾಂಗ್ರೆಸ್‌ನಿಂದ 2 ಬಾರಿ ಗೆದ್ದಿದ್ದಾರೆ. ಆದರೆ, 2013ರಲ್ಲಿ ಜೆಡಿಎಸ್‌ನಿಂದ ಕಣಕ್ಕಿಳಿದ್ದ ಅಖಂಡ ಶ್ರೀನಿವಾಸ ಮೂರ್ತಿ ವಿರುದ್ಧ ಸೋತಿದ್ದರು. ರಾಜ್ಯಸಭೆಗೆ ನಡೆದ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿ, ಜೆಡಿಎಸ್‌ನಿಂದ ಅಮಾನತುಗೊಂಡು ಕಾಂಗ್ರೆಸ್ ಸೇರಿದ್ದ ಏಳು ಶಾಸಕರಲ್ಲಿ ಅಖಂಡ ಶ್ರೀನಿವಾಸಮೂರ್ತಿ ಕೂಡಾ ಒಬ್ಬರು. ಹೀಗಾಗಿ, 2018ರ ಚುನಾವಣೆಯಲ್ಲಿ ಕಾಂಗ್ರೆಸ್ ಅಖಂಡ ಶ್ರೀನಿವಾಸ ಮೂರ್ತಿಗೆ ಮಣೆ ಹಾಕಿತ್ತು. ಕಾಂಗ್ರೆಸ್ ಟಿಕೆಟ್ ವಂಚಿತ ಪ್ರಸನ್ನಕುಮಾರ್ ಜೆಡಿಎಸ್ ಪಾಳಯಕ್ಕೆ ಜಿಗಿದು ಕಣಕ್ಕಿಳಿದಿದ್ದರು. ಆದರೆ, 80ಸಾವಿರಕ್ಕೂ ಹೆಚ್ಚು ಮತಗಳ ದಾಖಲೆಯ ಅಂತರದಿಂದ ಶ್ರೀನಿವಾಸಮೂರ್ತಿ ಆಯ್ಕೆಯಾಗಿದ್ದರು.

'ಪ್ರವಾದಿ ಮೊಹಮ್ಮದ್ ಪೈಗಂಬರ್ ಅವರ ಬಗ್ಗೆ ಅವಹೇಳನಕಾರಿ ಪೋಸ್ಟ್ ಪ್ರಕಟಿಸಲಾಗಿದೆ' ಎಂದು ಆರೋಪಿಸಿ ನೂರಾರು ಜನರು, ಕೆ.ಜಿ. ಹಳ್ಳಿ, ಡಿ.ಜೆ.ಹಳ್ಳಿ ಹಾಗೂ ಕಾವಲ್ ಭೈರಸಂದ್ರದಲ್ಲಿ 2020ರ ಆಗಸ್ಟ್ 10ರಂದು ವಾಹನಗಳಿಗೆ ಬೆಂಕಿಹಚ್ಚಿ, ಪೊಲೀಸ್ ಠಾಣೆಯ ಮೇಲೆ ದಾಳಿ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ಪೊಲೀಸರ ಗುಂಡೇಟಿಗೆ ಮೂವರು ಮೃತಪಟ್ಟಿದ್ದರು. ಹಿಂಸಾಚಾರದಲ್ಲಿ ಹಲವರು ಗಾಯಗೊಂಡಿದ್ದರು. ಅಖಂಡ ಶ್ರೀನಿವಾಸಮೂರ್ತಿ ಮನೆ ಮೇಲೂ ದಾಳಿ ನಡೆದಿತ್ತು. ಈ ಘಟನೆ ಕಾಂಗ್ರೆಸ್ ಒಳಗೇ ಬೆಂಕಿಗೆ ಕಾರಣವಾಗಿತ್ತು. ಈ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಮಾಜಿ ಮೇಯರ್ ಸಂಪತ್‌ರಾಜ್ ಈ ಘಟನೆ ಹಿಂದಿದ್ದರು ಎಂಬ ಆರೋಪವೂ ಕೇಳಿಬಂದಿತ್ತು.

ಈ ಬಾರಿಯೂ ಟಿಕೆಟ್‌ಗಾಗಿ ಕಾಂಗ್ರೆಸ್‌ನಲ್ಲಿ ಪೈಪೋಟಿ ಎದುರಾಗಿದೆ. ಅಖಂಡ ಶ್ರೀನಿವಾಸ ಮೂರ್ತಿ ಮತ್ತೆ ಟಿಕೆಟ್ ಬಯಸಿದ್ದಾರೆ. ಮತ್ತೊಂದೆಡೆ, ಮರಳಿ 'ಕೈ' ತೆಕ್ಕೆಗೆ ಬಂದಿರುವ ಪ್ರಸನ್ನಕುಮಾರ್ ಕೂಡಾ ಟಿಕೆಟ್ ನಿರೀಕ್ಷೆಯಲ್ಲಿದ್ದಾರೆ. ಸಂಪತ್ ರಾಜ್ ಕೂಡ ಆಕಾಂಕ್ಷಿಯೇ. ಜೆಡಿಎಸ್, ಬಿಜೆಪಿಯಿಂದ ಅಭ್ಯರ್ಥಿ ಯಾರೆಂಬ ಬಗ್ಗೆ ಯಾವುದೇ ಸೂಚನೆ ಇಲ್ಲ. ಕಾಂಗ್ರೆಸ್ ಟಿಕೆಟ್ ಸಿಗದವರು ಜೆಡಿಎಸ್‌ಗೆ ವಾಪಸಾಗುವ ಸಾಧ್ಯತೆಯೂ ಇದೆ. ಮುಸ್ಲಿಂ ಮತಗಳೇ ಇಲ್ಲಿ ನಿರ್ಣಾಯಕ. ಹೀಗಾಗಿ, ಎಸ್‌ಡಿಪಿಐ ಅಭ್ಯರ್ಥಿ ಸೆಳೆಯುವ ಮತಗಳೂ ನಿರ್ಣಾಯಕ.

ಪುಲಕೇಶಿನಗರ



ಅಖಂಡ ಶ್ರೀನಿವಾಸಮೂರ್ತಿ
ಹಾಲಿ ಶಾಸಕ (ಕಾಂಗ್ರೆಸ್)



ಹಾಲಿ ಮತದಾರರ ವಿವರ

1,17,158 ಪುರುಷರು | 1,14,960 ಮಹಿಳೆಯರು | 36 ತೃತೀಯ ಲಿಂಗಿಗಳು | 2,32,154 ಒಟ್ಟು

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಕಾಂಗ್ರೆಸ್	97,574	38,796	39,577
ಬಿಜೆಪಿ	9,479	4,589	11,131
ಜೆಡಿಎಸ್	15,948	48,995	21,908

ನಿಂತಿದ್ದ ಲಾರಿಗೆ ಬೈಕ್ ಡಿಕ್ಕಿ: ಸವಾರ ಸಾವು

ಬೆಂಗಳೂರು: ಹೊರಮಾವು ಅಗರ ಕೆರೆ ಮುಖ್ಯರಸ್ತೆಯಲ್ಲಿ ನಿಲ್ಲಿಸಿದ್ದ ಲಾರಿಗೆ ಬೈಕ್ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದ್ದು, ಸವಾರ ಹೊನ್ನಪ್ಪ ಪೂಜಾರಿ (26) ಮೃತಪಟ್ಟಿದ್ದಾರೆ.

'ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಹದನೂರಿನ ಹೊನ್ನಪ್ಪ, ಕೆಲ ವರ್ಷಗಳ ಹಿಂದೆಯಷ್ಟೇ ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಟ್ರ್ಯಾಕ್ಟರ್ ಚಾಲಕ ಹಾಗೂ ಕೂಲಿ ಕಾರ್ಮಿಕರಾಗಿ ಕೆಲಸ ಆರಂಭಿಸಿದ್ದರು' ಎಂದು ಬಾಣಸವಾಡಿ ಸಂಚಾರ ಪೊಲೀಸರು ಹೇಳಿದರು.

ಧಾರವಾಡದ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾದಲ್ಲಿ ಅಕ್ರಮ– ಎಫ್‌ಐಆರ್

₹ 5.78 ಕೋಟಿ ದುರ್ಬಳಕೆ ಆರೋಪ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಹಿಂದಿ ಭಾಷೆ ಕಲಿಕೆಯನ್ನು ಉತ್ತೇಜಿಸುವುದಕ್ಕಾಗಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ್ದ ₹ 5.78 ಕೋಟಿಯನ್ನು ಅನ್ಯ ಉದ್ದೇಶಕ್ಕೆ ಅಕ್ರಮವಾಗಿ ಬಳಸಿಕೊಂಡಿರುವ ಆರೋಪದ ಮೇಲೆ ಧಾರವಾಡದ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ (ಡಿಬಿಎಚ್‌ಪಿಎಸ್) ಮಾಜಿ ಕಾರ್ಯಾಧ್ಯಕ್ಷ ಶಿವಯೋಗಿ ನೀರಲಕಟ್ಟಿ ಮತ್ತು ಇತರರ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಿದೆ.

ಚೆನ್ನೈನಲ್ಲಿರುವ ಡಿಬಿಎಚ್‌ಪಿಎಸ್ ಕೇಂದ್ರ ಕಚೇರಿ ಹಾಗೂ ದಕ್ಷಿಣ ಭಾರತದ ವಿವಿಧೆಡೆ ಇರುವ ಪ್ರಾದೇಶಿಕ ಸಂಸ್ಥೆಗಳಲ್ಲಿ ಅನುದಾನ ದುರ್ಬಳಕೆಯಾಗಿರುವ ಕುರಿತು ಕೇಂದ್ರ ಶಿಕ್ಷಣ ಸಚಿವಾಲಯದ ಜಾಗೃತ ಅಧಿಕಾರಿ ನೀತಾ ಪ್ರಸಾದ್ ಸಿಬಿಐಗೆ 2022ರ ಫೆಬ್ರುವರಿಯಲ್ಲಿ ದೂರು ನೀಡಿದ್ದರು. ಈ ಕುರಿತು ಸಿಬಿಐನ ಮದುರೈ ಭ್ರಷ್ಟಾಚಾರ ನಿಗ್ರಹ ದಳ ಪ್ರಾಥಮಿಕ ತನಿಖೆ ನಡೆಸಿತ್ತು. ತನಿಖಾಧಿಕಾರಿಯಾಗಿದ್ದ ಡಿವೈಎಸ್‌ಪಿ ಎ. ದಂಡಪಾಣಿ ಸಲ್ಲಿಸಿದ್ದ ದೂರು ಆಧರಿಸಿ ಸಿಬಿಐನ ಬೆಂಗಳೂರು ಭ್ರಷ್ಟಾಚಾರ ನಿಗ್ರಹ ದಳ ಗುರುವಾರ ಎಫ್‌ಐಆರ್ ದಾಖಲಿಸಿ, ತನಿಖೆ ಆರಂಭಿಸಿದೆ.

'ಶಾಲಾ, ಕಾಲೇಜುಗಳಲ್ಲಿ ಹಿಂದಿ ಕಲಿಕೆಯನ್ನು ಪ್ರೋತ್ಸಾಹಿಸಲು ವಿಶೇಷ ತರಗತಿ ನಡೆಸಲು, ಹಿಂದಿ ಕೋರ್ಸ್‌ಗಳನ್ನು ಆರಂಭಿಸಲು ಕೇಂದ್ರ ಸರ್ಕಾರ ಡಿಬಿಎಚ್‌ಪಿಎಸ್‌ಗೆ ಅನುದಾನ ಬಿಡುಗಡೆ ಮಾಡುತ್ತಿದೆ. ಶೇ 75ರಷ್ಟು ಅನುದಾನ ಕೇಂದ್ರದಿಂದ ದೊರಕಿದರೆ, ಶೇ 25ರಷ್ಟನ್ನು ಡಿಬಿಎಚ್‌ಪಿಎಸ್ ತನ್ನ ಸ್ವಂತ ಮೂಲದಿಂದ ಬಳಸಬೇಕು. 2004– 2005 ಹಾಗೂ 2016–17ರ ಅವಧಿಯಲ್ಲಿ ಈ ರೀತಿ ಬಿಡುಗಡೆಯಾಗಿದ್ದ ₹ 5.78 ಕೋಟಿಯಷ್ಟು ಮೊತ್ತವನ್ನು ಧಾರವಾಡ ಡಿಬಿಎಚ್‌ಪಿಎಸ್ ಅಧೀನದ ಆಯುರ್ವೇದ ಕಾಲೇಜು, ಹೋಮಿಯೋಪಥಿ ಕಾಲೇಜು, ಕಾನೂನು ಕಾಲೇಜು ಮತ್ತು ಇಂಗ್ಲಿಷ್ ಮಾಧ್ಯಮ ಶಾಲೆಗಳ ಬೋಧಕರು ಹಾಗೂ ಬೋಧಕೇತರ ಸಿಬ್ಬಂದಿಗೆ ವೇತನ ಪಾವತಿಸಿಕೊಂಡಿರುವುದು ಪ್ರಾಥಮಿಕ ತನಿಖೆಯಲ್ಲಿ ಪತ್ತೆಯಾಗಿದೆ' ಎಂಬ ಉಲ್ಲೇಖ ಎಫ್‌ಐಆರ್‌ನಲ್ಲಿದೆ.

ಸಂಸ್ಥೆಯ ಅಧ್ಯಕ್ಷರಾಗಿದ್ದ ಆರ್.ಎಫ್. ನೀರಲಕಟ್ಟಿ, ಅವರ ಮಗ ಶಿವಯೋಗಿ ಆರ್. ನೀರಲಕಟ್ಟಿ (ಕಾರ್ಯಾಧ್ಯಕ್ಷರಾಗಿದ್ದರು) ಹಾಗೂ ಅಧಿಕಾರಿಗಳು ಭಾಗಿಯಾಗಿದ್ದರು ಎಂದು ಆರೋಪಿಸಲಾಗಿದೆ. ಆರ್.ಎಫ್. ನೀರಲಕಟ್ಟಿ ಮೃತಪಟ್ಟಿರುವುದರಿಂದ ಶಿವಯೋಗಿ ಮತ್ತು ಇತರರ ವಿರುದ್ಧ ಮಾತ್ರ ಎಫ್‌ಐಆರ್ ದಾಖಲಿಸಲಾಗಿದೆ.

ವಾಹನ ಗುದ್ದಿ ಸಾಫ್ಟ್‌ವೇರ್ ಎಂಜಿನಿಯರ್ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಸ್‌ಆರ್ ಲೇಔಟ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಭಾನುವಾರ ತಡರಾತ್ರಿ ಅಪಘಾತ ಸಂಭವಿಸಿದ್ದು, ಸಾಫ್ಟ್‌ವೇರ್ ಎಂಜಿನಿಯರ್ ವಿಶ್ವನಾಥ್ ಗೌಡ (42) ಎಂಬುವರು ಮೃತಪಟ್ಟಿದ್ದಾರೆ.

'ದೊಡ್ಡಕನ್ನಲ್ಲಿ ನಿವಾಸಿ ವಿಶ್ವನಾಥ್, ಸಾಫ್ಟ್‌ವೇರ್ ಎಂಜಿನಿಯರ್ ಕೆಲಸ ಮಾಡುತ್ತಿದ್ದರು. ಭಾನುವಾರ ತಡರಾತ್ರಿ ಎ.ಇ.ಟಿ ಕಾಲೇಜು ಕಡೆಯಿಂದ ದೊಡ್ಡಕನ್ನಲ್ಲಿ ಕಡೆಗೆ ನಡೆದುಕೊಂಡು ಹೊರಟಿದ್ದರು. ಇದೇ ವೇಳೆ ಅವರಿಗೆ ವಾಹನವೊಂದು ಡಿಕ್ಕಿ ಹೊಡೆದಿತ್ತು. ತೀವ್ರ ಗಾಯಗೊಂಡು ಅವರು ಅಸುನೀಗಿದ್ದಾರೆ' ಎಂದು ಪೊಲೀಸರು ಹೇಳಿದರು. 'ಅಪಘಾತದ ನಂತರ ವಾಹನ ಸಮೇತ ಚಾಲಕ ಪರಾರಿಯಾಗಿದ್ದು, ಆತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ತಿಳಿಸಿದರು.

ಕರ್ನಾಟಕ ಸರ್ಕಾರ
ಧಾರ್ಮಿಕ ದತ್ತಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಶ್ರೀ ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ,
ಎಸ್.ಎಸ್.ಘಾಟಿ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು , ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಫೋನ್: 08029550091, 08029500191
ಇ-ಮೇಲ್: shrighatisubrahmanyatempleeo@gmail.com
ಸಂಖ್ಯೆ: ಎಸ್‌ಜಿಎಸ್/ಡಿವಿಎಸ್/ಸಿಆರ್/49/2022-23 ದಿನಾಂಕ: 21/01/2023

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ದಿನಾಂಕ 21/01/2023 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಶ್ರೀ ಘಾಟಿಸುಬ್ರಹ್ಮಣ್ಯಸ್ವಾಮಿ ದೇವಾಲಯದ ಅನ್ನದಾಸೋಹಕ್ಕೆ ಅವಶ್ಯಕವಾಗಿರುವ ದಿನಸಿ ಸಾಮಗ್ರಿಗಳನ್ನು ಸರಬರಾಜು ಮಾಡಲು ಆಸಕ್ತಿಯುಳ್ಳ ಸಂಸ್ಥೆಗಳಿಂದ ಟೆಂಡರ್‌ಗಳನ್ನು www.eproc.karnataka.gov.in ವೆಬ್‌ಸೈಟ್‌ನಲ್ಲಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಧಿಕಾರಿ, ಶ್ರೀಘಾಟಿಸುಬ್ರಹ್ಮಣ್ಯಸ್ವಾಮಿ ದೇವಾಲಯ ರವರ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/- **ಕಾರ್ಯನಿರ್ವಾಹಕ ಅಧಿಕಾರಿ,** ಶ್ರೀ ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ ಎಸ್. ಎಸ್. ಘಾಟಿ
ಸಹಿ/- **ಆಡಳಿತಾಧಿಕಾರಿ,** ಶ್ರೀ ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ ಎಸ್. ಎಸ್. ಘಾಟಿ

ಕರ್ನಾಟಕ ಸರ್ಕಾರ
ಧಾರ್ಮಿಕ ದತ್ತಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಶ್ರೀ ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ,
ಎಸ್.ಎಸ್.ಘಾಟಿ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು , ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಫೋನ್: 08029550091, 08029500191
ಇ-ಮೇಲ್: shrighatisubrahmanyatempleeo@gmail.com
ಸಂಖ್ಯೆ: ಎಸ್‌ಜಿಎಸ್/ಡಿವಿಎಸ್/ಸಿಆರ್/06/2016-17 ದಿನಾಂಕ: 21/01/2023

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ದಿನಾಂಕ 21/01/2023 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಶ್ರೀ ಘಾಟಿಸುಬ್ರಹ್ಮಣ್ಯಸ್ವಾಮಿ ದೇವಾಲಯಕ್ಕೆ ಸೇರಿದ 36 ಅಂಗಡಿಗಳನ್ನು ಪ್ರಸ್ತುತ ಜಾರಿಯಲ್ಲಿರುವ ಮೀಸಲಾತಿ ನಿಯಮಗಳನ್ವಯ ಗುತ್ತಿಗೆ ಆಧಾರದಲ್ಲಿ ಹಂಚಿಕೆ ಮಾಡಲು ಇ-ಟೆಂಡರ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳವರು www.eproc.karnataka.gov.in ವೆಬ್‌ಸೈಟ್‌ನಲ್ಲಿ ಬಿಡ್ಡುಗಳನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಧಿಕಾರಿ, ಶ್ರೀಘಾಟಿಸುಬ್ರಹ್ಮಣ್ಯಸ್ವಾಮಿ ದೇವಾಲಯ ರವರ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/- **ಕಾರ್ಯನಿರ್ವಾಹಕ ಅಧಿಕಾರಿ,** ಶ್ರೀ ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ ಎಸ್. ಎಸ್. ಘಾಟಿ
ಸಹಿ/- **ಆಡಳಿತಾಧಿಕಾರಿ,** ಶ್ರೀ ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ ಎಸ್. ಎಸ್. ಘಾಟಿ

ಕರ್ನಾಟಕ ಸರ್ಕಾರ
ಧಾರ್ಮಿಕ ದತ್ತಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಶ್ರೀ ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ,
ಎಸ್.ಎಸ್.ಘಾಟಿ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು , ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಫೋನ್: 08029550091, 08029500191
ಇ-ಮೇಲ್: shrighatisubrahmanyatempleeo@gmail.com
ಸಂಖ್ಯೆ: ಎಸ್‌ಜಿಎಸ್/ಡಿವಿಎಸ್/ಸಿಆರ್/16/2022-23 ದಿನಾಂಕ: 21/01/2023

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ದಿನಾಂಕ 21/01/2023 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಶ್ರೀಘಾಟಿಸುಬ್ರಹ್ಮಣ್ಯಸ್ವಾಮಿ ದೇವಾಲಯಕ್ಕೆ ಅವಶ್ಯಕವಾಗಿರುವ ಮಾನವ ಸಂಪನ್ಮೂಲ ಸೇವೆಗಳಾದ ಭದ್ರತಾ ಸಿಬ್ಬಂದಿ, ಶುಚಿಗಾರರು, ಅಡುಗೆ ಭಟ್ಟರು, ಅಡುಗೆ ಸಹಾಯಕರು ಮತ್ತು ಸಹಾಯಕರ ಸೇವೆಗಳನ್ನು ಒದಗಿಸಲು ಆಸಕ್ತಿಯುಳ್ಳ ಸಂಸ್ಥೆಗಳಿಂದ ಟೆಂಡರ್‌ಗಳನ್ನು www.eproc.karnataka.gov.in ವೆಬ್‌ಸೈಟ್‌ನಲ್ಲಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಧಿಕಾರಿ, ಶ್ರೀಘಾಟಿಸುಬ್ರಹ್ಮಣ್ಯಸ್ವಾಮಿ ದೇವಾಲಯ ರವರ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/- **ಕಾರ್ಯನಿರ್ವಾಹಕ ಅಧಿಕಾರಿ,** ಶ್ರೀ ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ ಎಸ್. ಎಸ್. ಘಾಟಿ
ಸಹಿ/- **ಆಡಳಿತಾಧಿಕಾರಿ,** ಶ್ರೀ ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ ಎಸ್. ಎಸ್. ಘಾಟಿ

ಪಾಕ್ ಯುವತಿ ಬಂಧನ: ಮನೆ ಮಾಲೀಕನೂ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮವಾಗಿ ನುಸುಳಿದ್ದ ಪಾಕಿಸ್ತಾನದ ಯುವತಿ ಇಕ್ರಾ ಜೀವನಿ (19) ಅವರಿಗೆ ಆಶ್ರಯ ನೀಡಿ ದೇಶದ ಸುರಕ್ಷತೆಗೆ ಧಕ್ಕೆ ತಂದ ಆರೋಪದಡಿ ಮನೆ ಮಾಲೀಕನ ವಿರುದ್ಧವೂ ಬೆಳ್ಳಂದೂರು ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

'ಉತ್ತರ ಪ್ರದೇಶದ ಮುಲಾಯಂ ಸಿಂಗ್ (25) ಎಂಬುವರನ್ನು ಡೇಟಿಂಗ್ ಆ್ಯಪ್ ಮೂಲಕ ಪರಿಚಯ ಮಾಡಿಕೊಂಡಿದ್ದ ಇಕ್ರಾ, ಮದುವೆ ಮಾಡಿಕೊಳ್ಳುವುದಾಗಿ ಹೇಳಿ ಪಾಕಿಸ್ತಾನದಿಂದ ಅಕ್ರಮವಾಗಿ ದೇಶದೊಳಗೆ ನುಸುಳಿದ್ದರು. ಅವರಿಬ್ಬರು ಕೆಲಸ ಅರಸಿ ಬೆಂಗಳೂರಿಗೆ ಬಂದು ಜುನ್ನಸಂದ್ರ ಅಯ್ಯಪ್ಪ ಸ್ವಾಮಿ ದೇವಸ್ಥಾನ ಬಳಿಯ ಮನೆಯಲ್ಲಿ ಬಾಡಿಗೆಗೆ ಇದ್ದರು' ಎಂದು ಪೊಲೀಸರು ಹೇಳಿದರು.

'ಮನೆ ಮಾಲೀಕ ಗೋವಿಂದರೆಡ್ಡಿ, ಬಾಡಿಗೆದಾರರ ಹಿನ್ನೆಲೆ ಬಗ್ಗೆ ವಿಚಾರಣೆ ಮಾಡಿರಲಿಲ್ಲ. ಗುರುತಿನ ಚೀಟಿಗಳನ್ನೂ ಪರಿಶೀಲಿಸಿರಲಿಲ್ಲ. ಹೊರ ದೇಶ ಹಾಗೂ ಹೊರ ರಾಜ್ಯಗಳಿಂದ ಬರುವ ಬಾಡಿಗೆದಾರರ ಬಗ್ಗೆ ಸಂಬಂಧಪಟ್ಟ ಠಾಣೆಗೆ ಮಾಹಿತಿ ನೀಡುವಂತೆ ಸ್ಥಳೀಯರಲ್ಲಿ ಹಲವು ಬಾರಿ ಜಾಗೃತಿ ಮೂಡಿಸಲಾಗಿದೆ. ಇಷ್ಟಾದರೂ ಗೋವಿಂದರೆಡ್ಡಿ, ಬಾಡಿಗೆದಾರರ ಬಗ್ಗೆ ಠಾಣೆಗೆ ಮಾಹಿತಿ ನೀಡಿರಲಿಲ್ಲ' ಎಂದು ತಿಳಿಸಿದರು.

'ಗೋವಿಂದರೆಡ್ಡಿ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅವರನ್ನು ವಿಚಾರಣೆ ನಡೆಸಲಾಗುತ್ತಿದೆ' ಎಂದರು.

'ಯುವತಿ ಇಕ್ರಾ ಜೊತೆಗಿದ್ದ ಮುಲಾಯಂ ಸಿಂಗ್, ನಗರದ ಕಂಪನಿಯೊಂದರಲ್ಲಿ ಭದ್ರತಾ ಸಿಬ್ಬಂದಿ ಕೆಲಸ ಮಾಡುತ್ತಿದ್ದ. ಯುವತಿ ಪಾಕಿಸ್ತಾನದವರು ಎಂಬುದು ಗೊತ್ತಿದ್ದರೂ ಮೌನವಾಗಿದ್ದ. ಯುವತಿಯನ್ನು ಮದುವೆ ಸಹ ಆಗಿದ್ದ. ಮುಲಾಯಂ ಸಿಂಗ್‌ನನ್ನೂ ಈಗಾಗಲೇ ಬಂಧಿಸಲಾಗಿದೆ' ಎಂದು ಹೇಳಿದರು.

ಹೈದರಾಬಾದ್ ನಿವಾಸಿಯೆಂದು ವಾದ: 'ಇಕ್ರಾ ಅವರು ಹೈದರಾಬಾದ್ ನಿವಾಸಿಯೆಂಬುದಾಗಿ ವಾದಿಸುತ್ತಿದ್ದಾರೆ. ಆದರೆ, ಅದಕ್ಕೆ ಸಂಬಂಧಪಟ್ಟ ಯಾವುದೇ ಪುರಾವೆಗಳಿಲ್ಲ. ಸದ್ಯ ಅವರನ್ನು ಮಹಿಳಾ ಪುನರ್ವಸತಿ ಕೇಂದ್ರದಲ್ಲಿರಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ವಿದ್ಯಾರ್ಥಿನಿಯರ ಶೌಚಾಲಯಕ್ಕೆ ನುಗ್ಗಿದ್ದ ಬಿ.ಇ ಪದವೀಧರ

ಬೆಂಗಳೂರು: ಜಯನಗರ ಕಾಲೇಜೊಂದರ ವಿದ್ಯಾರ್ಥಿನಿಯರ ಶೌಚಾಲಯಕ್ಕೆ ನುಗ್ಗಿ ಅಸಭ್ಯವಾಗಿ ವರ್ತಿಸಿದ್ದ ಆರೋಪದಡಿ ಎಸ್. ಅಜಯ್‌ಕುಮಾರ್ (42) ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

'ಹನುಮಂತನಗರ 2ನೇ ಹಂತದ ಮೌಂಟ್ ಜಾಯ್ ರಸ್ತೆ ನಿವಾಸಿ ಅಜಯ್‌ಕುಮಾರ್, ಎಂಜಿನಿಯರ್ ಪದವೀಧರ. ಎಲ್ಲಿಯೂ ಕೆಲಸಕ್ಕೆ ಹೋಗುತ್ತಿರಲಿಲ್ಲ. ಜ. 10ರಂದು ಕಾಲೇಜಿನೊಳಗೆ ಅಕ್ರಮವಾಗಿ ಪ್ರವೇಶಿಸಿ ಶೌಚಾಲಯಕ್ಕೆ ನುಗ್ಗಿದ್ದ. ಈ ಬಗ್ಗೆ ಕಾಲೇಜು ಪ್ರಾಂಶುಪಾಲರು ದೂರು ನೀಡಿದ್ದರು' ಎಂದು ಪೊಲೀಸರು ಹೇಳಿದರು.

'ಕೃತ್ಯ ಎಸಗಿ ಪರಾರಿಯಾಗಿದ್ದ ಆರೋಪಿ, ಹಲವೆಡೆ ಸುತ್ತಾಡುತ್ತಿದ್ದ. ಇತ್ತೀಚೆಗೆ ಈತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಮಾನಸಿಕ ಅಸ್ವಸ್ಥನಂತೆ ವರ್ತಿಸುತ್ತಿದ್ದ. ಈತ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ತಿಳಿಸಿದರು.

ವಿದ್ಯಾರ್ಥಿನಿ ಕೈ ಹಿಡಿದ ಎಳೆದಾಡಿದ್ದ: 'ಭದ್ರತಾ ಸಿಬ್ಬಂದಿಗಳ ಕಣ್ತಪ್ಪಿಸಿ ಶೌಚಾಲಯದೊಳಗೆ ನುಗ್ಗಿದ್ದ ಆರೋಪಿ, ಅವಿತು ಕುಳಿತುಕೊಂಡಿದ್ದ. ಇದೇ ಸಂದರ್ಭದಲ್ಲೇ ವಿದ್ಯಾರ್ಥಿನಿಯೊಬ್ಬರು ಶೌಚಾಲಯಕ್ಕೆ ಹೋಗಿದ್ದರು. ಅವರ ಕೈ ಹಿಡಿದು ಎಳೆದಾಡಿದ್ದ ಆರೋಪಿ, ಅಸಭ್ಯವಾಗಿ ವರ್ತಿಸಿದ್ದ' ಎಂದು ಪೊಲೀಸರು ಹೇಳಿದರು.

'ವಿದ್ಯಾರ್ಥಿನಿಯ ಬಾಯಿಯನ್ನು ಕೈಯಿಂದ ಮುಚ್ಚಿದ್ದ ಆರೋಪಿ, ಕಿರುಚಾಡದಂತೆ ತಡೆದಿದ್ದ. ತಾನು ಶೌಚಾಲಯಕ್ಕೆ ನುಗ್ಗಿದ್ದ ವಿಷಯವನ್ನು ಯಾರಿಗೂ ಹೇಳದಂತೆ ಜೀವ ಬೆದರಿಕೆಯೊಡ್ಡಿ ಸ್ಥಳದಿಂದ ಪರಾರಿಯಾಗಿದ್ದ. ಕೃತ್ಯದ ಸಂಬಂಧ ವಿದ್ಯಾರ್ಥಿನಿ ಹೇಳಿಕೆ ಸಹ ಪಡೆಯಲಾಗಿದೆ' ಎಂದು ತಿಳಿಸಿದರು.

ಜಯನಗರ ಪೊಲೀಸರು ಬಂಧಿತ ಆರೋಪಿ ಅಜಯ್‌ಕುಮಾರ್ ಅವರನ್ನು ಕಾಲೇಜಿಗೆ ಕರೆದೊಯ್ದು ಮಹಜರು ನಡೆಸಿದರು

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call:7204995189

PERSONAL

Change of Name

CHANGE OF NAME
I, **MAHAMED YASEEN MOHAMED HASSAM,** R/a #74, 4th cross, 2nd main road, JHBCS Layout, J.P. Nagar, Bengaluru-78, have changed my name to **MOHAMED YASEEN** & my Correct D.O.B. is 02.07.1969. I declare that my Late father's correct name is **MOHAMED HASHIM,** vide affidavit dated 21.01.2023 before Notary C. Sharada, Bangalore.

I, MIR SHAKI AHMED S/O MIR HASAN ALI residence at Alipur, Gauribidanur Taluk, Chikkaballapur District, have changed my name to MIR SAKHI AHMED vide affidavit dated 23.01.2023 before notary HM Adi Narayana Gowda, Gauribidanur.

I, MOHAMAD ABOOBBEKAR, Residing at Kowsarnagar, Ward No.20, Chickballapur- 562101 have changed my name to MOHAMMED ABUBAKAR vide affidavit dated 20.01.2023sworn to before Advocate and Notary K.H. Venkatappa, Chickballapur.

I, NAGEENTAJ, Residing at Kowsarnagar, Ward No.20, Chickballapur- 562101 have changed my name to NAGEENATAJ vide affidavit dated 20.01.2023 sworn to before Advocate and Notary K.H. Venkatappa, Chickballapur.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಕೆರೆ ಹೂಳೆತ್ತುವ ಕಾಮಗಾರಿ ಪ್ರಗತಿಯಲ್ಲಿದೆ –ಪ್ರಜಾವಾಣಿ ಚಿತ್ರ/ಕಿಶೋರ್‌ಕುಮಾರ್ ಬೋಳಾರ್

₹6 ಕೋಟಿ ವೆಚ್ಚದಲ್ಲಿ ಕಾಮಗಾರಿ: 6 ತಿಂಗಳಲ್ಲಿ ಪುನರುಜ್ಜೀವನ

ನೆಲಗದರನಹಳ್ಳಿ, ಶಿವಪುರ ಕೆರೆಗೆ ಕಾಯಕಲ್ಪ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಕೈಗಾರಿಕೆ ತ್ಯಾಜ್ಯ ತುಂಬಿಕೊಂಡಿದ್ದ ನೆಲಗದರನಹಳ್ಳಿ ಮತ್ತು ಶಿವಪುರ ಕೆರೆಗಳ ಪುನರುಜ್ಜೀವನಕ್ಕೆ ಈಗ ಕಾಲ ಕೂಡಿಬಂದಿದೆ. ಎರಡೂ ಕೆರೆಗಳ ಅಭಿವೃದ್ಧಿ ಕಾಮಗಾರಿಯನ್ನು ಬಿಬಿಎಂಪಿ ಆರಂಭಿಸಿದೆ.

ನೆಲಗದರನಹಳ್ಳಿ ಸುತ್ತಮುತ್ತಲ ಈ ಜಲಕಾಯಗಳು ಒಂದು ಕಾಲದಲ್ಲಿ ಜನರ ಜೀವನಾಡಿಯಾಗಿದ್ದವು. ನಗರ ಬೆಳೆದಂತೆ ಕೆರೆಗಳು ಕಲುಷಿತಗೊಂಡವು. ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಂತೆ ಇರುವ ಈ ಕೆರೆಗಳಿಗೆ ಕೈಗಾರಿಕೆಗಳ ತ್ಯಾಜ್ಯವು ಹರಿದು ಅಸ್ತಿತ್ವವೇ ಹಾಳಾಗಿದ್ದವು.

ಅದರ ಜತೆಗೆ ಒಳಚರಂಡಿ ನೀರು ಕೂಡ ಕೆರೆಗಳನ್ನು ಸೇರಿ ಕೆರೆಗಳ ಸ್ವರೂಪವೇ ಬದಲಾಗಿತ್ತು. ವಿಷಕಾರಿಯಾಗಿದ್ದ ನೀರು ಕುಡಿದರೆ ದನಕರುಗಳು ಬದುಕುಳಿಯುವ ಸಾಧ್ಯತೆ ಇರಲಿಲ್ಲ. ಕೆರೆಯಲ್ಲಿದ್ದ ಜಲಚರಗಳ ಅಸ್ತಿತ್ವಕ್ಕೂ ಧಕ್ಕೆ ಉಂಟಾಗಿತ್ತು. ಇವುಗಳ ಪುನರುಜ್ಜೀವನಕ್ಕೆ ಸ್ಥಳೀಯರು ಹಲವು ವರ್ಷಗಳಿಂದ ಒತ್ತಾಯ ಮಾಡುತ್ತಲೇ ಇದ್ದರು.

ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಈ ಕೆರೆಗಳ ಅಭಿವೃದ್ಧಿಗೆ ಅನುದಾನ ತರುವಲ್ಲಿ ಶಾಸಕ ಆರ್. ಮಂಜುನಾಥ್ ಯಶಸ್ವಿಯಾಗಿದ್ದರು. ಸರ್ಕಾರ ಬದಲಾದ ಬಳಿಕ ಅನುದಾನ ವಾಪಸ್ ಪಡೆದಿದ್ದರಿಂದ ಯೋಜನೆ ನನೆಗುದಿಗೆ ಬಿದ್ದಿತ್ತು. ಕಡೆಗೂ ಅಮೃತ ನಗರೋತ್ಥಾನ ಅನುದಾನ ಪಡೆದು ಕೆರೆಗಳ ಅಭಿವೃದ್ಧಿ ಕಾಮಗಾರಿ ಆರಂಭಿಸಲಾಗಿದೆ.

₹4 ಕೋಟಿ ವೆಚ್ಚದಲ್ಲಿ ನೆಲಗದರನಹಳ್ಳಿ ಕೆರೆ ಪುನರುಜ್ಜೀವನ ಮತ್ತು ₹2 ಕೋಟಿ ವೆಚ್ಚದಲ್ಲಿ ಶಿವಪುರ ಕೆರೆ ಅಭಿವೃದ್ಧಿ ಮಾಡಲಾಗುತ್ತಿದೆ. ಎರಡೂ ಕೆರೆಗಳಲ್ಲಿ ತುಂಬಿಕೊಂಡಿರುವ ಹೂಳನ್ನು ತೆಗೆಯುವ ಕೆಲಸ ಈಗ ಆರಂಭವಾಗಿದೆ. ಕೆರೆಗಳಿಗೆ ಹರಿದುಬರುವ ಕಲುಷಿತ ನೀರು ಬೇರೆಡೆಗೆ ವರ್ಗಾಯಿಸುವ ಕಾಮಗಾರಿ ನಡೆಯುತ್ತಿದೆ. ಇನ್ನೊಂದೆಡೆ ಕೈಗಾರಿಕೆ ತ್ಯಾಜ್ಯ ಜಲಕಾಯ ಸೇರದಂತೆ ತಡೆಯುವ ಕಾಮಗಾರಿಯೂ ಪ್ರಗತಿಯಲ್ಲಿದೆ. 'ಈ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡರೆ, ನೆಲಗದರನಹಳ್ಳಿ ಮತ್ತು ಶಿವಪುರ ಕೆರೆಗಳಿಗೆ ಮತ್ತೆ ವೈಭವದ ದಿನಗಳು ಬರಲಿವೆ' ಎನ್ನುತ್ತಾರೆ ಸ್ಥಳೀಯರು.

'ನಮ್ಮ ಜೀವನಾಡಿಯಾಗಿದ್ದ ಈ ಕೆರೆಗಳು ಇತ್ತೀಚಿನ ವರ್ಷಗಳಲ್ಲಿ ಸಂಪೂರ್ಣ ಹಾಳಾಗಿ ಮಲದ ಗುಂಡಿಯಾಗಿ ಮಾರ್ಪಟ್ಟಿದ್ದವು. ಕೆರೆಯ ಬಳಿ ಮೂಗು ಮುಚ್ಚಿ ಓಡಾಡಬೇಕಾದ ಸ್ಥಿತಿ ಇತ್ತು. ಈ ಕೆರೆಗಳ ಅಭಿವೃದ್ಧಿಗೆ ಹಿಡಿದಿದ್ದ ಗ್ರಹಣ ಈಗ ಬಿಟ್ಟಂತಾಗಿದೆ. ಕಾಮಗಾರಿ ಆರಂಭವಾಗಿರುವುದು ಸಂತಸ ತಂದಿದೆ. ಆದಷ್ಟು ಬೇಗ ಕಾಮಗಾರಿಯನ್ನು ಅಧಿಕಾರಿಗಳು ಪೂರ್ಣಗೊಳಿಸಬೇಕು' ಎಂಬುದು ಸ್ಥಳೀಯರ ಒತ್ತಾಯ.

ಅನುದಾನಕ್ಕೆ ಹೈಕೋರ್ಟ್ ಮೊರೆಹೋಗಬೇಕಾಯಿತು

ಈ ಕೆರೆಗಳ ಅಭಿವೃದ್ಧಿಗೆ ಹೈಕೋರ್ಟ್‌ಗೆ ಹೋಗಿ ಅನುದಾನ ತರಬೇಕಾಯಿತು ಎಂದು ಶಾಸಕ ಆರ್. ಮಂಜುನಾಥ್ ಹೇಳಿದರು.

ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದಲ್ಲಿ ಹಲವು ಕೆರೆಗಳ ಅಭಿವೃದ್ಧಿಗೆ ಯೋಜನೆ ರೂಪಿಸಲಾಗಿತ್ತು. ಚಿಕ್ಕಬಾಣಾವರ ಕೆರೆ ಅಭಿವೃದ್ಧಿಗೆ ₹30 ಕೋಟಿ, ಅಬ್ಬಿಗೆರೆ ಕೆರೆ ₹10 ಕೋಟಿ, ಸೋಮಶೆಟ್ಟಿಹಳ್ಳಿ ಕೆರೆಗೆ ₹13 ಕೋಟಿ, ಶಿವಪುರ ಕೆರೆಗೆ ₹10 ಕೋಟಿ, ಚೊಕ್ಕಸಂದ್ರ, ಬಾಗಲಗುಂಟೆ, ಬಸಪ್ಪನಕಟ್ಟೆ, ಪಿಳ್ಳಪ್ಪನಕಟ್ಟೆ ಕೆರೆಗಳಿಗೆ ತಲಾ ₹5 ಕೋಟಿ ಅನುದಾನ ನಿಗದಿಯಾಗಿತ್ತು. ಬಿಜೆಪಿ ಸರ್ಕಾರ ಬಂದ ಬಳಿಕ ಎಲ್ಲಾ ಅನುದಾನ ತಡೆ ಹಿಡಿಯಲಾಯಿತು. ಕೊನೆಗೆ ಹೈಕೋರ್ಟ್ ಮೆಟ್ಟಿಲೇರಿ ಅನುದಾನ ಪಡೆದು ಈಗ ಕೆರೆ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಹೇಳಿದರು.

ಈ ಎರಡು ಕೆರೆಗಳ ಜತೆಗೆ ಅಬ್ಬಿಗೆರೆ ಕೆರೆಯನ್ನೂ ₹4 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಅವರು ವಿವರಿಸಿದರು.

ಆರು ತಿಂಗಳಲ್ಲಿ ಅಭಿವೃದ್ಧಿ

ಎರಡೂ ಕೆರೆಗಳ ಅಭಿವೃದ್ಧಿಗೆ ಅಮೃತ ನಗರೋತ್ಥಾನ ಅನುದಾನದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಆರು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಬಿಬಿಎಂಪಿ ಕೆರೆ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ವೆಂಕಟೇಶ್ ತಿಳಿಸಿದರು.

ಸದ್ಯ ಹೂಳೆತ್ತುವ ಕಾಮಗಾರಿ ಆರಂಭವಾಗಿದೆ. ಸುತ್ತಲೂ ನಡಿಗೆ ಪಥ ಮತ್ತು ತಂತಿಬೇಲಿ ನಿರ್ಮಿಸಲಾಗುವುದು. ಶೌಚ ನೀರು ಕೆರೆ ಸೇರದಂತೆ ತಡೆಯಲು ಪೈಪ್‌ಲೈನ್ ಕಾಮಗಾರಿ ನಡೆಸಲಾಗುವುದು ಎಂದು ಹೇಳಿದರು.

ನೆಲಗದರನಹಳ್ಳಿ ಕೆರೆ ಅಭಿವೃದ್ಧಿಗೆ ₹4 ಕೋಟಿ ಮತ್ತು ಶಿವಪುರ ಕೆರೆ ಪುನರುಜ್ಜೀವನಕ್ಕೆ ₹2 ಕೋಟಿ ವೆಚ್ಚ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಎರಡೂ ಕೆರೆಯ ಕಾಮಗಾರಿಗಳ ವಿವರ

- ಕೆರೆಗಳಲ್ಲಿ ತುಂಬಿರುವ ಹೂಳೆತ್ತಿ ಸ್ವಚ್ಛಗೊಳಿಸುವುದು.
- ಕೆರೆಗಳಿಗೆ ಶೌಚ ನೀರು ಸೇರದಂತೆ ಪ್ರತ್ಯೇಕ ಪೈಪ್‌ಲೈನ್ ವ್ಯವಸ್ಥೆ.
- ಸುತ್ತಲೂ ನಡಿಗೆ ಪಥ ನಿರ್ಮಾಣ.
- ತಂತಿಬೇಲಿ ನಿರ್ಮಾಣ.

ಬೆಸ್ಕಾಂ ಲೈನ್‌ಮೆನ್ ಸಾವು: ಎಂಜಿನಿಯರ್‌ಗಳ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೀಡರ್ ದುರಸ್ತಿ ವೇಳೆ ವಿದ್ಯುತ್ ತಗುಲಿ ಬೆಸ್ಕಾಂ ಲೈನ್‌ಮೆನ್ ಗೌತಮ್ (28) ಎಂಬುವರು ಭಾನುವಾರ ಮೃತಪಟ್ಟಿದ್ದು, ನಿರ್ಲಕ್ಷ್ಯ ವಹಿಸಿದ್ದ ಆರೋಪದಡಿ ಎಂಜಿನಿಯರ್‌ಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ಸುಂಕದಕಟ್ಟೆ ನಿವಾಸಿ ಗೌತಮ್, ಹಲವು ವರ್ಷಗಳಿಂದ ಬೆಸ್ಕಾಂನಲ್ಲಿ ಕೆಲಸ ಮಾಡುತ್ತಿದ್ದರು. ಗೋಪಾಲಪುರ ಪೊಲೀಸ್ ಚೌಕಿ ಬಳಿಯ ಎಫ್-29 ಫೀಡರ್ ದುರಸ್ತಿ ಕೆಲಸದಲ್ಲಿ ನಿರತರಾಗಿದ್ದ ವೇಳೆ ಈ ಅವಘಡ ಸಂಭವಿಸಿದೆ' ಎಂದು ಮಾಗಡಿ ರಸ್ತೆ ಠಾಣೆ ಪೊಲೀಸರು ತಿಳಿಸಿದರು.

'ಗೌತಮ್ ಸಾವಿನ ಸಂಬಂಧ ತಂದೆ ರಂಗನಾಥ್ ದೂರು ನೀಡಿದ್ದಾರೆ. ಬೆಸ್ಕಾಂ ಸಹಾಯಕ ಎಂಜಿನಿಯರ್, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್, ಕಿರಿಯ ಎಂಜಿನಿಯರ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಎಲ್ಲರಿಗೂ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು' ಎಂದು ಹೇಳಿದರು.

ಸಹೋದ್ಯೋಗಿ ಜತೆ ಹೋಗಿದ್ದ ಗೌತಮ್: 'ಟ್ರಾನ್ಸ್‌ಫಾರ್ಮರ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಫೀಡರ್ ಹಾಳಾದ ಬಗ್ಗೆ ಸಾರ್ವಜನಿಕರಿಂದ ದೂರು ಬಂದಿತ್ತು. ಕರ್ತವ್ಯದಲ್ಲಿದ್ದ ಲೈನ್‌ಮೆನ್ ಗೌತಮ್, ಸಹೋದ್ಯೋಗಿ ಸಿದ್ಧರಾಮ್ ಜೊತೆ ಭಾನುವಾರ ಬೆಳಿಗ್ಗೆ ಸ್ಥಳಕ್ಕೆ ಹೋಗಿದ್ದರು' ಎಂದು ಪೊಲೀಸರು ತಿಳಿಸಿದರು.

'ಟ್ರಾನ್ಸ್‌ಫಾರ್ಮರ್ ಏರಿದ್ದ ಗೌತಮ್, ಫೀಡರ್ ಬಳಿ ನಿಂತು ದುರಸ್ತಿ ಕೆಲಸದಲ್ಲಿ ತೊಡಗಿದ್ದರು. ಒಂದು ಮಾರ್ಗ ತಂತಿಯಲ್ಲಿ ವಿದ್ಯುತ್ ಸಂಪರ್ಕ ಮಾತ್ರ ಕಡಿತಗೊಳಿಸಲಾಗಿತ್ತು. ಇನ್ನೊಂದು ಮಾರ್ಗದ ತಂತಿಯಲ್ಲಿ ವಿದ್ಯುತ್ ಹರಿಯುತ್ತಿತ್ತು. ಅದೇ ತಂತಿಯಿಂದ ಗೌತಮ್ ಅವರಿಗೆ ವಿದ್ಯುತ್ ತಗುಲಿತ್ತು. ಅಸ್ವಸ್ಥಗೊಂಡಿದ್ದ ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಮಾರ್ಗ ಮಧ್ಯೆಯೇ ಅವರು ಮೃತಪಟ್ಟಿದ್ದಾರೆ' ಎಂದು ಹೇಳಿದರು.

'ಉದ್ದೇಶಪೂರ್ವಕ ಹತ್ಯೆ'

'ತಂತಿಯಲ್ಲಿ ವಿದ್ಯುತ್ ಹರಿಯುತ್ತಿದ್ದರೂ ಮಗನಿಂದ ಕೆಲಸ ಮಾಡಿಸಲಾಗುತ್ತಿತ್ತು. ಇದೊಂದು ಉದ್ದೇಶಪೂರ್ವಕ ಹತ್ಯೆ. ಬೆಸ್ಕಾಂ ಅಧಿಕಾರಿಗಳೇ ಈ ಸಾವಿಗೆ ಹೊಣೆ' ಎಂದು ತಂದೆ ರಂಗನಾಥ್ ಆರೋಪಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಮೃತ ಮಗನ ಮುಖ ನೋಡಲು ಬೆಸ್ಕಾಂನ ಯಾವ ಅಧಿಕಾರಿಯೂ ಬಂದಿಲ್ಲ. ಮಗನ ಸಾವಿಗೆ ನ್ಯಾಯ ಬೇಕು' ಎಂದು ಕಣ್ಣೀರಿಟ್ಟರು.

ಬಿಬಿಎಂಪಿ: 'ನನ್ನ ನಗರ ನನ್ನ ಬಜೆಟ್'ನಲ್ಲಿ ನಾಗರಿಕರ ಸಲಹೆ

ರಸ್ತೆ, ಚರಂಡಿ, ಪಾದಚಾರಿ ಮಾರ್ಗಕ್ಕೆ ಆದ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಗುಂಡಿ, ಪಾದಚಾರಿ ಮಾರ್ಗ, ಚರಂಡಿ ಸ್ವಚ್ಛತೆ, ಬೀದಿ ದೀಪಕ್ಕೆ ಬಿಬಿಎಂಪಿ ಬಜೆಟ್‌ನಲ್ಲಿ ಆದ್ಯತೆ ನೀಡಬೇಕೆಂದು ನಾಗರಿಕರು ಸಲಹೆ ನೀಡಿದ್ದು, ಪರಿಸರ ರಕ್ಷಣೆಗೂ ಪ್ರಾಮುಖ್ಯತೆ ನೀಡಬೇಕು ಎಂದು ಹೇಳಿದ್ದಾರೆ.

ಬಿಬಿಎಂಪಿ ಸಹಯೋಗದಲ್ಲಿ ಜನಾಗ್ರಹ 243 ವಾರ್ಡ್‌ಗಳಲ್ಲಿ ನಡೆಸಿದ 'ನನ್ನ ನಗರ ನನ್ನ ಬಜೆಟ್' ಸಮೀಕ್ಷೆಯಲ್ಲಿ ನಾಗರಿಕರು ರಸ್ತೆ ಸಮಸ್ಯೆ ನೀಗಿಸಲು ಹೆಚ್ಚು ಒತ್ತು ನೀಡಬೇಕು ಎಂದು ಸಲಹೆ ನೀಡಿದ್ದಾರೆ.

'ಜನಾಗ್ರಹ ಸಂಸ್ಥೆ 243 ವಾರ್ಡ್‌ಗಳಲ್ಲಿ ಸುಮಾರು 16 ಸಾವಿರ ಜನರಿಂದ ಸಲಹೆ ಪಡೆದು 'ನನ್ನ ನಗರ ನನ್ನ ಬಜೆಟ್' ವರದಿ ಸಲ್ಲಿಸಿದೆ. ಇದನ್ನು ನಾವು ಪರಿಶೀಲಿಸಿ, ಸಾಧ್ಯವಾದಷ್ಟು ಬಜೆಟ್‌ನಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತೇವೆ' ಎಂದು ವರದಿ ಸ್ವೀಕರಿಸಿದ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೋಮವಾರ ತಿಳಿಸಿದರು.

'31 ದಿನ ಈ ಸಮೀಕ್ಷೆ, ಸಲಹೆ ಸ್ವೀಕಾರ ಕಾರ್ಯ ನಡೆದಿದೆ. ರಸ್ತೆಗೆ ಸಂಬಂಧಿಸಿದಂತೆ ನಾಗರಿಕರು ಹೆಚ್ಚು ಸಲಹೆ ನೀಡಿದ್ದಾರೆ. ಶೇ 67ರಷ್ಟು ಸಲಹೆಗಳು ರಸ್ತೆಗೆ ಸಂಬಂಧಿಸಿದ್ದವಾಗಿವೆ. ಹವಾಮಾನ ಸ್ಥಿತಿಸ್ಥಾಪಕತ್ವಕ್ಕೂ ಸಲಹೆ ನೀಡಿದ್ದಾರೆ' ಎಂದು ಮಾಹಿತಿ ನೀಡಿದರು.

'ಈ ಬಾರಿಯ ಬಜೆಟ್ ಸಿದ್ಧಪಡಿಸಲಾಗುತ್ತಿದೆ. ರಾಜ್ಯ ಬಜೆಟ್ ನಂತರ ಸರ್ಕಾರಕ್ಕೆ ಸಲ್ಲಿಸಲಾಗುವುದು. ರಾತ್ರಿಯ ವೇಳೆ ಬಜೆಟ್ ಪ್ರಕಟಿಸುವುದಿಲ್ಲ. ಹಗಲಿನಲ್ಲೇ, ಸೂರ್ಯನ ಬೆಳಕಿನಲ್ಲೇ ಬಜೆಟ್ ಪ್ರಕಟಿಸಲಾಗುತ್ತದೆ' ಎಂದರು. 2022–23ನೇ ಸಾಲಿನ ಬಜೆಟ್ ಅನ್ನು 2022ರ ಮಾರ್ಚ್ 31ರಂದು ರಾತ್ರಿ 11.30ಕ್ಕೆ ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿತ್ತು.

ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಮ್ ರಾಯಪುರ, ಕಂದಾಯ ವಿಭಾಗದ ವಿಶೇಷ ಆಯುಕ್ತ ಡಾ. ಆರ್. ಎಲ್. ದೀಪಕ್, ಜನಾಗ್ರಹ ಸಂಸ್ಥೆಯ ಮಂಜುನಾಥ ಹಂಪಾಪುರ, ಮಹಾಲಕ್ಷ್ಮಿ ಬಿ, ಬಿಪ್ಯಾಕ್‌ನ ರಾಘವೇಂದ್ರ ಇದ್ದರು.

'ಮುಂದಿನ ವರ್ಷ ವಲಯ ಬಜೆಟ್': 'ಮುಂದಿನ ವರ್ಷದಿಂದ ಬಿಬಿಎಂಪಿಯಲ್ಲಿ ವಲಯ ಮಟ್ಟದ ಬಜೆಟ್ ತಯಾರು ಮಾಡಲಾಗುತ್ತದೆ' ಎಂದು ತುಷಾರ್ ಗಿರಿನಾಥ್ ಹೇಳಿದರು.

'ನಾಗರಿಕರು ಸ್ಥಳೀಯ ಸಂಸ್ಥೆಯ ಆಡಳಿತದಲ್ಲಿ ಭಾಗಿಯಾಗಿರಬೇಕು. ಯಾವ ಕಾಮಗಾರಿಗಳು ಆಗಬೇಕು ಎಂಬುದನ್ನು ಅವರು ನಿರ್ಧರಿಸಬೇಕು ಎಂಬ ಪರಿಕಲ್ಪನೆಯಿಂದ ಮುಂದಿನ ವರ್ಷದಿಂದ ವಾರ್ಡ್‌ಮಟ್ಟದ ಬಜೆಟ್ ಸಿದ್ಧಗೊಳಿಸಲಾಗುತ್ತದೆ' ಎಂದರು.

'ವಾರ್ಡ್‌ಗಳ ಬಜೆಟ್ ಅನ್ನು ವಲಯದಲ್ಲಿ ಒಟ್ಟುಗೂಡಿಸಲಾಗುತ್ತದೆ. ಅದಕ್ಕೆ ನಾವು ಹಣ ಒದಗಿಸುತ್ತೇವೆ. ಅಧಿಕಾರ ವಿಕೇಂದ್ರೀಕರಣದ ಮೊದಲ ಹೆಜ್ಜೆ ಇದು. ಈ ಪ್ರಕ್ರಿಯೆ ನಡೆಯುತ್ತಿದ್ದು, ಮುಂದಿನ ವರ್ಷ ಅನುಷ್ಠಾನವಾಗಲಿದೆ. ಕೇಂದ್ರೀಕೃತ ಬಜೆಟ್‌ನಲ್ಲಿ ಪ್ರಮುಖ ರಸ್ತೆಗಳು, ಉದ್ಯಾನಗಳು, ಕೆರೆ, ನೀರುಗಾಲುವೆ, ತ್ಯಾಜ್ಯವನ್ನು ಮಾತ್ರ ನಿರ್ವಹಣೆ ಮಾಡಲಾಗುತ್ತದೆ' ಎಂದರು.

'ನನ್ನ ನಗರ ನನ್ನ ಬಜೆಟ್' ಸಲಹೆ

243 ವಾರ್ಡ್‌ಗಳಲ್ಲಿ **16,261** ನಾಗರಿಕರ ಸ್ಪಂದನೆ

ಶೇ 17ರಷ್ಟು	ಜನರಿಂದ ಪಾದಚಾರಿ ರಸ್ತೆ ದುರಸ್ತಿಗೆ ಆಗ್ರಹ
ಶೇ 16ರಷ್ಟು	ನಾಗರಿಕರಿಂದ ರಸ್ತೆ ಗುಂಡಿ ಮುಚ್ಚಲು ಮನವಿ
ಶೇ 13ರಷ್ಟು	ಸಾರ್ವಜನಿಕರಿಂದ ರಸ್ತೆ ಬದಿ ಚರಂಡಿ ಹೂಳುತೆಗೆಯಲು ಒತ್ತಾಯ
ಶೇ 11ರಷ್ಟು	ಸಲಹೆಯಲ್ಲಿ ಬೀದಿದೀಪ ದುರಸ್ತಿಗೆ ಮನವಿ
ಶೇ 7ರಷ್ಟು	ಜನರಿಂದ ರಸ್ತೆ ಬದಿ ಚರಂಡಿಯಲ್ಲಿ ಮಳೆನೀರು ಸಂಗ್ರಹಕ್ಕೆ ಸಲಹೆ

ಉತ್ತಮ ರಸ್ತೆಗೆ ಸೂಚನೆ

1,439 ಕಿ.ಮೀ ರಸ್ತೆಯನ್ನು ಗುಂಡಿಮುಕ್ತ, ಡಾಂಬರು ಮಾಡಬೇಕು

953 ಕಿ.ಮೀ ಹಾಳಿ ಪಾದಚಾರಿ ಮಾರ್ಗದ ದುರಸ್ತಿ

473 ಕಿ.ಮೀ ಹೊಸದಾಗಿ ಪಾದಚಾರಿ ಮಾರ್ಗ ನಿರ್ಮಾಣ

243 ಕಿ.ಮೀ ಬೀದಿದೀಪಗಳನ್ನು ಅಳವಡಿಸಿ ಸುರಕ್ಷಿತವಾಗಿಸಬೇಕು

ಹೈಕೋರ್ಟ್‌ಗೆ ಅಡ್ವೊಕೇಟ್ ಜನರಲ್ ಮನವರಿಕೆ

ಮುರುಘಾ ಮಠದ ಆಸ್ತಿ ಅನ್ಯರ ಪಾಲಾಗಬಾರದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿತ್ರದುರ್ಗದ ಶ್ರೀ ಮುರುಘರಾಜೇಂದ್ರ ಬೃಹನ್ಮಠದ ಪೀಠಾಧಿಪತಿ ಪೊಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆ ಅಡಿಯಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಕಾರಣ; ಮುರುಘಾ ಮಠಕ್ಕೆ ಸೇರಿದ ಸಾವಿರಾರು ಕೋಟಿ ರೂಪಾಯಿಗಳ ಮೌಲ್ಯದ ಸ್ಥಿರ ಮತ್ತು ಚರಾಸ್ತಿ ಹಾಗೂ ನೂರಾರು ವಿದ್ಯಾಸಂಸ್ಥೆಗಳ ದೈನಂದಿನ ಆಡಳಿತ ಕುಸಿದು ಹೋಗಬಾರದು, ಆಸ್ತಿ ಅನ್ಯರ ಪಾಲಾಗಬಾರದು ಎಂಬ ಏಕೈಕ ಸದುದ್ದೇಶದಿಂದ ರಾಜ್ಯ ಸರ್ಕಾರ ಆಡಳಿತಾಧಿಕಾರಿ ನೇಮಕ ಮಾಡಿದೆ' ಎಂದು ಅಡ್ವೊಕೇಟ್ ಜನರಲ್ ಹೈಕೋರ್ಟ್‌ಗೆ ಸ್ಪಷ್ಟಪಡಿಸಿದರು.

ನಿವೃತ್ತ ಐಎಎಸ್ ಅಧಿಕಾರಿ ಪಿ.ಎಸ್. ವಸ್ತ್ರದ ಅವರನ್ನು ಶ್ರೀ ಜಗದ್ಗುರು ಮುರುಘರಾಜೇಂದ್ರ (ಎಸ್‌ಜೆಎಂ) ಬೃಹನ್ಮಠಕ್ಕೆ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಎಸ್‌ಜೆಎಂ ವಿದ್ಯಾಪೀಠದ ಅಧ್ಯಕ್ಷ, ಮಠದ ಉಸ್ತುವಾರಿ ಬಸವಪ್ರಭು ಸ್ವಾಮೀಜಿ ಮತ್ತು ಭಕ್ತರು ಸಲ್ಲಿಸಿರುವ ರಿಟ್ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಮುಂದುವರಿಸಿತು.

ರಾಜ್ಯ ಸರ್ಕಾರ ಪರ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ, 'ಬಸವಪ್ರಭು ಸ್ವಾಮೀಜಿ ಉಸ್ತುವಾರಿ ಹೊತ್ತ ನಂತರ ಮಠಕ್ಕೆ ಸೇರಿದ ಲಕ್ಷಾಂತರ ರೂಪಾಯಿಗಳನ್ನು ಪಡೆದಿದ್ದು ಅದಕ್ಕೆ ಲೆಕ್ಕ ಕೊಡದೇ ಇರುವುದು ಗಮನಕ್ಕೆ ಬಂದಿದೆ. ಇದನ್ನು ಆಡಳಿತಾಧಿಕಾರಿ ವಸ್ತ್ರದ ಅವರು ತಮಗೆ ದೊರೆತಿರುವ ಮಾಹಿತಿಯ ಅನುಸಾರ ನನಗೆ ವಿವರ ಒದಗಿಸಿದ್ದಾರೆ' ಎಂದರು. ಈ ಮಾತಿಗೆ ದನಿಗೂಡಿಸಿದ ವಸ್ತ್ರದ ಪರ ಹಿರಿಯ ವಕೀಲ ಗಂಗಾಧರ ಗುರುಮಠ, 'ಹೌದು ಸ್ವಾಮಿ, ಈ ಬಗ್ಗೆ ವಿವರಣೆ ನೀಡುವಂತೆ ಬಸವಪ್ರಭು ಅವರಿಗೆ ಕೇಳಿದಾಗ ಕಠಿಣವಾದ ಉತ್ತರ ನೀಡಿದ್ದು, ವಿಷಯ ಹೈಕೋರ್ಟ್‌ನಲ್ಲಿದೆ, ನೀವು ಯಾರು ಕೇಳಲಿಕ್ಕೆ ಎಂದು ಉತ್ತರಿಸಿದ್ದಾರೆ' ಎಂದರು.

ಈ ಮಾತಿಗೆ ನ್ಯಾಯಪೀಠ, 'ಯಾರು ಈ ಬಸವಪ್ರಭು, ಅವರು ಲಕ್ಷಾಂತರ ಹಣವನ್ನು ಅಪರಾ–ತಪರಾ ಮಾಡಿದ್ದಾರೆ ಎಂಬುದಕ್ಕೆ ನಿಮ್ಮ ಬಳಿ ಏನು ಸಾಕ್ಷ್ಯವಿದೆ' ಎಂದು ಪ್ರಶ್ನಿಸಿತು. ಈ ಪ್ರಶ್ನೆಗೆ ಅಡ್ವೊಕೇಟ್ ಜನರಲ್ ಮತ್ತು ಗುರುಮಠ, 'ದಾಖಲೆಗಳು ಸದ್ಯ ಇಲ್ಲ, ಶೇಖರಿಸುತ್ತಿದ್ದೇವೆ' ಎಂದರು. ಇದಕ್ಕೆ ನ್ಯಾಯಪೀಠ 'ನಿಮ್ಮ ಆಡಳಿತಾಧಿಕಾರಿ ನಿವೃತ್ತ ಐಎಎಸ್ ಅಧಿಕಾರಿಯಲ್ಲವೇ, ಅವರಿಗೆ ಈ ವಿವರ ಸಂಗ್ರಹ ಸಾಧ್ಯವಾಗಿಲ್ಲವೇ, ನೀವು ಇಂತಹ ಆರೋಪ ಮಾಡುವಾಗ ಕೆ.ಆರ್.ಮಾರ್ಕೆಟ್‌ನಲ್ಲಿ ನಿಂತು ಆರೋಪಿಸಿದಂತೆ ಆಗಬಾರದು. ಸರಿಯಾದ ದಾಖಲೆ ಒದಗಿಸಿ ವಾದ ಮಂಡಿಸಿ' ಎಂದು ಹೇಳಿತು.

'ತುಂಬಿ ಏವಿಯೇಷನ್ಸ್ (ಹೆಲಿಕಾಪ್ಟರ್) ಜೊತೆ ಒಪ್ಪಂದ ಮಾಡಿಕೊಂಡಿದ್ದ ಪೀಠಾಧಿಪತಿಯು, ಹೆಲಿಕಾಪ್ಟರ್‌ಗೆ ₹3 ಕೋಟಿ ಪಾವತಿ ಮಾಡಿದ್ದಾರೆ. ಇದನ್ನು ಏರ್ ಆ್ಯಂಬುಲೆನ್ಸ್ ಆಗಿ ಬಳಸಲಾಗುವುದು ಎಂದು ಒಪ್ಪಂದ ಮಾಡಿಕೊಂಡಿದ್ದರು. ಆದರೆ, ರೋಗಿಯನ್ನು ಕೊಂಡೊಯ್ದಿಲ್ಲ' ಎಂದು ಅಡ್ವೊಕೇಟ್ ಜನರಲ್ ನ್ಯಾಯಪೀಠಕ್ಕೆ ತಿಳಿಸಿದರು. ವಿಚಾರಣೆಯನ್ನು 30ಕ್ಕೆ ಮುಂದೂಡಲಾಗಿದೆ.

ಕೋಲಾರದಲ್ಲಿ ಸಿದ್ದರಾಮಯ್ಯಗೆ ಮನೆ ಸಿದ್ಧ!

ಪ್ರಜಾವಾಣಿ ವಾರ್ತೆ

ಕೋಲಾರ: ಕೋಲಾರ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಿರುವ ಸಿದ್ದರಾಮಯ್ಯ ಅವರಿಗೆ ಸ್ಥಳೀಯವಾಗಿ ವಾಸ್ತವ್ಯಕ್ಕೆಂದು ಬೆಂಬಲಿಗರು ಮನೆಯೊಂದನ್ನು ಅಂತಿಮಗೊಳಿಸಿದ್ದಾರೆ.

'ನಗರದ ಬೈಪಾಸ್ ರಸ್ತೆಯ ಬಳಿಯ ಕೋಗಿಲಹಳ್ಳಿ ಬಳಿ ಬಸವನತ್ತದಲ್ಲಿ ಮನೆ ನೋಡಿದ್ದೇವೆ. ಒಂದು ಮಹಡಿಯ ಮನೆ ಇದಾಗಿದ್ದು, ಸಿದ್ದರಾಮಯ್ಯ ಅವರ ಸಿಬ್ಬಂದಿ ವೀಕ್ಷಿಸಿದ್ದಾರೆ. ಅವರ ಒಪ್ಪಿಗೆ ಸಿಗಬೇಕಿದೆ. ಇದು ವಾಸ್ತವ್ಯಕ್ಕೆ ಮಾತ್ರ; ಕಚೇರಿಯನ್ನು ಬೇರೆ ಕಡೆ ನೋಡಲಿದ್ದೇವೆ' ಎಂದು ವಿಧಾನ ಪರಿಷತ್ ಸದಸ್ಯ ಎಂ.ಎಲ್.ಅನಿಲ್ ಕುಮಾರ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಒಂದು ಎಕರೆಯ ತೋಟದ ಮನೆ ಇದಾಗಿದ್ದು, 56x46 ವಿಸ್ತೀರ್ಣ ಹೊಂದಿದೆ. ಸಿದ್ದರಾಮಯ್ಯ ಅವರ ಅಭಿಮಾನಿ ಶಂಕರ್ ಎಂಬುವರಿಗೆ ಸೇರಿದ ಮನೆ ಇದಾಗಿದೆ. ತಿಂಗಳ ಬಾಡಿಗೆಗೆ ನೀಡಲು ಸಮ್ಮತಿಸಿದ್ದಾರೆ ಎಂಬುದು ಗೊತ್ತಾಗಿದೆ. ಸಮೀಪದಲ್ಲಿ ಬಿಜೆಪಿ ಟಿಕೆಟ್ ಆಕಾಂಕ್ಷಿ ವರ್ತೂರು ಪ್ರಕಾಶ್ ಅವರ ಮನೆಯೂ ಇದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಮುಖ್ಯಮಂತ್ರಿ ಎಚ್ಚರಿಕೆ

ಪಿಆರ್‌ಆರ್ ವಿಳಂಬವಾದರೆ ಅನ್ಯ ಇಲಾಖೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ಯೋಜನೆ ಅನುಷ್ಠಾನವನ್ನು ಕ್ಷಿಪ್ರಗೊಳಿಸದಿದ್ದರೆ ಯೋಜನೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ (ಬಿಡಿಎ) ಹಿಂಪಡೆದು ಅನ್ಯ ಇಲಾಖೆಗೆ ವರ್ಗಾಯಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಎಚ್ಚರಿಕೆ ನೀಡಿದ್ದಾರೆ.

ಪಿಆರ್‌ಆರ್ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್, ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಸೇರಿ ಹಿರಿಯ ಅಧಿಕಾರಿಗಳ ಜತೆ ಸೋಮವಾರ ಸಭೆ ನಡೆಸಿದರು.

65 ಕಿ.ಮೀ. ಉದ್ದದ ಪೆರಿಫೆರಲ್ ವರ್ತುಲ ರಸ್ತೆ ನಿರ್ಮಾಣಕ್ಕೆ ಅಗತ್ಯವಿರುವ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದು ವಿಳಂಬವಾಗುತ್ತಿದೆ. ಈ ಕುರಿತು ಸರಿಯಾದ ಮಾಹಿತಿಯನ್ನು ಅಧಿಕಾರಿಗಳು ಸಭೆಗೆ ನೀಡದಿರುವುದಕ್ಕೆ ಮುಖ್ಯಮಂತ್ರಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಯೋಜನೆ ಅನುಷ್ಠಾನದ ಹೊಣೆಯನ್ನು ಬೇರೊಂದು ಇಲಾಖೆಗೆ ವರ್ಗಾಯಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಯೋಜನೆಯನ್ನು ಲೋಕೋಪಯೋಗಿ ಇಲಾಖೆ, ಮೂಲಸೌಕರ್ಯ ಅಭಿವೃದ್ಧಿ ಇಲಾಖೆ ಅಥವಾ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮಕ್ಕೆ ಹಸ್ತಾಂತರಿಸುವ ಕುರಿತು ಸಭೆಯಲ್ಲಿ ಪ್ರಸ್ತಾಪಿಸಿದ್ದಾರೆ. ಇನ್ನೆರಡು ದಿನಗಳಲ್ಲಿ ಪುನಃ ಸಭೆ ನಡೆಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಸರ್ಕಾರಿ– ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಈ ಯೋಜನೆ ಅನುಷ್ಠಾನಕ್ಕೆ ಸರ್ಕಾರ ನಿರ್ಧರಿಸಿದೆ. ಆದರೆ, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ತೊಡಕು ಉಂಟಾಗಿದೆ. ಭೂಸ್ವಾಧೀನಕ್ಕೆ ಅಗತ್ಯವಿರುವ ಹಣದ ಕುರಿತು ಬಿಡಿಎ ಇನ್ನೂ ನಿಖರವಾಗಿ ಅಂದಾಜು ಮಾಡಿಲ್ಲ.

ಸಭೆ ಬಳಿಕ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ವಿಶ್ವನಾಥ್, 'ಪಿಆರ್‌ಆರ್ ನಿರ್ಮಾಣಕ್ಕೆ ನಡೆಸುವ ಭೂಸ್ವಾಧೀನ ಪ್ರಕ್ರಿಯೆ 2013ರ ಭೂಸ್ವಾಧೀನ ಮತ್ತು ಪರಿಹಾರ ಕಾಯ್ದೆ ವ್ಯಾಪ್ತಿಗೆ ಬರುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆದರೆ, ಜಮೀನುಗಳ ಮಾಲೀಕರು ಹಳೆಯ ಭೂಸ್ವಾಧೀನ ಕಾಯ್ದೆಯಡಿ ಜಮೀನು ಬಿಟ್ಟುಕೊಡಲು ಒಪ್ಪುತ್ತಿಲ್ಲ' ಎಂದರು.

'ರೈತರಿಗೆ ಹೆಚ್ಚಿನ ಮೊತ್ತದ ಪರಿಹಾರ ನೀಡಲು ಪೂರಕವಾಗಿ ಸುಗ್ರೀವಾಜ್ಞೆ ಹೊರಡಿಸುವಂತೆ ಸರ್ಕಾರಕ್ಕೆ ಕೋರಿದ್ದೇನೆ. ಇದರಿಂದ ಸರ್ಕಾರಕ್ಕೂ ಉತ್ತಮ ಹೆಸರು ಬರುತ್ತದೆ' ಎಂದರು.

ಮದುವೆ ಅನೂರ್ಜಿತ: ಕೌಟುಂಬಿಕ ನ್ಯಾಯಾಲಯದ ಆದೇಶ ರದ್ದು

ಬೆಂಗಳೂರು: 'ಮದುವೆಯಾಗುವ ಸಮಯದಲ್ಲಿ 18 ವರ್ಷ ತುಂಬಿರಲಿಲ್ಲ' ಎಂಬ ಕಾರಣಕ್ಕೆ ಮಹಿಳೆಯೊಬ್ಬರ ಮದುವೆ ಅನೂರ್ಜಿತಗೊಳಿಸಿದ್ದ ಕೌಟುಂಬಿಕ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ. ಈ ಸಂಬಂಧದ ಮೇಲ್ಮನವಿಯನ್ನು ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಪುರಸ್ಕರಿಸಿದೆ.

'ಮದುವೆಯಾದಾಗ 18 ವರ್ಷ ಆಗಿರಬೇಕು ಎಂಬ ನಿಯಮವನ್ನು ಹಿಂದೂ ವಿವಾಹ ಕಾಯ್ದೆಯ ಕಲಂ 11ರ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಆದ್ದರಿಂದ, ಅಪ್ರಾಪ್ತೆ ಎಂಬ ಕಾರಣಕ್ಕೆ ಕಲಂ 11ರ ಪ್ರಕಾರ ವಿವಾಹ ಅನೂರ್ಜಿತಗೊಳಿಸುವುದು ಈ ಪ್ರಕರಣಕ್ಕೆ ಅನ್ವಯಿಸದು' ಎಂದು ಪೀಠ ಸ್ಪಷ್ಟಪಡಿಸಿದೆ.

ಮಂಡ್ಯ ಜಿಲ್ಲೆಯ ಸುಶೀಲಾ ಎಂಬುವರು ಮಂಜುನಾಥ್ ಅವರೊಂದಿಗೆ ಹಿಂದೂ ವಿವಾಹ ಕಾಯ್ದೆಯ ಪ್ರಕಾರ 2012ರ ಜೂನ್ 15ರಂದು ಪಾಣಿಗ್ರಹಣ ಮಾಡಿದ್ದರು. ನಂತರ ಪತಿ ಮಂಜುನಾಥ್, 'ಮದುವೆಯಾಗುವಾಗ ನನ್ನ ಪತ್ನಿ ಅಪ್ರಾಪ್ತೆಯಾಗಿದ್ದರು. ಆದ್ದರಿಂದ, ಈ ಮದುವೆಯನ್ನು ಅನೂರ್ಜಿತಗೊಳಿಸಬೇಕು' ಎಂದು ಕೋರಿ ಕೌಟುಂಬಿಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ನ್ಯಾಯಾಲಯ ಮದುವೆಯನ್ನು ಅನೂರ್ಜಿತಗೊಳಿಸಿತ್ತು. ಈ ಆದೇಶ ಪ್ರಶ್ನಿಸಿ ಸುಶೀಲಾ ಹೈಕೋರ್ಟ್ ಮೆಟ್ಟಿಲೇರಿದ್ದರು.

ಮೈಸೂರು ರೇಸ್

ಪ್ರಿನ್ಸ್ ಕಾರ್ಪೊರೇಟ್ ಗೆಲ್ಲುವ ನಿರೀಕ್ಷೆ

ರಾಜಕುಮಾರಿ ಲೀಲಾವತಿ ದೇವಿ ಮೆಮೋರಿಯಲ್ ಟ್ರೋಫಿ ಮಂಗಳವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪ್ರಿನ್ಸ್ ಕಾರ್ಪೊರೇಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ.

1ನೇ ರೇಸ್: ಗೇಮ್ ಬಾಯ್ 4, ಲಕ್ಕಿ ಪಾಯಿಂಟ್ 6, ಸ್ವಿಸ್ ಟೈಗ್ರೆಸ್ 3
2ನೇ ರೇಸ್: ಮೈ ಲೈಫ್ ಮೈ ರೂಲ್ಸ್ 6, ಬಟನ್‌ವುಡ್ 7, ನ್ಯೂಸ್ ಮೇಕರ್ 5
3ನೇ ರೇಸ್: ಬ್ಯೂಟಿಫುಲ್ ಒಬ್ಲಿವಿಯನ್ 4, ಥಿಯಾಸ್ ಗಿಫ್ಟ್ 13, ಫೆಸ್ಟೀವ್ ಸ್ಟಾರ್ 9
4ನೇ ರೇಸ್: ಇಂಪೀರಿಯಸ್ 4, ಡಿ ರೋಮನ್ ರೀನ್ಸ್ 1, ಸರ್ವೋತ್ತಮ್ 7
5ನೇ ರೇಸ್: ಪ್ರಿನ್ಸ್ ಕಾರ್ಪೊರೇಟ್ 6, ಸಡೀಕ್ 7, ಮೇಕ್ ಮೈ ವೇ 2
6ನೇ ರೇಸ್: ರಿಯಲ್ ಶೋ 1, ಬ್ರಾಕ್ಸ್‌ಟನ್ 10, ಪರ್ಫೆಕ್ಟ್ ಜಸ್ಟೀಸ್ 7
7ನೇ ರೇಸ್: ಪವರ್ ಆಫ್ ಕಾಂತಾರ 10, ಸೊಕ್ರೇಟ್ಸ್ 2, ವಿವಾ ಲಾ ವಿದಾ 4

ಉತ್ತಮ ಬೆಟ್: ರಿಯಲ್ ಶೋ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಪಾಕ್: ರಾಜೀನಾಮೆ ಹಿಂಪಡೆದ ಇಮ್ರಾನ್ ಪಕ್ಷದ 45 ಶಾಸಕರು

ಇಸ್ಲಾಮಾಬಾದ್: ಪಾಕಿಸ್ತಾನ ತೆಹ್ರೀಕ್–ಎ– ಇನ್ಸಾಫ್ (ಪಿಟಿಐ) ಪಕ್ಷದ 45 ಶಾಸಕರು ಪಾಕಿಸ್ತಾನದ ಸಂಸತ್ತಿಗೆ ನೀಡಿದ್ದ ಸಾಮೂಹಿಕ ರಾಜೀನಾಮೆಯನ್ನು ಪಕ್ಷದ ಅಧ್ಯಕ್ಷ ಹಾಗೂ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಆದೇಶದ ಮೇರೆಗೆ ಹಿಂಪಡೆದಿದ್ದಾರೆ.

2022ರ ಏಪ್ರಿಲ್‌ನಲ್ಲಿ ಅವಿಶ್ವಾಸ ಮತದ ಮೂಲಕ ಇಮ್ರಾನ್ ಅಧಿಕಾರದಿಂದ ಕೆಳಗಿಳಿದಿದ್ದರು. ಆಗ ಅವರ ಪಕ್ಷದ 123 ಶಾಸಕರು ರಾಜೀನಾಮೆ ನೀಡಲು ನಿರ್ಧರಿಸಿದ್ದರು. ಆದರೆ, ಸ್ಪೀಕರ್ ಜುಲೈನಲ್ಲಿ 11 ಮಂದಿಯ ರಾಜೀನಾಮೆಗಳನ್ನು ಮಾತ್ರ ಅಂಗೀಕರಿಸಿದ್ದರು. ಕಳೆದ ವಾರ ಅನಿರೀಕ್ಷಿತ ನಡೆಯೊಂದರಲ್ಲಿ ಸ್ಪೀಕರ್ ಅವರು ಪಿಟಿಐನ 69 ಶಾಸಕರ ರಾಜೀನಾಮೆಯನ್ನು ಅಂಗೀಕರಿಸಿದ್ದರು. ಇದು ಇಮ್ರಾನ್ ಪಕ್ಷವು ತನ್ನ ತಂತ್ರಗಾರಿಕೆ ಬದಲಾಯಿಸಿಕೊಳ್ಳುವ ಅನಿವಾರ್ಯತೆ ತಂದಿತು.

ನಗರದಲ್ಲಿ ಇಂದು

ಶಿವಬಾಲಯೋಗಿ ಮಹಾರಾಜರ ಜಯಂತಿ: ಬೆಳಿಗ್ಗೆ 9ಕ್ಕೆ ಪೂಜೆ, ಹೋಮ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, 12.30ಕ್ಕೆ ಕುಂಭಾಭಿಷೇಕ, 1.30ಕ್ಕೆ ಪ್ರಸಾದ, ಸಂಜೆ 5ಕ್ಕೆ ಧ್ಯಾನ, 6.30ಕ್ಕೆ ಭಜನೆ, 7ಕ್ಕೆ ಕಲ್ಯಾಣೋತ್ಸವ, ಆಯೋಜನೆ ಮತ್ತು ಸ್ಥಳ: ಶಿವಬಾಲಯೋಗಿ ಮಹಾರಾಜ್ ಟ್ರಸ್ಟ್, ಭಾರತೀಯ ಸಂಸ್ಕೃತಿ ಅಂತರ ರಾಷ್ಟ್ರೀಯ ಕೇಂದ್ರ, ಜೆ.ಪಿ. ನಗರ, 3ನೇ ಹಂತ

'ಲೈಂಗಿಕ ಅಲ್ಪಸಂಖ್ಯಾತರು ಮತ್ತು ಕೌಟುಂಬಿಕ ದೌರ್ಜನ್ಯ ಕಾಯ್ದೆ–2005' ಕುರಿತು ದಕ್ಷಿಣ ಭಾರತ ಮಟ್ಟದ ವಿಚಾರಸಂಕಿರಣ: ಅಧ್ಯಕ್ಷತೆ: ಗೀತಮ್ಮ ನಾಯಕ್, ಆಶಯ ನುಡಿ: ಎಲಿಜೆಬೆತ್, ಅತಿಥಿಗಳು: ಲಿಂಗರಾಜ ಗಾಂಧಿ, ಎಸ್.ಎಂ. ಜಯಕರ, ನಿರಂಜನ, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು, ಬೆಳಿಗ್ಗೆ 10

ಕಂಪ್ಯೂಟೇಶನಲ್ ಟೆಕ್ನಿಕ್ಸ್ ಇನ್ ಫ್ಲ್ಯೂಯಿಡ್ ಡೈನಾಮಿಕ್ಸ್: ಅತಿಥಿಗಳು: ಲಿಂಗರಾಜ ಗಾಂಧಿ, ಐ.ಎಸ್. ಶಿವಕುಮಾರ, ಶ್ರೀಧರ ಸಿ.ಎನ್., ಲೋಕೇಶ ವಿ., ರಘು ಜಿ.ಪಿ., ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು, ಬೆಳಿಗ್ಗೆ 10

ನಿರ್ಮಲಾ ನಂದನಾಥ ಸ್ವಾಮೀಜಿ

'ಜಿ.ಎನ್.ಆರ್. ಫೌಂಡೇಷನ್' ಉದ್ಘಾಟನೆ: ನಿರ್ಮಲಾ ನಂದನಾಥ ಸ್ವಾಮೀಜಿ, ಚಕ್ರವರ್ತಿ ಸೂಲಿಬೆಲೆ, ಸ್ಥಳ: ಕೃಪ ಬಡಾವಣೆ ಅಬ್ಬಿಗೆರೆ ದಾಸರಹಳ್ಳಿ, ಬೆಳಿಗ್ಗೆ 10.30

'ಸಮಕಾಲೀನ ಪತ್ರಿಕೋದ್ಯಮ' ಕುರಿತು ಸಂವಾದ ಕಾರ್ಯಕ್ರಮ: ಸಂಪನ್ಮೂಲ ವ್ಯಕ್ತಿ: ಶ್ರೀನಿವಾಸ ವಾನಳ್ಳಿ, ಅಧ್ಯಕ್ಷತೆ: ಎ.ಎಚ್. ರಾಮರಾವ್, ಎಸ್.ಎನ್. ನಾಗರಾಜ ರೆಡ್ಡಿ, ಆಯೋಜನೆ: ಪತ್ರಿಕೋದ್ಯಮ ವಿಭಾಗ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ದಿ ನ್ಯಾಷನಲ್ ಕಾಲೇಜು, ಜಯನಗರ, ಬೆಳಿಗ್ಗೆ 11

ಟ್ಯಾಬ್ ವಿತರಣಾ ಸಮಾರಂಭ: ವಿತರಣೆ: ಆರ್. ಅಶೋಕ್, ಆಶಯ ನುಡಿ: ಸದಾಶಿವ ಶೆಣೈ ಕೆ., ಅತಿಥಿಗಳು: ಪ್ರೇಮಾ, ಎನ್. ಮಂಜುನಾಥ ಪ್ರಸಾದ್, ಪಿ.ಎಸ್. ಹರ್ಷ, ಆಯೋಜನೆ: ಕರ್ನಾಟಕ ಮಾಧ್ಯಮ ಅಕಾಡೆಮಿ, ಸ್ಥಳ: ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 11.30

ಪ್ರೇಮಾ

ಮಧ್ವ ನವರಾತ್ರೋತ್ಸವ': ಪ್ರವಚನ: ಶ್ರೀನಿಧಿ ಆಚಾರ್ ಉತ್ತನೂರು, ವಿಷಯ: 'ದ್ವೈತ ಸಿದ್ಧಾಂತದ ಪ್ರಮೇಯಗಳು', ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಮಲ್ಲೇಶ್ವರ, ಸಂಜೆ 6.30

'ದ್ವಾದಶ ಸ್ತೋತ್ರ' ಪ್ರವಚನ: ಅಬ್ಬೂರು ಬದರಿನಾಥಾಚಾರ್, ಆಯೋಜನೆ: ಗುರುರಾಜ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಪ್ರಕಾಶನಗರ, ಸಂಜೆ 6.45

ವಿಶ್ಲೇಷಣೆಗೆ ಪದವಿ, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಂಖ್ಯೆ ಪರಿಗಣನೆ

ಉನ್ನತ ಶಿಕ್ಷಣ: ದಾಖಲಾತಿ ಪ್ರಮಾಣದಲ್ಲಿ ಅಲ್ಪ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉನ್ನತ ಶಿಕ್ಷಣದಲ್ಲಿ ಕರ್ನಾಟಕದ ಒಟ್ಟು ದಾಖಲಾತಿ ಅನುಪಾತ (ಜಿಇಆರ್) ಅಲ್ಪ ಏರಿಕೆಯಾಗಿದೆ.

ಕಾಲೇಜಿಗೆ ತೆರಳಲು ಅರ್ಹ ಇರುವ ಒಟ್ಟು ಜನಸಂಖ್ಯೆಯಲ್ಲಿ ಉನ್ನತ ಶಿಕ್ಷಣ ಪಡೆಯಲು ದಾಖಲಾದ ವಿದ್ಯಾರ್ಥಿಗಳ ಸಂಖ್ಯೆಯೇ ಜಿಇಆರ್. 18ರಿಂದ 23 ವಯೋಮಾನದವರನ್ನು ಗುರುತಿಸಿ ಜಿಇಆರ್ ಲೆಕ್ಕಾಚಾರ ಹಾಕಲಾಗಿದೆ. ವೈದ್ಯಕೀಯ, ತಾಂತ್ರಿಕ, ಡಿಪ್ಲೊಮಾ ಹಾಗೂ ಇತರ ಪದವಿ ಮತ್ತು ಸ್ನಾತಕೋತ್ತರ ಪದವಿಗಳ ವಿದ್ಯಾರ್ಥಿಗಳ ಸಂಖ್ಯೆಯನ್ನು ಈ ವಿಶ್ಲೇಷಣೆಗೆ ಪರಿಗಣಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕರ್ನಾಟಕದಲ್ಲಿ 18ರಿಂದ 23 ವಯೋಮಾನದ 67.28 ಲಕ್ಷ ಜನಸಂಖ್ಯೆ ಇದೆ. ಇದರಲ್ಲಿ ಶೇ 33.84ರಷ್ಟು ಮಂದಿ ಮಾತ್ರ ಉನ್ನತ ಶಿಕ್ಷಣ ಪಡೆಯಲು ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ನೋಂದಾಯಿಸಿಕೊಂಡಿದ್ದಾರೆ.

2020–21ನೇ ಸಾಲಿನ ಉನ್ನತ ಶಿಕ್ಷಣ ಕುರಿತಾದ ಅಖಿಲ ಭಾರತ ಸಮೀಕ್ಷೆಗಾಗಿ (ಎಐಎಸ್‌ಎಚ್‌ಇ) ರಾಜ್ಯ ಸರ್ಕಾರ ಈ ಮಾಹಿತಿ ಸಂಗ್ರಹಿಸಿದೆ. 2019–20 ರಲ್ಲಿ ಜಿಇಆರ್ ಶೇ 33.61ರಷ್ಟು ಇತ್ತು.

ಉಡುಪಿ ಜಿಲ್ಲೆಯಲ್ಲಿ ಜಿಇಆರ್ ಶೇ 72.15, ದಕ್ಷಿಣ ಕನ್ನಡದಲ್ಲಿ ಶೇ 67.74, ಬೆಂಗಳೂರು ನಗರ ಶೇ 54.47 ರಷ್ಟು ದಾಖಲಾಗಿದೆ. ಚಾಮರಾಜನಗರದಲ್ಲಿ ಕೇವಲ ಶೇ 10.62 ರಷ್ಟು ದಾಖಲಾಗಿದ್ದು, ಇದು ರಾಜ್ಯದಲ್ಲೇ ಅತ್ಯಂತ ಕಡಿಮೆಯಾಗಿದೆ.

ರಾಷ್ಟ್ರೀಯ ಸರಾಸರಿಗೆ (ಶೇ 27.1) ಹೋಲಿಸಿದರೆ ಕರ್ನಾಟಕ ಜಿಇಆರ್ ಯಾವಾಗಲೂ ಹೆಚ್ಚಾಗಿತ್ತು. ಆದರೆ, ನೆರೆಯ ರಾಜ್ಯಗಳ ಜತೆ ವಿಶ್ಲೇಷಿಸಿದಾಗ ಕರ್ನಾಟಕದ ಜಿಇಆರ್ ಕಡಿಮೆ ಇದೆ.

2019–20 ರ ಎಐಎಸ್‌ಎಚ್‌ಇ ಅನ್ವಯ ತಮಿಳುನಾಡಿನಲ್ಲಿ ಜಿಇಆರ್ ಶೇ 51, ಕೇರಳ ಶೇ 39, ಆಂಧ್ರಪ್ರದೇಶ ಶೇ 36 ಮತ್ತು ತೆಲಂಗಾಣ ಶೇ 35ರಷ್ಟು ಇತ್ತು.

ಒಟ್ಟು ದಾಖಲಾತಿ ಅನುಪಾತವನ್ನು (ಜಿಇಆರ್)

ವರ್ಷ	ಜಿಇಆರ್ (ಶೇಕಡವಾರು)
2016-17	30.10
2017-18	29.63
2018-19	30.25
2019-20	33.61
2020-21	33.84

‘ತುಮಕೂರು ಕೇಜ್’ ಅಳವಡಿಕೆ, ಥರ್ಮಲ್ ಡ್ರೋನ್ ಬಳಕೆ– ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ

ಚಿರತೆ ಸೆರೆಗೆ ಬಿರುಸಿನ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಮೈಸೂರಿನ ತಿ.ನರಸೀಪುರ ತಾಲ್ಲೂಕಿನ ಹೊರಳಹಳ್ಳಿಯಲ್ಲಿ ಚಿರತೆ ಸೆರೆಗೆ ಭಾರಿ ಗಾತ್ರದ ‘ತುಮಕೂರು ಕೇಜ್’ ಅನ್ನು ಅರಣ್ಯ ಇಲಾಖೆ ಸಿಬ್ಬಂದಿ ಅಳವಡಿಸಿದರು

ಮೈಸೂರು / ತಿ.ನರಸೀಪುರ: ತಾಲ್ಲೂಕಿನಲ್ಲಿ ನಾಲ್ವರನ್ನು ಕೊಂದ ಚಿರತೆ ಸೆರೆಗೆ ಅರಣ್ಯ ಇಲಾಖೆಯು ‘ಕೂಂಬಿಂಗ್’ ಆರಂಭಿಸಿದ್ದು, ಹೊರಳಹಳ್ಳಿಯಲ್ಲಿ ಸೋಮವಾರ ಬಹು ದೊಡ್ಡ ಬೋನು (ತುಮಕೂರು ಕೇಜ್) ಅಳವಡಿಸಿದೆ.

ಗ್ರಾಮದಲ್ಲಿ ಬಾಲಕನನ್ನು ಕೊಂದಿದ್ದ ಸ್ಥಳದಲ್ಲಿ ಬೋನು ಇರಿಸಲಾಗಿದ್ದು, ಬಂಡೀಪುರ, ನಾಗರಹೊಳೆ ಉದ್ಯಾನದ 120 ಸಿಬ್ಬಂದಿಯನ್ನು ಕಾರ್ಯಾಚರಣೆಗೆ ನಿಯೋಜಿಸಲಾಗಿದೆ. ಸೋಸಲೆ ಹೋಬಳಿ ವ್ಯಾಪ್ತಿಯಲ್ಲಿ ಕಾರ್ಯಪಡೆಯು ಗಸ್ತಿನಲ್ಲಿದೆ.

‘10 ತಂಡಗಳನ್ನು ರಚಿಸಲಾಗಿದ್ದು, ಹೊರಳವಳ್ಳಿಯಲ್ಲಿ ತುಮಕೂರು ಕೇಜ್ ಹಾಗೂ ವಿವಿಧೆಡೆ 13 ಬೋನು ಇರಿಸಲಾಗಿದೆ. 16 ಕ್ಯಾಮೆರಾ ಟ್ರ್ಯಾಪ್ ಅಳವಡಿಸಲಾಗಿದೆ. ರಾತ್ರಿ ಕಾರ್ಯಾಚರಣೆಗೆ ಥರ್ಮಲ್ ಡ್ರೋಣ್‌ಗಳನ್ನು ಬಳಸಲಾಗುತ್ತಿದೆ’ ಎಂದು ಸಿಸಿಎಫ್ ಮಾಲತಿ ಪ್ರಿಯಾ ಅವರು‘ಪ್ರಜಾವಾಣಿ’ಗೆ ತಿಳಿಸಿದರು.

‘ಎಲಿಫೆಂಟ್ ಟಾಸ್ಕ್‌ಫೋರ್ಸ್ ಸಿಬ್ಬಂದಿಯೂ ಪಾಲ್ಗೊಂಡಿದ್ದು, 2 ದಿನಗಳಿಂದ ಶೋಧ ಕಾರ್ಯಾಚರಣೆ ನಡೆದಿದೆ. ಕಬ್ಬು ಕಟಾವಿಗೆ ಜಿಲ್ಲಾಧಿಕಾರಿ 15 ದಿನಗಳ ಗಡುವು ನೀಡಿದ್ದಾರೆ. ಚಿರತೆ ಬಾಲಕನನ್ನು ಕೊಂದ ಜಾಗ ಪಾಳುಬಿದ್ದ ಪ್ರದೇಶವಾಗಿದ್ದು, 30 ಎಕರೆಯಷ್ಟು ಕಾಡು ಬೆಳೆದಿದೆ. ಅದನ್ನು ತೆರವುಗೊಳಿಸಲಾಗುತ್ತಿದೆ’ ಎಂದು ಮಾಹಿತಿ ನೀಡಿದರು.

‘ಚಿರತೆ ಕಂಡರೆ ಗುಂಡು ಹೊಡೆಯಲು ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆಂಬುದು ವದಂತಿ. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ಮಾತ್ರ ಆ ಅಧಿಕಾರವಿದೆ’ ಎಂದು ಮಾಲತಿ ಪ್ರಿಯಾ ಸ್ಪಷ್ಟಪಡಿಸಿದರು.

ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಕುಮಾರ್ ಪುಷ್ಕರ್ ಕೂಡ ಸ್ಥಳಕ್ಕೆ ಭೇಟಿ ನೀಡಿ ಕಾರ್ಯಾಚರಣೆ ಪರಿಶೀಲಿಸಿ ಸೂಚನೆಗಳನ್ನು ನೀಡಿದರು.

ಮತ್ತೊಂದು ಚಿರತೆ ಸೆರೆ: ತಿ. ನರಸೀಪುರ ತಾಲ್ಲೂಕಿನ ಚಿದರಹಳ್ಳಿಯಲ್ಲಿ ಭಾನುವಾರ ಹೆಣ್ಣು ಚಿರತೆಯೊಂದು ಬೋನಿಗೆ ಬಿದ್ದಿದೆ. ‘ಗ್ರಾಮದ ಕಬ್ಬಿನ ಗದ್ದೆಯ ಸಮೀಪ ಚಿರತೆ ಮರಿಗಳು ಕಂಡು ಬಂದ ಕಾರಣ ಬೋನು ಇಡಲಾಗಿತ್ತು. ಮರಿಗಳನ್ನು ನೋಡಲು ಬಂದ ಬೋನಿನಲ್ಲಿ ಸೆರೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದು, ಇದು ನಾಲ್ವರನ್ನು ಕೊಂದ ಚಿರತೆಯಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

ಮುಖ್ಯಾಂಶಗಳು

- 10 ತಂಡ, 120 ಸಿಬ್ಬಂದಿ
- 16 ಕ್ಯಾಮೆರಾ ಟ್ರ್ಯಾಪ್
- ಚಲವಲನದ ಮೇಲೆ ನಿಗಾ

ಏನಿದು ‘ತುಮಕೂರು ಕೇಜ್’?

ತುಮಕೂರು ಜಿಲ್ಲೆಯ ನರಭಕ್ಷಕ ಚಿರತೆಯ ಸೆರೆಗೆ ವಿಶಿಷ್ಟ ರೀತಿಯಲ್ಲಿ ಬೋನು ಅಳವಡಿಸಲಾಗಿತ್ತು. ಆದ್ದರಿಂದ ಈ ಮಾದರಿ ಬೋನನ್ನು ತುಮಕೂರು ಕೇಜ್ ಎನ್ನಲಾಗುತ್ತಿದೆ. ಬೋನು ಕೊಟ್ಟಿಗೆ ಮಾದರಿಯಲ್ಲಿದ್ದು, ಚಿರತೆಗೆ ಇದು ಬೋನೆಂಬುದು ಗೊತ್ತಾಗದ ರೀತಿ ವಿನ್ಯಾಸ ಮಾಡಲಾಗಿದೆ.

‘ಉಸ್ತುವಾರಿ ಸಚಿವರನ್ನು ಬದಲಾಯಿಸಿ’

‘ಜಿಲ್ಲೆಯಲ್ಲಿ ನಿರಂತರ ಚಿರತೆ– ಹುಲಿ ದಾಳಿ ನಡೆಯುತ್ತಿದ್ದರೂ ನಾಪತ್ತೆಯಾಗಿರುವ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರನ್ನು ಬದಲಿಸಿ, ಬೇರೊಬ್ಬರಿಗೆ ಉಸ್ತುವಾರಿ ನೀಡಬೇಕು’ ಎಂದು ಕಬ್ಬುಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಆಗ್ರಹಿಸಿದರು.

‘ಮಾನವ– ವನ್ಯಪ್ರಾಣಿ ಸಂಘರ್ಷ ತಡೆಯಲು ಅರಣ್ಯ ಇಲಾಖೆಯನ್ನು ಚುರುಕುಗೊಳಿಸಬೇಕಾದ ಸಚಿವರು ಕಾರ್ಯಕ್ರಮವಿದ್ದರೆ ಮಾತ್ರ ಬರುತ್ತಿದ್ದಾರೆ’ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

ಹುಲಿ ಓಡಿಸಿದ ‘ಅರ್ಜುನ’

ಎಚ್.ಡಿ.ಕೋಟೆ (ಮೈಸೂರು ಜಿಲ್ಲೆ): ನಾಗರಹೊಳೆ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಬಳ್ಳೆ ಹಾಡಿ ಯುವಕನನ್ನು ಕೊಂದಿದ್ದ ಹುಲಿಯನ್ನು ದಸರಾ ಆನೆ ‘ಅರ್ಜುನ’ನ ನೇತೃತ್ವದಲ್ಲಿ ಶಿಬಿರದ ಆನೆಗಳಿಂದ ಕಾಡಿಗಟ್ಟಲಾಗಿದೆ.

‘ಜನವಸತಿ ಪ್ರದೇಶದಲ್ಲಿ 4 ಮರಿಗಳೊಂದಿಗೆ ಓಡಾಡುತ್ತಿರುವ ‘ಬ್ಯಾಕ್ ವಾಟರ್ ಫೀಮೇಲ್’ ಹುಲಿಯು ಗ್ರಾಮಸ್ಥರಲ್ಲಿ ಆತಂಕ ಮೂಡಿಸಿತ್ತು. ಈ ಹಿನ್ನೆಲೆಯಲ್ಲಿ ಶಿಬಿರದ ಆನೆಗಳ ಮೂಲಕ ಹುಲಿಯನ್ನು ಕಾಡಿನ ಒಳಭಾಗದವರೆಗೂ ಓಡಿಸಲಾಗಿದೆ' ಎಂದು ಅರಣ್ಯ ಅಧಿಕಾರಿಗಳು ಸೋಮವಾರ ತಿಳಿಸಿದರು.

ಸುದ್ದಿ 2 ನಿಮಿಷ

ವರ್ಗಾವಣೆ ಪ್ರಸ್ತಾವ ಸಲ್ಲಿಸದಂತೆ ಮುಖ್ಯಮಂತ್ರಿ ಸೂಚನೆ

ಬೆಂಗಳೂರು: ವರ್ಗಾವಣೆ ಅವಧಿ ಪೂರ್ಣಗೊಂಡಿರುವುದು, ಬಜೆಟ್ ಅಧಿವೇಶನ ಮತ್ತು ವಿಧಾನಸಭೆಯ ಸಾರ್ವತ್ರಿಕ ಚುನಾವಣೆ ಸಮೀಪಿಸುತ್ತಿರುವುದರಿಂದ ಸರ್ಕಾರಿ ಅಧಿಕಾರಿಗಳ ವರ್ಗಾವಣೆ ಅಥವಾ ನಿಯೋಜನೆಗೆ ಸಂಬಂಧಿಸಿದ ಯಾವುದೇ ಪ್ರಸ್ತಾವವನ್ನು ಸಲ್ಲಿಸದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಮುಖ್ಯಸ್ಥರಿಗೆ ಸೂಚನೆ ನೀಡಿದ್ದಾರೆ.

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಸಹಕಾರ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಹಾಗೂ ವಸತಿ ಇಲಾಖೆ ಕಾರ್ಯದರ್ಶಿಗಳಿಗೆ ಸೋಮವಾರ ಟಿಪ್ಪಣಿಯೊಂದನ್ನು ಹೊರಡಿಸಿರುವ ಮುಖ್ಯಮಂತ್ರಿ, ವರ್ಗಾವಣೆ ಪ್ರಸ್ತಾವ ಸಲ್ಲಿಸದಂತೆ ಸೂಚಿಸಿದ್ದಾರೆ.

ದಟ್ಟ ಅರಣ್ಯದಲ್ಲಿ ವೃದ್ಧೆ ಬಿಟ್ಟು ಹೋದ ಸಂಬಂಧಿಕರು

ಖಾನಾಪುರ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ನಾವಗಾ ಗ್ರಾಮದ ಹೊರವಲಯದ ಅರಣ್ಯದಲ್ಲಿ 90 ವರ್ಷದ ವೃದ್ಧೆಯೊಬ್ಬರು ನಿತ್ರಾಣಗೊಂಡ ಸ್ಥಿತಿಯಲ್ಲಿ ಸೋಮವಾರ ಪತ್ತೆಯಾಗಿದ್ದಾರೆ. ‘ಕುಟುಂಬದವರೇ ಅವರನ್ನು ಅರಣ್ಯದಲ್ಲಿ ಬಿಟ್ಟು ಹೋಗಿದ್ದಾರೆ’ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ರುಮೇವಾಡಿ ಗ್ರಾಮದ ರೈತ ರಾಜು ಘಾಡಿ ಸೋಮವಾರ ಕಾಡಿನ ದಾರಿಯಲ್ಲಿ ಹೊರಟಿದ್ದರು. ಆಗ ವೃದ್ಧೆ ನರಳುವುದು ಕೇಳಿಸಿತು. ಹತ್ತಿರ ಹೋಗಿ ನೋಡಿದ ಅವರು ವೃದ್ಧೆಗೆ ನೀರು ಕುಡಿಸಿ ಉಪಚರಿಸಿದರು. ತಮ್ಮ ಟ್ರ್ಯಾಕ್ಟರ್‌ನಲ್ಲಿ ಅವರನ್ನು ಹತ್ತಿರದ ಧಾಬಾಗೆ ಕರೆತಂದರು. ಧಾಬಾ ಮಾಲೀಕ ಅನಂತ ಜುಂಜವಾಡಕರ, ಉದಯ ಕೋಳೇಕರ ಅವರು ಆಂಬುಲೆನ್ಸ್ ಕರೆಸಿ, ತಾಲ್ಲೂಕು ಆಸ್ಪತ್ರೆಗೆ ದಾಖಲಿಸಿದರು.

ಒಳರೋಗಿಯಾಗಿ ದಾಖಲಿಸಿಕೊಂಡ ವೈದ್ಯರು ತುರ್ತು ಚಿಕಿತ್ಸೆ ನೀಡಿದರು. ವೃದ್ಧೆ ನಾಲ್ಕು– ಐದು ದಿನಗಳಿಂದ ಏನನ್ನೂ ತಿಂದಿಲ್ಲ, ನೀರೂ ಕುಡಿದಿಲ್ಲ. ‘ತೀವ್ರ ನಿತ್ರಾಣಗೊಂಡ ಅವರು ಮಾತನಾಡುವ ಸ್ಥಿತಿಯಲ್ಲಿ ಇಲ್ಲ. ತಾನು ಮುಧೋಳದವಳು ಎಂದಷ್ಟೇ ಹೇಳಿದ್ದಾರೆ’ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಸಂಜೀವ ನಾಂದ್ರೆ ತಿಳಿಸಿದರು.

ವೃದ್ಧೆ ಪತ್ತೆಯಾದ ಸ್ಥಳವು ಗ್ರಾಮದಿಂದ 4 ಕಿ.ಮೀ ದೂರದಲ್ಲಿದೆ. ದಟ್ಟ ಅರಣ್ಯವಾದ್ದರಿಂದ ಜನ ಅತ್ತ ಸುಳಿದಾಡುವುದಿಲ್ಲ. ಮೈ ಕೊರೆಯುವ ಚಳಿಯಲ್ಲೇ ವೃದ್ಧೆ ನಲುಗಿದ್ದಾರೆ. ಕ್ರಿಮಿಕೀಟಗಳು ಅವರನ್ನು ಕಚ್ಚಿದ್ದು ಗಾಯಗಳಾಗಿವೆ. ಯಾವುದೇ ವನ್ಯಪ್ರಾಣಿ ದಾಳಿ ಮಾಡಿದ ಗುರುತು ಇಲ್ಲ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ. ವೃದ್ಧೆ ಬಿಟ್ಟುಹೋದ ಸ್ಥಳದಲ್ಲಿ ಅವರ ಬಟ್ಟೆ, ₹3,000 ಹಣ ಮಾತ್ರ ಸಿಕ್ಕಿದೆ. ಗುರುತಿನ ಚೀಟಿ, ವಿಳಾಸ ಸಿಕ್ಕಿಲ್ಲ.

ಮೊದಲ ಪೀಠಾಧ್ಯಕ್ಷರಾಗಿ ಚಿಕ್ಕರೇವಣಸಿದ್ಧ ಶಿವಶರಣ

ಹಟಗಾರ ಸಮಾಜ: ಪೀಠಾರೋಹಣ ಫೆ.3ಕ್ಕೆ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಜಿಲ್ಲೆಯ ಬನಹಟ್ಟಿಯಲ್ಲಿ ಫೆ.3 ರಂದು ಹಟಗಾರ ಸಮಾಜದ (ನೇಕಾರ) ವತಿಯಿಂದ ಸಮಾಜದ ಮೊದಲ ಪೀಠಾಧ್ಯಕ್ಷ ಚಿಕ್ಕರೇವಣಸಿದ್ಧ ಶಿವಶರಣರ ಪೀಠಾರೋಹಣ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಾಜದ ಮುಖಂಡ ರಾಜಶೇಖರ ಸೊರಗಾಂವಿ, ‘ಫೆ.1 ರಿಂದಲೇ ಕಾರ್ಯಕ್ರಮಗಳು ಆರಂಭವಾಗಲಿದ್ದು, ನೂತನ ಪೀಠಾಧ್ಯಕ್ಷರ ಪುರ ಪ್ರವೇಶ ನಡೆಯಲಿದೆ. ಇಂಚಲದ ಶಿವಾನಂದ ಭಾರತಿ ಸ್ವಾಮೀಜಿ, ರಬಕವಿಯ ಗುರುಸಿದ್ಧೇಶ್ವರ ಸ್ವಾಮೀಜಿ, ಬನಹಟ್ಟಿಯ ಶರಣ ಬಸವ ಸ್ವಾಮೀಜಿ, ಆಳಂದದ ಚನ್ನಬಸವ ಪಟ್ಟದೇವರು ಸಾನ್ನಿಧ್ಯ ವಹಿಸಲಿದ್ದಾರೆ. ಪ್ರತಿದಿನ ಸಂಜೆ ಧಾರ್ಮಿಕ ಕಾರ್ಯಕ್ರಮಗಳು, ವಚನ–ಚಿಂತನಾ ಗೋಷ್ಠಿ, ಸಾಧಕರಿಗೆ ಸನ್ಮಾನ ನಡೆಯಲಿವೆ’ ಎಂದರು.

ಫೆ.3 ರಂದು ಬೆಳಿಗ್ಗೆ ದೇವರದಾಸಿಮಯ್ಯ ದೇವಸ್ಥಾನದ ಗೋಪುರ ಕಟ್ಟಡ ಪೂಜೆ, ವಿಶ್ರಾಂತಿಧಾಮದ ಶಂಕು ಸ್ಥಾಪನೆ ನಡೆಯಲಿದೆ. ಮಧ್ಯಾಹ್ನ 3ಕ್ಕೆ ಎಸ್.ಆರ್.ಎ. ಮೈದಾನದಲ್ಲಿ ಪೀಠಾರೋಹಣ ನಡೆಯಲಿದ್ದು, ಮಹಾಲಿಂಗಪುರದ ಸಹಜಾನಂದ ಸ್ವಾಮೀಜಿ, ಕಲಬುರಗಿಯ ಲಕ್ಷ್ಮಿದೇವಿ ಅಮ್ಮ, ನೀರಲಕೇರಿಯ ಘನಲಿಂಗ ಸ್ವಾಮೀಜಿ, ಮುದನೂರ ಈಶ್ವರಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ ಎಂದರು.

‘ಲಂಚ ಪಡೆದಿರುವುದಾಗಿ ಹೇಳಿದರೆ ರಾಜಕೀಯ ಸನ್ಯಾಸ’

ಒಂದನೇ ಪುಟದಿಂದ...

‘ಈ ಬಗ್ಗೆ ಚರ್ಚೆಗೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವಕಾಶ ಕೊಡಲಿಲ್ಲ. ನಾನು ಎಂದೂ ಇಂಥ ಸ್ಪೀಕರ್ ನೋಡಿಲ್ಲ’ ಎಂದರು.

‘ಎಲ್‌ಓಸಿ ಬಿಡುಗಡೆಗೆ ಶೇ 8 ರಿಂದ 10 ಕಮಿಷನ್ ಪಡೆಯುತ್ತಾರೆ. ಪ್ರತಿ ಗುತ್ತಿಗೆಯಲ್ಲಿ ಶೇ 40 ಕಮಿಷನ್ ಕೊಡಬೇಕಿದೆ. ಗುತ್ತಿಗೆದಾರರೇ ಪ್ರಧಾನಿಗೆ ಪತ್ರ ಬರೆದಿದ್ದಾರೆ. ತನಿಖೆ ನಡೆಸಿದರೆ ದಾಖಲೆ ಕೊಡಲು ಸಿದ್ಧರಿದ್ದಾರೆ. ಒಂದೂವರೆ ವರ್ಷವಾದರೂ ಏಕೆ ಕ್ರಮ ಕೈಗೊಂಡಿಲ್ಲ’ ಎಂದು ಪ್ರಶ್ನಿಸಿದರು.

> **ರಾಜ್ಯ ಸರ್ಕಾರ ಪಡೆಯುತ್ತಿರುವ ಶೇ 40 ಕಮಿಷನ್ ಉಳಿಸಿದರೆ ಸಾಕು 200 ಯೂನಿಟ್ ಉಚಿತ ವಿದ್ಯುತ್, ಕುಟುಂಬದ ಯಾಜಮಾನಿಗೆ ಮಾಸಿಕ ₹ 2 ಸಾವಿರ ಕೊಡಬಹುದು**
> **ಡಿ.ಕೆ.ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

> **ಸಿದ್ದರಾಮಯ್ಯ ಸಮೇತ ಕಾಂಗ್ರೆಸ್‌ನವರ ವಿರುದ್ಧ 59 ಪ್ರಕರಣಗಳು ಲೋಕಾಯುಕ್ತದಲ್ಲಿ ದಾಖಲಾಗಿತ್ತು. ಎಸಿಬಿ ಸೃಜಿಸಿ, ಪ್ರಕರಣ ಮುಚ್ಚಿಹಾಕಲು ‘ಬಿ’ ವರದಿ ಹಾಕಿದರು.**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

‘₹ 35 ಸಾವಿರ ಕೋಟಿ ಹಗರಣ’

ಒಂದನೇ ಪುಟದಿಂದ...

ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರೀಡೂ ಹೆಸರಿನಲ್ಲಿ ಬಿಡಿಎ ಜಮೀನು ಡಿನೋಟಿಫೈ ಮಾಡಿದ ಅಕ್ರಮದ ಕುರಿತು ಮಹಾಲೇಖಪಾಲರ(ಸಿಎಜಿ) ವರದಿಯಲ್ಲೇ ಬಹಿರಂಗವಾಗಿದೆ. ಬಿಡಿಎ ಸ್ವಾಧೀನಪಡಿಸಿಕೊಂಡಿದ್ದ 900 ಎಕರೆ ಜಮೀನನ್ನು ಅಕ್ರಮವಾಗಿ ಡಿನೋಟಿಫೈ ಮಾಡಿದ್ದು, ಬೆಂಗಳೂರಿನ 10,000 ಕುಟುಂಬಗಳಿಗೆ ಅನ್ಯಾಯವಾಗಿದೆ’ ಎಂದರು.

‘ಸಿದ್ದರಾಮಯ್ಯ ಅವಧಿಯಲ್ಲಿ ಬೆಂಗಳೂರನ್ನು ತ್ಯಾಜ್ಯದ ನಗರ ಮಾಡಿದ್ದರು. ಬಡವರು ತಿನ್ನುವ ಅನ್ನ, ವಸತಿ ನಿಲಯಗಳ ವಿದ್ಯಾರ್ಥಿಗಳಿಗೆ ಪೂರೈಕೆ ಮಾಡಿದ ಹಾಸಿಗೆ, ದಿಂಬಿನ ಖರೀದಿಯಲ್ಲೂ ಭ್ರಷ್ಟಾಚಾರ ನಡೆದಿತ್ತು. ನಗರಾಭಿವೃದ್ಧಿ ಸಚಿವರಾಗಿದ್ದ ಕೆ.ಜೆ. ಜಾರ್ಜ್, ಟೆಂಡರ್ ಶ್ಯೂರ್ ರಸ್ತೆ ನಿರ್ಮಾಣದಲ್ಲಿ ಶೇಕಡ 53.86ರಷ್ಟು ಹೆಚ್ಚುವರಿ ಮೊತ್ತ ಪಾವತಿಸಿದ್ದರು’ ಎಂದು ವಾಗ್ದಾಳಿ ನಡೆಸಿದರು.

‘ಜನರ ವಿರೋಧವನ್ನು ಲೆಕ್ಕಿಸದೆ ಹಣ ಲೂಟಿಗಾಗಿ ಉಕ್ಕಿನ ಸೇತುವೆ ನಿರ್ಮಾಣಕ್ಕೆ ಒಪ್ಪಿಗೆ ನೀಡಲಾಗಿತ್ತು. ಬಡವರಿಗಾಗಿ 50,000 ಮನೆ ನಿರ್ಮಿಸುವ ಯೋಜನೆಯ ಗುತ್ತಿಗೆಯನ್ನು ಕೇವಲ ಹತ್ತು ಗುತ್ತಿಗೆದಾರರಿಗೆ ನೀಡಲಾಗಿತ್ತು. ತ್ಯಾಜ್ಯ ನಿರ್ವಹಣೆಯಲ್ಲೂ ₹ 1,006 ಕೋಟಿ ಹಗರಣ ನಡೆದಿತ್ತು’ ಎಂದು ಟೀಕಿಸಿದರು.

ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತಕ್ಕೆ ದೂರು

ಟೆಂಡರ್ ಶ್ಯೂರ್ ರಸ್ತೆ ಕಾಮಗಾರಿಗಳಲ್ಲಿ ಗುತ್ತಿಗೆದಾರರಿಗೆ ಶೇ 53.86ರಷ್ಟು ಹೆಚ್ಚುವರಿ ಮೊತ್ತ ಪಾವತಿಸಿ, ಅಕ್ರಮ ಎಸಗಿರುವ ಆರೋಪಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ವಿರುದ್ಧ ತನಿಖೆ ನಡೆಸುವಂತೆ ಒತ್ತಾಯಿಸಿ ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಛಲವಾದಿ ನಾರಾಯಣಸ್ವಾಮಿ ನೇತೃತ್ವದಲ್ಲಿ ಲೋಕಾಯುಕ್ತರಿಗೆ ಸೋಮವಾರ ದೂರು ಸಲ್ಲಿಸಲಾಗಿದೆ.

ದೂರು ಸಲ್ಲಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ನಾರಾಯಣಸ್ವಾಮಿ, ‘ಕಾಂಗ್ರೆಸ್‌ನವರು ನಮ್ಮ ಸರ್ಕಾರದ ವಿರುದ್ಧ ದಾಖಲೆಗಳಿಲ್ಲದೆ ಶೇಕಡ 40ರಷ್ಟು ಕಮಿಷನ್ ಆರೋಪ ಮಾಡುತ್ತಿದ್ದಾರೆ. ಅದಕ್ಕೆ ಪ್ರತಿಯಾಗಿ ಸಿದ್ದರಾಮಯ್ಯ ವಿರುದ್ಧ ನಾವು ಲೋಕಾಯುಕ್ತಕ್ಕೆ ದಾಖಲೆ ಸಹಿತ ದೂರು ನೀಡಿದ್ದೇವೆ’ ಎಂದರು. ‘ಸಿದ್ದರಾಮಯ್ಯ ವಿರುದ್ಧದ ಆರೋಪಕ್ಕೆ ಪುಷ್ಟಿ ನೀಡುವ 10–12 ದಾಖಲೆಗಳನ್ನು ದೂರಿನ ಜತೆ ನೀಡಿದ್ದೇವೆ. ದಾಖಲೆಗಳ ಆಧಾರದಲ್ಲಿ ಕ್ರಮ ಜರುಗಿಸುವುದಾಗಿ ಲೋಕಾಯುಕ್ತರು ಭರವಸೆ ನೀಡಿದ್ದಾರೆ’ ಎಂದರು.

ಕಾಂಗ್ರೆಸ್ ಅವಧಿ– ಶೇ 60 ಪ್ರೀಮಿಯಂ: ಸಿ.ಎಂ

ಒಂದನೇ ಪುಟದಿಂದ...

‘ಬಿಬಿಎಂಪಿಯಲ್ಲಿ ಸುಮಾರು ₹ 800 ಕೋಟಿಯಲ್ಲಿ ಶೇ 60ರಷ್ಟು ಪ್ರೀಮಿಯಂ ನೀಡಿರುವುದು ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರದ ದಾಖಲೆಗಳಲ್ಲಿದೆ. ಅವರು ಅಂಥ ಶೂರರು. ಅಂಥವರು ಭ್ರಷ್ಟಾಚಾರದ ಬಗ್ಗೆ ಮಾತನಾಡಿದರೆ ಅದು ಸೋಗಲಾಡಿತನ. ಕಾಂಗ್ರೆಸ್‌ನವರ ಭ್ರಷ್ಟಾಚಾರಗಳ ಬಗ್ಗೆ ನಮ್ಮ ಸರ್ಕಾರ ಈಗಾಗಲೇ ಲೋಕಾಯುಕ್ತಕ್ಕೆ ದೂರು ನೀಡಿದೆ. ನಮ್ಮ ವಿರುದ್ಧ ಆರೋಪ ಮಾಡುತ್ತಿರುವ ಪ್ರಕರಣಗಳ ಬಗ್ಗೆ ಅವರೂ ಲೋಕಾಯುಕ್ತಕ್ಕೆ ದೂರು ನೀಡಲಿ’ ಎಂದು ಕಾಂಗ್ರೆಸ್ ನಾಯಕರಿಗೆ ಸವಾಲು ಹಾಕಿದರು.

ಕರ್ನಾಟಕ ಸರ್ಕಾರ

(ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ.

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

No: EE/RWSS/Dvn/SMG/TS/JJM/E-Proc/2022-23/2453 Date: 21.01.2023

ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ ವ್ಯಾಪ್ತಿಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಇಂಡೆಂಟ್ ಸಂಖ್ಯೆ: (1) 53528 (2) 53527 (3) 53529 (4) 53530 (5) 53533 (6) 53534 (7) 53535 (8) 53540 (9) 53539 (10) 53536 (11) 53537 (12) 53523 (13) 53522 (14) 53525 (15) 53526 (16) 52010 CALL-2 (17) 33100 CALL-6 (18) 48640 CALL-3 (19) 48643 CALL-3 (20) 48646 CALL-3

ಟೆಂಡರ್ ವಿವರಗಳು, ಷರತ್ತುಗಳು ಮತ್ತು ತಿದ್ದುಪಡಿಗಳು ಅಥವಾ ಬದಲಾವಣೆಗಳು https://www.eproc.karnataka.gov.in ಜಾಲತಾಣದಲ್ಲಿ ಲಭ್ಯವಿದ್ದು, ಅರ್ಹ ಗುತ್ತಿಗೆದಾರರು/ ಬಿಡ್ಡುದಾರರು ಅಗತ್ಯ ದಾಖಲೆಗಳನ್ನು ಮತ್ತು ತಮ್ಮ ಬಿಡ್ ಅನ್ನು ಸದರಿ ಜಾಲತಾಣದಲ್ಲಿಯೇ ಸಲ್ಲಿಸುವುದು.

ಟೆಂಡರ್‌ನ ಕೆಲವು ಷರತ್ತುಗಳು :

(1) ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 28.01.2023 & 29.01.2023ರ ಸಂಜೆ 5.30.
(2) ಏಕಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ: 30.01.2023 & 31.01.2023ರ ಬೆಳಿಗ್ಗೆ 11.30.
(3) ದ್ವಿಲಕೋಟೆಯ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 30.01.2023 & 31.01.2023ರ ಬೆಳಿಗ್ಗೆ 11.30.
(4) ದ್ವಿಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ : 01.02.2023ರ ಬೆಳಿಗ್ಗೆ 11.30.
(5) ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಾವಧಿ : ಏಕ ಲಕೋಟೆ 3 ತಿಂಗಳು (90 ದಿನಗಳು). ದ್ವಿ ಲಕೋಟೆ 6 ತಿಂಗಳು (180 ದಿನಗಳು)

ಸಹಿ/–
ಕಾರ್ಯಪಾಲಕ ಇಂಜಿನಿಯರ್,
ಗ್ರಾ.ಕು.ನೀ & ನೈ ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ./ಶಿ/ನಂ.163/ಝೇಂಕಾರ್/2022–23

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನೀಯರರವರ ಕಛೇರಿ

ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರಿ

ಸಂಖ್ಯೆ:ಕಾಪಾಅ/ಪರಾಇಂ/ವಿಯಾ/ಟೆ ಪ್ರ/ತಾಸಾ–3/5054/2022–23/1154 ದಿನಾಂಕ: 12.01.2023

ಅಲ್ಪಾವದಿ ಟೆಂಡರ ಪ್ರಕಟಣೆ "ಇ–ಪ್ರೊಕ್ಯೂಮೆಂಟ್" ಮೂಲಕ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರಿ ರವರಿಂದ KW-4 ದ್ವಿ, ಲಕೋಟೆ ಪದ್ಧತಿ ನಿಬಂಧನೆಗೊಳಪಟ್ಟ ರಸ್ತೆ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಅಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.

1) ಕಾಮಗಾರಿಯ ವಿವರ: (1) ವಡಗೇರಾ ತಾಲ್ಲೂಕಿನ ಚನ್ನೂರ ದಿಂದ ಗೊಂದನೂರವರೆಗೆ ಹೋಗುವ ರಸ್ತೆಗೆ 0.77 ಮೀ., ಸಿ.ಡಿ.ಗೆ ತಡೆಗೋಡೆ ನಿರ್ಮಾಣ ಹಾಗೂ ಅಡಕಲ್ ಬಂಡಿ ಕ್ರಾಸ್ ದಿಂದ ಕೊಂಗಂಡಿ ವರೆಗೆ ಉಳಿದ ಕಾಮಗಾರಿ, INDENT NO. RDPR/2022-23/RD/WORK_ INDENT98470 2) ಟೆಂಡರಿಗಿಟ್ಟ ಮೊತ್ತ: ರೂ. 2,08,27,293=91 3) ಲೆಕ್ಕ ಶೀರ್ಷಿಕೆ: 2022–23ನೇ ಸಾಲಿನ 5054– ಮಾನ್ಯ ಮುಖ್ಯಮಂತ್ರಿ ವಿಶೇಷ ಅನುದಾನ ಯೋಜನ 4) ಗುತ್ತಿಗೆದಾರರ, ಅರ್ಹತೆ 1ನೇ ಹಾಗೂ ಮೇಲ್ಪಟ್ಟು ದರ್ಜೆ 5) ಟೆಂಡರ ಫಾರಂ ಪಡೆಯುವ ದಿನಾಂಕ: 16–01–2023 ರಿಂದ 27–01–2023, 6) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ: ಇ–ಪ್ರೊಕ್ಯೂರ್‌ಮೆಂಟ್ ಪ್ರಕಾರ, 7) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: 27–01–2023 ಸಾಯಂಕಾಲ 4.00 ಗಂಟೆವರೆಗೆ 8) ತಾಂತ್ರಿಕ ಬಿಡ್ಡ್ ತೆರೆಯುವ ದಿನಾಂಶ 30–01–2023 ಬೆಳಿಗ್ಗೆ 11.00 ಗಂಟೆಯ ನಂತರ 9) ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 06–02–2023 ಬೆಳಿಗ್ಗೆ 11.00 ಗಂಟೆಯ ನಂತರ 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಸ್ಟೇಷನ್ ಏರಿಯಾ ಯಾದಗಿರ 585202, 11) ಅಂತರ್ಜಾಲ ತಾಣದ: www.eproc karnataka.gov.in.

ವಿ.ಸೂ. ಪ್ರೀ ಬಿಡ್ ಮಿಟಿಂಗ್ ದಿನಾಂಕ: 23.01.2023 ಸ್ಥಳ: ಕಾರ್ಯಪಾಲಕ ಇಂಜಿನೀಯರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಕಛೇರಿ, ಸ್ಟೇಷನ್ ರಸ್ತೆ, ಯಾದಗಿರ.

ಸಹಿ/– ಕಾರ್ಯಪಾಲಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,
ಯಾದಗಿರಿ.

ವಾ.ಸಾ.ಸಂ.ಇ/ಯಾದಗಿರಿ/427/ಕೆ.ಎಸ್.ಎಂ.ಪಿ&ಎ/2022–23

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಆಸ್ತಿ ಅಧಿಕಾರಿಗಳವರ ಕಛೇರಿ, ಗಾ.ಕೃ.ವಿ.ಕೇ, ಬೆಂಗಳೂರು–560065.

ಸಂಖ್ಯೆ:ಆಅ/ಟಿ.ಎನ್/ಭದ್ರತೆ ಮತ್ತು ಸ್ವಚ್ಛತೆ/2022–23 ದಿನಾಂಕ: 16.01.2023

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಮೂಲಕ) (ದ್ವಿ–ಲಕೋಟೆ ಪದ್ಧತಿ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಈ ಕೆಳಗಿನ ಕೆಲಸಗಳನ್ನು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ದ್ವಿ–ಲಕೋಟೆ ಪದ್ಧತಿಯಲ್ಲಿ ಖ್ಯಾತ ಭದ್ರತಾ ಮತ್ತು ಸ್ವಚ್ಛತಾ ಏಜನ್ಸಿಗಳಿಂದ ಟೆಂಡರನ್ನು ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ವಿವರ, ದ್ವಿಲಕೋಟೆ ಪದ್ಧತಿಯ ಷರತ್ತುಗಳು, ಷೆಡ್ಯೂಲ್ ವಿವರಗಳು ಕೃಷಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್: www.eproc.karnataka.gov.in ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಮಾದರಿಯಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.

ಕ್ರ.ಸಂ	ಕೆಲಸದ ವಿವರ	ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ (ರೂ.ಗಳಲ್ಲಿ)	ಕೆಲಸಕ್ಕೆ ಮೀಸಲಿಟ್ಟ ಅವಧಿ
1	ಗಾಂಧಿ ಕೃಷಿ ವಿಜ್ಞಾನ ಕೇಂದ್ರ ಮತ್ತು ಹೆಬ್ಬಾಳ ಆವರಣದ ಭದ್ರತಾ ವ್ಯವಸ್ಥೆ ಮಾಡುವುದು.	385.00	5,77,500	1 ವರ್ಷ
2	ಕೃಷಿ ಕಾಲೇಜು ಹಾಸನ, ಕೃಷಿ ಕಾಲೇಜು ಮಂಡ್ಯ ಮತ್ತು ರೇಷ್ಮೆ ಕಾಲೇಜು ಚಿಂತಾಮಣಿ ಭದ್ರತಾ ವ್ಯವಸ್ಥೆ ಮತ್ತು ಸ್ವಚ್ಛತಾ ವ್ಯವಸ್ಥೆ ಮಾಡುವುದು.	176.00	2,64,000	1 ವರ್ಷ
3	ಗಾಂಧಿ ಕೃಷಿ ವಿಜ್ಞಾನ ಕೇಂದ್ರ ಮತ್ತು ಹೆಬ್ಬಾಳ ಆವರಣದ ಸ್ವಚ್ಛತಾ ವ್ಯವಸ್ಥೆ ಮಾಡುವುದು.	255.00	3,82,500	1 ವರ್ಷ

ಈ ಮೇಲಿನ ಕೆಲಸಗಳು ದ್ವಿಲಕೋಟೆ ಪದ್ಧತಿಯಲ್ಲಿರುತ್ತದೆ. ದ್ವಿಲಕೋಟೆ ಪದ್ಧತಿಯ ಷರತ್ತುಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ.

1) ಪ್ರೀ–ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ: 06.02.2023ರ ಬೆಳಗ್ಗೆ 10:30 ಗಂಟೆಗೆ ಆಸ್ತಿ ಅಧಿಕಾರಿಗಳ ಕಛೇರಿಯಲ್ಲಿ.
2) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: 10.02.2023ರ ಸಂಜೆ 4:00 ಗಂಟೆಯವರೆಗೆ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 14.02.2023ರ ಬೆಳಗ್ಗೆ 10:30 ಗಂಟೆಗೆ. 4)ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 24.02.2023ರ ಬೆಳಗ್ಗೆ 10:30 ಗಂಟೆಗೆ.

ಎಲ್ಲಾ ಟೆಂಡರ್‌ದಾರರು ಈ ಟೆಂಡರ್‌ನಲ್ಲಿ ಭಾಗವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ದಾಖಲಾತಿಯನ್ನು ಮಾಡಿಕೊಂಡು ಐ.ಡಿ. ಹಾಗೂ ಪಾಸ್‌ವರ್ಡ್‌ಗಳನ್ನು ಹೊಂದಿರುವುದು ಕಡ್ಡಾಯವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸುವುದು. ಫೋನ್ ನಂ.: 080–23332765 ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನ ಸಹಾಯವಾಣಿ: 8046010000 / 8068948777 ಮತ್ತು support@eprochelpdesk.com ನ್ನು ಸಂಪರ್ಕಿಸುವುದು.

ಸಹಿ/–
ಆಸ್ತಿ ಅಧಿಕಾರಿಗಳು.

ವಾಸಾಸಂಇ/ವಾಪ್ರ/ಜಿಎ/4272/2022–23

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ರಾಮನಗರ ಜಿಲ್ಲೆ, ರಾಮನಗರ

ಜಿಲ್ಲಾ ನಗರಾಭಿವೃದ್ಧಿ ಕೋಶ, ರಾಮನಗರ–562159

Telephone No: 080-27274108, E-mail: dudc_ramanagara@yahoo.co.in

ಸಂ:ರಾಜಿನಕೋ/ಎಂಯುಎನ್(1)/ಅಮೃತ ನ–4/ಚನ್ನಪಟ್ಟಣ/ಸಿಆರ್/168/2022–23, ದಿ: 21.01.2023

ಟೆಂಡರ್ ಅಧಿಸೂಚನೆ

ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) 4ನೇ ಹಂತದ ಯೋಜನೆಯ ಈ ಕೆಳಕಂಡ ಕಾಮಗಾರಿಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ರಾಮನಗರ ಜಿಲ್ಲೆ, ರಾಮನಗರರವರು 1ನೇ ದರ್ಜೆ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಕಾಮಗಾರಿಗಳ ವಿವರ	ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಲಕ್ಷಗಳಲ್ಲಿ)	ಗುತ್ತಿಗೆ ಅವಧಿ
1.	ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) 4ನೇ ಹಂತದ ಯೋಜನೆಯಡಿ ರಾಮನಗರ ಜಿಲ್ಲೆಯ ಚನ್ನಪಟ್ಟಣ ನಗರಸಭೆ ವ್ಯಾಪ್ತಿಯಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ, ಪೌರಕಾರ್ಮಿಕರಿಗೆ ವಿಶ್ರಾಂತಿ ಗೃಹ ನಿರ್ಮಾಣ ಮತ್ತು ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಮತ್ತು ಅಂಗನವಾಡಿ ಕಟ್ಟಡಗಳಲ್ಲಿ ವಿಕಲಸ್ನೇಹಿ ಶೌಚಾಲಯ ಮತ್ತು ಜಾರುಹಾದಿ ನಿರ್ಮಾಣ ಕಾಮಗಾರಿಗಳು (ಇಂಡೆಂಟ್ ನಂ. DMA/2022-23/BD/WORK_INDENT 144785)	175.59 (GST ಹೊರತುಪಡಿಸಿ)	2.64	18 ತಿಂಗಳು

ಆಸಕ್ತಿವುಳ್ಳ 1ನೇ ದರ್ಜೆ ಗುತ್ತಿಗೆದಾರರು ಇ–ಪ್ರಕ್ಯೂರ್‌ಮೆಂಟ್ ಪ್ಲಾಟ್ ಫಾರಂನಲ್ಲಿ ನೊಂದಾಯಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸುವುದು. ಗುತ್ತಿಗೆದಾರರು ಟೆಂಡರ್ ದಸ್ತಾವೇಜುಗಳನ್ನು ಇ–ಪ್ರಕ್ಯೂರ್‌ಮೆಂಟ್ ವೇದಿಕೆ www.eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಂಡು ವಿದ್ಯುನ್ಮಾನ ಮೂಲಕವೇ www.eproc.karnataka.gov.in ನಲ್ಲಿ ಸಲ್ಲಿಸುವುದು. ಇಎಂಡಿ ಮತ್ತು ಟೆಂಡರ್ ಸಂಸ್ಕರಣಾ ಶುಲ್ಕವನ್ನು ಇ–ಪ್ರಕ್ಯೂರ್‌ಮೆಂಟ್ ಆನ್‌ಲೈನ್ ಮೂಲಕವೇ ಪಾವತಿಸುವುದು.

1.	ಪೂರ್ವಭಾವಿ ಸಭೆ (Pre-bi)	30.01.2023 ಬೆಳಿಗ್ಗೆ 11:00 ರಿಂದ 12.00 ಗಂಟೆವರೆಗೆ
2.	ಪೂರ್ಣಗೊಳಿಸಿದ ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	06.02.2023 ಸಂಜೆ 17.00 ಗಂಟೆಗೆ
3.	ಟೆಂಡರ್‌ಗಳನ್ನು (ತಾಂತ್ರಿಕ ಬಿಡ್) ತೆರೆಯುವ ದಿನಾಂಕ:	07.02.2023 ಸಂಜೆ 17.00 ಗಂಟೆ ನಂತರ

ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು. ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ರಾಮನಗರ ಜಿಲ್ಲೆ, ರಾಮನಗರ

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್ ಹಾವೇರಿ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಜಿಲ್ಲಾಡಳಿತ ಭವನ, ಹಾವೇರಿ – 581110

Email: dhohaveri@gmail.com Ph:08375-249066 Fax:08375-249009

ಕ್ರಸಂ/ಜಿಆಕುಕಹಾ/ಸಿಬ್ಬಂದಿ–1/ವಹಿ– 50/2022–23/2100 ದಿನಾಂಕ : 23–01–2023

ಪತ್ರಿಕಾ ಪ್ರಕಟಣೆ

ವಿಷಯ: ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳಿಗೆ ಎಂಬಿಬಿಎಸ್ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವ ಕುರಿತು

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ/ಆಕುಕ/297/ಹೆಚ್‌ಎಸ್‌ಹೆಚ್/2015 ಬೆಂಗಳೂರು ದಿ: 22/04/2016
2. ಸರ್ಕಾರದ ಆದೇಶ ಸಂಖ್ಯೆ/ಆಕುಕ/240/ಹೆಚ್‌ಎಸ್‌ಹೆಚ್/2017 ಬೆಂಗಳೂರು ದಿ: 31/05/2017
3. ಸರ್ಕಾರದ ಆದೇಶ ಸಂಖ್ಯೆ/ಆಕುಕ/228/ಹೆಚ್‌ಎಸ್‌ಹೆಚ್/2020 ಬೆಂಗಳೂರು ದಿ: 01/07/2020
4. ಮಾನ್ಯ ಜಿಲ್ಲಾಧಿಕಾರಿಗಳು, ಹಾವೇರಿ ಇವರ ಅನುಮೋದನೆ ದಿ: 23/01/2023

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಹಾವೇರಿ ಜಿಲ್ಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸಮುದಾಯ ಆರೋಗ್ಯ ಕೇಂದ್ರ, ಆರೋಗ್ಯ ವಿಸ್ತರಣಾ ಕೇಂದ್ರಗಳಲ್ಲಿ ಖಾಲಿ ಇರುವ ಒಟ್ಟು 17 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳಿಗೆ ಅರ್ಹ ಎಂಬಿಬಿಎಸ್ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ಮತ್ತು ಮೆರಿಟ್ ಕಂ ರೋಸ್ಟರ್ ಆಧಾರದ ಮೇಲೆ ನೇಮಕಾತಿ ಮಾಡಲು ದಿನಾಂಕ: 25/01/2023 ರಿಂದ 03/02/2023 ವರೆಗೆ ಅರ್ಜಿ ಅಹ್ವಾನಿಸಲಾಗಿದ್ದು. ಅರ್ಹ ಅಭ್ಯರ್ಥಿಗಳು ಮುದಂ/ನೊಂದಾಯಿತ ಅಂಚೆ ಮುಖಾಂತರ "ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಜಿಲ್ಲಾ ಆಡಳಿತ ಭವನ ಹಾವೇರಿ–581110" ಇವರ ಹೆಸರಿಗೆ ಸಲ್ಲಿಸಲು ಸೂಚಿಸಿದೆ. ಇನ್ನು ಮುಂದೆ ಪ್ರತಿ ಸೋಮವಾರ ಹಾಗೂ ಗುರುವಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಹಾವೇರಿ ಇಲ್ಲಿ ಎಂಬಿಬಿಎಸ್ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಕುರಿತು ನೇರ ಸಂದರ್ಶನ ನಡೆಸಲಾಗುವುದು.

ಗುತ್ತಿಗೆ ಎಂ.ಬಿ.ಬಿ.ಎಸ್ ವೈದರನ್ನು ನೇಮಕಾತಿ ಮಾಡಲು ತಯಾರಿಸಲಾದ ರೋಸ್ಟರ್

ಕ್ರ ಸಂ	ಹುದ್ದೆಯ ಹೆಸರು	ಒಟ್ಟು ಹುದ್ದೆ	ವರ್ಗೀಕರಣ									
			ಪ್ರವರ್ಗ	ಇತರೆ	ಮಹಿಳಾ	ಗ್ರಾಮೀಣ	ಮಾ.ಸೈ	ಕ.ಮಾ.ಅ	ಯೋ.ನಿರಾ	ಅಂ.ವಿ	ತೃತೀಯ ಲಿಂಗ	ಒಟ್ಟು
1	ಎಂಬಿಬಿಎಸ್ ವೈದ್ಯಾಧಿಕಾರಿಗಳ ಗುತ್ತಿಗೆ ಆಧಾರದ ಮೇಲೆ ನೇಮಕಾತಿ	17	ಪ.ಜಾ	1	1	1	0	0	0	0	0	3
2			ಪ.ಪಂ	1	0	0	0	0	0	0	0	1
3			ಪ್ರ–1	1	0	0	0	0	0	0	0	1
4			ಪ್ರ–2 ಎ	1	1	0	0	0	0	0	0	2
5			ಪ್ರ–2 ಬಿ	0	1	0	0	0	0	0	0	1
6			ಪ್ರ–3 ಎ	1	0	0	0	0	0	0	0	1
7			ಪ್ರ–3 ಬಿ	0	0	0	0	0	0	0	0	0
8			ಸಾ.ಅ	2	3	2	0	0	0	1	0	8
ಒಟ್ಟು				7	6	3	0	0	0	1	0	17

ಷರತ್ತುಗಳು:
1. ಅರ್ಹ ಅಭ್ಯರ್ಥಿಗಳು ಅರ್ಜಿ ಜೊತೆಗೆ ಎಸ್.ಎಸ್.ಎಲ್.ಸಿ, ಪಿ.ಯು.ಸಿ ಹಾಗೂ ಎಂಬಿಬಿಎಸ್ ವಿದ್ಯಾರ್ಹತೆಯ ಎಲ್ಲಾ ವರ್ಷದ ಅಂಕಪಟ್ಟಿಗಳು, ಹೌಸ್‌ಮೆನ್‌ಶಿಪ್ ಮುಗಿದ ಬಗ್ಗೆ ಪ್ರಮಾಣ ಪತ್ರ ಮತ್ತು ಕಾನೂನು ಬದ್ಧವಾಗಿ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪ್ರಮಾಣ ಪತ್ರ ಹಾಗೂ ಕೆಎಂಸಿ ನೊಂದಣಿ ಪ್ರಮಾಣ ಪತ್ರ, ಗುರುತಿನ ಚೀಟಿ (ಆಧಾರ) ಮತ್ತು ಕನ್ನಡ ಮಾಧ್ಯಮ, ಗ್ರಾಮೀಣ ಅಭ್ಯರ್ಥಿ, ಇತರೆ ಮೀಸಲಾತಿಗೆ ಸಂಬಂಧಿಸಿದ ದಾಖಲಾತಿಗಳನ್ನು ಝೆರಾಕ್ಸ ಮಾಡಿಸಿ ದೃಢೀಕರಿಸಿ ತಮ್ಮ ಬಯೋಡಾಟಾ ಅರ್ಜಿಯೊಂದಿಗೆ ದ್ವಿ–ಪ್ರತಿಯಲ್ಲಿ ಎಲ್ಲ ದಾಖಲಾತಿಗಳನ್ನು ಲಗತ್ತಿಸಿ ಸಲ್ಲಿಸುವುದು.
2. ವಯೋಮಿತಿ ಗರಿಷ್ಠ: 50 ವರ್ಷ ಹಾಗೂ ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದಿದ ವೈದ್ಯರು 65 ವರ್ಷ ಮೀರುವಂತಿಲ್ಲ.
3. ಗುತ್ತಿಗೆ ನೇಮಕಾತಿಯು ಸರಕಾರದಿಂದ ಕಾಲ ಕಾಲಕ್ಕೆ ಹೊರಡಿಸಲಾಗಿರುವ ಆದೇಶದ ಅನುಬಂಧ–01 ಮತ್ತು 02 ರ ಷರತ್ತಿಗೆ ಒಳಪಟ್ಟಿರುತ್ತದೆ.
4. ಮೀಸಲಾತಿ ಕೋರಿದ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ ಇತರೆ ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಅಧಿಕಾರವನ್ನು ಮಾನ್ಯ ಜಿಲ್ಲಾಧಿಕಾರಿಗಳು, ಹಾವೇರಿ ಇವರು ಹೊಂದಿರುತ್ತಾರೆ.
5. ವೇತನ: ಮಾಸಿಕವಾಗಿ ಸಂಚಿತ ವೇತನ ರೂ.60000/–
6. ಸದರಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ವೈದ್ಯರನ್ನು ಯಾವುದೇ ಕಾರಣಕ್ಕೂ ಸರ್ಕಾರಿ ಸೇವೆಯಲ್ಲಿ ಸಕ್ರಮಗೊಳಿಸಲಾಗುವುದಿಲ್ಲ
7. ಸದರಿ ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು 1 ವರ್ಷ ಅವಧಿಗೆ ನೇಮಕಾತಿ ಮಾಡಿಕೊಳ್ಳಲಾಗುವುದು. ಸದರಿ ವೈದ್ಯರು ತೃಪ್ತಿಕರವಾಗಿ ಸೇವೆ ಸಲ್ಲಿಸಿರುವುದನ್ನು ಪರಿಶೀಲಿಸಿ ಮರುವರ್ಷ ಗುತ್ತಿಗೆ ಅವಧಿ ವಿಸ್ತರಣೆ ಮಾಡಲಾಗುವುದು

ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಈ ಕಛೇರಿಯ ವೈದ್ಯರ ಸಂಕಲನದ ವಿಷಯ ನಿರ್ವಾಹಕರಾದ ಶ್ರೀ ಮಂಜು ಗಂಟಿಸಿದ್ದಪ್ಪನವರ, ಪ್ರಥಮ ದರ್ಜೆ ಸಹಾಯಕರು ಇವರನ್ನು, (ದೂರವಾಣಿ ಸಂಖ್ಯೆ: 9538440933) ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಅಧಿಕಾರಿಗಳು, ಹಾವೇರಿ

ವಾ.ಸಾ.ಇ/ಹಾವೇರಿ/496/2022–23/ದೇಶಪಾಂಡೆಪಬ್ಲಿಸಿಟಿ

‘1990ರಿಂದ ಗೃಹಿಣಿಯರ ಆತ್ಮಹತ್ಯೆ ಹೆಚ್ಚಳ’

ಜೈಪುರ ಸಾಹಿತ್ಯೋತ್ಸವದಲ್ಲಿ ಹೆಣ್ಣು ಮಕ್ಕಳಿಗೆ ಅಮ್ಮಂದಿರು ಹೇಳುವ ಸುಳ್ಳುಗಳ ಕುರಿತ ಗೋಷ್ಠಿ

• ವಿಶಾಖ ಎನ್.

ನೀಲಾಂಜನ ಭೌಮಿಕ್‌ ಕಾಂತಾ ಸಿಂಗ್

ಜೈಪುರ: ‘1990ರ ದಶಕದ ನಂತರ ಆತ್ಮಹತ್ಯೆ ಮಾಡಿಕೊಳ್ಳುವ ಮಹಿಳೆಯರ ಪ್ರಮಾಣದಲ್ಲಿ ದಿಢೀರನೆ ಏರಿಕೆ ಆಗತೊಡಗಿತು. ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೊ (ಎನ್‌ಸಿಆರ್‌ಬಿ) ಇದನ್ನು ಗೃಹಿಣಿಯರ ಆತ್ಮಹತ್ಯೆಯಲ್ಲಿನ ಹೆಚ್ಚಳ ಎಂದು ಹೇಳಿತು. ವಿವಾಹದ ನಂತರ ಭಾವನಾತ್ಮಕ ಕಾರಣಗಳಿಂದಾಗಿ ಆತ್ಮಹತ್ಯೆ ಮಾಡಿಕೊಳ್ಳುವವರು ಹೆಚ್ಚಾಗುತ್ತಿದ್ದಾರೆನ್ನುವ ಈ ವಿಷಯವೇ ಕಳವಳಕಾರಿ’ ಎಂದು ಲೇಖಕಿ ಹಾಗೂ ಅನುವಾದಕಿ ನೀಲಾಂಜನ ಭೌಮಿಕ್ ಮಾಹಿತಿ ನೀಡಿದರು.

‘ಲೈಸ್ ಅವರ್ ಮದರ್ ಟೋಲ್ಡ್ ಅಸ್: ಇಂಡಿಯನ್ ವುಮನ್ಸ್ ಬರ್ಡನ್’ ಎಂಬ ತಮ್ಮದೇ ಕೃತಿಯ ಶೀರ್ಷಿಕೆಯಡಿಯ ಗೋಷ್ಠಿಯಲ್ಲಿ ಅವರು ಸೋಮವಾರ ಜೈಪುರ ಸಾಹಿತ್ಯೋತ್ಸವದಲ್ಲಿ ಮಾತನಾಡಿದರು.

‘ಭಾರತದಲ್ಲಿ ಶೇ [illegible]ರಷ್ಟು ಮಹಿಳೆಯರು ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಗೃಹಿಣಿ ಎಂಬ ಹಣೆಪಟ್ಟಿ ಅಂಟಿಸಿಕೊಂಡೇ ಕೃಷಿ ಕೆಲಸಗಳನ್ನೂ ಯಾವುದೇ ವೇತನವಿಲ್ಲದೆ ಮಾಡುವವರನ್ನು ಕಾಣಬಹುದು. ಇಂತಹ ಮಹಿಳೆಯರಿಗೆ ಕನಿಷ್ಠ ವೇತನ ದಕ್ಕಿಸಿಕೊಡುವ ಕೆಲಸಗಳು ಅಲ್ಲಲ್ಲಿ ಆಗುತ್ತಿವೆ. ಅದು ವ್ಯಾಪಕವಾಗಬೇಕು. ಆಸ್ತಿ ಹಕ್ಕಿನ ವಿಷಯದಲ್ಲೂ ಅರಿವು ಹೆಚ್ಚಾಗಬೇಕು ಎಂದು ಅವರು ಆಶಿಸಿದರು.

ರಾಜಸ್ಥಾನದ ಜೈಸಲ್ಮೇರ್, ಚಿತ್ತೋರಗಢ ಮೊದಲಾದ ಜಿಲ್ಲೆಗಳಲ್ಲಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಪನ್ ಸ್ಕೂಲಿಂಗ್ (ಎನ್‌ಐಒಎಸ್) ಮೂಲಕ ಅನೇಕ ಹೆಣ್ಣುಮಕ್ಕಳಿಗೆ ಶಿಕ್ಷಣ ದಕ್ಕಿಸಿಕೊಡುವ ಪ್ರಯತ್ನ ನಡೆದಿದೆ. ಶಾಲೆ ಬಿಟ್ಟ ಹೆಣ್ಣುಮಕ್ಕಳನ್ನು ಇಂತಹ ಮುಕ್ತ ಶಾಲೆಗಳಲ್ಲಿ ಕಲಿಕೆಗೆ ಪ್ರೇರೇಪಿಸಲಾಗಿದೆ. ಶೇ 71ರಷ್ಟು ಹೆಣ್ಣುಮಕ್ಕಳು ಈ ಪ್ರಯತ್ನದಿಂದಾಗಿ ಹತ್ತು ಹಾಗೂ ಹನ್ನೆರಡನೇ ತರಗತಿಯಲ್ಲಿ ತೇರ್ಗಡೆ ಆಗಿದ್ದಾರೆ. ಇಂತಹ ಪ್ರಯತ್ನಗಳು ಹೆಚ್ಚಾಗಬೇಕಿದೆ ಎಂದು ಭಾರತದಲ್ಲಿನ ವಿಶ್ವಸಂಸ್ಥೆಯ ಉಪ ಪ್ರತಿನಿಧಿ ಕಾಂತಾ ಸಿಂಗ್ ವಿವರ ಒದಗಿಸಿದರು.

‘ಕೋವಿಡ್ ನಂತರ ಮನೆಯಿಂದಲೇ ಹೆಂಗಸರು ಕೆಲಸ ಮಾಡುವ ಅವಕಾಶವನ್ನು ಕೆಲವು ಸಂಸ್ಥೆಗಳು ಕಲ್ಪಿಸಿವೆ. ಇದರಿಂದ ಅನುಕೂಲವಾಗಿದೆ. ಆದರೆ, ಒಂದು ಕಡೆ ಕುಕ್ಕರ್ ಕೂಗುವಾಗ ಇನ್ನೊಂದು ಕಡೆ ಕೆಲಸದ ನಿಮಿತ್ತ ಅಂತರರಾಷ್ಟ್ರೀಯ ಕರೆ ಇರುತ್ತದೆ. ಅದೇ ಹೊತ್ತಿಗೆ ಕಾಲಿಂಗ್ ಬೆಲ್ ರಿಂಗಿಸಿದರೆ, ಬಂದವರು ಯಾರು ಎಂದು ನೋಡುವ ಕೆಲಸವನ್ನೂ ಹೆಣ್ಣೇ ಮಾಡುವ ಅನಿವಾರ್ಯತೆ ಇದೆ. ವೈಯಕ್ತಿಕವಾಗಿ ಮನೆಯಿಂದ ಹೊರಗೆ ಕಚೇರಿಯಲ್ಲಿ ಕೆಲಸ ಮಾಡುವುದೇ ನನಗೆ ಇಷ್ಟ’ ಎಂದು ಅವರು ಹೇಳಿದರು.

‘ನನ್ನ ತಾಯಿ ಪೊಲೀಸ್ ಇಲಾಖೆಯಲ್ಲಿದ್ದರು. ಆದರೂ ಅಪ್ಪ ಅವರನ್ನು ಅಂಕೆಯಲ್ಲಿ ಇಟ್ಟುಕೊಳ್ಳಲು ಯತ್ನಿಸುತ್ತಿದ್ದರು. ನನಗೆ ಹೇವರಿಕೆ ತರಿಸುತ್ತಿತ್ತು. ನನ್ನ ಅಪ್ಪ ಒಳ್ಳೆಯವರಾದರೂ ಹೆಂಡತಿಯ ಮನಸ್ಸಿನ ಮೇಲೆ ಸವಾರಿ ಮಾಡುತ್ತಿರುವುದು ನನ್ನ ಪ್ರಕಾರ ಕ್ರೌರ್ಯ. ಸಂಬಂಧಿಕರೊಬ್ಬರು ಮನೆಗೆ ಹೋಗಿದ್ದಾಗ, ‘ಇಬ್ಬರೂ ಹೆಣ್ಣುಮಕ್ಕಳೇ ಆಗಿಬಿಟ್ಟರಲ್ಲ’ ಎಂದು ಬೇಸರದ ದನಿಯಲ್ಲಿ ಕೇಳಿದ್ದರು. ಗಂಡುಮಕ್ಕಳಿಗಿಂತ ನನ್ನ ಹೆಣ್ಣುಮಕ್ಕಳೇ ಹೆಚ್ಚು ಎಂದು ಆಗ ಅಪ್ಪ ಸಮರ್ಥಿಸಿಕೊಂಡಿದ್ದರು. ನನಗೆ ಇಂತಹ ಸಮರ್ಥನೆ ಆಗ ಖುಷಿ ಕೊಟ್ಟಿತ್ತಾದರೂ, ಹಾಗಲ್ಲ ಯಾಕೆ ಹೇಳಬೇಕು ಎಂದು ಈಗ ಅನ್ನಿಸುತ್ತದೆ. ಹೆಣ್ಣುಮಕ್ಕಳು ಗಂಡಿನಿಂದ ಮಿಗಿಲು ಎಂದೋ, ಗಂಡೇ ಹೆಣ್ಣಿಗಿಂತ ಮಿಗಿಲು ಎಂದೋ ಮಾತಿನ ವರಸೆಯಲ್ಲಿ ಹೇಳುವುದನ್ನು ಕೂಡ ಎಷ್ಟೋ ಸಲ ಸುಳ್ಳೇ ಆಗಿರುತ್ತವೆ’ ಎಂದು ನೀಲಾಂಜನ ಅನುಭವವೊಂದನ್ನು ಹೇಳಿಕೊಂಡರು.

ಮದುವೆಯಾಗುವ ಒತ್ತಡ ತನ್ನ ಮೇಲೆ ಇದ್ದು, ಅದರಿಂದ ಹೊರಬರುವುದು ಹೇಗೆ ಎಂದು ಯುವತಿಯೊಬ್ಬಳು ಗೋಷ್ಠಿಯಲ್ಲಿ ಪ್ರಶ್ನಿಸಿದರು. ಈ ಕಾಲದಲ್ಲಿ ಮದುವೆ ಆಗುವುದು ಸಾಧನೆಯೇನೂ ಅಲ್ಲ ಎನ್ನುವುದನ್ನು ಮಾಡುವ ಕೆಲಸಗಳ ಮೂಲಕವೇ ಹೆಣ್ಣುಮಕ್ಕಳು ಸಾಬೀತುಪಡಿಸಬೇಕಷ್ಟೆ ಎಂದು ನೀಲಾಂಜನ ಉತ್ತರಿಸಿದರು.

1 ಲಕ್ಷಕ್ಕೂ ಹೆಚ್ಚು ಪುಸ್ತಕಗಳ ಮಾರಾಟ

ಜೈಪುರ ಸಾಹಿತ್ಯೋತ್ಸವದ 16ನೇ ಆವೃತ್ತಿಗೆ ಸೋಮವಾರ ತೆರೆಬಿತ್ತು. ಮೊದಲ ನಾಲ್ಕು ದಿನ ಪ್ರತಿಗಂಟೆಗೆ ಸರಾಸರಿ 12 ಸಾವಿರ ಜನರು ಉತ್ಸವಕ್ಕೆ ಭೇಟಿ ನೀಡಿದ್ದರು. ಐದನೇ ದಿನವೂ ಸೇರಿದಂತೆ ಸುಮಾರು 4.5 ಲಕ್ಷ ಜನ ಸಾಹಿತ್ಯೋತ್ಸವಕ್ಕೆ ಸಾಕ್ಷಿಯಾದರು ಎಂದು ಉತ್ಸವದ ಪ್ರೊಡ್ಯೂಸರ್ ಹಾಗೂ ಟೀಮ್‌ವರ್ಕ್ ಆರ್ಟ್ಸ್ ಕಂಪನಿಯ ನಿರ್ದೇಶಕ ಸಂಜಯ್ ಕೆ. ರಾಯ್ ತಿಳಿಸಿದರು.

ನಾಲ್ಕು ದಿನಗಳ ಅವಧಿಯಲ್ಲಿ ಒಂದು ಲಕ್ಷ ಪುಸ್ತಕಗಳು ಮಾರಾಟವಾಗಿದ್ದವು. ಸುಮಾರು ಒಂದೂವರೆ ವರ್ಷದ ಅವಧಿಯಲ್ಲಿ ಯೋಜಿಸಿ ಜೈಪುರ ಸಾಹಿತ್ಯೋತ್ಸವವನ್ನು ಆಯೋಜಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಸಾಹಿತ್ಯೋತ್ಸವದಲ್ಲಿ ಸ್ವಯಂಸೇವಕರ ಕೆಲಸ ಶ್ಲಾಘನೀಯ. ಅವರ ನೆರವಿಲ್ಲದೇ ಇಷ್ಟು ಅಚ್ಚುಕಟ್ಟಾಗಿ ಇದನ್ನು ಆಯೋಜಿಸುವುದು ಸಾಧ್ಯವಿಲ್ಲ.
ಸುಧಾಮೂರ್ತಿ, ಲೇಖಕಿ

ತ್ರಿಸದಸ್ಯ ಪೀಠ ರಚನೆಗೆ ಸಮ್ಮತಿ

ಒಂದನೇ ಪುಟದಿಂದ...

ನ್ಯಾಯಮೂರ್ತಿ ಹೇಮಂತ್ ಗುಪ್ತ, ‘ಜಾತ್ಯತೀತ ಎಲ್ಲ ಪ್ರಜೆಗಳಿಗೆ ಅನ್ವಯವಾಗುತ್ತದೆ. ಆದ್ದರಿಂದ ಒಂದು ಧಾರ್ಮಿಕ ಸಮುದಾಯಕ್ಕೆ ಅವರ ಧಾರ್ಮಿಕ ಚಿಹ್ನೆಗಳನ್ನು ಬಳಸಲು ಅನುಮತಿ ನೀಡುವುದು ಜಾತ್ಯತೀತ ಮನೋಭಾವಕ್ಕೆ ಧಕ್ಕೆ ತರುತ್ತದೆ. ಆದ್ದರಿಂದ, ಸರ್ಕಾರದ ಆದೇಶವನ್ನು ಜಾತ್ಯತೀತ ಅಥವಾ 1983ರ ಕರ್ನಾಟಕ ಶಿಕ್ಷಣ ಕಾಯ್ದೆಯ ಉದ್ದೇಶಗಳ ಉಲ್ಲಂಘನೆ ಅಲ್ಲ’ ಎಂದು ತೀರ್ಪು ನೀಡಿದ್ದರು.

‘ಸರ್ಕಾರಿ ಕಾಲೇಜುಗಳ ತರಗತಿಗಳಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡುವಂತೆ ನಿರ್ದೇಶಿಸಬೇಕು’ ಎಂದು ಕೋರಲಾಗಿದ್ದ ಎಲ್ಲ ವೈಯಕ್ತಿಕ ಹಾಗೂ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು 2022ರ ಮಾರ್ಚ್ 15ರಂದು ತಿರಸ್ಕರಿಸಿದ್ದ ಹೈಕೋರ್ಟ್‌ನ ತ್ರಿಸದಸ್ಯ ಪೀಠ, ‘ಈ ವಿಷಯವನ್ನು ದೇಶದಾದ್ಯಂತ ವಿವಾದದ ವಿಷಯವನ್ನಾಗಿ ಮಾಡಿರುವ ಹಿಂದೆ ಕಾಣದ ಕೈಗಳ ಕೈವಾಡ ಇದೆ’ ಎಂಬ ಸಂಶಯ ವ್ಯಕ್ತಪಡಿಸಿತ್ತು.

‘ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದ 22 ಅರ್ಜಿದಾರರು, ‘ವಿದ್ಯಾರ್ಥಿಗಳಿಗೆ ಕಡ್ಡಾಯವಾದ ಸಮವಸ್ತ್ರ ರೂಪಿಸಿ ಕರ್ನಾಟಕ ಸರ್ಕಾರ ಕಾಯ್ದೆ ಅಥವಾ ನಿಯಮ ಜಾರಿಗೊಳಿಸಿಲ್ಲ. ಹಾಗಾಗಿ, ಹಿಜಾಬ್ ಧರಿಸುವುದನ್ನು ನಿಷೇಧಿಸುವುದು ಸರಿಯಲ್ಲ. ಹಿಜಾಬ್ ಧರಿಸುವುದನ್ನು ಸಂವಿಧಾನದ ಅಡಿ ಖಾತರಿಪಡಿಸಲಾದ ಗೋಪ್ಯತೆ, ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಮತ್ತು ಆತ್ಮಸಾಕ್ಷಿಯ ಮೂಲಭೂತ ಹಕ್ಕುಗಳ ಅಡಿಯಲ್ಲಿ ರಕ್ಷಿಸಲಾಗಿದೆ. ಆದರೆ, ಅದನ್ನು ಅರಿಯದೆ ಹೈಕೋರ್ಟ್ ಪ್ರಮಾದವೆಸಗಿದೆ’ ಎಂದು ಆಕ್ಷೇಪಿಸಿದ್ದರು.

‘ಗರ್ಭಾವಸ್ಥೆ ತೀರ್ಮಾನ ಕೈಗೊಳ್ಳುವ ಹಕ್ಕು ಮಹಿಳೆಗೆ ಇದೆ’

ಒಂದನೇ ಪುಟದಿಂದ...

‘ಇದೇ 20ರಂದು ಈ ಕುರಿತ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿಗಳಾದ ಗೌತಮ್ ಪಟೇಲ್ ಮತ್ತು ಎಸ್.ಜಿ. ದಿಗೆ ಅವರನ್ನೊಳಗೊಂಡ ದ್ವಿಸದಸ್ಯ ವಿಭಾಗೀಯ ಪೀಠವು ಗರ್ಭಪಾತ ಮಾಡಿಸಿಕೊಳ್ಳಲು ಮಹಿಳೆಗೆ ಅನುಮತಿ ನೀಡಿದೆ.

‘ಭ್ರೂಣವು ಅಸ್ವಾಭಾವಿಕವಾಗಿ ಬೆಳವಣಿಗೆಯಾಗಿದ್ದರೂ ಕೂಡ ಗರ್ಭಧಾರಣೆಯ ಬಹುತೇಕ ಕೊನೆಯ ಹಂತದಲ್ಲಿರುವುದರಿಂದ ಗರ್ಭಪಾತಕ್ಕೆ ಅನುಮತಿ ನೀಡಬಾರದು’ ಎಂದು ವೈದ್ಯಕೀಯ ಮಂಡಳಿ ತಿಳಿಸಿತು. ಆದರೆ ಮಂಡಳಿಯ ಈ ವಾದವನ್ನು ನ್ಯಾಯಪೀಠ ಒಪ್ಪಲಿಲ್ಲ.

‘ಅರ್ಜಿದಾರರು ಭ್ರೂಣವು ಅಸಹಜವಾಗಿ ಬೆಳವಣಿಗೆ ಹೊಂದಿರುವ ಕಾರಣ ನೀಡಿದ್ದಾರೆ. ಆಗ ಗರ್ಭಾವಸ್ಥೆಯ ಅವಧಿಯ ವಿಚಾರ ಅಪ್ರಸ್ತುತವಾಗುತ್ತದೆ. ಅರ್ಜಿದಾರರು ತಿಳಿವಳಿಕೆಯ ತೀರ್ಮಾನ ಕೈಗೊಂಡಿದ್ದಾರೆ. ಅದು ಅವರು ಸುಲಭವಲ್ಲ, ಅದು ಅವರ ನಿರ್ಧಾರ. ಆಕೆ ಮಾತ್ರ ಕೈಗೊಳ್ಳಬಹುದಾದ ನಿರ್ಧಾರ. ಈ ವಿಚಾರದಲ್ಲಿ ಅರ್ಜಿದಾರರಿಗೆ ಆಯ್ಕೆಯ ಹಕ್ಕು ಇದೆಯೇ ಹೊರತು ವೈದ್ಯಕೀಯ ಮಂಡಳಿಗಲ್ಲ’ ಎಂದು ನ್ಯಾಯಪೀಠ ತೀರ್ಪಿನಲ್ಲಿ ತಿಳಿಸಿದೆ.

‘ವಿಳಂಬದ ಕಾರಣ ನೀಡಿ ಗರ್ಭಪಾತಕ್ಕೆ ಅವಕಾಶ ನಿರಾಕರಿಸುವುದು ಮಹಿಳೆ ಹಾಗೂ ಆಕೆಯ ಪತಿಯನ್ನು ಅತೃಪ್ತ ಪಾಲಕರನ್ನಾಗಿಸಲು ಬಲವಂತಪಡಿಸಿದಂತೆ. ಮಹಿಳೆಯ ಘನತೆಯ ಹಕ್ಕು ಹಾಗೂ ಸಂತಾನೋತ್ಪತ್ತಿ ಮತ್ತು ನಿರ್ಧಾರ ಕೈಗೊಳ್ಳುವ ಸ್ವಾತಂತ್ರವನ್ನು ನಿರಾಕರಿಸಿದಂತೆ. ಇದರಿಂದ ದಂಪತಿ ಹಾಗೂ ಅವರ ಕುಟುಂಬದ ಮೇಲೆ ಉಂಟಾಗುವಂತಹ ಪ್ರತಿಕೂಲ ಪರಿಣಾಮವನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ’ ಎಂದು ನ್ಯಾಯಪೀಠ ಹೇಳಿದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನವದೆಹಲಿಯಲ್ಲಿ ಸೋಮವಾರ ಕರ್ನಾಟಕದ ರಿಷಿ ಶಿವ ಪ್ರಸನ್ನಗೆ ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರವನ್ನು ಪ್ರದಾನ ಮಾಡಿದರು. –ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ವಾಯುಪ್ರದೇಶ ಕಣ್ಗಾವಲಿಗೆ ನಿರ್ಧಾರ

ಹೈದರಾಬಾದ್: ತಿರುಮಲದಲ್ಲಿ ಡ್ರೋನ್‌ಗಳ ಚಲನವಲನದ ತ್ವರಿತ ಪತ್ತೆಗಾಗಿ ಡ್ರೋನ್ ನಿರೋಧಕ ವ್ಯವಸ್ಥೆ (ಎನ್‌ಎಡಿಎಸ್) ಅಳವಡಿಸಿಕೊಳ್ಳಲು ತಿರುಮಲ ತಿರುಪತಿ ದೇವಸ್ಥಾನ ಆಡಳಿತದ ಅಧಿಕಾರಿಗಳು ನಿರ್ಧರಿಸಿದ್ದಾರೆ.

ಎನ್‌ಎಡಿಎಸ್ ಸೌಲಭ್ಯ ಪಡೆಯುವ ನಿಟ್ಟಿನಲ್ಲಿ ಭಾರತ್ ಎಲೆಕ್ಟ್ರಾನಿಕ್ಸ್ (ಬಿಇಎಲ್) ಜೊತೆಗೆ ಮಾತುಕತೆ ನಡೆದಿದೆ ಎಂದು ಟಿಟಿಡಿ ಆಡಳಿತ ಮಂಡಳಿಯ ಕಾರ್ಯನಿರ್ವಾಹಕ ಅಧಿಕಾರಿ ಧರ್ಮ ರೆಡ್ಡಿ ಸುದ್ದಿಗಾರರಿಗೆ ತಿಳಿಸಿದರು.

ಪ್ರಯಾಣಿಕನ ಕೆಳಗಿಳಿಸಿದ ಸ್ಪೈಸ್‌ಜೆಟ್ ಸಿಬ್ಬಂದಿ

ನವದೆಹಲಿ (ಪಿಟಿಐ): ಮಹಿಳಾ ಸಿಬ್ಬಂದಿ ಜೊತೆಗೆ ಅನುಚಿತ ವರ್ತನೆ ತೋರಿದ ಹಿನ್ನೆಲೆಯಲ್ಲಿ ದೆಹಲಿ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರೊಬ್ಬರನ್ನು ಸ್ಪೈಸ್‌ಜೆಟ್ ವಿಮಾನದಿಂದ ಕೆಳಗಿಳಿಸಲಾಯಿತು. ದೆಹಲಿಯಿಂದ ಹೈದರಾಬಾದ್‌ಗೆ ತೆರಳಬೇಕಿದ್ದ ವಿಮಾನದಲ್ಲಿ ಈ ಘಟನೆ ನಡೆದಿದೆ. ಆತನ ಜೊತೆಗಿದ್ದ ಸಹ ಪ್ರಯಾಣಿಕನನ್ನು ಸಹ ಕೆಳಗಿಳಿಸಲಾಯಿತು ಎಂದು ವಿಮಾನ ಸಂಸ್ಥೆಯು ತಿಳಿಸಿದೆ. ಅನುಚಿತ ವರ್ತನೆ ಜೊತೆಗೆ ಮಹಿಳಾ ಸಿಬ್ಬಂದಿಯನ್ನು ಮುಟ್ಟಲು ಪ್ರಯಾಣಿಕ ಮುಂದಾಗಿದ್ದ. ಸಿಬ್ಬಂದಿಯ ಲಿಖಿತ ದೂರು ಆಧರಿಸಿ ಕ್ರಮ ಜರುಗಿಸಿದ್ದು, ಪ್ರಯಾಣಿಕನನ್ನು ಪೊಲೀಸರ ವಶಕ್ಕೆ ಒಪ್ಪಿಸಲಾಯಿತು ಎಂದು ತಿಳಿಸಿದೆ

ವಾಣಿಜ್ಯ ತೆರಿಗೆ ಇಲಾಖೆ

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ) ರವರ ಕಛೇರಿ
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–5, ಕೊಠಡಿ ಸಂಖ್ಯೆ: 501, “ಬಿ” ಬ್ಲಾಕ್, 5ನೇ ಮಹಡಿ, ವಾಣಿಜ್ಯ ತೆರಿಗೆ ಕಾರ್ಯಾಲಯ–2, ಕೋರಮಂಗಲ, ಬೆಂಗಳೂರು–560047.
ದೂರವಾಣಿ ಸಂಖ್ಯೆ: 080–25706157 ಫ್ಯಾಕ್ಸ್: 080–25706175.

ಸಂಖ್ಯೆ: ವಾ.ತೆ.ಜಂ.ಆ(ಆ)/ವಿ.ಸ.ಸೇ.ತೆ.ಕ–5/ಸಿಬ್ಬಂದಿ/ಸಿಆರ್–16/22–23 ದಿನಾಂಕ: 20.01.2023

ಇ–ಟೆಂಡರ್ ಅಧಿಸೂಚನೆ

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–5, ಬೆಂಗಳೂರು ರವರ ಕಛೇರಿಯ ಕಾರ್ಯವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಲು 104 (ಒಂದು ನೂರ ನಾಲ್ಕು) ದತ್ತಾಂಶ ನಮೂದಕರುಗಳ ಸೇವೆಯನ್ನು ಒದಗಿಸುವ ಸಲುವಾಗಿ ದ್ವಿ–ಲಕೋಟೆ/ದ್ವಿ–ಭಾಗಗಳ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ ಟೆಂಡರ್ ಕರೆಯಲಾಗಿದೆ. ಟೆಂಡರಿನ ನಿಬಂಧನೆಗಳು, ಷರತ್ತುಗಳು, ನಮೂನೆ ಮತ್ತು ಇತರೆ ವಿವರಗಳನ್ನು ವೆಬ್‌ಸೈಟ್: https://eproc.karnataka.gov.in and https://ctax.kar.nic.in ಮೂಲಕ ಪಡೆಯಬಹುದಾಗಿದೆ. ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: 21.02.2023. ಹೆಚ್ಚಿನ ವಿವರಗಳಿಗಾಗಿ ಕಛೇರಿ ದೂರವಾಣಿ ಸಂಖ್ಯೆ: 080–25706157 ರಲ್ಲಿ ಸಂಪರ್ಕಿಸಬಹುದು.

ಸಹಿ/– ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ವಿ.ಸ.ಸೇ.ತೆಕ–5, ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/4256/ಆಕಾರ್/22–23

ಶ್ರೀ ಕಂಠೀರವ ಸ್ಟುಡಿಯೋಸ್ ನಿಯಮಿತ

ಕಂಠೀರವ ನಗರ, ಬೆಂಗಳೂರು–560 096.

ಕ್ರಮ ಸಂಖ್ಯೆ: ಎಸ್‌ಕೆಎಸ್/ಆಡಳಿತ/ಶ.ಫ್ಲೋ/2022–23/362 ದಿನಾಂಕ: 23.01.2023

ಇ–ಟೆಂಡರ್ ಪ್ರಕಟಣೆ

ವಿಷಯ : ಶಂಕರ್‌ನಾಗ್ ಫ್ಲೋರ್‌ನ್ನು ಚಿತ್ರೀಕರಣಕ್ಕೆ ಬಾಡಿಗೆ ನೀಡುವ ಬಗ್ಗೆ.

ಶ್ರೀ ಕಂಠೀರವ ಸ್ಟುಡಿಯೋಸ್ ನಿಯಮಿತದ ಶಂಕರ್‌ನಾಗ್ ಫ್ಲೋರ್ ಕಟ್ಟಡವನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಚಿತ್ರೀಕರಣಕ್ಕೆ ನೀಡಲು ಆಸಕ್ತಿದಾರರಿಂದ (ಬಿಡ್ಡುದಾರರು) ಇ–ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿ ಬಿಡ್ಡುದಾರರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://www.eproc.karnataka.gov.in ಲಾಗಿನ್ ಆಗಿ ದಿನಾಂಕ: 23.01.2023 ರ ಮಧ್ಯಾಹ್ನ 3:00 ಗಂಟೆಯ ನಂತರ ಮಾಹಿತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 22.02.2023 ರ ಮಧ್ಯಾಹ್ನ 3:00 ಗಂಟೆ ಆಗಿರುತ್ತದೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಟೆಂಡರ್‌ದಾರರು ಅರ್ಹತೆ, ಷರತ್ತುಗಳ ವಿವರ ಇತ್ಯಾದಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ಶ್ರೀ ಕಂಠೀರವ ಸ್ಟುಡಿಯೋಸ್ ನಿಯಮಿತದ ದೂರವಾಣಿ ಸಂಖ್ಯೆ: 080–23378611 ಮೂಲಕ ಸಂಪರ್ಕಿಸಬಹುದು.

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ವಾ.ಸಾ.ಸಂ.ಇ/ವಾಪ್ರ/4268/ಆಕಾರ್/22–23

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ,
ನಂದಿನಗರ, ಅಂಚೆ ಪೆಟ್ಟಿಗೆ ಸಂಖ್ಯೆ 6, ಬೀದರ–585 226

ನಂ.ಕುಸ:ಕಪಪಮೀವಿವಿ(ಬೀ)/ನೇಮಕಾತಿ:ಶಿಕ್ಷಕರ:ಆಥಣೆ/2022–23 ದಿನಾಂಕ: 20–01–2023

ನೇಮಕಾತಿ ಅಧಿಸೂಚನೆ

ವಿಷಯ: ಬೋಧಕ ಹುದ್ದೆಗಳ ನೇರ ನೇಮಕಾತಿ ಕುರಿತು
ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ ಸಂ: ಪಸಂಮೀ/73/ಪಅಸೇ/2021 ದಿನಾಂಕ: 29–10–2022
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 20–1–2023

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಇಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಈ ಕುರಿತು ಸಂಪೂರ್ಣ ಖಾಲಿ ಇರುವ ಹುದ್ದೆಗಳ ವಿವರ, ವಿದ್ಯಾರ್ಹತೆ, ಸ್ಕೋರ್‌ಕಾರ್ಡ್, ಸಾಮಾನ್ಯ ಸೂಚನೆಗಳು ಮತ್ತು ಇತರೆ ವಿವರಗಳನ್ನು ವಿಶ್ವವಿದ್ಯಾಲಯದ ಅಧಿಕೃತ ವೆಬ್‌ಸೈಟ್ www.kvafsu.edu.in ನಲ್ಲಿ ಡೌನಲೋಡ್ ಮಾಡಿಕೊಳ್ಳಬಹುದಾಗಿದೆ. ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ಆನ್‌ಲೈನ್ ಮೂಲಕ ದಿನಾಂಕ 25–01–2023 ರಿಂದ 24–02–2023 ರವರೆಗೆ ಸಲ್ಲಿಸುವುದು.

ಆದೇಶದ ಮೇರೆಗೆ
ಸಹಿ/–
(ಶಿವಸಂಕರ್.ಎಸ್. ಭಾಅಸೇ)
ಕುಲಸಚಿವರು

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬೆಳಗಾವಿ

ಕ್ರ.ಸಂ. ಪಂರಾಇಂ/ವಿಬೆ/ಪಿಬಿ–1/ಟೆಂಡರ್–39/2022–23/ ದಿನಾಂಕ: 21–01–2023

ಗುತ್ತಿಗ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯ ಚಾಲ್ತಿ ನೋಂದಾಯಿತ ಗುತ್ತಿಗೆದಾರರಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಜಿ.–4 ರಲ್ಲಿ ಒಟ್ಟು 1 ಕಾಮಗಾರಿಗೆ ಟೆಂಡರ್ ಗುತ್ತಿಗೆಯನ್ನು **ರೂ. 152.89 ಲಕ್ಷಗಳು** ಹಾಗೂ ಮುಂಗಡ ಠೇವಣಿ **ಮೊತ್ತ ರೂ. 2,29,335.00** ಗಳು ಇರುತ್ತದೆ. ಆಕ್ಷೇಪಣೆಗಳಿದ್ದಲ್ಲಿ ಖುದ್ದಾಗಿ ಕಚೇರಿಗೆ ಹಾಜರಾಗಿ ಸಲ್ಲಿಸುವ ಕೊನೆಯ **ದಿನಾಂಕ: 30–01–2023 ಸಂಜೆ 17.28 ರೊಳಗಾಗಿ** ಗುತ್ತಿಗೆದಾರರಿಂದ ಅರ್ಜಿಗಳನ್ನು ಅನ್ ಲೈನ್ ಮೂಲಕ ಮನವಿ ಮಾಡಿಕೊಳ್ಳುವ ಕೊನೆಯ **ದಿನಾಂಕ: 30–01–2023 ಸಂಜೆ 17:30 ಗಂಟೆಯವರೆಗೆ** ಹಾಗೂ ತಾಂತ್ರಿಕ **ದಿನಾಂಕ: 01–02–2023 ರಂದು 11:00 ಗಂಟೆಗೆ** ಹಾಗೂ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 01–02–2023 ರಂದು 11:30 ಗಂಟೆಗೆ ಇರುತ್ತದೆ.** ಪರಿಷ್ಕೃತ ವೇಳಾ ಪಟ್ಟಿ/ತಿದ್ದುಪಡಿಗಳು / ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.eproc.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಕನೀನಿನಿ ಘಟಕಾನಿ ವಿಭಾಗ ನಂ.5 ಕೌಜಲಗಿ
DIPO/RO No. 1598/2022-23

ಜಲ ಸಂಪನ್ಮೂಲ ಇಲಾಖೆ

ಕಾರ್ಯನಿರ್ವಾಹಕ ಅಭಿಯಂತರರು, ಕೃಮೇಯೋ, ಪುನರವಸತಿ ವಿಭಾಗ ನಂ.3, ಜಮಖಂಡಿ, (ಕಡಕೋಳ ಪುನರ್ವಸತಿ ಕೇಂದ್ರ) ಇವರ ಕಾರ್ಯಾಲಯ.

ಸಂ:ಕೃಮೇಯೋ/ಪುವಿ–3/ಯೋ.ವಿ–3/ಟೆಂಡರ್/2022–23/1691 ದಿ:21–01–2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೋಕ್ಯೂರಮೆಂಟ್ ಮುಖಾಂತರ)

ಕಾರ್ಯನಿರ್ವಾಹಕ ಅಭಿಯಂತರರು, ಕೃಮೇಯೋ: ಪುನರ್ವಸತಿ ವಿಭಾಗ ನಂ–3, ಜಮಖಂಡಿ (ಕಡಕೋಳ ಪುನರ್ವಸತಿ ಕೇಂದ್ರ) ಇವರ ಕಛೇರಿ ವ್ಯಾಪ್ತಿಯಲ್ಲಿ ಬರುವ ಉಪ ವಿಭಾಗಳಾದ ಮುಧೋಳ, ಬೀಳಗಿ ಹಾಗೂ ಜಮಖಂಡಿ ತಾಲೂಕಿನ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮದಂತೆ ಯಾವುದೇ ರಾಜ್ಯದ ಲೋಕೋಪಯೋಗಿ ಇಲಾಖೆ ಹಾಗೂ ಕೃ.ಭಾ.ಜ.ನಿ.ನಿ.ಗಳಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ **(KW–4ರನ್ವಯ)** ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಶೇಕಡಾವಾರು ಟೆಂಡರಗಳನ್ನು ಆಹ್ವಾನಿಸಲಾಗಿದೆ. ಟೆಂಡರಗಳನ್ನು ಇ–ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ **www.eproc.karnataka.govt.in ದಿನಾಂಕ:24–01–2023 ರಿಂದ ದಿನಾಂಕ:07–02–2023 ರವರೆಗೆ ಡೌನ್‌ಲೋಡ ಮಾಡಿಕೊಂಡು ಸಲ್ಲಿಸಬಹುದಾಗಿದೆ.** ಈ ಕಾಮಗಾರಿಯ ನಿಬಂಧನೆ ಹಾಗೂ ವಿವರಗಳನ್ನು ಇ–ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಹಾಗೂ ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. **(ಈ ಕಛೇರಿ ಮೋ ಸಂ: 962089102, 9108335489)**

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಮೇಯೋ, ಪುನರವಸತಿ ವಿಭಾಗ ನಂ–3, ಕಡಕೋಳ ಪುನರ್ವಸತಿ ಕೇಂದ್ರ, ಜಮಖಂಡಿ,
ವಾ.ಸಾ.ಇ/ಬಾ/807/2022–23/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಶಿರಸಿ ವಿಭಾಗ, ಶಿರಸಿ

ಕ್ರಸಂ: ಟೆಂಡರ್ ಅಧಿಸೂಚನೆ/ರಾಹೆ(ಅತಿವೃಷ್ಟಿ)/ಅಧಿಸೂಚನೆ: 2022–23/3743 ದಿನಾಂಕ: 13.01.2023

ಇ–ಟೆಂಡರ್ ಅಧಿಸೂಚನೆ IFT-KW-4
ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ದ್ವಿ ಲಕೋಟೆ ಪದ್ಧತಿಯಲ್ಲಿ)(ಅಲ್ಪಾವಧಿ)
ಈ ಕಚೇರಿ ಪತ್ರ ಸಂಖ್ಯೆ: 2767 ದಿನಾಂಕ: 11.10.2022

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ–ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಕಾಣಿಸಿದಂತೆ ಇ–ಪ್ರೋಕ್‌ನಲ್ಲಿ ಅಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **www.eproc.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ.

ಒಟ್ಟು 1 ಕಾಮಗಾರಿ
(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ **ದಿನಾಂಕ: 23.01.2023 (16.00 ಗಂಟೆಗೆ)** (2) ಟೆಂಡರ್ ಸ್ವೀಕರಿಸಲು ಕೊನೆಯ **ದಿನಾಂಕ: 24.01.2023 (16.00 ಗಂಟೆವರೆಗೆ)** (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 25.01.2023 (16.30 ಗಂಟೆವರೆಗೆ)** (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 27.01.2023 (16.00 ಗಂಟೆವರೆಗೆ)**

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಹಾಗೂ ರಾಜ್ಯ ಹೆದ್ದಾರಿ ಪ್ರಾಧಿಕಾರ ಅಧಿಕಾರಿ, ಲೋಕೋಪಯೋಗಿ ಇಲಾಖೆ ವಿಭಾಗ, ಶಿರಸಿ (ಉತ್ತರ ಕನ್ನಡ ಜಿಲ್ಲೆ)
DIPR/ADK/MCA/859/22-23 dt.20.01.2023

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
ನಂ. 5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560009
ದೂರವಾಣಿ: 080 22341239 / 35 ಇ–ಮೇಲ್: bmicapa@gmail.com

ಸಂಖ್ಯೆ: ಬಿಎಂಐಸಿಎಪಿಎ/ಭೂಉಬ–02/52/2022–23/1734 ದಿನಾಂಕ: 23/01/2023

ಸಾರ್ವಜನಿಕ ಪ್ರಕಟಣೆ
[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]

ಶ್ರೀ ಎಲ್.ಗೋಪಾಲ್ ಬಿನ್ ಲೇಟ್ ಎಸ್.ಲಿಂಗಪ್ಪ ಇವರು ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬೆತ್ತಂಗೆರೆ ಗ್ರಾಮದ ಸರ್ವೆ ಸಂಖ್ಯೆ: 12/1ರ 01ಎ–13ಗು ಪೈಕಿ 0ಎ–20ಗು ವಿಸ್ತೀರ್ಣದ ಪ್ರದೇಶಕ್ಕೆ ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ "ವ್ಯವಸಾಯ" ವಲಯದಿಂದ "ವಾಣಿಜ್ಯ (ರೆಸ್ಟೋರೆಂಟ್, ಮಳಿಗೆ ಮತ್ತು ಉಗ್ರಾಣ)" ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರು ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ತಿಳಿಸಿರುತ್ತಾರೆ.

1. ಈ ಜಮೀನಿನಲ್ಲಿ ವಾಣಿಜ್ಯ ಉದ್ದೇಶಕ್ಕಾಗಿ ಮಾಡಿದ್ದಲ್ಲಿ ಸುತ್ತಮುತ್ತಲಿನ ಪ್ರದೇಶವು ಅಭಿವೃದ್ಧಿ ಹೊಂದುತ್ತದೆ.
2. ವಾಣಿಜ್ಯ ಕಟ್ಟಡ ನಿರ್ಮಾಣದ ವೇಳೆ ಸುತ್ತಮುತ್ತಲ ಜನರಿಗೆ ಉದ್ಯೋಗ ದೊರೆಯುತ್ತದೆ ಮತ್ತು ಮುಂದೆ ಉದ್ಯೋಗಿಗಳಿಗೆ ಒಳ್ಳೆ ಕೆಲಸ ದೊರೆಯುತ್ತದೆ.
3. ವಾಣಿಜ್ಯ ಕಟ್ಟಡಕ್ಕೆ ತಮ್ಮ ತಮ್ಮ ಇಷ್ಟಾನುಸಾರ ಸಾಮಗ್ರಿಗಳನ್ನು ಕೊಳ್ಳಲು ಜನರು ಬರುತ್ತಾರೆ. ಇದರಿಂದ ರಾಷ್ಟ್ರದ ವ್ಯವಹಾರ ಅಭಿವೃದ್ಧಿ ಹೊಂದುತ್ತದೆ.
4. ವಾಣಿಜ್ಯ ಉದ್ದೇಶದಿಂದ ಸ್ಥಳೀಯ ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗವಕಾಶ ಸಿಕ್ಕಿ ಆರ್ಥಿಕವಾಗಿ ಪ್ರಬಲರಾಗಲು ಅವಕಾಶ ಕಲ್ಪಿಸಿಕೊಟ್ಟಂತಾಗುತ್ತದೆ.

ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಅವುಗಳನ್ನು ಈ ಪ್ರಕಟಣೆಯ ದಿನಾಂಕದಿಂದ 16 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ಸದಸ್ಯ ಕಾರ್ಯದರ್ಶಿಗಳು
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು
ವಾಸಸಂಇ/ವಾ.ಪ್ರ/4265/ಅಡ್ವಟೋರ್/2022–23

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಹೇಮಾವತಿ ನಾಲಾ ವಿಭಾಗ, ಎಡಿಯೂರು–572 142, ಪೋ: 7338590199
ಇ–ಮೇಲ್: eeyediyur1@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–10/2022–23 ದಿನಾಂಕ: 18.01.2023

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ/ಪಿಡಬ್ಲ್ಯೂಡಿ, ಮೈಸೂರು/ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಒಟ್ಟು 8 ಕಾಮಗಾರಿಗಾಗಿ ಐಟಂವಾರು ದರದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ 352.50 ಮತ್ತು ಕನಿಷ್ಠ ಮೊತ್ತ ರೂ. 12.36 ಲಕ್ಷಗಳು ಕೆಲಸ ಪೂರ್ಣಗೊಳಿಸುವ ರೂಪಾಯಿಗಳು.
ಕೆಲಸ ಪೂರ್ಣಗೊಳಿಸಲು ನಿಗಧಿಪಡಿಸಿರುವ ಅವಧಿ 3 ರಿಂದ 9 ತಿಂಗಳು ಇ.ಎಂ.ಡಿ ಹಣ ಹಾಗೂ ಪ್ರೊಸಸಿಂಗ್ ಶುಲ್ಕವನ್ನು ಇ–ಪೇಮೆಂಟ್ ಮೂಲಕ ಸಂದಾಯ ಮಾಡುವುದು, ಟೆಂಡರ್ ಕ್ವಾರಿಸ್/ಕ್ಲ್ಯಾರಿಫಿಕೇಷನ್ ಕೊನೆಯ ದಿನಾಂಕ: **27.01.2023** ಮಧ್ಯಾಹ್ನ 5.00 ಗಂಟೆಯವರೆಗೆ. ಆನ್ ಲೈನ್ ಮೂಲಕ ಭರ್ತಿಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿ ಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ: **30.01.2023** ಮಧ್ಯಾಹ್ನ 4:00 ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **31.01.2023** ಸಂಜೆ 5:00 ಗಂಟೆಗೆ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: **08.02.2023** ಸಂಜೆ 5:00 ಗಂಟೆಗೆ ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ www.eproc.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಹೇಮಾವತಿ ನಾಲಾ ವಿಭಾಗ, ಕಾನೀನಿನಿ., ಎಡಿಯೂರು.
DIPR/TUM/889/KSMCA/2022-23

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ, ನಂ.5, ಭದ್ರಾ ನಾಲಾ ವಿಭಾಗ, ದಾವಣಗೆರೆ. ಫೋ: 08192–264669
ಇ–ಮೇಲ್: eebcddvg@yahoo.co.in

ಅಲ್ಪಾವಧಿ ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಮಾತ್ರ)
ಉಲ್ಲೇಖ: **No: EE/ KNNL/ BCD-5/DVG/PB-4/4701: 2022-23 : 2958/10 Dated:.20.01.2023**

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ ರವರು, ಲೆಕ್ಕ ಶೀರ್ಷಿಕೆ 4701 ಎಸ್.ಸಿ.ಪಿ/ಟಿ.ಎಸ್.ಪಿ ಅಡಿಯಲ್ಲಿ ಕಾಮಗಾರಿಗಳಿಗೆ ಏಕ ಲಕೋಟೆ ಪದ್ಧತಿಯಡಿ **KW-2** (Standard tender Bid Document) ನಲ್ಲಿ ಇ–ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಅರ್ಹ ಗುತ್ತಿಗೆದಾರರು, ಶೇಕಡಾವಾರು ಟೆಂಡರ್‌ನ್ನು ಇ–ಪ್ರೋಕ್ಯೂರ್‌ಮೆಂಟ್‌ನ ವೆಬ್‌ಸೈಟ್ (http://eproc.karnataka.gov.in) ಮುಖಾಂತರವೇ ಇಂಡೆಂಟ್ ಸಂಖ್ಯೆ: 35431, 35433, 35435, 35436, 35438, 35440 & 35442 ಡೌನಲೋಡ್ ಮಾಡಿಕೊಳ್ಳಲು ದಿನಾಂಕ: 21.01.2023 ರಿಂದ 30.01.2023 ರ ಸಂಜೆ 5.00 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: 31.01.2023 ರಂದು ಸಂಜೆ 5.05 ಘಂಟೆಗೆ, ಕಾಮಗಾರಿಗಳ ಮೊತ್ತ – ರೂ 30.00 ಲಕ್ಷಗಳಿಂದ 50.00 ಲಕ್ಷಗಳವರೆಗೆ ಒಟ್ಟು ಕಾಮಗಾರಿ ಸಂಖ್ಯೆ :– 7 ಸಂಖ್ಯೆ ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗಿಕರೀಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಅಥವಾ ಕಛೇರಿ ವೇಳೆಯಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಕನೀನಿನಿ ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ.
ವಾಸಾಇ/ಡಿವಿಜಿ/836/ ಕೆಎಸ್‌ಎಂಸಿಎ/2022–23

ಕರ್ನಾಟಕ ಸರ್ಕಾರ
(ಜಲಸಂಪನ್ಮೂಲ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಪುನರ್ವಸತಿ ವಿಭಾಗ ನಂ.2, ಆಲಮಟ್ಟಿ
ತಾ: ನಿಡಗುಂದಿ, ಜಿ: ವಿಜಯಪುರ. ದೂರವಾಣಿ ಸಂ: 08426–281049
ಸಂ:ಕೃಮೇಯೋ/ಪುವಿ–2/ಡಿಬಿ/ಇ–ಪ್ರೋಕ/ಟೆಂಡರ–11/2022–23/2095
ದಿನಾಂಕ:19.01.2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
(ದ್ವಿಲಕೋಟೆ ಪದ್ದತಿಯ ಮೇಲೆ)

ಕರ್ನಾಟಕ ರಾಜ್ಯದ ಮಾನ್ಯ ರಾಜ್ಯಪಾಲರ ಪರವಾಗಿ ಕೆಳಕಾಣಿಸಿದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಕೆ.ಪಿ.ಡಬ್ಲ್ಯು.ಡಿ (Registered KPWD Class-I Contractor) 1ನೇ ದರ್ಜೆ ಗುತ್ತಿಗೆದಾರರಿಂದ **ಶೇಕಡವಾರು** ಟೆಂಡರಗಳನ್ನು ಕೆ.ಡಬ್ಲ್ಯೂ.–3 ಮತ್ತು ಕೆ.ಡಬ್ಲ್ಯೂ.–4 ರ ಮೂಲಕ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ನಿಯಮಾವಳಿಯಂತೆ 'ಇ' **ಪ್ರೊಕ್ಯೂರಮೆಂಟ** ಮೂಲಕ ಟೆಂಡರನ್ನು ಕೆಳಗೆ ಸಹಿ ಮಾಡಿದವರಿಂದ ಅಹ್ವಾನಿಸಲಾಗಿದ್ದು, ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ ದಾಖಲೆಗಳನ್ನು **www.eproc.karnataka.gov.in** ವೆಬಸೈಟ್ ಮೂಲಕ ಪಡೆದುಕೊಂಡು ಭರ್ತಿ ಮಾಡಿದ ಟೆಂಡರಗಳನ್ನು ಇ–ಪ್ರೋಕ್ಯೂರಮೆಂಟ ಮೂಲಕ ಸಲ್ಲಿಸುವದು.
ವಿಜಯಪೂರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಪುನರ್ವಸತಿ ಕೇಂದ್ರಗಳಲ್ಲಿ ರಸ್ತೆ ಸುದಾರಣೆ, ಲಿಂಕ ರಸ್ತೆ ನಿರ್ಮಾಣ, ಕಟ್ಟಡ, ಕೂಡು ರಸ್ತೆ ಕಾಮಗಾರಿಗಳು ಮತ್ತು ಕೋಲ್ಹಾರ ಪುನರವಸತಿ ಕೇಂದ್ರದಲ್ಲಿಯ ರಸ್ತೆ ಸುಧಾರಣೆ ಮತ್ತು ಬದಿ ಚರಂಡಿ, ಸಿಡಿ ನಿರ್ಮಾಣ ಕಾಮಗಾರಿ, **ಒಟ್ಟು ಕಾಮಗಾರಿಗಳ ಸಂಖ್ಯೆ–06. ಟೆಂಡರಿಗಿಟ್ಟ ಅಂದಾಜು ಮೊತ್ತ. ಗರಿಷ್ಠ ರೂ. 169.29 ಲಕ್ಷ, ಕನಿಷ್ಠ ಮೊತ್ತ. ರೂ. 63.27 ಲಕ್ಷ. ಇ.ಎಂ.ಡಿ ಮೊತ್ತ. ಗರಿಷ್ಠ ರೂ. 3.00 ಲಕ್ಷ ಕನಿಷ್ಠ ರೂ.1.50 ಲಕ್ಷ**
ವೆಬಸೈಟ್ ಮೂಲಕ ಟೆಂಡರ ಮಾಹಿತಿಯ ಸ್ಪಷ್ಟೀಕರಣ ಪಡೆಯಲು ಕೊನೆಯ ದಿನಾಂಕ: **31.01.2023** ಮುಂಜಾನೆ **11:30** ಗಂಟೆಯವರೆಗೆ. ಟೆಂಡರ ಪೂರ್ವಭಾವಿ ಬಿಡ್ ಸಭೆ ದಿನಾಂಕ: **31.01.2023** ಸಾಯಂಕಾಲ **4:30** ಗಂಟೆಗೆ. (ಒಂದು ಕೋಟಿಗಿಂತ ಹೆಚ್ಚಿನ ಮೊತ್ತದ ಕಾಮಗಾರಿಗಳಿಗೆ ಮಾತ್ರ), ಟೆಂಡರಗಳಿಗೆ ಇ–ಪ್ರೋಕ್ಯೂರಮೆಂಟ ಮೂಲಕ ಅರ್ಜಿ ಸಲ್ಲಿಸುವುದು ಹಾಗೂ ಟೆಂಡರಗಳನ್ನು ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: **10.02.2023.** ಸಾಯಂಕಾಲ **5:00** ಗಂಟೆವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **13.02.2023** ಮುಂಜಾನೆ **11:30** ಗಂಟೆಗೆ (ಸಾಧ್ಯವಾದಲ್ಲಿ). ತಾಂತ್ರಿಕ ಬಿಡ್‌ಗಳು ಅನುಮೋದನೆ ಆದ ನಂತರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು.
(The Estimate amount put to Tender is exclusive of GST. The tenderer should quote without GST. GST shall be paid separately @ prevailing rates during billing)
ಹೆಚ್ಚಿನ ಮಾಹಿತಿಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಪುನರ್ವಸತಿ ವಿಭಾಗ ನಂ,2, ಆಲಮಟ್ಟಿ ಇವರ ಕಛೇರಿಯಲ್ಲಿ ಕೆಲಸದ ಅವಧಿಯಲ್ಲಿ ಅಥವಾ www.eproc.karnataka.govt.in ವೆಬಸೈಟ್ ಮೂಲಕ ದಿನಾಂಕ: **25.01.2023** ರಂದು ಅಥವಾ ತದನಂತರ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪುನರ್ವಸತಿ ವಿಭಾಗ ನಂ.2, ಆಲಮಟ್ಟಿ
ವಾಸಾಸಂಇ/ವಿಜಯಪುರ/782/ಎಂಸಿಎ/2022–23

ಲೋಕೋಪಯೋಗಿ ಇಲಾಖೆ. ತುಮಕೂರು
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ತುಮಕೂರು.
ಕ್ರ.ಸಂ:ಕಾಇಂ:ಲೋಇವಿ:ತುವಿ:ಕಿಇಂ–3:ಟೆಂಡರ್–53/2022–23
ದಿನಾಂಕ: 12.01.2023

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.53/2022–23 ದಿನಾಂಕ: 12.01.2023

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:53/2022–23:ದಿನಾಂಕ 12.01.2023 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 8443: ಠೇವಣಿ ವಂತಿಕೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 02 ಕಾಮಗಾರಿಗಳಿಗೆ ಇ–ಪ್ರೂಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ: 49.68 ಲಕ್ಷಗಳು, ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ.823.31 ಲಕ್ಷಗಳು, ಇ.ಎಂ.ಡಿ ಕನಿಷ್ಠ ಮೊತ್ತ ರೂ.99,400.00/–, ಇ.ಎಂ.ಡಿ ಗರಿಷ್ಠ ಮೊತ್ತ ರೂ. 12,35,000/–, ಅರ್ಹ ಗುತ್ತಿಗೆದಾರರು : 1&3 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 03 ರಿಂದ 06 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 02.02.2023 ರ 16.00 ಗಂಟೆಗೆ, ಇ–ಪ್ರೂಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ **20.01.2023 ರಿಂದ 03.02.2023**ರ 16.00 ಗಂಟೆಯವರೆಗೆ ಪಡೆಯ ಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: **03.02.2023 ರ** ಸಂಜೆ 16.00 ಗಂಟೆವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: **04.02.2023**ರ ಸಂಜೆ 16.30 ಗಂಟೆಗೆ, ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: **06.02.2023**ರ ಸಂಜೆ 11.00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: www.eproc.karnataka.gov.inರಲ್ಲಿ ಪಡೆಯಬಹುದಾಗಿದೆ.
ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.
DIPR/TUM/901/KSMCA/2022-23

ಕಾರ್ಯಪಾಲಕ ಇಂಜಿನಿಯರ್‌ರವವ ಕಚೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು.
ಸಂಖ್ಯೆ: ಕಾಇಂ/ಪಂರಾಇವಿ/ತುಮ/ಎಇ–1/ಟೆಂಡರ್/2022–23 ದಿನಾಂಕ: 13.01.2023

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–43/2022–23
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ –ಏಕಲಕೋಟೆ ಮತ್ತು ದ್ವಿಲಕೋಟೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW–1, KW–2, KW–3, (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಪೋರ್ಟ್‌ಗಾಗಿ 1/1, ಸನ್‌ಬೀಮ್ ಬಿಲ್ಡಿಂಗ್, ಈಗಲ್ ಸ್ಟ್ರೀಟ್, ಲಾಂಗ್ ಫೋರ್ಡ್ ರೋಡ್, ಲಾಂಗ್‌ಫೋರ್ಡ್ ಟೌನ್, ಬೆಂಗಳೂರು–560 025, ದೂರವಾಣಿ: 080–22485867, 080–22485927 ರಲ್ಲಿ ನೊಂದಾಯಿಸಿದ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು ವಿಭಾಗ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ 2022–23ನೇ ಸಾಲಿನ 5054–ಮಾನ್ಯ ಮುಖ್ಯ ಮಂತ್ರಿಗಳ ವಿಶೇಚ ಮಂಜೂರಾತಿ ಯೋಜನೆಯಡಿಯ ಕಾಮಗಾರಿಗೆ ಅಲ್ಪಾವಧಿ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಏಕ ಮತ್ತು ದ್ವಿಲಕೋಟೆ ಮೂಲಕ ಮಾತ್ರ ಆಹ್ವಾನಿಸಲಾಗಿದೆ.
ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು ಕಾಮಗಾರಿಗಳ ಸಂಪೂರ್ಣ ವಿವರಗಳನ್ನು ವೆಬ್‌ಸೈಟ್ www.eproc.karnataka.gov.in ಮುಖಾಂತರ ದಿನಾಂಕ: **17.01.2023** ರಿಂದ **25.01.2023** ಸಂಜೆ 5.00 ಗಂಟೆವರೆಗೆ ಫಾರಂ ಫೀ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ (ಹಿಂತಿರುಗಿಸಲಾಗುವುದಿಲ್ಲ) ಸಲ್ಲಿಸಿ ನಿಗದಿತ ಇ.ಎಂ.ಡಿ. ಪಾವತಿಸಿ ಟೆಂಡರ್‌ಗಳನ್ನು ಪಡೆಯಬಹುದಾಗಿದೆ ಹಾಗೂ ಸಲ್ಲಿಸಬಹುದಾಗಿದೆ. ಹಾಗೂ ಈ ಕೆಳ ಸಹಿದಾರರಿಂದ ಕಚೇರಿ ಕೆಲಸದ ಅವಧಿಯಲ್ಲಿ ಪಡೆಯಬಹು ದಾಗಿರುತ್ತದೆ. ದೂರವಾಣಿ ಸಂಖ್ಯೆ: 0816–2272620 ಟೆಂಡರ್‌ಗೆ ಯಾವುದೇ ಮಾರ್ಪಾಟು, ತಿದ್ದುಪಡಿಗಳ ಮಾಹಿತಿಗಳನ್ನು ಇ–ಪೋರ್ಟಲ್ ಮುಖಾಂತರವೇ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ವಿಭಾಗ, ತುಮಕೂರು.
DIPR/TUM/894/KSMCA/2022-23



ಸುಭಾಷಿತ

ಏನನ್ನು ಮಾಡಲೇಬೇಕೊ ಅದನ್ನು ಮಾಡಿಯೇ ತೀರಬೇಕು. ಆ ಕಾರ್ಯ ಸಂತೋಷದಾಯಕ ಅಲ್ಲದಿರಬಹುದು. ಆದರೆ, ಮಹತ್ವದ್ದಾಗಿರುತ್ತದೆ. **–ಜಾರ್ಜ್ ಬರ್ನಾರ್ಡ್ ಶಾ**

ಹುಲಿ-ಚಿರತೆಗಳಿಗೆ ಮುಗ್ಧರ ಇನ್ನಷ್ಟು ಬಲಿ ಬೋನುಗಳ ಸಂಖ್ಯೆ ಹೆಚ್ಚಿಸಿದರೆ ಸಾಕೆ?

ಮನುಷ್ಯರ ಮೇಲೆ ವನ್ಯಮೃಗಗಳ ದಾಳಿಯ ಪ್ರಸಂಗಗಳು ಕಡಿಮೆಯಾಗುವ ಲಕ್ಷಣಗಳೇ ಕಾಣುತ್ತಿಲ್ಲ. ಮೈಸೂರು ಜಿಲ್ಲೆಯ ಎಚ್.ಡಿ. ಕೋಟೆ ತಾಲ್ಲೂಕಿನಲ್ಲಿ ಸೌದೆಗೆ ಹೋದ ಯುವಕನೊಬ್ಬ ಹುಲಿಯ ಬಾಯಿಗೆ ಸಿಕ್ಕಿ ಸಾವಿಗೀಡಾಗಿದ್ದಾನೆ. ತಿ.ನರಸೀಪುರ ತಾಲ್ಲೂಕಿನ ಹೊರಳಹಳ್ಳಿಯಲ್ಲಿ ಹನ್ನೊಂದು ವರ್ಷದ ಬಾಲಕನೊಬ್ಬ ಚಿರತೆಯ ದಾಳಿಗೆ ಪ್ರಾಣ ಕಳೆದುಕೊಂಡಿದ್ದಾನೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿದಂತಿಲ್ಲ. ಕಬ್ಬಿನ ಗದ್ದೆಗಳಲ್ಲಿ ಹೆಚ್ಚುತ್ತಿರುವ ಚಿರತೆಗಳ ಹಾವಳಿ ಬಗ್ಗೆ ತಿ.ನರಸೀಪುರದ ಶಾಸಕರು ಕಳೆದ ತಿಂಗಳು ಸದನದಲ್ಲಿ ಪ್ರಸ್ತಾಪಿಸಿದರಾದರೂ ಬೋನುಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂಬ ಸಲಹೆಯ ಸುತ್ತ ಇಡೀ ಚರ್ಚೆಯೇ ಲಘುಧಾಟಿಯಲ್ಲಿ ನಡೆದಿತ್ತು. 'ಆನೆ, ಹುಲಿ, ಚಿರತೆಗಳ ಬಳಿಗೆ ನಾವು ಸರ್ವಪಕ್ಷ ನಿಯೋಗ ಹೋಗಿ ಮನವಿ ಕೊಡೋಣ' ಎಂದು ಶಾಸಕರೊಬ್ಬರು ಹಾಸ್ಯ ಚಟಾಕಿ ಹಾರಿಸಿದರೇ ವಿನಾ ವಿಷಯದ ಗಾಂಭೀರ್ಯ ಯಾರನ್ನೂ ತಟ್ಟಿದಂತಿಲ್ಲ. ಮೊನ್ನೆ ಶಾಲಾ ಬಾಲಕ ಜಯಂತನ ಮೃತ್ಯುವಿನ ಸಂದರ್ಭದಲ್ಲೂ ಸ್ಥಳೀಯರನ್ನು ಸಮಾಧಾನಪಡಿಸಲೆಂದು 'ಕಬ್ಬಿನ ಕಟಾವು ಮಾಡಿಸುತ್ತೇವೆ, ಪೊದೆಗಳನ್ನು ಸವರಿ ಹಾಕುತ್ತೇವೆ' ಎಂಬ ಜಾಳು ಭರವಸೆಯು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಅವರಿಂದ ಬಂದಿತೇ ಹೊರತು ಅದರಾಚಿನ ಶಾಶ್ವತ ಕ್ರಮಗಳ ಬಗ್ಗೆ ಯಾವ ಮಾರ್ಗಸೂಚಿಯೂ ಅವರ ಬಳಿ ಇದ್ದಂತಿಲ್ಲ. ಚಿರತೆ ದಾಳಿಯಿಂದ ಮೃತಪಟ್ಟವರ ಕುಟುಂಬಗಳಿಗೆ ₹ 15 ಲಕ್ಷ ಪರಿಹಾರ ಕೊಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಘೋಷಿಸಿದ್ದು ಶ್ಲಾಘನೀಯವೇ ಆದರೂ ಪರಿಹಾರ ಮೊತ್ತದಲ್ಲಿ ಹೆಚ್ಚಳವಾದ ಮಾತ್ರಕ್ಕೆ ಮಕ್ಕಳನ್ನು ಕಳೆದುಕೊಂಡ ನೋವು ಶಮನವಾಗಲಾರದು. ಮೇಲಾಗಿ, ಅದು ವನ್ಯಮೃಗಗಳನ್ನು ದೂರವಿಡುವ ಉಪಾಯವಂತೂ ಅಲ್ಲವೇ ಅಲ್ಲ.

ಸಮಗ್ರ ದೃಷ್ಟಿಯಿಂದ ವನ್ಯಜೀವಿಗಳನ್ನು ನಿಭಾಯಿಸುವಲ್ಲಿ ಸ್ಥಳೀಯರನ್ನೂ ತೊಡಗಿಸಿಕೊಳ್ಳಬೇಕಾಗಿದೆ

ಆನೆ, ಹುಲಿ, ಚಿರತೆಗಳ ಸಂಖ್ಯಾವೃದ್ಧಿಯ ವಿಷಯದಲ್ಲಿ ಕರ್ನಾಟಕ ಇಡೀ ದೇಶಕ್ಕೇ ಮಾದರಿಯಾಗುವಂತಿದೆಯಾದರೂ ಸಂರಕ್ಷಿತ ಅರಣ್ಯಗಳಲ್ಲಿ ಅವುಗಳ ಬೇಟೆಗೆ ಬೇಕಾದ ಪ್ರಮಾಣದಲ್ಲಿ ಸಸ್ಯಾಹಾರಿ ಮೃಗಗಳು ಸಿಗುತ್ತಿಲ್ಲ. ಏಕೆಂದರೆ ಅರಣ್ಯಗಳಲ್ಲಿ ತೃಣಸಸ್ಯಗಳು ಸಮೃದ್ಧವಾಗಿ ಬೆಳೆಯುವ ಬದಲು ಲಂಟಾನಾ, ಯುಪಟೋರಿಯಂ, ಪಾರ್ಥೇನಿಯಂ ಮುಂತಾದ ಆಹಾರೇತರ ಕಳೆಸಸ್ಯಗಳ ಹಾವಳಿ ತೀರಾ ಹೆಚ್ಚಾಗಿದೆ. ಈಚೀಚೆಗಂತೂ ಹೆಜ್ಜೆ ಇಟ್ಟಲ್ಲೆಲ್ಲ ವನ್ಯಜೀವಿಗಳ ಆಶ್ರಯಕ್ಕೆ ಹೊಲಗಳೂ ನೆಡುತೋಪುಗಳೂ ಅವಿತಿಟ್ಟುಕೊಳ್ಳಲು ಗಣಿಗುಂಡಿಗಳೂ ಸಿಗುತ್ತವೆ. ಅಲ್ಲಲ್ಲ ಬೇಟೆಗೆ ಕುರಿ, ಮೇಕೆ, ಮಂಗಗಳೂ ಬೀಡಾಡಿ ನಾಯಿಗಳೂ ಸುಲಭಕ್ಕೆ ಸಿಗುತ್ತಿರುವಾಗ ಚಿರತೆಗಳ ಸಂಖ್ಯಾವೃದ್ಧಿ ನಿರಾತಂಕ ನಡೆಯುತ್ತದೆ.

ಮುಂದಿನ ದಿನಗಳಲ್ಲಿ ಮನುಷ್ಯರ ಮತ್ತು ವನ್ಯಜೀವಿಗಳ ಸಂಘರ್ಷ ಹೆಚ್ಚುತ್ತಲೇ ಹೋಗುವುದರಿಂದ ಬೋನುಗಳ ಸಂಖ್ಯೆಯನ್ನು ಹೆಚ್ಚಿಸುವುದಾಗಲೀ ಸೆರೆಸಿಕ್ಕ ಮೃಗಗಳ ಮರುವಸತಿಗೆಂದು ವಿಶೇಷ ರಕ್ಷಣಾ ವಲಯಗಳನ್ನು ಹೆಚ್ಚಿಸುವುದಾಗಲೀ ದೀರ್ಘಕಾಲೀನ ಪರಿಹಾರವಾಗಲಾರವು. ರಾಜ್ಯದಲ್ಲಿ 700ಕ್ಕೂ ಹೆಚ್ಚು ಗ್ರಾಮಗಳಲ್ಲಿ ಮನುಷ್ಯ- ಚಿರತೆಗಳ ಮುಖಾಮುಖಿ ಆಗುತ್ತಿರುವಾಗ ಅಂಥ ಸಂಘರ್ಷಗಳನ್ನು ನಿಭಾಯಿಸಲೆಂದೇ ಅರಣ್ಯ ಇಲಾಖೆಯಲ್ಲಿ ಪ್ರತ್ಯೇಕ ವಿಭಾಗವನ್ನು ಆರಂಭಿಸಬೇಕು ಎಂಬ ವನ್ಯ ತಜ್ಞರ ಸಲಹೆಗೆ ಸರ್ಕಾರದ ಮಾನ್ಯತೆ ಸಿಗಬೇಕು. ಎಂದಿನಂತೆ ಅದು ಇನ್ನೊಂದು ಸರ್ಕಾರಿ ಆಡಳಿತ ಯಂತ್ರವಾಗುವ ಬದಲು, ಪಂಚಾಯಿತಿ ಮಟ್ಟದಲ್ಲಿ ವನ್ಯಜೀವಿಗಳ ನಿಭಾವಣೆ ವಿಷಯದಲ್ಲಿ ಸ್ಥಳೀಯ ಜನರೂ ಪಾಲ್ಗೊಳ್ಳುವಂತೆ ಶಿಕ್ಷಣ ಮತ್ತು ಸಬಲೀಕರಣವನ್ನೂ ಹೆಚ್ಚಿಸುವಂತಿರಬೇಕು. ಈ ಬಗೆಯ ಸಂಘರ್ಷ ಕೇವಲ ನಮ್ಮಲ್ಲಷ್ಟೇ ಅಲ್ಲ, ಕೇರಳ, ಹಿಮಾಚಲ ಪ್ರದೇಶ, ಒಡಿಶಾ, ಅಸ್ಸಾಂ ಮುಂತಾದ ವಿವಿಧ ರಾಜ್ಯಗಳಲ್ಲಿ ಹಾಗೂ ಪೂರ್ವ ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕದ ದೇಶಗಳಲ್ಲೂ ಹೆಚ್ಚುತ್ತಿದೆ. ಆಯಾ ಪ್ರದೇಶಕ್ಕೆ ಸೂಕ್ತವೆನಿಸುವಂತೆ ಸ್ಥಳೀಯರಿಗೆ ವಿಶೇಷ ಹಕ್ಕುಗಳನ್ನೂ ನೀಡಲಾಗುತ್ತಿದೆ. ಗ್ರಾಮೀಣ ಜನರೂ ವನ್ಯಜೀವಿ ನಿಭಾವಣೆಯ ವಿಶಿಷ್ಟ ಉಪಾಯಗಳನ್ನು ರೂಪಿಸಿಕೊಳ್ಳುತ್ತಿದ್ದಾರೆ. ಉದಾಹರಣೆಗೆ, ಬಾಂಗ್ಲಾದೇಶದಲ್ಲಿ ಹುಲಿಗಳನ್ನು ದೂರವಿಡಲು ಕೃಷಿಕರು ಮತ್ತು ಮೀನುಗಾರರು ತಲೆಯ ಹಿಂಭಾಗದಲ್ಲೂ ಮನುಷ್ಯರ ಮೂಗು–ಕಣ್ಣುಗಳನ್ನು ಚಿತ್ರಿಸಿದ ಮುಖವಾಡಗಳನ್ನು ಧರಿಸುತ್ತಾರೆ. ವಿಶ್ವಬ್ಯಾಂಕ್ ವರದಿಯೊಂದರ ಪ್ರಕಾರ, ಆಫ್ರಿಕದ ಬೋಟ್ಸ್‌ವಾನಾ ದೇಶದಲ್ಲಿ ರೈತರು ಆನೆಗಳನ್ನು ದೂರವಿಡಲು ಬೇಲಿಗುಂಟ ಅಲ್ಲಲ್ಲಿ ಪೆಟ್ಟಿಗೆಗಳಲ್ಲಿ ಜೇನು ಸಾಕಣೆ ಮಾಡುತ್ತಾರೆ. ಬೇಲಿಯುದ್ದಕ್ಕೂ ಮೆಣಸಿನ ಪೈರನ್ನು ಬೆಳೆಯುತ್ತಾರೆ ಅಥವಾ ಮೆಣಸಿನ ರಸವನ್ನು ಲೇಪಿಸಿದ ಬಟ್ಟೆಗಳನ್ನು ನೇತು ಹಾಕಿರುತ್ತಾರೆ. ಆನೆಗಳು ವಲಸೆ ಹೊರಡುವ ಋತುಗಳನ್ನು ಗಮನಿಸಿ ಆ ಅವಧಿಗೆ ಮುನ್ನವೇ ಕೊಯ್ಲಿಗೆ ಬರುವ ಕಬ್ಬು, ಶೇಂಗಾ, ಬಾಳೆಯ ವಿಶೇಷ ತಳಿಗಳನ್ನೂ ರೂಪಿಸಲಾಗಿದೆ. ಕೃಷಿಕನ ವರಮಾನವನ್ನೂ ಹೆಚ್ಚಿಸುವ ಇಂಥ ನಾನಾ ಕ್ರಮಗಳ ಬಗ್ಗೆ ಶಾಲೆಗಳಲ್ಲಿ ಪಾಠಗಳೂ ಸೇರ್ಪಡೆಯಾಗಿರುವುದರಿಂದ ವನ್ಯಜೀವಿಗಳ ಸಂಘರ್ಷಗಳನ್ನು ಗಣನೀಯವಾಗಿ ಕಡಿಮೆ ಮಾಡುವಂತೆ ಮುಂದಿನ ಪೀಳಿಗೆಯನ್ನೂ ಸಜ್ಜುಗೊಳಿಸುವ ಕೆಲಸಗಳು ನಡೆದಿವೆ. ಜರ್ಮನಿಯ ಸಹಯೋಗದಲ್ಲಿ, ವನ್ಯಜೀವಿ ಮತ್ತು ಮನುಷ್ಯರ ನಡುವಣ ಸಂಘರ್ಷ ನಿವಾರಣಾ ಕ್ರಮಗಳ ಕುರಿತು ನಮ್ಮಲ್ಲೂ ವಿಶೇಷ ಅಧ್ಯಯನ ನಡೆದಿದ್ದು, ಅದರ ವರದಿಯ ಸೂಕ್ತ ಭಾಗಗಳು ಗ್ರಾಮವಾಸಿಗಳಿಗೂ ಅರ್ಥವಾಗುವಂತೆ ಕನ್ನಡದಲ್ಲಿ ಬರಬೇಕಿದೆ. ಬರೀ ಬೋನು ಮತ್ತು ಅರಿವಳಿಕೆ ಬಂದೂಕಿನಿಂದಾಚೆ ಸಮಗ್ರ ದೃಷ್ಟಿಯಿಂದ ವನ್ಯಜೀವಿಗಳನ್ನು ನಿಭಾಯಿಸುವಲ್ಲಿ ಸ್ಥಳೀಯರನ್ನೂ ತೊಡಗಿಸಿಕೊಳ್ಳಬೇಕಾಗಿದೆ.

ದಿನದ ಟ್ವೀಟ್

ವಿಷಯ ಸ್ಪಷ್ಟವಾಗಲಿ

ಬಿಬಿಸಿ ಕಾರ್ಯಕ್ರಮವು ಏನನ್ನು ಸಮರ್ಥಿಸುತ್ತದೆ ಅಥವಾ ಏನನ್ನು ಸಮರ್ಥಿಸುವುದಿಲ್ಲ ಎಂಬುದನ್ನು ತೀರ್ಮಾನಿಸುವುದು ವೀಕ್ಷಕರಿಗೆ ಬಿಟ್ಟಿದ್ದು. ಆದರೆ, ಕೇಂದ್ರ ಸರ್ಕಾರವು ಅದನ್ನು ಸಿಟ್ಟಿನಿಂದ ನಿರ್ಬಂಧಿಸುವುದು ಸ್ವೀಕಾರಾರ್ಹ ಅಲ್ಲ.

ಮಹುವಾ ಮೊಯಿತ್ರಾ, ಸಂಸದೆ, ಟಿಎಂಸಿ ನಾಯಕಿ

ಕಿಡಿನುಡಿ

ರಾಜ್ಯದ ಕಾಂಗ್ರೆಸ್ಸಿಗರು ತಬ್ಬಲಿಗಳಂತೆ ಅಲೆಯುತ್ತಿದ್ದಾರೆ. ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಸ್ವಲ್ಪ ಉಸಿರಾಡುತ್ತಿದ್ದಾರೆ. ಪ್ರತಿಭಟನೆ ಮಾಡುತ್ತಿದ್ದಾರೆ. ಈ ಬಾರಿ ಚುನಾವಣೆ ಮುಗಿದ ಬಳಿಕ ಅವರಿಬ್ಬರ ಉಸಿರೂ ನಿಲ್ಲುತ್ತದೆ.

ಬಿ.ಎಸ್.ಯಡಿಯೂರಪ್ಪ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಶನಿವಾರ, 24-1-1998

• ಅಯೋಧ್ಯೆ ಶಿಲಾನ್ಯಾಸ: ಕಾಂಗ್ರೆಸ್ ಸಮರ್ಥನೆ

ನವದೆಹಲಿ, ಜ. 23– ನ್ಯಾಯಾಲಯದ ಆದೇಶದ ಮೇರೆಗೆ ಬಾಬ್ರಿ ಮಸೀದಿ ಬಾಗಿಲುಗಳನ್ನು ತೆರೆಯುವುದಕ್ಕೆ ಹಾಗೂ ಸಂಬಂಧಪಟ್ಟ ಎಲ್ಲಾ ಪಕ್ಷಗಳ ಒಪ್ಪಂದದ ಮೇಲೆ ದೇವಾಲಯ ನಿರ್ಮಾಣಕ್ಕೆ ಶಿಲಾನ್ಯಾಸ ಮಾಡಲಾಗಿದೆ ಎಂದು ಕಾಂಗ್ರೆಸ್ ಪಕ್ಷ ಇಂದು ಅಯೋಧ್ಯೆ ವಿಷಯವನ್ನು ಸಮರ್ಥಿಸಿಕೊಂಡಿದೆ.

ಯಾವುದೇ ಪಕ್ಷದ ಹೆಸರನ್ನು ಹೇಳದೆ, ಈ ಎರಡು ಘಟನೆಗಳು ಯಾವುದೋ ಒಂದು ಪಕ್ಷದ ಏಕಪಕ್ಷೀಯ ಕ್ರಮವಲ್ಲ ಎಂದು ಕಾಂಗ್ರೆಸ್ ನಾಯಕ ಅರ್ಜುನ್ ಸಿಂಗ್ ನಿಕಟ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ರಾಜೀವ್ ಗಾಂಧಿ ಜೀವಂತವಾಗಿದ್ದರೆ ಮಸೀದಿ ನಾಶಕ್ಕೆ ಅವಕಾಶ ಕೊಡುತ್ತಿರಲಿಲ್ಲ ಎಂದು ಸೋನಿಯಾ ಗಾಂಧಿ ಅವರು ತಮ್ಮ ಚುನಾವಣಾ ಪ್ರಚಾರದಲ್ಲಿ ನೀಡಿದ್ದ ಹೇಳಿಕೆಗೆ ಸಮಜಾಯಿಷಿ ನೀಡುವ ರೀತಿಯಲ್ಲಿ ಈ ಉತ್ತರ ನೀಡಲಾಗಿದೆ.

• ಬೊಫೋರ್ಸ್ ದಾಖಲೆ ಬಹಿರಂಗ ಬೇಡಿಕೆಗೆ ಪ್ರಧಾನಿ ನಕಾರ

ಜಲಂಧರ್, ಜ. 23 (ಪಿಟಿಐ)– ಬೊಫೋರ್ಸ್ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಬಹಿರಂಗಪಡಿಸಬೇಕೆಂಬ ಬೇಡಿಕೆಯನ್ನು ಪ್ರಧಾನಿ ಐ.ಕೆ. ಗುಜ್ರಾಲ್ ಅವರು ಇಂದು ಇಲ್ಲಿ ತಿರಸ್ಕರಿಸಿದ್ದಾರೆ.

'ಬೊಫೋರ್ಸ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ವಿಟ್ಜರ್ಲೆಂಡ್‌ನಲ್ಲಿ ವಿಚಾರಣೆ ನಡೆಯುತ್ತಿರುವುದರಿಂದ ದಾಖಲೆ ಬಹಿರಂಗಪಡಿಸಲು ಸಾಧ್ಯವಿಲ್ಲವೆಂದು ಸಿಬಿಐ ಈಗಾಗಲೇ ಸ್ಪಷ್ಟಪಡಿಸಿದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಅವರು ತಿಳಿಸಿದರು.

50 ವರ್ಷಗಳ ಹಿಂದೆ

ಬುಧವಾರ, 24-1-1973

• ಪ್ರತ್ಯೇಕ ಆಂಧ್ರ ಬೇಡಿಕೆ ಹೋರು: ಸುಬ್ಬಾರೆಡ್ಡಿ ಆತ್ಮಾಹುತಿ ಬೆದರಿಕೆ– ಗಣರಾಜ್ಯ ದಿನ ಬಂದ್‌ಗೆ ಕರೆ

ರಾಜಮಹೇಂದ್ರಿ, ಜ. 23– ಪ್ರತ್ಯೇಕ ಆಂಧ್ರ ರಚನೆ ಬೇಡಿಕೆ ಈಡೇರಿಕೆಗಾಗಿ ಚಳವಳಿ ತೀವ್ರಗೊಳಿಸುವ ಕಾರ್ಯಕ್ರಮದ ಅಂಗವಾಗಿ, ಮಾಜಿ ಉಪ ಮುಖ್ಯಮಂತ್ರಿ ಬಿ.ವಿ. ಸುಬ್ಬಾರೆಡ್ಡಿಯವರ ಆತ್ಮಾಹುತಿ ಬೆದರಿಕೆ, ಗಣರಾಜ್ಯ ದಿನದಂದು ಆಂಧ್ರ ಬಂದ್, ವಿಧಾನಸಭೆಗಳ ಉಲ್ಲಂಘನೆಗಳ ಸಾಮೂಹಿಕ ಕಾರ್ಯಕ್ರಮಗಳು– ಇವನ್ನು ಆಂಧ್ರ ಜಂಟಿ ಕ್ರಿಯಾ ಸಮಿತಿ ಪ್ರಕಟಿಸಿದೆ.

ಬಿ.ವಿ. ಸುಬ್ಬಾರೆಡ್ಡಿಯವರು ನಿನ್ನೆ ರಾತ್ರಿ, 'ಪ್ರತ್ಯೇಕ ರಾಜ್ಯ ರಚನೆಯಾಗದಿದ್ದರೆ ಆತ್ಮಾಹುತಿ ಮಾಡಿಕೊಳ್ಳುವುದಾಗಿ' ಬೃಹತ್ ಸಭೆಯಲ್ಲಿ ಪ್ರಕಟಿಸಿದರು.

• ಕಾಂಗ್ರೆಸ್ ಸದಸ್ಯತ್ವಕ್ಕೆ ಆಂಧ್ರದ 114 ಮಂದಿ ಶಾಸಕರ ರಾಜೀನಾಮೆ

ಕಾಕಿನಾಡ, ಜ. 23– ನೂರಾಹದಿನಾಲ್ಕು ಮಂದಿ ಕಾಂಗ್ರೆಸ್ ಶಾಸಕರು ಪಕ್ಷದ ಪ್ರಾಥಮಿಕ ಸದಸ್ಯತ್ವ ಸ್ಥಾನಕ್ಕೆ ರಾಜೀನಾಮೆ ನೀಡುವ ಪತ್ರಗಳನ್ನು ಆಂಧ್ರದ ಕ್ರಿಯಾಸಮಿತಿ ಅಧ್ಯಕ್ಷ ಬಿ.ವಿ. ಸುಬ್ಬಾರೆಡ್ಡಿ ಅವರಿಗೆ ಸಲ್ಲಿಸಿದ್ದಾರೆ.

'ಚಾಟ್ ಜಿಪಿಟಿ' ಮುಂದಿನ ದಿನಗಳಲ್ಲಿ ತರಬಹುದಾದ ತಲ್ಲಣ ಏನಿರಬಹುದು?

ಎ.ಐ: ಮನುಕುಲದ ಮುಂದಿನ ದಿನಗಳು

ವಿಶ್ಲೇಷಣೆ

ವಸಂತ ಶೆಟ್ಟಿ

ಸಾಫ್ಟ್‌ವೇರ್ ಮತ್ತು ತಂತ್ರಜ್ಞಾನದ ಪ್ರಪಂಚದಲ್ಲಿ ಇತ್ತೀಚಿನ ದಿನಗಳಲ್ಲಿ ಹೆಚ್ಚು ಹರಿದಾಡುತ್ತಿರುವುದು ಎರಡೇ ಸುದ್ದಿಗಳು. ಮೊದಲನೆಯದು, ಆರ್ಥಿಕ ಹಿಂಜರಿತದ ಭೀತಿಯಲ್ಲಿ ನವೋದ್ಯಮಗಳಿಂದ ಹಿಡಿದು ಗೂಗಲ್, ಅಮೆಜಾನ್, ಮೆಟಾದಂತಹ ಫಾರ್ಚ್ಯೂನ್ 500 ಕಂಪನಿಗಳವರೆಗೆ ಎಲ್ಲೆಡೆ ನಡೆಯುತ್ತಿರುವ, ಉದ್ಯೋಗಿಗಳನ್ನು ಕೆಲಸದಿಂದ ತೆಗೆಯುವ ಸುದ್ದಿ. ಎರಡನೆಯದು, ಎಲ್ಲೆಡೆ ಸಂಚಲನ ಮೂಡಿಸುತ್ತಿರುವ ಕಟ್ಟು ಜಾಣ್ಮೆಯ (ಆರ್ಟಿಫಿಷಿಯಲ್ ಇಂಟೆಲಿಜನ್ಸ್) ಹೊಚ್ಚ ಹೊಸ ಸಾಧನ 'ಚಾಟ್ ಜಿಪಿಟಿ' ಹಾಗೂ ಅದು ಮತ್ತು ಅದರಂತಹ ತಂತ್ರಜ್ಞಾನಗಳು ಇನ್ನು ಕೆಲವೇ ವರ್ಷಗಳಲ್ಲಿ ಉಂಟುಮಾಡಬಹುದಾದ ಸಾಮಾಜಿಕ, ಆರ್ಥಿಕ ತಲ್ಲಣಗಳ ಕುರಿತಾದದ್ದು.

ಮೊದಲನೆಯ ಸುದ್ದಿಯಾದರೂ ಆಗಾಗ ಎದುರಾಗುವ ಆರ್ಥಿಕ ಹಿಂಜರಿತಕ್ಕೆ ಸಂಬಂಧಿಸಿದ್ದು. ಹೀಗಾಗಿ ಅಲ್ಲೇನೂ ಹೊಸತಿಲ್ಲ ಅಂದುಕೊಳ್ಳಬಹುದು. ಆದರೆ ಎರಡನೆಯ ಬೆಳವಣಿಗೆ, ಕೆಲ ದಶಕಗಳಲ್ಲಿ ತಂತ್ರಜ್ಞಾನವು ಮನುಕುಲದ ಮೇಲೆಯೇ ಸವಾರಿ ಮಾಡಬಹುದು ಅನ್ನುವ ಆತಂಕವನ್ನು ಗಟ್ಟಿಗೊಳಿಸುವಂತಿದೆ. ಏನಿದು ಚಾಟ್ ಜಿಪಿಟಿ?

ಸರಳವಾಗಿ ಹೇಳಬೇಕೆಂದರೆ, ಚಾಟ್ ಜಿಪಿಟಿ ಅನ್ನುವುದು ಬಳಸುಗರು ಕೇಳುವ ಪ್ರಶ್ನೆಗಳಿಗೆ ಕ್ಷಣದಲ್ಲೇ ಪಠ್ಯದ ರೂಪದಲ್ಲಿ ಮನುಷ್ಯರ ಭಾಷೆಯಲ್ಲಿ ಉತ್ತರವನ್ನು ಕೊಡುವ ಒಂದು ಎ.ಐ. ತಂತ್ರಜ್ಞಾನ. ಇದೊಂದು ಜಾಲತಾಣದ ರೂಪದಲ್ಲಿದೆ. ಈಗಾಗಲೇ ಗೂಗಲ್ ಥರದ ಹುಡುಕಾಟದ ವೇದಿಕೆ ಇರುವಾಗ ಇದು ಅದಕ್ಕಿಂತ ಹೇಗೆ ಬೇರೆಯಾದದ್ದು ಅನ್ನುವ ಪ್ರಶ್ನೆ ಎದುರಾದರೆ ಅದಕ್ಕಿರುವ ಸರಳ ಉತ್ತರ ಇಷ್ಟೇ: ಗೂಗಲ್ ನಿಮ್ಮ ಹುಡುಕಾಟಕ್ಕೆ ಸಾವಿರಾರು, ಲಕ್ಷಾಂತರ ತಾಣಗಳನ್ನು ಸೂಚಿಸಬಹುದು. ಅಲ್ಲಿಂದ ನಿಮಗೆ ಬೇಕಾದ ಮಾಹಿತಿ ಅರಸಿ, ಆಯ್ದುಕೊಳ್ಳುವುದು ನಿಮ್ಮದೇ ಕೆಲಸ. ಆದರೆ ಚಾಟ್ ಜಿಪಿಟಿ ಹಾಗಲ್ಲ. ಅದು ವೈಯಕ್ತಿಕ ಸಹಾಯಕನೊಬ್ಬನ ಜೊತೆ ಕೂತು ಮಾತನಾಡುವಂತಹ ಅನುಭವ ನೀಡುತ್ತದೆ. ಇಲ್ಲಿ ಕೇಳಿದ ಪ್ರಶ್ನೆಗಳಿಗೆ ಕ್ಷಣದಲ್ಲೇ ಉತ್ತರ ಸಿಗುತ್ತದೆ. ಸಿಕ್ಕ ಉತ್ತರದ ಮೇಲೆ ಇನ್ನಷ್ಟು ಪ್ರಶ್ನೆಗಳನ್ನು ಕೇಳುತ್ತಾ ಹೋದರೆ ಅದು ಒಂದು ಆಪ್ತ ಮಾತುಕತೆ, ಚರ್ಚೆಯ ರೀತಿಯಲ್ಲಿ ಉತ್ತರಿಸುತ್ತಾ ಹೋಗುತ್ತದೆ. ಅದು ಉತ್ತರಿಸುವ ರೀತಿ, ವಾಕ್ಯಗಳ ರಚನೆ ಎಲ್ಲವೂ ಹೇಗಿರುತ್ತವೆ ಅಂದರೆ, ನೀವು ನಿಮ್ಮ ಅಗತ್ಯಗಳನ್ನು, ತೊಂದರೆಗಳನ್ನು ಒಬ್ಬ ಕೌನ್ಸಿಲರ್ ಬಳಿಯೋ ವಕೀಲರ ಬಳಿಯೋ ವೈದ್ಯರ ಬಳಿಯೋ ಮಾರ್ಕೆಟಿಂಗ್ ಪರಿಣತರ ಬಳಿಯೋ ಹೇಳಿಕೊಂಡು ಪರಿಹಾರ ಪಡೆಯುವ ರೂಪದಲ್ಲಿರುತ್ತವೆ.

ಒಂದು ಕವಿತೆ ಬರೆ ಅಂದರೆ ಅದು ಬರೆಯುತ್ತೆ. ಶಿಲಾಯುಗದ ಒಬ್ಬ ಮನುಷ್ಯನ ಬಗ್ಗೆ ಕತೆ ಬರೆ ಅಂದರೆ ಹೊಚ್ಚ ಹೊಸ ಕತೆಯೊಂದನ್ನು ಹೊಸೆಯುತ್ತೆ. ಯಾವುದೋ ಸಮಸ್ಯೆಗೆ ಸಾಫ್ಟ್‌ವೇರ್ ಕೋಡ್ ಬರೆ ಅಂದರೆ ಬರೆದು ಎದುರಿಗಿಡುತ್ತೆ. ನಿಮ್ಮ ಸಂಸ್ಥೆಯ ಪಾಲಿಸಿ, ಮಾರ್ಕೆಟಿಂಗ್‌ನಂತಹ ವಿಷಯಗಳ ಬಗ್ಗೆ ಒಂದು ನಿಖರವಾದ ಯೋಜನೆ ಕೊಡು ಅಂದರೆ ಕ್ಷಣದಲ್ಲೇ ಕೊಡುತ್ತೆ. ಇಂಟರ್‌ನೆಟ್‌ನಲ್ಲಿ ನಾಲ್ಕೈದು ದಶಕಗಳಲ್ಲಿ ಹುಟ್ಟುಹಾಕಲಾದ ಗಿಗಾ ಬೈಟ್‌ಗಟ್ಟಲೆ ಮಾಹಿತಿಯನ್ನು ಇದಕ್ಕೆ ಉಣಬಡಿಸಿ ಇದರ ಜಾಣ್ಮೆಯನ್ನು ಕಟ್ಟಲಾಗಿದೆ. ಇದು ಬರುವ ದಿನಗಳಲ್ಲಿ ಬಳಸುಗರು ಕೇಳುವ ಪ್ರಶ್ನೆ, ಕೊಡುವ ಮಾಹಿತಿಯನ್ನು ಬಳಸಿಕೊಂಡು ಇನ್ನಷ್ಟು ತಿಳಿವಳಿಕೆ ಹೆಚ್ಚಿಸಿಕೊಳ್ಳುವ ಕೆಲಸ ಮಾಡಬಹುದು.

ಸರಿ ಇಂತಹ ಹೊಸ ತಂತ್ರಜ್ಞಾನ ಬರುವುದು ಸಹಜ. ಬಂದಾಗಲೆಲ್ಲ ಮನುಕುಲ ಒಗ್ಗಿಕೊಳ್ಳುತ್ತಲೇ ಬಂದಿದೆ. ಚಾಟ್ ಜಿಪಿಟಿ ಮತ್ತಿತರ ಎ.ಐ. ತಂತ್ರಜ್ಞಾನಗಳು ದೊಡ್ಡಮಟ್ಟದ ಸಾಮಾಜಿಕ, ಆರ್ಥಿಕ ತಲ್ಲಣಗಳನ್ನು ಉಂಟು ಮಾಡಬಹುದು ಅನ್ನುವ ಮಾತು ಸರಿಯೇ ಅನ್ನುವ ಪ್ರಶ್ನೆ ಹಲವರಲ್ಲಿದೆ. ಈ ತಂತ್ರಜ್ಞಾನ ಈಗಷ್ಟೇ ಕಣ್ಣುಬಿಡುತ್ತಿರುವುದರಿಂದ ಅದರ ಪರಿಣಾಮ ಹೀಗೆಯೇ ಆಗಲಿದೆ ಎಂದು ಹೇಳಲಾಗಲಿಕ್ಕಿಲ್ಲ ಅಂದುಕೊಳ್ಳೋಣ. ಆದರೆ ಅದರ ಕುರಿತು ಕೆಲವು ಮುಖ್ಯವಾದ ಆತಂಕಗಳ ಬಗ್ಗೆ ಚರ್ಚೆಯಾಗುತ್ತಿದೆ. ಏನವು?

ಕೆಲಸಗಳೆತ: ಡಿಸೈನ್, ಮಾರ್ಕೆಟಿಂಗ್, ಎಲ್ಲ ರೀತಿಯ ಬರವಣಿಗೆ, ಕೌನ್ಸೆಲಿಂಗ್, ಗ್ರಾಹಕ ಸೇವೆ, ಡೇಟಾ ಎಂಟ್ರಿ, ಅನುವಾದ, ತಯಾರಿಕಾ ವಲಯ, ವಾಹನ ಚಾಲನೆ ಹೀಗೆ ಹಲವಾರು ಬಗೆಯ ಕೆಲಸಗಳಲ್ಲಿ ತೊಡಗಿಕೊಂಡವರ ಕೆಲಸವನ್ನು ಇಂತಹ ಎ.ಐ. ತಂತ್ರಜ್ಞಾನ ದೊಡ್ಡಮಟ್ಟದಲ್ಲಿ ಕಳೆದು ನಿರುದ್ಯೋಗದ ಸಮಸ್ಯೆ ಉಂಟು ಮಾಡಬಹುದು.

ಆರ್ಥಿಕ ತಾರತಮ್ಯದ ಹೆಚ್ಚಳ: ಇಂತಹ ಎ.ಐ. ತಂತ್ರಜ್ಞಾನಗಳು ಹೆಚ್ಚಿದಂತೆ ಇವು ಹೆಚ್ಚು ಕೌಶಲದ ಅಗತ್ಯವಿಲ್ಲದ ಕೆಳಮಟ್ಟದ ಕೆಲಸಗಳೆಲ್ಲವನ್ನೂ ಆಟೊಮೇಟ್ ಮಾಡುತ್ತ ಹೋಗುವುದರಿಂದ ಈ ತಂತ್ರಜ್ಞಾನಗಳನ್ನು ಕರಗತ ಮಾಡಿಕೊಳ್ಳಲಾಗದ ಹಲವರು ನಿರುದ್ಯೋಗಿಗಳಾಗಬಹುದು. ಇಂತಹ ತಂತ್ರಜ್ಞಾನಗಳ ಮೇಲೆ ಅವಲಂಬನೆ ಹೆಚ್ಚಿದಂತೆ ಸ್ಪಷ್ಟವಾಗಿ, ವಸ್ತುನಿಷ್ಠವಾಗಿ ಯೋಚಿಸುವ ಶಕ್ತಿಯನ್ನು ಕೆಲವರು ಕಳೆದುಕೊಳ್ಳಬಹುದು ಮತ್ತು ಅದರಿಂದಾಗಿ ತಂತ್ರಜ್ಞಾನದ ತಲುಪುವಿಕೆ ಹೆಚ್ಚುತ್ತಿರುವ ಆರ್ಥಿಕ ವ್ಯವಸ್ಥೆಯಲ್ಲಿ ಅವರು ಪಾಲ್ಗೊಳ್ಳುವ ಅವಕಾಶಗಳು ಕಡಿಮೆಯಾಗುತ್ತ ಹೋಗಬಹುದು.

ಚಿಕ್ಕ ಮತ್ತು ಮಧ್ಯಮ ಗಾತ್ರದ ಹಲವಾರು ಉದ್ದಿಮೆಗಳು ಇಂತಹ ತಂತ್ರಜ್ಞಾನ ತರುವ ದಕ್ಷತೆಯ ಎದುರು ಸೆಣಸಲಾಗದೆ ಮುಚ್ಚಬಹುದು ಮತ್ತು ಇವು ದೊಡ್ಡ ಗಾತ್ರದ ಉದ್ದಿಮೆಗಳ ಕೈಯನ್ನು ಇನ್ನಷ್ಟು ಬಲಪಡಿಸಬಹುದು. ಇವೆಲ್ಲವೂ ಆರ್ಥಿಕ ತಾರತಮ್ಯದ ಹೆಚ್ಚಳಕ್ಕೆ ಕಾರಣವಾಗಬಹುದು

ನೈತಿಕ ಬಿಕ್ಕಟ್ಟುಗಳು: ಈ ಕಟ್ಟು ಜಾಣ್ಮೆ ಇದಕ್ಕೆ ಉಣಬಡಿಸುವ ಮಾಹಿತಿಯ ಮೇಲೆಯೇ ತನ್ನ ತಿಳಿವಿನ ನೆಲೆಯನ್ನು ಹೊಂದಿರುವುದರಿಂದ ಇಂತಹ ಮಾಹಿತಿಯಲ್ಲಿ ಇರಬಹುದಾದ, ಸೇರಿಕೊಳ್ಳಬಹುದಾದ ಜನಾಂಗೀಯ, ಧಾರ್ಮಿಕ ಮತ್ತು ಜಾತಿಯ ಪಕ್ಷಪಾತದ ನಿಲುವುಗಳು, ಮೇಲುಕೀಳಿನ ಭಾವನೆಗಳು ಈ ತಂತ್ರಜ್ಞಾನದ ಮೂಲಕ ಇನ್ನಷ್ಟು ವ್ಯಾಪಕವಾಗಿ ಹಬ್ಬಬಹುದು. ಅಲ್ಲದೆ ಸುಳ್ಳುಸುದ್ದಿಗಳು ಇಂಟರ್‌ನೆಟ್ ಮೂಲಕ ವ್ಯಾಪಕವಾಗಿ ಹಬ್ಬಿ ಸಮಾಜದಲ್ಲಿ ಬಿರುಕು ಮೂಡಿಸುವುದನ್ನು ಈಗಾಗಲೇ ನೋಡುತ್ತಿರುವಾಗ, ಇಂತಹ ಹುಸಿಸುದ್ದಿಗಳನ್ನು ವ್ಯವಸ್ಥಿತವಾಗಿ ಕಟ್ಟುವ ಶಕ್ತಿಯಿರುವವರು ಈ ತಂತ್ರಜ್ಞಾನದ ಮೆದುಳನ್ನು ತೊಳೆಯದಂತೆ ಕಾಯುವುದು ಹೇಗೆ ಅನ್ನುವಂತಹ ನೈತಿಕ ಪ್ರಶ್ನೆಗಳು ನಮ್ಮ ಮುಂದಿವೆ.

ವೈಯಕ್ತಿಕ ಮಾಹಿತಿ ಮತ್ತು ಖಾಸಗಿತನದ ಸುರಕ್ಷೆ: ಇಂತಹ ಎ.ಐ. ತಂತ್ರಜ್ಞಾನಗಳು ಹೆಚ್ಚಿದಂತೆ ಅವುಗಳಿಗೆ ಉಣಿಸಲಾಗುವ ಗೋಪ್ಯ, ವೈಯಕ್ತಿಕ ಮಾಹಿತಿಯ ಪ್ರಮಾಣವೂ ಏರುತ್ತಲೇ ಹೋಗಬಹುದು. ಇವು ಹೆಚ್ಚಿನ ಸೈಬರ್ ದಾಳಿ, ಮಾಹಿತಿ ಕಳ್ಳತನ ಮತ್ತು ಸರ್ವಾಧಿಕಾರಿ ಸರ್ಕಾರಗಳು ಜನರ ಮೇಲೆ ಇನ್ನೂ ಹೆಚ್ಚಿನ ಕಣ್ಗಾವಲು ಇರಿಸುವುದನ್ನು ಸಾಧ್ಯವಾಗಿಸಬಹುದು.

ಹಾಗಿದ್ದರೆ ಇಂತಹ ತಂತ್ರಜ್ಞಾನದಿಂದ ಒಳಿತೇನೂ ಇಲ್ಲವೇ ಅನ್ನುವ ಪ್ರಶ್ನೆ ಎದುರಾಗಬಹುದು. ಖಂಡಿತವಾಗಿ ಒಳಿತೂ ಇದೆ. ಇಂತಹ ತಂತ್ರಜ್ಞಾನವನ್ನು ಬಳಸಿ ಮಾಹಿತಿ, ಜ್ಞಾನವನ್ನು ಹೆಚ್ಚೆಚ್ಚು ಜನರಿಗೆ ಹೆಚ್ಚು ಸುಲಭವಾಗಿ ತಲುಪಿಸಬಹುದು. ಸರ್ಕಾರವೊಂದು ಒಂದೇ ಭಾಷೆಯಲ್ಲಿ ಕಾನೂನುಗಳನ್ನು ರಚಿಸುತ್ತೇವೆ ಅಂದರೆ, ಇಂತಹ ಅನುವಾದ ತಂತ್ರಜ್ಞಾನದ ಸಹಾಯದೊಂದಿಗೆ ಕ್ಷಣದಲ್ಲೇ ಅಂತಹ ನೀತಿಯನ್ನು ಸಾಮಾನ್ಯ ಜನರಿಗೂ ಅರ್ಥವಾಗುವ ರೂಪದಲ್ಲಿ ಅನುವಾದಿಸಿ ಕೊಡಬಹುದು. ಲಕ್ಷಾಂತರ ವೈದ್ಯಕೀಯ ದಾಖಲೆಗಳನ್ನು ಓದುವ ಎ.ಐ. ತಂತ್ರಜ್ಞಾನವೊಂದು ಕ್ಷಣದಲ್ಲೇ ರೋಗಿಯೊಬ್ಬರ ದಾಖಲೆಗಳನ್ನು ಓದಿ, ಅತ್ಯಂತ ನಿಖರವಾಗಿ ಕಾಯಿಲೆ ಪತ್ತೆ ಮಾಡಿ, ಪರಿಹಾರ ಸೂಚಿಸಬಹುದು. ವೈದ್ಯರ ಕೊರತೆ ಕಾಡುವ ನಮ್ಮಂತಹ ದೇಶದಲ್ಲಿ ಇದು ಎಷ್ಟು ದೊಡ್ಡ ಮಟ್ಟದಲ್ಲಿ ಆರೋಗ್ಯ ಸೇವೆಯನ್ನು ಸುಧಾರಿಸಬಹುದು ಎಂದು ಯೋಚಿಸಬಹುದು.

ವಿಜ್ಞಾನ ಮತ್ತು ತಂತ್ರಜ್ಞಾನದ ಸಂಶೋಧನೆಯಲ್ಲೂ ಇದು ದೊಡ್ಡ ಮಟ್ಟದ ನೆರವು ಕಲ್ಪಿಸಬಹುದು. ಈ ತಂತ್ರಜ್ಞಾನ ಪ್ರತಿಯೊಬ್ಬ ವ್ಯಕ್ತಿಯ ಮಟ್ಟದಲ್ಲಿ ಅವರ ಅಗತ್ಯಗಳನ್ನು ಅರ್ಥ ಮಾಡಿಕೊಂಡು ಪರಿಹಾರ ಸೂಚಿಸುವ ಶಕ್ತಿ ಹೊಂದಿರುವುದರಿಂದ ತಂತ್ರಜ್ಞಾನವನ್ನು ಬಳಸಿ ಹೆಚ್ಚು ಹೆಚ್ಚು ಜನರಿಗೆ ಅವರ ಜೀವನಕ್ಕೆ ಬೇಕಾದ ಮಾಹಿತಿ, ಜ್ಞಾನ ಹಂಚುವುದನ್ನು ಸಾಧ್ಯವಾಗಿಸುತ್ತದೆ.

ಪ್ರೊಫೆಸರ್ ಸ್ಟೀಫನ್ ಹಾಕಿಂಗ್ ಅವರು ಹೇಳಿದಂತೆ, ಶಕ್ತಿಶಾಲಿ ಎ.ಐ. ಒಂದೋ ಮನುಕುಲಕ್ಕೆ ತುಂಬಾ ಒಳಿತು ಮಾಡುತ್ತದೆ ಇಲ್ಲವೇ ತುಂಬಾ ಕೆಡುಕು ಮಾಡುತ್ತದೆ. ಯಾವುದು ನಿಜವಾಗಬಹುದು ಅನ್ನುವುದು ಇನ್ನೂ ನಮಗೆ ಗೊತ್ತಿಲ್ಲ. ಆಳುವವರು, ತಂತ್ರಜ್ಞಾನ ಪರಿಣತರು, ಚಿಂತಕರು ಎಲ್ಲರೂ ಇದರ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಪರಿಣಾಮಗಳ ಬಗ್ಗೆ ಗಮನಹರಿಸಲು ಶುರು ಮಾಡಬೇಕು ಅನ್ನುವುದಂತೂ ಇಂದಿನ ತುರ್ತು.

ಚುರುಮುರಿ



ಅಸಮಾನತೆಯ ಲೆಕ್ಕ

• ಲಿಂಗರಾಜು ಡಿ.ಎಸ್

'ಸಾ, ಕೋವಿಡ್ ಕಾಲದ ನಂತರ ಶ್ರೀಮಂತರು ಶ್ರೀಮಂತರಾದ್ರೆ ಬಡವರು ಬಡವರಾಯ್ತಲೇ ಅವ್ರಂತೆ? ಅಂತರ ಕಮ್ಮಿ ಮಾಡದು ಯಂಗೆ?' ಬಾರಾನಮೂನೆ ಲೆಕ್ಕ ತಗೆದೆ.

'ನೋಡ್ಲಾ, ನಮ್ಮ ದೇಶದ ಶೇಕಡ 98 ಜನ ಹೊಟ್ಟೆಬಟ್ಟೆಗೆ ದಿನವೆಲ್ಲಾ ಹೆಣಗಾಡೋ ಸಭ್ಯರು. ಇವರು ಉಳ್ಳೋರ ಮನೆ ತಿಜೋರಿಲಿ ಸೇಫಾಗಿರೋ ಸತ್ಯ ಯಾವಾಗ ಈಚೆಗೆ ಬಂದತ್ತು ಅಂತ ಕಾವುಗೋಳಿ ಥರ ಕಾಯ್ತಾ ಕುಕಂಡಿರ್ತರೆ' ಅಂದರು ತುರೇಮಣೆ.

'ಅದಕ್ಕಿದಕ್ಕೆ ತಾರಾಕಿ ತಮಾಷೆ ನೋಡದೇ ನಿಮ್ಮ ಐನಾತಿ ಬುದ್ಧಿ' ಅಂತ ಹೀಗಳೆದೆ.

'ಸುಮ್ನೆ ಕೇಳ್ಲಾ! ಉಳಿದ ಎರಡು ಪರ್ಸೆಂಟ್ ಕುಲಸ್ಥರಲ್ಲಿ ಒಂದು ಪರ್ಸೆಂಟ್ ಇರೋ ಅತೀ ಶ್ರೀಮಂತರ ತಾವ್ಲೇ ದೇಸದ ಅರ್ಧ ಸಂಪತ್ತು ಬೇರು ಬುಟ್ಟದೆ. ಇವರು ಚೆನ್ನಾಗಿ ಬಾಳಿ ಬದುಕಲಿ ಅಂತ ಸರ್ಕಾರವೂ ಕಾರ್ಪೊರೇಟ್ ಟ್ಯಾಕ್ಸು, ಆಕಸ್ಮಿಕ ಲಾಭದ ಮೇಲೆ, ರಫ್ತಿನ ಮ್ಯಾಲೆ ತೆರಿಗೆ ಇಳಿಸಿ ಜ್ವಾಪಾನಾಗಿ ನೋಡಿಕ್ಯತಾ ಇರುತ್ತೆ' ಅಂತಂದ್ರು.

'ಅಸಮಾನತೆಯ ಬಿಕ್ಕಟ್ಟಿನ ಬಗ್ಗೆ ಆಕ್ಸ್‌ಫಾಮ್ ರಿಪೋರ್ಟ್ ಹೇಳಿದ ಇಚಾರವ ಏನು ಪಸಂದಾಗಿ ಬುಡುಸೇಳಿಬುಟ್ರಿ ನೀವು! ಬಾಕಿ ಒಂದು ಪರ್ಸೆಂಟ್ ಜನದ ಕತೆ ಯಂಗೆ ಸಾ?' ಅಂತ ಕೇಳಿದೆ.

'ಒಂದು ಪರ್ಸೆಂಟ್ ಜನಕ್ಕೆ ಪುಕ್ಕಟ್ಟೆ ಪ್ರಚಾರ ತಗಂಡು ನಿಗರಾಡದೇ ಕ್ಯಾಮೆ. ಬಾಯಿ ಕಡಿತ ಜಾಸ್ತಿಯಾದಾಗ ಅಪಾಪೋಲಿಗಳಂಗೆ ಮಾತಾಡ್ತರೆ. ಇವರನ್ನ ನಮ್ಮ ನಾಯಕರು ಅಂತ ಐದು ವರ್ಸಕ್ಕೆ ಒಂದು ಸಾರಿ ಆಯ್ಕೆ ಮಾಡಿಕ್ಯಬೇಕಾಗಿರದೇ ನಮ್ಮ ದುರದೃಷ್ಟ' ಅಂತ ಕುಟುಕಿದರು ತುರೇಮಣೆ.

'ಎರಡು ಪರ್ಸೆಂಟ್ ಕುಲಸ್ಥರಿಂದ ನಮಗೇನು ಪಾಯ್ದೆ ಸಾ?' ಅಂತ ಆಸೆಯಿಂದ ಕೇಳಿದೆ.

'ನೋಡ್ಲಾ, ಎರಡು ಪರ್ಸೆಂಟ್ ಜನದ ತಿಜೋರಿ ತುಂಬಬೇಕಾದ್ರೆ ಬಾಕಿ 98 ಪರ್ಸೆಂಟ್ ಜನ ವರ್ಸೊಪ್ಪತ್ತೂ ಏದುಸುರು ಬುಟ್ಕಂದು ಜಿಎಸ್‌ಟಿ, ಐಟಿ ತಿದಿ ಒತ್ತುತ್ಲೇ ಇರಬೇಕು!' ಅಂತ ಒಳೇಟು ಕೊಟ್ಟರು.

ಸಂಗತ

ಮುಟ್ಟಿನ ರಜೆ: ಕಲಿಕೆಗೆ ಅಡ್ಡಿಯಾಗದಿರಲಿ

ಈ ನಿರ್ಧಾರದ ಹಿಂದಿನ ಕಾಳಜಿ ಮೆಚ್ಚುವಂಥದ್ದೇ ಆದರೂ ಅದರ ಪರಿಣಾಮಗಳನ್ನೂ ಯೋಚಿಸಬೇಕು

• ಡಾ. ಕೆ.ಎಸ್.ಚೈತ್ರಾ

'ವಿದ್ಯಾರ್ಥಿನಿಯರಿಗೆ ತಿಂಗಳಲ್ಲಿ ಮೂರರಿಂದ ನಾಲ್ಕು ದಿನ ಋತುಚಕ್ರದ ದಿನಗಳಾಗಿರುತ್ತವೆ. ಆಗ ಅವರ ಆರೋಗ್ಯದಲ್ಲಿ ಅನೇಕ ರೀತಿಯ ಸಮಸ್ಯೆಗಳು ಆಗುವ ಸಾಧ್ಯತೆ ಇದೆ. ದೈಹಿಕವಾಗಿ ಮಾತ್ರವಲ್ಲ ಭಾವನಾತ್ಮಕ ರೋಲರ್ ಕೋಸ್ಟರ್ ದಿನಗಳಾಗಿರುತ್ತವೆ. ಹಾಗಾಗಿ ಶಾಲೆಗೆ ಬರಲು ಸಾಧ್ಯವಾಗದೇ ಇರಬಹುದು. ಹೀಗಿರುವಾಗ ಶಾಲಾ ಹಾಜರಾತಿ ಶೇಕಡ 75ರಷ್ಟನ್ನು ನಿರೀಕ್ಷಿಸುವುದು ಕಷ್ಟವಾಗುತ್ತದೆ. ಅದಕ್ಕಾಗಿ ವಿದ್ಯಾರ್ಥಿಗಳ ಒಕ್ಕೂಟದ ಬೇಡಿಕೆಯ ಮೇರೆಗೆ ಕೇರಳದ ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಮುಟ್ಟಿನ ರಜೆ ನೀಡಲು ನಿರ್ಧರಿಸಲಾಗಿದೆ' ಎಂದು ಇತ್ತೀಚೆಗೆ ವರದಿಯಾಗಿದೆ.

ಮುಟ್ಟು, ಹೆಣ್ಣಿನ ದೇಹದಲ್ಲಿ ನಡೆಯುವ ಸಹಜ ಪ್ರಕ್ರಿಯೆ. ಆದರೆ ಇಂದಿಗೂ ನಮ್ಮ ಸಮಾಜದಲ್ಲಿ ಅದು ಗುಟ್ಟಾಗಿಡಬೇಕಾದ, ಹೆಂಗಸರಿಗೆ ಸಂಬಂಧಿಸಿದ ವಿಷಯ ಎಂಬುದು ಅಲಿಖಿತ ನಿಯಮ. ಪರಿಸ್ಥಿತಿ ಸುಧಾರಿಸಿದೆ ಎಂಬುದು ನಿಜವಾದರೂ ಅದರ ಬಗ್ಗೆ ಮಾತು, ಚರ್ಚೆ, ಆರೋಗ್ಯಕರ ಸಂವಾದ ಇಂದಿಗೂ ಕಷ್ಟಸಾಧ್ಯ. ಇಂಥ ಸಮಾಜದಲ್ಲಿ ಹೆಣ್ಣುಮಕ್ಕಳ ಕಷ್ಟಗಳ ಬಗ್ಗೆ ಕಾಳಜಿ ವಹಿಸಿ, ಯಾವುದೇ ರೀತಿಯ ಪ್ರಮಾಣಪತ್ರ ಕೇಳದೇ ನೀಡಲಾಗುವ ಈ ರೀತಿಯ ರಜೆಯ ನಿರ್ಧಾರ ಮಹತ್ವದ್ದು! ಹಾಗಾಗಿಯೇ ಈ ಸೌಲಭ್ಯವನ್ನು ಇತರ ರಾಜ್ಯಗಳಲ್ಲೂ ಆರಂಭಿಸುವ ಬಗ್ಗೆ ಯೋಚಿಸಲಾಗುತ್ತಿದೆ. ಇದರ ಹಿಂದಿನ ಕಾಳಜಿ ಮೆಚ್ಚುವಂಥದ್ದೇ ಆದರೂ ಅದರ ಪರಿಣಾಮಗಳನ್ನೂ ಯೋಚಿಸಬೇಕು.

ಮುಟ್ಟು ಎನ್ನುವುದು ಸಹಜ ಪ್ರಕ್ರಿಯೆಯಾಗಿದ್ದರೂ ವ್ಯಕ್ತಿಯಿಂದ ವ್ಯಕ್ತಿಗೆ ರಕ್ತಸ್ರಾವ, ಅವಧಿ, ಲಕ್ಷಣಗಳು ಭಿನ್ನವಾಗಿರುತ್ತವೆ. ಹಾಗೆ ನೋಡಿದರೆ ಋತುಚಕ್ರ ಆರಂಭವಾಗುವ ಕೆಲ ದಿನಗಳ ಮುನ್ನವೇ ಶೇಕಡ 70ರಷ್ಟು ಮಹಿಳೆಯರು ತಲೆಭಾರ, ಕೆಳಹೊಟ್ಟೆಯಲ್ಲಿ ನೋವು, ಕಿರಿಕಿರಿ, ಮನಸ್ಸಿಗೆ ಬೇಸರ, ಮೈಯ್ಯಲ್ಲಿ ನೀರು ತುಂಬಿ ಊದಿದ ಅನಿಸಿಕೆ, ಸ್ತನಗಳಲ್ಲಿ ನೋವು ಹೀಗೆ ಅನೇಕ ರೀತಿಯ ತೊಂದರೆಗಳನ್ನು ಅನುಭವಿಸುತ್ತಾರೆ. ಆದರೆ ಇವೆಲ್ಲವೂ ದೈನಂದಿನ ಚಟುವಟಿಕೆಗೆ ತೊಂದರೆ ಉಂಟುಮಾಡುವಷ್ಟು ತೀವ್ರವಾಗಿರುವುದಿಲ್ಲ. ಮುಟ್ಟು ಶುರುವಾದ ತಕ್ಷಣ ತನ್ನಿಂತಾನೇ ಕಡಿಮೆಯಾಗುತ್ತವೆ. ಮುಟ್ಟಿನ ಸಮಯದಲ್ಲಿಯೂ ಅತಿ ರಕ್ತಸ್ರಾವ, ಸುಸ್ತು, ಹೊಟ್ಟೆನೋವು, ಕಾಲಿನ ಸೆಳೆತ, ಸೊಂಟದಲ್ಲಿ ಬಿಗಿತ, ವಾಕರಿಕೆ ಹೀಗೆ ಅನೇಕ ರೀತಿಯ ಸಮಸ್ಯೆಗಳು ಹೆಣ್ಣುಮಕ್ಕಳಿಗೆ ಇರಬಹುದು. ಕೆಲವರಿಗಂತೂ ನಿಲ್ಲಲೂ ಸಾಧ್ಯವಾಗದಷ್ಟು ಬಳಲಿಕೆ ಇರುತ್ತದೆ. ಈ ರೀತಿಯ ಸಮಸ್ಯೆಗಳು ಇರುವ ಪ್ರಮಾಣ ಶೇಕಡ 10ಕ್ಕಿಂತ ಕಡಿಮೆ. ಹೀಗಿದ್ದಾಗ ಶಾಲೆ, ಕಾಲೇಜಿಗೆ ಬರಲು, ಕೂರಲು, ಕಲಿಯಲು ಖಂಡಿತಾ ಸಾಧ್ಯವಿಲ್ಲ. ಇಂಥವರಿಗೆ ನಿಜಕ್ಕೂ ಈ ರಜೆಯ ಅವಶ್ಯಕತೆ ಇರುತ್ತದೆ. ಹಾಗಾಗಿಯೇ ರಜೆ ಸಿಗಲಿ, ಬೇಕಾದವರಿಗೆ ಮಾತ್ರ, ಎಲ್ಲರಿಗೂ ಅಲ್ಲ!

ಈ ರಜೆ ನಮ್ಮ ಸಮಾಜದ ಮೇಲೆ ಬೀರುವ ಪರಿಣಾಮದ ಬಗ್ಗೆಯೂ ಯೋಚಿಸಬೇಕು. ಈಗಾಗಲೇ ಮುಟ್ಟಿನ ಸಮಯದಲ್ಲಿ ಆಟ, ಡಾನ್ಸ್, ಓಟ ಇವೆಲ್ಲವನ್ನೂ ನಿರ್ಬಂಧಿಸುವ ಪ್ರವೃತ್ತಿ ನಮ್ಮಲ್ಲಿದ್ದು ಅದು ಹೆಚ್ಚಾಗಬಹುದು. ಇದನ್ನೇ ನೆಪವಾಗಿಟ್ಟು ಅನೇಕರು ಶಾಲೆಯನ್ನು ತಪ್ಪಿಸಿ ಓದಿನಲ್ಲಿ ಹಿಂದುಳಿಯುವ ಸಾಧ್ಯತೆ ಇದೆ. ಆಗಾಗ್ಗೆ ತೆಗೆದುಕೊಳ್ಳುವ ಇಂಥ ರಜೆಯಿಂದ ವಿದ್ಯಾರ್ಥಿನಿಯರು, ಮಹಿಳಾ ಉದ್ಯೋಗಿಗಳ ಕಾರ್ಯಕ್ಷಮತೆಯ ಬಗ್ಗೆ ಶಂಕೆ ಮೂಡಬಹುದು. ಇದೆಲ್ಲದರ ಜತೆ ಈ ನೈಸರ್ಗಿಕ ಕ್ರಿಯೆಯನ್ನು ರೋಗ ಎಂದು ಭಾವಿಸುವ ಅಪಾಯವಿದೆ. ಮಕ್ಕಳಲ್ಲಿ ಮುಟ್ಟು ಎಂದರೆ ನೋವಿನ, ಕಷ್ಟದ ದಿನಗಳು, ಆ ದಿನಗಳಲ್ಲಿ ರಜೆ ಪಡೆಯುವುದು ಅಗತ್ಯ ಎಂಬ ತಪ್ಪುಕಲ್ಪನೆಯನ್ನು ಹುಟ್ಟುಹಾಕಬಹುದು. ಹೆಣ್ಣುಮಕ್ಕಳಿಗಂತೂ ಮುಟ್ಟಿನ ಕಾರಣದಿಂದ ತಾವು ಓದಲು, ಕೆಲಸ ಮಾಡಲು, ಅಂದುಕೊಂಡಿದ್ದನ್ನು ಸಾಧಿಸಲು ಕಷ್ಟ ಎಂಬ ಭಾವನೆ ಬೇರೂರಬಹುದು.

ರಜೆ ಇರಲಿ ಇಲ್ಲದಿರಲಿ ಮುಟ್ಟಿನ ಸಮಯದಲ್ಲಿ ಎಲ್ಲಾ ಮಹಿಳೆಯರಿಗೆ ಬೇಕಾದದ್ದು ಸ್ವಚ್ಛ ಶೌಚಾಲಯಗಳು ಮತ್ತು ನೀರಿನ ವ್ಯವಸ್ಥೆ. ಶಾಲಾ-ಕಾಲೇಜುಗಳಲ್ಲಿ ಹೆಣ್ಣುಮಕ್ಕಳಿಗೆ ಸ್ಯಾನಿಟರಿ ಪ್ಯಾಡುಗಳು ಸುಲಭವಾಗಿ ಸಿಗಬೇಕು. ಸಂಕೋಚಪಡುತ್ತಾ ಪ್ಯಾಡ್‌ಗಳಿಗೆ ಶಿಕ್ಷಕರ ಬಳಿ ಕೈಚಾಚುವ ಬದಲು ತಾವಾಗಿ ತೆಗೆದುಕೊಳ್ಳುವ ವೆಂಡಿಂಗ್ ಮಶೀನ್‌ಗಳು ಉತ್ತಮ ಪರಿಹಾರ. ಪ್ಯಾಡ್‌ಗಳನ್ನು ಹೊತ್ತುಹೊತ್ತಿಗೆ ಬದಲಿಸಲು ಸಮಯ ನೀಡಬೇಕು. ರಕ್ತಸ್ರಾವ ಹೆಚ್ಚಾಗಿ ಸುಸ್ತಾದಾಗ ಸ್ವಲ್ಪ ವಿಶ್ರಾಂತಿ ಪಡೆಯಲು ಹಾಸಿಗೆ, ಶಾಖ ತೆಗೆದುಕೊಳ್ಳಲು ಬಿಸಿನೀರಿನ ಬ್ಯಾಗ್, ಅಗತ್ಯವಿದ್ದಲ್ಲಿ ವೈದ್ಯರ ಸಲಹೆಯ ಮೇರೆಗೆ ನೋವುನಿವಾರಕ ಮಾತ್ರೆ ಇಷ್ಟಿರುವ ಪುಟ್ಟ ಕೋಣೆ ಇದ್ದರೆ ಸಾಕು.

ಕೇಂದ್ರ ಸರ್ಕಾರದ ಆದೇಶದ ಮೇರೆಗೆ ಇದೇ 18-24ರವರೆಗೆ ರಾಷ್ಟ್ರೀಯ ಹೆಣ್ಣುಮಕ್ಕಳ ಸಪ್ತಾಹ ಆಚರಿಸಲಾಗಿದೆ. ಮುಟ್ಟು, ಬಸಿರು, ಬಾಣಂತನ ಇವೆಲ್ಲದರ ಬಗ್ಗೆ ಆರೋಗ್ಯಶಿಕ್ಷಣ ಬರೀ ಹೆಣ್ಣುಮಕ್ಕಳಿಗೆ ಮಾತ್ರವಲ್ಲ ಗಂಡುಮಕ್ಕಳಿಗೂ ಒಟ್ಟಿಗೇ ಸಿಗಬೇಕು. ಮಹಿಳಾ ಆರೋಗ್ಯದ ಬಗ್ಗೆ ಇಡೀ ಸಮಾಜದ ವರ್ತನೆ ಬದಲಾಗಬೇಕು.

ಮುಟ್ಟು ಹೆಣ್ಣುಮಕ್ಕಳಿಗೆ, ಮಹಿಳೆಯರಿಗೆ ಸಹಜ ಕ್ರಿಯೆ ಎಂದು ಸ್ವೀಕರಿಸಿ, ಅದು ಹೆಣ್ಣುಮಕ್ಕಳ ಕಲಿಕೆಗೆ ಅಡ್ಡಿಯಾಗದ ವಾತಾವರಣ ಕಲ್ಪಿಸುವುದು ಮುಖ್ಯ. ನೆನಪಿನಲ್ಲಿ ಇಡಬೇಕಾದ ಅಂಶವೆಂದರೆ, ಮುಟ್ಟು ಗುಟ್ಟಾಗಿ ಇಡಬೇಕಾದ ವಿಷಯವಲ್ಲ, ರೋಗವೂ ಅಲ್ಲ. ಸಹಜವಾಗಿ ನಡೆಯುವ ಪ್ರಕ್ರಿಯೆ ಮಾತ್ರ!

ವಾಚಕರ ವಾಣಿ

ಎದುರಾಳಿಗಳ ಹಣಿಯಲು ಸೀಜರ್ ಮಾದರಿ!

ಷೇಕ್ಸ್‌ಪಿಯರ್‌ನ ಅತ್ಯಂತ ಜನಪ್ರಿಯ ನಾಟಕ 'ಜೂಲಿಯಸ್ ಸೀಜರ್'. ಸೀಜರ್ ಜನಪ್ರಿಯ ರಾಜ. ಅವನ ಹಿತಶತ್ರುಗಳು ಸಭೆಯಲ್ಲಿಯೇ ಅವನನ್ನು ಕೊಲ್ಲುತ್ತಾರೆ. ಆ ಗುಂಪಿನಲ್ಲಿ ಸೀಜರ್‌ನ ಪರಮಮಿತ್ರನಾಗಿದ್ದ ಬ್ರೂಟಸ್ ಕೂಡ ಒಬ್ಬ. ಸೀಜರ್‌ನ ಇನ್ನೊಬ್ಬ ಆಪ್ತ ಆಂಟೊನಿ ಈ ದುಷ್ಟಕೂಟದ ಕುತಂತ್ರವನ್ನು ಬಯಲು ಮಾಡಲು ನಿಶ್ಚಯಿಸಿ, ಆ ದುಷ್ಟಕೂಟವು ಸಾಮ್ರಾಜ್ಯ ಪಡೆದ ಸಂಭ್ರಮವನ್ನು ಆಚರಿಸುತ್ತಿರುವಾಗ, ಅವರನ್ನು ಹೊಗಳತೊಡಗುತ್ತಾನೆ. ಸೀಸರ್ ಹತ್ಯೆಯಾದದ್ದು ಒಳ್ಳೆಯದಾಯಿತು ಎನ್ನುವಂತಹ ಜಾಣತನದ ಮಾತನಾಡಿ, ದುಷ್ಟಕೂಟದ ಕುತಂತ್ರವನ್ನು ಬಯಲು ಮಾಡುತ್ತಾನೆ. ಕಡೆಗೆ ಜನರೇ ಆ ದುಷ್ಟಕೂಟವನ್ನು ಓಡಿಸುತ್ತಾರೆ. ಈ ಸಂದರ್ಭದಲ್ಲಿನ ಆಂಟೊನಿ ಭಾಷಣ ಜಗತ್‌ಪ್ರಸಿದ್ಧವಾಗಿದೆ.

ಎದುರಾಳಿಗಳನ್ನು ಮಟ್ಟಹಾಕಲು ನಾಯಕರು ತಾವೇ ಎದೆ ತಟ್ಟಿಕೊಂಡು ಕೂಗಾಡಿ ಅವರನ್ನು ಹೀಯಾಳಿಸುವುದು ಅಪ್ರಬುದ್ಧತೆ ಅಲ್ಲವೇ? ಗಂಭೀರವಾಗಿ ಹೊಗಳುವಂತೆ ಟೀಕಿಸಿ ಜನರು ತಾವೇ ಎದೆ ತಟ್ಟಿ ಎದುರಾಳಿಗಳನ್ನು ಓಡಿಸಬೇಕು. ಇಂತಹ ಶೈಲಿಯನ್ನು ರೂಢಿಸಿಕೊಳ್ಳದ ರಾಜಕೀಯ ಧುರೀಣರು ಸ್ವತಃ ಅಪಹಾಸ್ಯಕ್ಕೆ ಈಡಾಗುತ್ತಿರುವುದು ಅಚ್ಚರಿಯ ಸಂಗತಿ.

ಸತ್ಯಬೋಧ, ಬೆಂಗಳೂರು

ಅಮಾಯಕರ ಜೀವ ಉಳಿಸಿ

ತಿ.ನರಸೀಪುರದಲ್ಲಿ ನಡೆದ ಚಿರತೆ ದಾಳಿಯಲ್ಲಿ ಪುಟ್ಟ ಹುಡುಗನೊಬ್ಬ ಸಾವಿಗೀಡಾಗಿರುವುದು ನೋವಿನ ಸಂಗತಿ. ಇತ್ತೀಚೆಗೆ ರಾಜ್ಯದ ಕೆಲವು ಕಡೆ ಚಿರತೆಗಳು ಕಾಡನ್ನು ಬಿಟ್ಟು ನಾಡಿಗೆ ಬರುತ್ತಿವೆ. ಆಗಾಗ ಮನುಷ್ಯರ ಮೇಲೆ ದಾಳಿ ನಡೆಸುತ್ತಲೇ ಇವೆ. ಮೂರು ತಿಂಗಳಲ್ಲಿ ಒಟ್ಟು ನಾಲ್ಕು ಸಾವುಗಳು ಚಿರತೆಗಳಿಂದಾಗಿ ಸಂಭವಿಸಿವೆ. ಚಿರತೆಗಳು ನಾಡಿಗೆ ಬರಲು ಕಾರಣ ಕಾಡಿನ ನಾಶವೇ ಆಗಿದೆ. ಕಾಡಿನಲ್ಲಿ ಜಾಗವಿಲ್ಲದೆ ಅವು ನಾಡಿಗೆ ಬರುತ್ತಿವೆ.

ಚಿರತೆಗಳಿಂದ ಜನರ ಜೀವಹಾನಿ ಆಗದಂತೆ ನೋಡಿಕೊಳ್ಳಬೇಕು ಮತ್ತು ಕಾಡುಗಳನ್ನು ಸಂರಕ್ಷಣೆ ಮಾಡಬೇಕು. ನಾಡಿಗೆ ಬಂದಂತಹ ಚಿರತೆಗಳನ್ನು ಕೂಡಲೇ ಹಿಡಿದು ಸುರಕ್ಷಿತ ಸ್ಥಳಕ್ಕೆ ಸೇರಿಸಬೇಕು. ಈ ಮೂಲಕ ಇನ್ನಷ್ಟು ಅಮಾಯಕ ಜೀವಗಳು ಬಲಿಯಾಗುವುದನ್ನು ತಡೆಯಬೇಕು.

ಪೂಜಾ ಎಸ್., ಕಲಬುರಗಿ

ನಿಜವಾದ 'ಕಲ್ಯಾಣ'ದ ಸಾಕಾರವೆಂದು?

ಕಲ್ಯಾಣ ಕರ್ನಾಟಕ ವ್ಯಾಪ್ತಿಯ ಏಳು ಜಿಲ್ಲೆಗಳ ನಿಜವಾದ ಅಭಿವೃದ್ಧಿ ಮಾಡದೆ, ಹೆಸರಿಗಷ್ಟೇ ಕಲ್ಯಾಣ ಎಂದಿದ್ದರೆ ಪ್ರಯೋಜನವಿಲ್ಲ. ಹಿಂದಿನ ಬಜೆಟ್‌ನಲ್ಲಿ ಅದಕ್ಕಾಗಿ ನೀಡಲಾಗಿದ್ದ ಹಣದಲ್ಲಿ ಬಹುಪಾಲು ಖರ್ಚೇ ಆಗಿಲ್ಲ. ಈ ಭಾಗದ ಸಮಸ್ಯೆಗಳನ್ನು ಆಲಿಸುವ ಕೆಲಸ ಮೊದಲು ಆಗಬೇಕಾಗಿದೆ. ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ಪೂರ್ಣ ಪ್ರಮಾಣದಲ್ಲಿ ರಚಿಸಬೇಕು. ಖಾಲಿ ಇರುವ ಹುದ್ದೆಗಳನ್ನು ಕಾಲಮಿತಿಯಲ್ಲಿ ಭರ್ತಿ ಮಾಡಬೇಕು.

ಅಭಿವೃದ್ಧಿಯನ್ನು ಕಾಗದಪತ್ರಗಳಲ್ಲಷ್ಟೇ ಕಾಣುತ್ತಿದ್ದೇವೆ. ನಿಜವಾದ ಅರ್ಥದ ಕಲ್ಯಾಣ ಕರ್ನಾಟಕವನ್ನು ನೋಡಲು ಇನ್ನೂ ಎಷ್ಟು ವರ್ಷಗಳು ಬೇಕು? ಅನುದಾನ ನೀಡಿದ್ದರೂ ಅದನ್ನು ಸರಿಯಾಗಿ ಬಳಕೆಯನ್ನೇ ಮಾಡದಿದ್ದರೆ ಅಭಿವೃದ್ಧಿ ಕಾಣಲು ಹೇಗೆ ಸಾಧ್ಯ?

ಶಶಿಕುಮಾರ್ ಕೆ., ರಾಯಚೂರು

ದೇಶದೊಂದಿಗೆ ವ್ಯಕ್ತಿ ಸಮೀಕರಣ ಸಲ್ಲ

'ಇಂಡಿಯಾ: ದಿ ಮೋದಿ ಕ್ವಶ್ಚನ್' ಹೆಸರಿನ ಬಿಬಿಸಿ ಸಾಕ್ಷ್ಯಚಿತ್ರದ ಬಗೆಗೆ ಕೇಂದ್ರ ಸರ್ಕಾರದ ಪ್ರತಿಕ್ರಿಯೆ (ಪ್ರ.ವಾ., ಜ. 20) ಮತ್ತು ನಂತರದ ಹೇಳಿಕೆಗಳನ್ನು ಅತಿ ಎನ್ನಬಹುದು. ಅದರಲ್ಲೂ ಸಚಿವ ಧರ್ಮೇಂದ್ರ ಪ್ರಧಾನ್ ಅವರು 'ಸಾಕ್ಷ್ಯಚಿತ್ರ ಮೋದಿಯವರ ಮೇಲಿನ ಆಕ್ರಮಣವಲ್ಲ, ಭಾರತದ ಮೇಲಿನದು' ಎಂದಿರುವುದು ಬಾಲಿಶ. ಮತ್ತೊಬ್ಬ ಸಚಿವ ಕಿರಣ್ ರಿಜಿಜು, 'ಬಿಬಿಸಿ ಸುಪ್ರೀಂ ಕೋರ್ಟ್‌ಗಿಂತ ಹೆಚ್ಚೇ' ಎಂದು ಉದ್ಗರಿಸಿರುವುದು ಬಾಲಬಡುಕತನವನ್ನಷ್ಟೇ ಸೂಚಿಸುತ್ತದೆ (ಇವರು ನ್ಯಾಯಾಂಗದ ಬಗೆಗೆ ಅಪ್ರಬುದ್ಧ ಟೀಕೆ ಮಾಡುತ್ತಿರುವುದು ಸುಳ್ಳೇ?). ಇಂದಿರಾ ಗಾಂಧಿ ಅವರು ಚುನಾವಣೆಯಲ್ಲಿ ಸೋತದ್ದನ್ನು, ಅವರು ಹತ್ಯೆಗೆ ಈಡಾಗಿದ್ದನ್ನು ನಾವು ಮೊದಲು ಅರಿತದ್ದು ಬಿಬಿಸಿಯಿಂದ. ನಮ್ಮ ಸರ್ಕಾರಿ ವಾಹಿನಿಗಳ 'ವೃತ್ತಿಪರತೆ' ಇಂದಿಗೂ ಬದಲಾಗಿಲ್ಲ. ಈಗ ಈ ಸಂಬಂಧದ ಟ್ವಿಟರ್, ಯುಟ್ಯೂಬ್ ಪೋಸ್ಟ್‌ಗಳಿಗೆ ನಿರ್ಬಂಧ ಹೇರಲಾಗಿದೆ. ಇವು ಸ್ವತಂತ್ರ ಮಾಧ್ಯಮಗಳಾಗಿ ಉಳಿಯಬೇಕು. ಟ್ವಿಟರ್, ಫೇಸ್‌ಬುಕ್‌ನಲ್ಲಿ ಬೇಜವಾಬ್ದಾರಿಯುತ, ಹಾನಿಕರ ಪ್ರವೃತ್ತಿ ಕಂಡುಬಂದಾಗ ನಿಯಂತ್ರಿಸುವುದು ಸರಿ. ಆದರೆ ವ್ಯಕ್ತಿಯೊಬ್ಬರನ್ನು ದೇಶದೊಂದಿಗೆ ಸಮೀಕರಿಸುವುದು ಸರಿಯಲ್ಲ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಕಾಂಕ್ರೀಟ್‌ಮಯ ಮಾಡುವುದೇಕೆ?

ಬೆಂಗಳೂರಿನ ಹೆಚ್ಚಿನ ರಸ್ತೆಗಳಲ್ಲಿ ಡಾಂಬರು ಮಾಯವಾಗಿ, ಅದರ ಸ್ಥಾನದಲ್ಲಿ ವೈಟ್ ಟಾಪಿಂಗ್ ಹೆಸರಿನಲ್ಲಿ ಕಾಂಕ್ರೀಟ್ ರಸ್ತೆಗಳು ಬರುತ್ತಿವೆ. ಮಧ್ಯಾಹ್ನದ ಸುಡುಬಿಸಿಲಿನಲ್ಲಿ ಕಾಂಕ್ರೀಟಿನ ತಾಪಮಾನ, ಸೂರ್ಯನ ತಾಪಮಾನ ಸೇರಿ ಬೆಂಕಿಯ ಉಂಡೆಗಳು ಭೂಮಿಗೆ ಬರುವ ಅನುಭವ ಆಗುತ್ತಿದೆ.

ಹಿಂದೆ ರಸ್ತೆಯ ಮಧ್ಯದ ಡಿವೈಡರ್‌ಗಳಲ್ಲಿ ಗಿಡಗಳನ್ನು ಬೆಳೆಸುವ ಪದ್ಧತಿ ಇತ್ತು. ಕನಿಷ್ಠ ಅಲ್ಲಿಯಾದರೂ ಮಳೆಯ ನೀರು ಸೇರುತ್ತಿತ್ತು ಅಥವಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವತಿಯಿಂದ ನೀರನ್ನು ಹಾಕಲಾಗುತ್ತಿತ್ತು. ನೀರು ಭೂಮಿಯ ಒಡಲು ಸೇರಿ ಸ್ವಲ್ಪಮಟ್ಟಿನ ತಂಪಾದರೂ ಇರುತ್ತಿತ್ತು. ಅಲ್ಲಿ ಬೆಳೆದ ಹೂಗಳು ಹಾಗೂ ಹಸಿರು ಗಿಡಗಳು ರಸ್ತೆಯ ಅಂದವನ್ನು ಹೆಚ್ಚಿಸುತ್ತಿದ್ದವು. ಆದರೆ ಇತ್ತೀಚೆಗೆ ಆ ಜಾಗಕ್ಕೂ ಕಾಂಕ್ರೀಟ್ ತುಂಬಿ, ಅದರ ಮೇಲೆ ಕಾಂಕ್ರೀಟ್ ಬ್ಯಾರಿಕೇಡುಗಳನ್ನು ನಿರ್ಮಿಸಿ ಬಿಸಿಲಿನ ಬೇಗೆ ಇನ್ನಷ್ಟು ಹೆಚ್ಚಲು ಕಾರಣರಾಗುತ್ತಿದ್ದಾರೆ. ಇದು ಪರಿಸರಕ್ಕೆ ಅಪಾಯ ತಂದೊಡ್ಡುತ್ತದೆ. ಮೊದಲಿನಂತೆ ಡಿವೈಡರ್‌ಗಳಲ್ಲಿ ಹಸಿರನ್ನು ಬೆಳೆಸಿ, ಸರಿಯಾಗಿ ನಿರ್ವಹಣೆ ಮಾಡಿ 'ಉದ್ಯಾನನಗರಿ' ಎಂಬ ಹೆಸರನ್ನು ಉಳಿಸಿಕೊಳ್ಳಲು ಬಿಬಿಎಂಪಿ ಮುಂದಾಗಲಿ.

ಮಲ್ಲತ್ತಹಳ್ಳಿ, ಡಾ. ಎಚ್. ತುಕಾರಾಂ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ರಸ್ತೆಯಲ್ಲಿ ರೋಷಾವೇಶ’ ನಿಯಂತ್ರಣಕ್ಕೆ ಕಾನೂನಿಲ್ಲ

ಪ್ರಜಾವಾಣಿ ವಾರ್ತೆ

ರಸ್ತೆಯಲ್ಲಿ ವಾಹನಗಳ ಚಾಲನೆ ವೇಳೆ ಇತರರ ಮೇಲೆ ರೋಷಾವೇಶ ತೋರುವ (ರೋಡ್ ರೇಜ್) ಪ್ರವೃತ್ತಿ ಹೆಚ್ಚುತ್ತಿದೆ. ಇತರ ವಾಹನಗಳ ಚಾಲಕರು ಮತ್ತು ಪ್ರಯಾಣಿಕರನ್ನು ಅಪಾಯಕ್ಕೆ ದೂಡುವ ಇಂತಹ ವರ್ತನೆಯ ಹಲವು ಪ್ರಕರಣಗಳು ಈಚಿನ ದಿನಗಳಲ್ಲಿ ವರದಿಯಾಗಿವೆ. ಅಮೆರಿಕ, ಬ್ರಿಟನ್ ಮತ್ತು ಆಸ್ಟ್ರೇಲಿಯಾಗಳಲ್ಲಿ ಇಂತಹ ವರ್ತನೆಗಳನ್ನು ‘ಕ್ರಿಮಿನಲ್ ಅಪರಾಧ’ ಎಂದೇ ಪರಿಗಣಿಸಲಾಗುತ್ತಿದೆ. ಇಂತಹ ವರ್ತನೆಗಳ ತಡೆಗೆ ಕಠಿಣ ಕಾನೂನುಗಳೂ ಇವೆ. ಆದರೆ, ಭಾರತದ ಕಾನೂನುಗಳಲ್ಲಿ ‘ರಸ್ತೆಯಲ್ಲಿ ರೋಷಾವೇಶ’ದ ವರ್ತನೆಯನ್ನು ವ್ಯಾಖ್ಯಾನಿಸಿಲ್ಲ. ಇಂತಹ ವರ್ತನೆಗಳ ನಿಯಂತ್ರಣಕ್ಕೆ ಮತ್ತು ಪ್ರಕರಣಗಳಲ್ಲಿ ಶಿಕ್ಷೆ ವಿಧಿಸಲು ಭಾರತದಲ್ಲಿ ನಿರ್ದಿಷ್ಟ ಕಾನೂನು ಇಲ್ಲ.

ರಸ್ತೆಯಲ್ಲಿ ಚಾಲನೆ ವೇಳೆ ಇತರೆ ವಾಹನಗಳ ಚಾಲಕರು ಮತ್ತು ಪ್ರಯಾಣಿಕರನ್ನು ಹೆದರಿಸಲು ಉದ್ದೇಶಪೂರ್ವಕವಾಗಿ ಅಪಾಯಕ್ಕೆ ದೂಡುವ ವರ್ತನೆಯೇ ರೋಡ್ ರೇಜ್. ಅಮೆರಿಕದ ‘ನ್ಯಾಷನಲ್ ಹೈವೇ ಟ್ರಾಫಿಕ್ ಸೇಫ್ಟಿ ಅಡ್ಮಿನಿಸ್ಟ್ರೇಷನ್’ ನೀಡಿರುವ ವ್ಯಾಖ್ಯಾನವಿದು. ಬ್ರಿಟನ್ ಮತ್ತು ಆಸ್ಟ್ರೇಲಿಯಾದಲ್ಲೂ ಇದೇ ಸ್ವರೂಪದ ವ್ಯಾಖ್ಯಾನವಿದೆ. ರಸ್ತೆಯಲ್ಲಿ ಅನಗತ್ಯವಾಗಿ ಹಾರ್ನ್ ಮಾಡುವುದು, ಇತರರನ್ನು ಬೈಯುವುದು, ಇತರರೆಡೆಗೆ ಅಸಭ್ಯವಾಗಿ ಸನ್ನೆ ಮಾಡುವುದು, ಉದ್ದೇಶಪೂರ್ವಕವಾಗಿ ಡಿಕ್ಕಿ ಹೊಡೆಯುವಂತಹ ವರ್ತನೆಗಳನ್ನು ರಸ್ತೆಯಲ್ಲಿ ರೋಷಾವೇಷ ತೋರುವುದು ಎಂದು ಪರಿಗಣಿಸಲಾಗುತ್ತದೆ.

ಆಕಸ್ಮಿಕವಾಗಿ ಸಂಭವಿಸುವ ಅಪಘಾತಗಳಿಗೂ, ಉದ್ದೇಶಪೂರ್ವಕವಾಗಿ ಮಾಡುವ ಅಪಘಾತಗಳಿಗೂ ವ್ಯತ್ಯಾಸವಿದೆ. ಅಮೆರಿಕದಲ್ಲಿ ಆಕಸ್ಮಿಕವಾಗಿ ಸಂಭವಿಸಿದ ಅಪಘಾತಗಳನ್ನು ರಸ್ತೆ ಸಂಚಾರ ನಿಯಮಗಳ ಉಲ್ಲಂಘನೆ ಪ್ರಕರಣ ಎಂದೂ, ಉದ್ದೇಶಪೂರ್ವಕವಾಗಿ ಮಾಡುವ ಅಪಘಾತಗಳನ್ನು ಕ್ರಿಮಿನಲ್ ಅಪರಾಧವೆಂದೂ ಪರಿಗಣಿಸಲಾಗುತ್ತದೆ. ಆದರೆ, ಭಾರತದಲ್ಲಿ ಇದನ್ನು ಅಪಾಯಕಾರಿ ಚಾಲನೆ ಎಂದು ಮಾತ್ರ ಪರಿಗಣಿಸಲಾಗುತ್ತದೆ. ಉದ್ದೇಶಪೂರ್ವಕವಾಗಿ ತೋರುವ ಇಂತಹ ವರ್ತನೆಯು ಜೀವಹಾನಿಗೆ ಕಾರಣವಾದ ನಿದರ್ಶನಗಳೂ ಭಾರತದಲ್ಲಿ ಇವೆ. ಆದರೆ, ಈ ಹಿಂದೆ ಹಲವು ಭಾರಿ ಇವನ್ನು ರಸ್ತೆ ಸಂಚಾರ ನಿಯಮಗಳ ಉಲ್ಲಂಘನೆ ಪ್ರಕರಣ ಎಂದೇ ಪರಿಗಣಿಸಲಾಗಿದೆ. ಅಗತ್ಯ ಕಾನೂನು ಇಲ್ಲದೇ ಇದ್ದ ಕಾರಣ, ನ್ಯಾಯಾಲಯಗಳೂ ಇವನ್ನು ಉದ್ದೇಶ ಪೂರ್ವಕವಲ್ಲದ ಕೊಲೆ ಎಂದೇ ಪರಿಗಣಿಸಿದ ಉದಾಹರಣೆಗಳು ಸಾಕಷ್ಟಿವೆ. ಮಾಜಿ ಕ್ರಿಕೆಟಿಗ ನವಜೋತ್ ಸಿಂಗ್ ಸಿಧು ಪ್ರಕರಣವು ಇದಕ್ಕೆ ಉತ್ತಮ ನಿದರ್ಶನ.

1988ರ ಡಿಸೆಂಬರ್ 27ರಂದು ಪಟಿಯಾಲದ ರಸ್ತೆಯೊಂದರ ಮಧ್ಯದಲ್ಲಿ ಸಿಧು ಅವರು ತಮ್ಮ ಜಿಪ್ಸಿಯನ್ನು ನಿಲ್ಲಿಸಿದ್ದರು. ರಸ್ತೆಗೆ ಅಡ್ಡವಾಗಿ ವಾಹನ ನಿಲ್ಲಿಸಿದ್ದನ್ನು ಪ್ರಶ್ನಿಸಿದ್ದ ಗುರುನಾಮ್ ಸಿಂಗ್ ಎಂಬುವವರ ಮೇಲೆ ಸಿಧು ಹಲ್ಲೆ ನಡೆಸಿದ್ದರು. ಹಲ್ಲೆಯ ತೀವ್ರತೆಗೆ ಗುರುನಾಮ್ ಸಾವನ್ನಪ್ಪಿದ್ದರು. ಇದನ್ನು ಉದ್ದೇಶಪೂರ್ವಕವಲ್ಲದ ನರಹತ್ಯೆ ಎಂದೇ ಪ್ರಕರಣದಲ್ಲಿ ಉಲ್ಲೇಖಿಸಲಾಗಿತ್ತು ಮತ್ತು ಆ ಪ್ರಕಾರವೇ ಸಿಧು ಅವರಿಗೆ ಶಿಕ್ಷೆ ವಿಧಿಸಲಾಗಿತ್ತು. ಪೊಲೀಸರು ಕೊಲೆ ಪ್ರಕರಣವನ್ನು ದಾಖಲಿಸಿದ್ದರೂ, 1999ರಲ್ಲಿ ಪಟಿಯಾಲಾ ನ್ಯಾಯಾಲಯವು ಕೊಲೆಯ ಸೆಕ್ಷನ್‌ಗಳನ್ನು ಕೈಬಿಟ್ಟು ಶಿಕ್ಷೆ ನೀಡಿತ್ತು. ರಸ್ತೆ ಅಪಘಾತ ಅಥವಾ ಇತರೆ ಅಪಘಾತ ಪ್ರಕರಣಗಳಲ್ಲಿ ನೀಡುವಂತೆ ಈ ಪ್ರಕರಣಗಳಲ್ಲೂ ₹1,000 ದಂಡ ವಿಧಿಸಿತ್ತು. 2006ರಲ್ಲಿ ಪಂಜಾಬ್–ಹರಿಯಾಣ ಹೈಕೋರ್ಟ್ ಕೃತ್ಯವನ್ನು ‘ಉದ್ದೇಶಪೂರ್ವಕವಲ್ಲದ ನರಹತ್ಯೆ’ ಎಂದು ಪರಿಗಣಿಸಿತು. 2018–21ರ ಮಧ್ಯೆ ಈ ತೀರ್ಪನ್ನು ಪರಿಶೀಲಿಸಿದ ಸುಪ್ರೀಂ ಕೋರ್ಟ್, ‘ಉದ್ದೇಶಪೂರ್ವಕವಾಗಿ ನೋವುಂಟು ಮಾಡಿದ್ದು’ ಎಂದು ಪರಿಗಣಿಸಿ, ಸಿಧು ಅವರಿಗೆ ಒಂದು ವರ್ಷ ಜೈಲುಶಿಕ್ಷೆ ನೀಡಿತು.

ರಸ್ತೆಯಲ್ಲಿ ರೋಷಾವೇಶ ತೋರಿದ್ದನ್ನು ನಮ್ಮ ಕಾನೂನಿನಲ್ಲಿ ವ್ಯಾಖ್ಯಾನಿಸದೇ ಇರುವ ಮತ್ತು ಅದಕ್ಕೆ ಶಿಕ್ಷೆಯನ್ನು ನಿಗದಿಪಡಿಸದೇ ಇರುವ ಕಾರಣಕ್ಕೆ ಇಂತಹ ಕೃತ್ಯಗಳಿಗೆ ಸರಿಯಾದ ಶಿಕ್ಷೆ ಆಗುತ್ತಿಲ್ಲ ಎಂಬುದನ್ನು ಈ ಪ್ರಕರಣವು ಸೂಚಿಸುತ್ತದೆ. ಲಖೀಂಪುರ ಖೀರಿ ರೈತರ ಹತ್ಯೆ ಪ್ರಕರಣದಲ್ಲೂ ಆರಂಭದಲ್ಲಿ ‘ಅಪಾಯಕಾರಿ ಚಾಲನೆ ಮತ್ತು ಉದ್ದೇಶಪೂರ್ವಕವಲ್ಲದ ನರಹತ್ಯೆ’ ಎಂಬ ಸೆಕ್ಷನ್‌ಗಳ ಅಡಿಯಲ್ಲೇ ಪ್ರಕರಣ ದಾಖಲಿಸಲಾಗಿತ್ತು. ನ್ಯಾಯಾಲಯದ ಮಧ್ಯಪ್ರವೇಶದ ನಂತರ ಕೊಲೆ ಮತ್ತು ಕೊಲೆಯತ್ನ ಪ್ರಕರಣವನ್ನು ದಾಖಲಿಸಲಾಗಿತ್ತು.

ಆಧಾರ: ಭಾರತೀಯ ದಂಡ ಸಂಹಿತೆ, ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊವಿನ ‘ಭಾರತದಲ್ಲಿ ಅಪಘಾತ: 2021’ ವರದಿ, ಅಮೆರಿಕದ ‘ನ್ಯಾಷನಲ್ ಹೈವೇ ಟ್ರಾಫಿಕ್ ಸೇಫ್ಟಿ ಅಡ್ಮಿನಿಸ್ಟ್ರೇಷನ್’ ವರದಿ, ಪಿಟಿಐ

ದಕ್ಷಿಣ ಭಾರತದಲ್ಲೇ ಅಧಿಕ

ರಸ್ತೆಯಲ್ಲಿ ಸಂಚಾರದ ವೇಳೆ ರೋಷಾವೇಶದಿಂದ ವರ್ತಿಸುವುದನ್ನು ಭಾರತದಲ್ಲಿ ‘ಅಜಾಗರೂಕ ಮತ್ತು ಅಪಾಯಕಾರಿ ಚಾಲನೆ’ ಎಂದೇ ಪರಿಗಣಿಸಲಾಗುತ್ತದೆ. ಹಾಗಾಗಿ ದೇಶದಲ್ಲಿ, ರಸ್ತೆಯಲ್ಲಿ ರೋಷಾವೇಷದ ವರ್ತನೆಯ ಎಷ್ಟು ಪ್ರಕರಣಗಳು ನಡೆದಿವೆ ಎಂಬುದು ದಾಖಲಾಗುವುದೇ ಇಲ್ಲ. 2021ರಲ್ಲಿ ದೇಶದಲ್ಲಿ ಒಟ್ಟು 3.90 ಲಕ್ಷ ಅಜಾಗರೂಕ ಮತ್ತು ಅಪಾಯಕಾರಿ ಚಾಲನೆ ಪ್ರಕರಣಗಳು ದಾಖಲಾಗಿವೆ. ಇಂತಹ ಪ್ರಕರಣಗಳು ಹೆಚ್ಚು ದಾಖಲಾಗಿದ್ದು ಕೇರಳದಲ್ಲಿ. ಕೇರಳ, ತಮಿಳುನಾಡು, ಕರ್ನಾಟಕ, ತೆಲಂಗಾಣ ಮತ್ತು ಆಂಧ್ರ ಪ್ರದೇಶಗಳಲ್ಲಿ ಒಟ್ಟು 2.17 ಲಕ್ಷ ಪ್ರಕರಣಗಳು ದಾಖಲಾಗಿವೆ. ದೇಶದಲ್ಲಿ ದಾಖಲಾದ ಇಂತಹ ಒಟ್ಟು ಪ್ರಕರಣಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಪ್ರಕರಣಗಳು ಈ ಐದು ರಾಜ್ಯಗಳಲ್ಲೇ ದಾಖಲಾಗಿವೆ.



ಅನ್ವಯವಾಗುತ್ತಿರುವ ಕಾನೂನುಗಳು

ರಸ್ತೆಯಲ್ಲಿ ರೋಷಾವೇಶ ತೋರುವ ಕೃತ್ಯಗಳನ್ನೂ ಭಾರತೀಯ ದಂಡ ಸಂಹಿತೆಯ 279, 336, 337 ಮತ್ತು 338ನೇ ಸೆಕ್ಷನ್‌ಗಳ ಅಡಿಯಲ್ಲಿ ದಾಖಲಿಸಲಾಗುತ್ತದೆ. ಈ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿದರೆ ಅವು ಅಪರಾಧ ಪ್ರಕರಣಗಳು ಎನಿಸಿಕೊಳ್ಳುವುದಿಲ್ಲ.

ಸಾರ್ವಜನಿಕ ರಸ್ತೆಯಲ್ಲಿ ಅಜಾಗರೂಕವಾಗಿ ಮತ್ತು ಅಪಾಯಕಾರಿಯಾಗಿ ಚಾಲನೆ ಮಾಡಿ ಯಾರದ್ದಾದರೂ ಜೀವಕ್ಕೆ ಅಪಾಯವನ್ನುಂಟು ಮಾಡಿದರೆ ಐಪಿಸಿ ಸೆಕ್ಷನ್ 279ರ ಅಡಿಯಲ್ಲಿ ₹1,000 ದಂಡ ಮತ್ತು ಗರಿಷ್ಠ ಆರು ತಿಂಗಳ ಸೆರೆವಾಸ ಅಥವಾ ಎರಡನ್ನೂ ವಿಧಿಸಲು ಅವಕಾಶವಿದೆ. ಇಂತಹ ಪ್ರಕರಣಗಳಲ್ಲಿ ಇತರರಿಗೆ ಗಾಯಗಳಾಗಿದ್ದರೆ ಅಪಾಯಕಾರಿ ಚಾಲನೆ, ಅಪಾಯಕಾರಿ ಚಾಲನೆಯಿಂದ ಗಾಯವನ್ನುಂಟು ಮಾಡುವುದು ಮತ್ತು ಅಪಾಯಕಾರಿ ಚಾಲನೆಯಿಂದ ಗಂಭೀರವಾದ ಗಾಯವನ್ನುಂಟು ಮಾಡಿದ ಸೆಕ್ಷನ್‌ಗಳ ಅಡಿಯಲ್ಲೂ ಪ್ರಕರಣ ದಾಖಲಿಸಲಾಗುತ್ತದೆ.

ಸದ್ದು ಮಾಡಿದ ಪ್ರಕರಣಗಳು

ಜನವರಿ ತಿಂಗಳ ಮೊದಲ 22 ದಿನಗಳಲ್ಲಿ, ರಸ್ತೆಯಲ್ಲಿ ರೋಷಾವೇಶ ತೋರಿದ ಮೂರು ಪ್ರಕರಣಗಳು ದೇಶದಾದ್ಯಂತ ಹೆಚ್ಚು ಸದ್ದು ಮಾಡುತ್ತಿವೆ. ಅಂತಹ ಪ್ರಕರಣಗಳ ಮಾಹಿತಿ ಇಲ್ಲಿದೆ



- ಬೆಂಗಳೂರಿನ ವಿಜಯನಗರದ ಬಳಿ ಬೊಲೆರೊ ಪಿಕ್‌ಅಪ್ ಟ್ರಕ್ ಮತ್ತು ಸ್ಕೂಟರ್ ಮಧ್ಯೆ ಸಣ್ಣ ಅಪಘಾತ ನಡೆದಿತ್ತು. ಅಪಘಾತದ ನಂತರ ವಾಗ್ವಾದ ನಡೆದು, ಸ್ಕೂಟರ್ ಸವಾರ ಅಲ್ಲಿಂದ ಪರಾರಿಯಾಗಲು ಯತ್ನಿಸಿದ್ದ. ಪಿಕ್‌ಅಪ್ ಚಾಲಕ, ಸ್ಕೂಟರ್‌ನ ಗ್ರ್ಯಾಬ್‌ರೇಲ್‌ಗೆ ಜೋತುಬಿದ್ದಿದ್ದರು. ಇದನ್ನು ಕಡೆಗಣಿಸಿದ್ದ ಸವಾರ, ಆ ಚಾಲಕನನ್ನು 600 ಮೀಟರ್‌ಗೂ ಹೆಚ್ಚು ದೂರ ಎಳೆದೊಯ್ದಿದ್ದ
- ಬೆಂಗಳೂರಿನ ಕೆಂಗೇರಿ ಬಳಿಯ ಉಲ್ಲಾಳ ಮುಖ್ಯ ರಸ್ತೆಯಲ್ಲಿ ಎರಡು ಕಾರುಗಳ ಮಧ್ಯೆ ಸಣ್ಣ ಅಪಘಾತ ಸಂಭವಿಸಿತ್ತು. ಎರಡೂ ಕಾರುಗಳಿಗೆ ಹಾನಿಯಾಗಿತ್ತು. ಒಂದು ಕಾರಿನ ಯುವ ಚಾಲಕ, ಇನ್ನೊಂದು ಕಾರಿನ ಮುಂದೆ ನಿಂತಿದ್ದ. ವಾಗ್ವಾದ ಕೈಮೀರಿ, ಇನ್ನೊಂದು ಕಾರಿನ ಚಾಲಕಿ ಕಾರು ಗುದ್ದಿಸಿದ್ದರು. ಕಾರಿನ ಬಾನೆಟ್ ಮೇಲೆ ಯುವಕ ಜೋತುಬಿದ್ದಿದ್ದರೂ, ಆ ಚಾಲಕಿಯು ಹಲವು ಕಿಲೋಮೀಟರ್‌ವರೆಗೆ ತಮ್ಮ ಕಾರನ್ನು ಚಲಾಯಿಸಿಕೊಂಡು ಹೋಗಿದ್ದರು

- ಬಿಹಾರದ ಕೊಟ್ವಾದಲ್ಲಿ 70 ವರ್ಷದ ವೃದ್ಧರೊಬ್ಬರಿಗೆ ಭಾನುವಾರವಷ್ಟೇ ಕಾರು ಡಿಕ್ಕಿ ಹೊಡೆದಿತ್ತು. ವೃದ್ದ ಕಾರಿನ ಬಾನೆಟ್‌ಗೆ ಜೋತು ಬಿದ್ದಿದ್ದರೂ, ಅವರನ್ನು ಎಂಟು ಕಿ.ಮೀ.ವರೆಗೆ ಚಾಲಕ ಹೊತ್ತೊಯ್ದಿದ್ದ. ಆನಂತರ ದಿಢೀರ್ ಎಂದು ಬ್ರೇಕ್ ಹಾಕಿದ್ದರಿಂದ ವೃದ್ಧ ನೆಲಕ್ಕೆ ಬಿದ್ದಿದ್ದರು. ಚಾಲಕ, ಅವರ ಮೇಲೆ ಕಾರು ಚಲಾಯಿಸಿಕೊಂಡು ಹೋದ. ತೀವ್ರ ಗಾಯಗಳಿಂದ ವೃದ್ಧ ಮೃತಪಟ್ಟರು
- 2022ರ ನವೆಂಬರ್ 25ರಂದು ಬೆಂಗಳೂರಿನ ಯಲಹಂಕದ ವ್ಯಾಪ್ತಿಯಲ್ಲಿ ಬಸ್ ಚಾಲಕ ಮತ್ತು ಬೈಕ್ ಸವಾರನ ಮಧ್ಯೆ ಮಾರಾಮಾರಿ ನಡೆದಿತ್ತು. ಬಸ್ ಅನ್ನು ಹಿಂದಿಕ್ಕುವ ಸಂದರ್ಭದಲ್ಲಿ ಅಡ್ಡ ಬಂದರೆಂದು ಬಸ್ ಚಾಲಕ ಮತ್ತು ಬೈಕ್ ಸವಾರನ ಮಧ್ಯೆ ವಾಗ್ವಾದ ನಡೆದಿತ್ತು. ಇಬ್ಬರು ಪರಸ್ಪರ ಹೊಡೆದಾಡಿದರು ಮತ್ತು ಬಸ್ ಚಾಲಕನು ಬೈಕ್ ಸವಾರನಿಗೆ ಹಿಗ್ಗಾಮುಗ್ಗಾ ಥಳಿಸಿದ ದೃಶ್ಯಗಳಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗಿತ್ತು

2018ರ ಮೇ 22ರಂದು ಜಾನ್ ಅಬ್ರಹಾಂ ನಟನೆಯ ‘ಪರಮಾಣು’ ಸಿನಿಮಾದ ಪ್ರಚಾರದ ಜೀಪ್ ದೆಹಲಿಯಲ್ಲಿ ಬೈಕ್ ಒಂದಕ್ಕೆ ಡಿಕ್ಕಿ ಹೊಡೆದಿತ್ತು. ಬೈಕ್ ಸವಾರ ಮತ್ತು ಜೀಪ್ ಚಾಲಕನ ಮಧ್ಯೆ ವಾಗ್ವಾದ ನಡೆದಿತ್ತು. ವಾಗ್ವಾದ ಜೋರಾಗಿ ಬೈಕ್ ಸವಾರ, ಜೀಪ್ ಚಾಲಕನಿಗೆ ಥಳಿಸಿದ್ದ –ಪಿಟಿಐ ಚಿತ್ರ

ವಿಮೆ ಪರಿಹಾರ?

ರೋಡ್ ರೇಜ್ ಅಥವಾ ರಸ್ತೆಯಲ್ಲಿ ರೋಷಾವೇಶ ತೋರಿದ್ದರಿಂದ ಅಪಘಾತ ಸಂಭವಿಸಿದರೆ ಮತ್ತು ಚಾಲಕ ಉದ್ದೇಶಪೂರ್ವಕವಾಗಿ ವಾಹನವನ್ನು ಡಿಕ್ಕಿ ಹೊಡೆಸಿದ್ದರೆ ಅಂತಹ ಪ್ರಕರಣಗಳಲ್ಲಿ, ಬಹುತೇಕ ಸಂದರ್ಭಗಳಲ್ಲಿ ವಾಹನಕ್ಕೆ ವಿಮೆ ಪರಿಹಾರ ದೊರೆಯುವುದಿಲ್ಲ. ಭಾರತದಲ್ಲಿ ರಸ್ತೆಯಲ್ಲಿ ರೋಷಾವೇಶ ಕೃತ್ಯವನ್ನು ದಾಖಲು ಮಾಡುವುದಿಲ್ಲವಾದ್ದರಿಂದ, ವಿಮಾ ಕಂಪನಿಗಳೂ ತಮ್ಮ ಪಾಲಿಸಿಗಳಲ್ಲಿ ಇದನ್ನು ಉಲ್ಲೇಖಿಸುವುದಿಲ್ಲ. ಹಲವು ವಿಮಾ ಕಂಪನಿಗಳು ತಮ್ಮ ಮೋಟಾರು ವಾಹನ ವಿಮಾ ಪಾಲಿಸಿಗಳಲ್ಲಿ, ‘ಉದ್ದೇಶಪೂರ್ವಕವಾಗಿ ನಡೆಸಿದ ಅಪಘಾತಗಳಲ್ಲಿ ಪರಿಹಾರ ಅನ್ವಯವಾಗುವುದಿಲ್ಲ’ ಎಂದು ಉಲ್ಲೇಖಿಸಿರುತ್ತವೆ. ಆದರೆ, ಬೇರೊಬ್ಬ ಚಾಲಕನ ಉದ್ದೇಶಪೂರ್ವಕ ಕೃತ್ಯಕ್ಕೆ ತುತ್ತಾದವರು, ತಮ್ಮ ವಾಹನದ ವಿಮೆಯನ್ನು ಪಡೆಯಬಹುದು.

ಪ್ರಜಾವಾಣಿ ಪ್ರಜಾಧ್ವನಿ – ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ನ್ಯಾಯಮೂರ್ತಿಗಳ ನೇಮಕಕ್ಕೆ ಸಂಬಂಧಿಸಿ ಕೊಲಿಜಿಯಂ ವಿರುದ್ಧ ಕಾನೂನು ಸಚಿವ ಕಿರಣ್ ರಿಜಿಜು ಮತ್ತೆ ಬೇಸರ ಹೊರಹಾಕಿದ್ದಾರೆ. ಇದು, ಕೇಂದ್ರ ಸರ್ಕಾರ ಮತ್ತು ನ್ಯಾಯಾಂಗದ ಮಧ್ಯೆ ಸಂಘರ್ಷ ತೀವ್ರಗೊಳಿಸಲಿದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಸಿನಿ ಬಿಟ್ಸ್

ಮಾ.17ಕ್ಕೆ ‘ಕಬ್ಜ’ ರಿಲೀಸ್

ಉಪೇಂದ್ರ

ರಿಯಲ್ ಸ್ಟಾರ್ ಉಪೇಂದ್ರ ಹಾಗೂ ಪ್ರಮುಖ ಪಾತ್ರದಲ್ಲಿ ‘ಕಿಚ್ಚ’ ಸುದೀಪ್ ಅಭಿನಯಿಸಿರುವ ಬಹುನಿರೀಕ್ಷಿತ ಪ್ಯಾನ್ ಇಂಡಿಯಾ ಸಿನಿಮಾ ‘ಕಬ್ಜ’ 2023ರ ಮಾ.17ರಂದು ತೆರೆಕಾಣಲಿದೆ.

ನಟ, ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಜನ್ಮದಿನದಂದೇ ಚಿತ್ರ ರಿಲೀಸ್ ಮಾಡುವುದಕ್ಕೂ ಕಾರಣ ಇದೆ ಎಂದಿದ್ದಾರೆ ನಿರ್ದೇಶಕ ಆರ್.ಚಂದ್ರು. ‘ನಾವು ಬಿಡುಗಡೆ ಮಾಡಿದ್ದ ಕಬ್ಜ ಚಿತ್ರದ ಮೊದಲ ಪೋಸ್ಟರ್ ನೋಡಿಯೇ ಪುನೀತ್ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದರು. ಜೊತೆಗೆ ಚಿತ್ರೀಕರಣದ ಸೆಟ್‌ಗೂ ಭೇಟಿ ನೀಡಿದ್ದರು. ಈ ಚಿತ್ರಕ್ಕೆ ತಮ್ಮ ಸಂಪೂರ್ಣ ಬೆಂಬಲ ನೀಡುವುದಾಗಿ ಅವರು ತಿಳಿಸಿದ್ದರು. ಈ ಎಲ್ಲ ಕಾರಣಗಳಿಂದ ಅವರ ಜನ್ಮದಿನದಂದೇ, ಅವರ ನೆನಪಿನಲ್ಲಿ, ಅಪ್ಪು ಅವರನ್ನು ಮತ್ತೆ ಮತ್ತೆ ಸಂಭ್ರಮಿಸಲು ಈ ದಿನಾಂಕವನ್ನು ಆಯ್ಕೆ ಮಾಡಿದೆವು.

ಇಂಟರ್ನೆಟ್ ಮೂವಿ ಡೇಟಾಬೇಸ್ (ಐಎಂಡಿಬಿ) ಬಿಡುಗಡೆ ಮಾಡಿರುವ 2023ರ ಬಹುನಿರೀಕ್ಷಿತ ಚಿತ್ರಗಳ ಪಟ್ಟಿಯಲ್ಲಿ ಕನ್ನಡದ ಏಕೈಕ ಸಿನಿಮಾವಿದ್ದು, ಅದು ‘ಕಬ್ಜ’ ಎನ್ನುವುದನ್ನು ಚಿತ್ರತಂಡ ಹೆಮ್ಮೆಯಿಂದ ಹೇಳಿಕೊಂಡಿದೆ. ಶ್ರೀ ಸಿದ್ಧೇಶ್ವರ ಎಂಟರ್ ಪ್ರೈಸಸ್‌ನಡಿ ನಿರ್ಮಾಣವಾಗಿರುವ ಈ ಚಿತ್ರ ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ಬಿಡುಗಡೆಯಾಗಲಿದೆ.

ಮಂಡ್ಯ ಹುಡ್ಗಿ ‘ಟಗರುಪಲ್ಯ’ ಬೆಡಗಿ

ಡಾಲಿ ಪಿಕ್ಚರ್ಸ್ ಮೂಲಕ ಸ್ಯಾಂಡಲ್‌ವುಡ್ ಅಂಗಳಕ್ಕೆ ಹೆಜ್ಜೆ ಇಟ್ಟಿರುವ ‘ನೆನಪಿರಲಿ’ ಪ್ರೇಮ್ ಪುತ್ರಿ ಅಮೃತ ಪ್ರೇಮ್ ತಮ್ಮ ಚೊಚ್ಚಲ ಚಿತ್ರದಲ್ಲಿ ಮಂಡ್ಯ ಹುಡುಗಿಯಾಗಿ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ. ಉಮೇಶ್ ಕೆ. ಕೃಪ ಆ್ಯಕ್ಷನ್ ಕಟ್ ಹೇಳುತ್ತಿರುವ ಸಿನಿಮಾದ ಚಿತ್ರೀಕರಣ ಭರದಿಂದ ಸಾಗಿದ್ದು, ಚಿತ್ರದಲ್ಲಿ ಅಮೃತ ಹಳ್ಳಿ ಹುಡುಗಿ ಪಾತ್ರವನ್ನು ನಿಭಾಯಿಸಿದ್ದಾರೆ. ಪಾತ್ರಕ್ಕಾಗಿ ವರ್ಕ್‌ಶಾಪ್ ಮೂಲಕ ತಯಾರಿ ಮಾಡಿಕೊಂಡಿರುವ ಅಮೃತ ಪಾತ್ರಕ್ಕೆ ಜೀವ ತುಂಬಿದ್ದಾರೆ ಎನ್ನುತ್ತಿದೆ ಚಿತ್ರತಂಡ. ಮಂಡ್ಯ ಭಾಗದ ಕಥೆಯನ್ನೊಳ್ಳಗೊಂಡ ಈ ಚಿತ್ರದಲ್ಲಿ ಅಲ್ಲಿನ ಸೊಗಡಿನ ಭಾಷೆ ಕಲಿತು ಅಷ್ಟೇ ಚೆನ್ನಾಗಿ ಅಭಿನಯಿಸಿದ್ದಾರಂತೆ ಅಮೃತ. ಮಂಡ್ಯ ಸ್ಲ್ಯಾಂಗ್ ತುಂಬಾ ಚೆನ್ನಾಗಿ ಮಾತನಾಡಿದ್ದಾರೆ. ಈಗಾಗಲೇ ಚಿತ್ರದ ಎರಡು ಶೆಡ್ಯೂಲ್ ಪೂರ್ಣಗೊಂಡಿವೆ’ ಎನ್ನುತ್ತಾರೆ ಉಮೇಶ್.

ನಟ ‘ಡಾಲಿ’ ಧನಂಜಯ ನಿರ್ಮಾಣ ಸಂಸ್ಥೆಯಡಿ ನಿರ್ಮಾಣವಾಗುತ್ತಿರುವ ಮೂರನೇ ಸಿನಿಮಾ ಇದಾಗಿದ್ದು, ‘ಇಕ್ಕಟ್’ ಖ್ಯಾತಿಯ ನಾಗಭೂಷಣ್‌ಗೆ ಅಮೃತ ಇಲ್ಲಿ ಜೋಡಿಯಾಗಿದ್ದಾರೆ.



ಅಮೃತ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಮಹಾತ್ಮ ಗಾಂಧಿ ಅವರು ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಬರುವ ಮುನ್ನ ಬ್ರಿಟಿಷ್ ಸೇನೆಯ ಸೇವೆಯಲ್ಲಿದ್ದರು. ಬ್ರಿಟನ್ ಸೇನೆಯಲ್ಲಿ ಅವರು ಇದ್ದಾಗ ತೆಗೆಸಿಕೊಂಡ ಚಿತ್ರ ಇದು ಎಂಬ ಸಂದೇಶ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಜತೆಗೆ ಕಪ್ಪು–ಬಿಳುಪಿನ ಚಿತ್ರವನ್ನೂ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗಿದೆ. ಆದರೆ, ಈ ಚಿತ್ರದ ಜತೆಗೆ ನೀಡಿರುವ ವಿವರ ಸುಳ್ಳು.

ಮಹಾತ್ಮ ಗಾಂಧಿ ಅವರು ಬ್ರಿಟಿಷ್ ಸೇನೆಯಲ್ಲಿ ಎಂದಿಗೂ ಸೇವೆಯಲ್ಲಿರಲಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗಿರುವ ಚಿತ್ರಕ್ಕೂ, ಅವರು ಬ್ರಿಟಿಷ್ ಸೇವೆಯಲ್ಲಿದ್ದರು ಎಂಬುದಕ್ಕೂ ಸಂಬಂಧವಿಲ್ಲ. ಗಾಂಧಿ ಅವರು ದಕ್ಷಿಣ ಆಫ್ರಿಕಾದಲ್ಲಿ ಇದ್ದಾಗ, ಎರಡು ಫುಟ್‌ಬಾಲ್ ತಂಡಗಳನ್ನು ಕಟ್ಟಿದ್ದರು. ಆ ಎರಡೂ ತಂಡಗಳ ಜತೆಗೆ 1913ರಲ್ಲಿ ಸಿರ್ಕಾದಲ್ಲಿ ಗಾಂಧಿ ಅವರು ತೆಗೆಸಿಕೊಂಡಿದ್ದ ಚಿತ್ರ ಇದು. ಈ ಚಿತ್ರವನ್ನು ತಪ್ಪು ಮಾಹಿತಿಗಳೊಂದಿಗೆ ಹಂಚಿಕೊಳ್ಳಲಾಗಿದೆ. ಗಾಂಧಿ ಅವರು ಬ್ರಿಟಿಷ್ ಸೇನೆಗಾಗಿ ಸ್ವಯಂಪ್ರೇರಿತವಾಗಿ ಆಂಬುಲೆನ್ಸ್ ಕೋರ್ ಅನ್ನು ಸ್ಥಾಪಿಸಿದ್ದರು ಎಂದು ಇತಿಹಾಸಕಾರ ರಾಮಚಂದ್ರ ಗುಹಾ ಅವರು ಹೇಳಿದ್ದಾರೆ. ಆದರೆ, ಗಾಂಧಿ ಅವರು ಬ್ರಿಟಿಷ್ ಸೇನೆಯ ಸೇವೆಯಲ್ಲಿ ಇದ್ದರು ಎಂಬುದು ತಪ್ಪು ಮಾಹಿತಿ ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಬೆರಗಿನ ಬೆಳಕು – ಗುರುರಾಜ ಕರಜಗಿ

ಗುರುವಿನ ಪಂಚಲಕ್ಷಣಗಳು

ಗರ್ವಪಡದುಪಕಾರಿ, ದರ್ಪ ಬಿಟ್ಟಧಿಕಾರಿ |
ನಿರ್ವಿಕಾರದ ನಯನದಿಂ ನೋಳ್ಪುದಾರಿ ||
ಸರ್ವಧರ್ಮಾಧಾರಿ, ನಿರ್ವಾಣ ಸಂಚಾರಿ |
ಉರ್ವರೆಗೆ ಗುರುವವವನು – ಮಂಕುತಿಮ್ಮ || 806

ಪದ-ಅರ್ಥ: ಗರ್ವಪಡದುಪಕಾರಿ = ಗರ್ವಪಡದ + ಉಪಕಾರಿ, ದರ್ಪಬಿಟ್ಟಧಿಕಾರಿ = ದರ್ಪ + -ಬಿಟ್ಟ + ಅಧಿಕಾರಿ, ನಿರ್ವಿಕಾರದ = ವಿಕಾರವಿಲ್ಲದ, ನಯನದಿಂ = ಕಣ್ಣಿಂದ, ನೋಳ್ಪುದಾರಿ = ನೋಳ್ಪ(-ನೋಡುವ) + ಉದಾರಿ, ನಿರ್ವಾಣಸಂಚಾರಿ = -ಮುಕ್ತಿಗಾಗಿ ನಡೆಯುವವನು, ಊರ್ವರೆಗೆ = ಭೂಮಿಗೆ, ಗುರುವವನು = ಗುರುವು + ಅವನು.

ವಾಚ್ಯಾರ್ಥ: ಗರ್ವವನ್ನು ಪಡದ ಉಪಕಾರಿ, ದರ್ಪ ತೋರದಅಧಿಕಾರಿ, ನಿರ್ವಿಕಾರದಿಂದ ಜಗತ್ತನ್ನು ನೋಡುವ ಉದಾರಿ,ಸರ್ವಧರ್ಮಗಳನ್ನು ಸಮನ್ವಯಿಸುವವನು, ಮುಕ್ತಿಗಾಗಿಸಾಧನೆಮಾಡುವವನು, ಭೂಮಿಗೆ ಗುರುವಾದವನು.

ವಿವರಣೆ: ಜಗತ್ತಿಗೆ ಗುರುವಾಗಬಲ್ಲಂಥ ಮನುಷ್ಯನಿಗೆಅವಶ್ಯವಾದ ಐದು ಗುಣಗಳನ್ನು ಈ ಕಗ್ಗ ತಿಳಿಸುತ್ತದೆ.ಮೊದಲನೆಯದು ಗರ್ವವನ್ನು ಪಡದೆ ಉಪಕಾರಮಾಡುವುದು. ಸಾಮಾನ್ಯವಾಗಿ ಉಪಕಾರ ಮಾಡಿದವರಿಗೆ, ತಾವುಮತ್ತೊಬ್ಬರಿಗೆ ಏನಾದರೂ ಕೊಟ್ಟೆವಲ್ಲ ಎಂಬ ಗರ್ವವಿರುತ್ತದೆ. ಯಾಕೆಂದರೆ ಕೊಟ್ಟದ್ದು ತಾನು, ತನ್ನ ವಸ್ತು. ಪಡೆದವನುಅಶಕ್ತ, ಸಹಾಯ ಬೇಡಿದವನು ಎಂಬ ಭಾವ. ಅದೊಂದು ರೀತಿಯಅಹಂಕಾರ. ಅಹಂಕಾರ ಭಾವ ಬಂದರೆ ಉಪಕಾರ ವ್ಯರ್ಥಪ್ರಚಾರ.ತೆತ್ಸುಗೆನ್ ಎಂಬ ಝೆನ್ ಸಂತ, ಬದುಕಿನುದ್ದಕ್ಕೂ ಸಮಾಜಕ್ಕಾಗಿದುಡಿದ. ತನ್ನ ಹೆಸರು ಎಲ್ಲಿಯೂ ಬರದಂತೆ ನೋಡಿದ. ತಾನು ಮಾಡಬೇಕಾದ ಕಾರ್ಯ ಮುಗಿಯಿತು ಎನ್ನಿಸಿದಾಗ ಎಲ್ಲರಿಂದ ಮರೆಯಾಗಿ ಮತ್ತೊಮ್ಮೆ ಕಾಣದಂತೆ ಕಾಡಿನಲ್ಲಿ ಮರೆಯಾಗಿ ಹೋದ. ಎರಡನೆಯ ಗುಣ ಅಧಿಕಾರದ ದರ್ಪವನ್ನು ಬಿಡುವುದು. ಬಸವಣ್ಣ ಬಿಜ್ಜಳನ ಮಂತ್ರಿಯಾಗಿದ್ದವರು, ಭಂಡಾರಿಯಾಗಿದ್ದವರು. ಅವರ ಅಧಿಕಾರ ದೊಡ್ಡದಾಗಿತ್ತು. ಆದರೆ ಅವರ ಅಧಿಕಾರಕ್ಕೆ ಮೆರಗು ತಂದದ್ದು ಅವರ ವಿನಯ, ದರ್ಪರಹಿತತೆ. ಎನಗಿಂತ ಕಿರಿಯರಿಲ್ಲ, ಶಿವಶರಣರಿಗಿಂತ ಹಿರಿಯರಿಲ್ಲ ಎಂದು ಹೇಳುವುದು ಮಾತ್ರವಲ್ಲ ಅಂತೆಯೇ ನಡೆದು ಲೋಕಕ್ಕೆ ಮಾದರಿಯಾದವರು. ಮೂರನೆಯ ಗುಣ, ಜಗತ್ತನ್ನು ನಿರ್ವಿಕಾರದಿಂದ ಕಾಣುವ ಉದಾರತೆ. ಮಹಾವೀರರು ನಿರ್ವಾಣ ಸ್ಥಿತಿಯನ್ನು ತಲುಪಿದಾಗ ಅವರಿಗೆ ಅಪಮಾನ ಮಾಡಿದವರೆಷ್ಟು ಜನ! ಅವರಿಗೆ ಕಲ್ಲು ಹೊಡೆದರು, ಊರಿನಿಂದ ಹೊರಗೆ ಕಳುಹಿಸಿದರು, ಒಬ್ಬನಂತೂ ದನಕಟ್ಟುವ ಹಗ್ಗದಿಂದ ಹೊಡೆದ. ನಂತರ ಅನೇಕರು ಅವರಿಗೆ ಶಿಷ್ಯರಾದರು, ಅವರನ್ನು ದೇವರೆಂದು ಪೂಜಿಸಿದರು. ಆದರೆ ತೀರ್ಥಂಕರ ಮಹಾವೀರರಿಗೆ ಎರಡೂ ಒಂದೇ ಆಗಿತ್ತು. ಎಲ್ಲವನ್ನೂ ನಿರ್ವಿಕಾರದಿಂದ ಉದಾರವಾಗಿ ಕಂಡರು. ಅಂಥ ವ್ಯಕ್ತಿ ಎಲ್ಲವನ್ನೂ ಮೀರಿ ಬ್ರಹ್ಮವನ್ನು ತಿಳಿದವನಾದ್ದರಿಂದ ಧರ್ಮಾಧರ್ಮಗಳನ್ನು ದಾಟಿ ನಿಂತವನಾಗುತ್ತಾನೆ. ಸ್ವಯಂ ಯಾವ ಅಪೇಕ್ಷೆಯೂ ಇಲ್ಲದೆ ಮಾಡಿದ ಕಾರ್ಯ ಸದಾಕಾಲ ಧರ್ಮಕಾರ್ಯವೇ ಆಗುತ್ತದೆ. ಹೀಗೆ ಗರ್ವವನ್ನು, ದರ್ಪವನ್ನು ತೊರೆದು ವಿಕಾರರಹಿತನಾಗಿ ಜಗತ್ತನ್ನು ನೋಡುವಂಥ ವ್ಯಕ್ತಿಯ ಗುರಿ ಮುಕ್ತಿ. ಅವನ ಪಯಣ ಮುಕ್ತಿಯ ಕಡೆಗೆ. ಮುಕ್ತಿಯೆಂದರೆ ಬಿಡುಗಡೆ. ಯಾವುದರಿಂದ? ದು:ಖ, ಸಂಕಟಗಳಿಂದ, ಜನನ-ಮರಣ ಚಕ್ರದಿಂದ, ನಾನು ಬೇರೆ ಎಂಬ ಭ್ರಮೆಯಿಂದ ಮತ್ತು ಕೊನೆಗೆ ನಾನು ಬರೀ ದೇಹವಲ್ಲ ಆ ಭಗವದ್ ಶಕ್ತಿಯ ಒಂದಂಶ ಎಂಬಅರಿವಿನಿಂದ. ಈ ಎಲ್ಲ ಗುಣಗಳನ್ನು ಹೊಂದಿದ ವ್ಯಕ್ತಿ ಲೋಕಕ್ಕೆಗುರುವಾಗುತ್ತಾನೆ.

ದಿನ ಭವಿಷ್ಯ – ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ – ಮಂಗಳವಾರ ಜನವರಿ 24, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಶುಕ್ಲ ತೃತೀಯ ಗಂ. 15-23
ನಕ್ಷತ್ರ: ಶತಭಿಷ ಗಂ. 21-58 ಯೋಗ: ವರಿಯಾನ್ ಗಂ. 21-37, ಕರಣ: ಗರಜೆ ಗಂ. 15-23, ಮಕರ ಮಾಸದ 10 ನೇ ದಿನ.ರಾಹುಕಾಲ : ಸಾಯಂಕಾಲ 03-00 –04-30ಸೂರ್ಯೋದಯ : 07-01 ಸೂರ್ಯಾಸ್ತ : 06-24, ಮುಸ್ಲಿಂ ದಿನಾಂಕ : 01 ರಜಬ್
ದಿನ ವಿಶೇಷ : ತಿಲ ಚತುರ್ಥಿ, ಕುಂದ ಚತುರ್ಥಿ
ಅದೃಷ್ಟ ಸಂಖ್ಯೆ : 2, 11

ಮೇಷ: ಜನಸಂಪರ್ಕದಲ್ಲಿರುವ ರಾಜಕಾರಣಿಗಳಿಗೆ ಬಹಳ ಕೆಲಸದ ಒತ್ತಡ ಇರುವುದು. ಹೆದರಬೇಡಿ ಅದೃಷ್ಟ ನಿಮ್ಮ ಪಾಲಿಗೇ ಇದೆ. ಒಂದು ಸಂಸ್ಥೆಯ ಜವಾಬ್ದಾರಿ ನೋಡಲು ಇತರರಿಂದ ಒತ್ತಡಗಳು ಬರಬಹುದು.

ವೃಷಭ: ಮಗಳ ಮದುವೆ ವಿಚಾರವಾಗಿ ದೂರದ ಊರಿಗೆ ಪ್ರಯಾಣ ಬೆಳೆಸಬೇಕಾಗುವುದು. ತಪ್ಪುಗಳು ಪುನರಾವರ್ತನೆ ಆಗದಂತೆ ಎಚ್ಚರವಹಿಸಿ. ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸುವವರಿಗೆ ಹೆಚ್ಚಿನ ಪ್ರೋತ್ಸಾಹ ಸಿಗಲಿದೆ.

ಮಿಥುನ: ಸಣ್ಣಪುಟ್ಟ ತೊಡಕುಗಳು ಕಾಣಿಸಿಕೊಂಡರೂ ಕೆಲಸಗಳು ಅಬಾಧಿತವಾಗಿ ಸಾಗುವುದು. ಮನೆಯ ನಿರ್ಮಾಣ ಕೆಲಸಗಳು ಸರಾಗವಾಗಿ ಸಾಗಲಿದೆ. ಯೋಗ್ಯ ವಯಸ್ಕರರಿಗೆ ವಿವಾಹ ಭಾಗ್ಯ ಒದಗಿ ಬರುವುದು.

ಕರ್ಕಾಟಕ: ದೈನಂದಿನದ ಯಾಂತ್ರಿಕ ಬದುಕಿನಿಂದ ಸ್ವಲ್ಪ ವಿರಾಮ ಪಡೆದು ಕುಟುಂಬದೊಂದಿಗೆ ಕಾಲ ಕಳೆಯುವಿರಿ. ಅಧಿಕಾರ ಹಾಗೂ ಅನುಭವದಿಂದ ಆತ್ಮಾಭಿಮಾನ ಹೆಚ್ಚುವುದು. ಖರ್ಚು ಅಧಿಕವಾದರೂ ಆದಾಯ ಉತ್ತಮ.

ಸಿಂಹ: ವೃತ್ತಿಯಲ್ಲಿ ಸಾಕಷ್ಟು ಪೈಪೋಟಿಯನ್ನು ಎದುರಿಸಬೇಕಾಗ ಬಹುದು. ಆದರೆ ಸ್ವಲ್ಪ ಪ್ರಯತ್ನ ಪಟ್ಟರೆ ಇದರಲ್ಲಿ ಜಯಗಳಿಸಬಹುದು. ಸಹಭಾಗಿಗೆ ಅಥವಾ ಮಕ್ಕಳಿಗೆ ನಿಮ್ಮ ಸಮಯವನ್ನು ಸ್ವಲ್ಪ ಮೀಸಲಿಡಿ.

ಕನ್ಯಾ: ಕಠಿಣ ಶ್ರಮದ ಜೊತೆಯಲ್ಲಿ ಎಷ್ಟೇ ಪ್ರಯತ್ನವಿದ್ದರೂ ಮೊದಲನೇ ಬಾರಿ ವಿಘ್ನವೇ ಸಂಭವಿಸಲಿದೆ. ನಂತರ ಗುರಿ ಸಾಧಿಸಬೇಕಿದ್ದಲ್ಲಿ ಅನುಭವಸ್ಥರ ಅಥವಾ ಅಕ್ಕಪಕ್ಕದವರೊಂದಿಗೆ ಹೆಚ್ಚಿನ ಸಂಪರ್ಕ ಬೆಳೆಸಿಕೊಳ್ಳಿ.

ತುಲಾ: ಸಾಲ ಅಥವಾ ಸಹಾಯದ ರೂಪದಲ್ಲಿ ಹಣ ದೊರೆಯಲಿದೆ. ವ್ಯವಸಾಯಗಾರರಾಗಿರುವರು ಇಲಾಖೆಯವರಿಂದ ಸಹಾಯ ಪಡೆದುಕೊಳ್ಳಬಹುದು. ವಕೀಲರಿಗೆ ಮಾತಿನಲ್ಲಿ ಎದುರಾಳಿಯನ್ನು ಕಟ್ಟಿಹಾಕುವ ಅವಕಾಶ ಸಿಗಲಿದೆ.

ವೃಶ್ಚಿಕ: ಸ್ವಂತ ಉದ್ಯೋಗದವರು ತಮ್ಮ ಕ್ಷೇತ್ರವನ್ನು ಹೆಚ್ಚು ವಿಸ್ತರಿಸಿಕೊಂಡು ಉನ್ನತ ಮಟ್ಟಕ್ಕೇರಿ ಅಭಿವೃದ್ಧಿ ಹೊಂದುವರು. ಮಕ್ಕಳು ವಿದ್ಯಾಭ್ಯಾಸದಲ್ಲಿ ಬಹಳ ಉತ್ಸಾಹ ತೋರಿ ಮುನ್ನಡೆಯುವರು.

ಧನು: ಕೌಟುಂಬಿಕವಾಗಿ ಒಡಹುಟ್ಟಿದವರ ಜತೆಯಲ್ಲಿ ಇರುವ ಭಿನ್ನಾಭಿಪ್ರಾಯಗಳಿಗೆ ಮೂಲ ಕಾರಣಗಳು ಏನೆಂಬುದು ತಿಳಿಯುವುದು. ವಿದೇಶದಿಂದ ಮಗನ ಆಗಮನದ ಸುದ್ದಿ ಮನೆಯವರಿಗೆಲ್ಲ ಸಂತೋಷ ತರುವುದು.

ಮಕರ: ದಾಂಪತ್ಯದಲ್ಲಿ ಸಂಶಯದ ವಾತಾವರಣ ಸೃಷ್ಟಿಯಾಗದಂತೆ ಜೀವನ ನಡೆಸಿ. ಮಗನೊಡನೆ ಗಹನವಾದ ಮಾತುಕತೆ ನಡೆಯುವ ಸಂಭವವಿದೆ. ತಾಳ್ಮೆ, ಸಮಾಧಾನ ಕಳೆದುಕೊಂಡಲ್ಲಿ ಅನವಶ್ಯಕವಾಗಿ ಕಲಹ ಉಂಟಾದೀತು.

ಕುಂಭ: ದೇಹದಲ್ಲಿ ಕಫ ಅಧಿಕ್ಯವಾಗಿರುವುದರಿಂದ ಅನಾರೋಗ್ಯ ಉಂಟಾಗಬಹುದು. ಒಂಟಿತನದ ಚಿಂತೆ ಕಾಡಲಿದೆ. ಮನೆಯ ವಿಸ್ತರಣೆ ವಿಷಯ ಉತ್ತಮ ಆಲೋಚನೆಗಳು ಗರಿಗೆದರಲಿವೆ. ಎಲ್ಲವೂ ಇಚ್ಛೆಯಂತೆ ನಡೆಯಲಿದೆ.

ಮೀನ: ಪಾಲುದಾರಿಕೆ ಮತ್ತು ಸಹಭಾಗಿತ್ವದ ವ್ಯವಹಾರಗಳಿಂದ ಉತ್ತಮ ವರಮಾನ ಪಡೆದುಕೊಳ್ಳುವಿರಿ. ಸಂಸಾರದಲ್ಲಿ ನೆಮ್ಮದಿ. ಧೈರ್ಯದಿಂದ ದೊಡ್ಡ ದೊಡ್ಡ ಯೋಜನೆಗಳನ್ನು ಕೈಗೊಳ್ಳಬಹುದು.

ಪದಬಂಧ 5209 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಅನುಕೂಲ ಸಂದರ್ಭ (4)
3. ಮಿತಿ ಮೀರಿದ ಸಿಟ್ಟು (3)
4. ವಾಸ್ತವ ಸಂಗತಿಯಿದು (4)
6. ವ್ಯವಸಾಯಗಾರನ ಅಳಲು (3)
7. ಅಧಿಕಾರ ನಡೆಸುವವನು (4)
8. ತಲೆಯಲ್ಲಿರಿಸಿಕೊಂಡಿರುವ ಅಡುಗೆಯ ಪಾತ್ರೆ (3)
9. ಈಕೆ ವಿದ್ಯಾಧಿದೇವತೆ (4)
12. ನೀರ ಮೇಲಣ ಗುಳ್ಳೆ (3)
13. ಬೇಡ ಇಲ್ಲಿದ್ದಾನೆ (4)
15. ಬೆಟ್ಟದ ಗವಿ (3)
16. ಮಜದಲ್ಲಿರುವ ಚಕ್ರವರ್ತಿ! (4)

ಮೇಲಿಂದ ಕೆಳಕ್ಕೆ
1. ಅವಶ್ಯವಿಲ್ಲದ ಖರ್ಚು (4)
2. ವಶಕ್ಕೆ ಸಿಕ್ಕಿರುವ ಹಣ (2)
3. ತಪ್ಪುತಿಳುವಳಿಕೆಯಿದು (3)
5. ಅಮೂಲ್ಯ ವಸ್ತುಗಳನ್ನಿಡುವ ಕಬ್ಬಿಣದ ಭಾರಿ ಪೆಟ್ಟಿಗೆ (3)
7. ಆಲೆದಾಡುವಾಗ ಅಪ್ಪಳಿಸಿದ ತೆರೆ (2)
8. ತರಗತಿಯಲ್ಲಿರುವ ಸಮೂಹ ಕಾಣುತ್ತಿದೆಯೇ? (2)
9. ಒಳ್ಳೆಯ ಭಾವನೆ (3)
10. ಕೊಬ್ಬಿದ ಆನೆ (4)
11. ಚುಂಬನ ನೀಡುವಂಥ ಮಧುರ ತುಟಿ (3)
14. ತಿರುವು ಮುರುವಾಗಿರುವ ವೃಕ್ಷ (2)



5208ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸೆರೆಮನೆ 3.ತೊಡಪು
5.ಗುಲಾಮ 7.ಛಳುಕು
8.ವಿಶ್ವಾಸಘಾತ
11.ರುಮಾಲು 12.ನಿಗಮ
15.ಗುದಾಮು 16.ಪರೀಕ್ಷಕ

ಮೇಲಿಂದ ಕೆಳಕ್ಕೆ:
1.ಸೆರಗು 2.ನೆನೆ
3.ತೊಡಕು 4.ಪುಡಿಗಾಸು
6.ಮನವಿ 7.ಛಡಸವಾಲು
9.ತರ್ಜನಿ 10.ಹುಸಿನಗು
11.ರುಸುಮು 13.ಮಣಕ
14.ಕೂಪ

ಸುಡೊಕು 5595

		7		8			2	
							7	8
6		5		9		4		
	2		6				3	
5		3	2		1	8		9
	1				9		4	2
	6			2				4
3		8	9				5	
	5				4			1

5594 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಅತ್ಯಂತ ಬಿಗಿ ಭದ್ರತಾ ವ್ಯವಸ್ಥೆ– ಜಮ್ಮು ತಲುಪಿದ ಭಾರತ್ ಜೋಡೊ ಯಾತ್ರೆ • ಜನರಿಂದ ಆತ್ಮೀಯ ಸ್ವಾಗತ

‘ಕಾಶ್ಮೀರ: ರಾಜ್ಯದ ಸ್ಥಾನಮಾನಕ್ಕೆ ಯತ್ನ’

ಜಮ್ಮು (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೊ ಯಾತ್ರೆಯು ಸೋಮವಾರ ಜಮ್ಮುವಿಗೆ ತಲುಪಿದ್ದು, ಭಾರಿ ಸಂಖ್ಯೆಯಲ್ಲಿ ನೆರೆದಿದ್ದ ಜನರು ಆತ್ಮೀಯ ಸ್ವಾಗತ ನೀಡಿದರು.

‘ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನ ಮರುಸ್ಥಾಪಿಸಲು ಕಾಂಗ್ರೆಸ್ ತನ್ನ ಸಂಪೂರ್ಣ ಶಕ್ತಿಯನ್ನು ಬಳಸಲಿದೆ’ ಎಂದು ಅವರು ರಾಜ್ಯದ ಜನತೆಗೆ ಭರವಸೆ ನೀಡಿದರು.

ಸತ್ವಾರಿ ಚೌಕ್‌ಗೆ ತಲುಪಿದ ಮೇಳೆ ಮಾತನಾಡಿದ ಅವರು,‘ದೇಶ ದಲ್ಲೇ ಜಮ್ಮು ಮತ್ತು ಕಾಶ್ಮೀರದಲ್ಲಿ ನಿರುದ್ಯೋಗ ಸಮಸ್ಯೆ ಅಧಿಕವಿದೆ’ ಎಂದರು.

‘ಇಲ್ಲಿ ಸಂಪೂರ್ಣ ವ್ಯಾಪಾರವನ್ನು ಹೊರಗಿನವರು ನಡೆಸುತ್ತಿದ್ದಾರೆ. ನಮ್ಮ ಧ್ವನಿಯನ್ನು ಆಡಳಿತವು ಆಲಿಸುತ್ತಿಲ್ಲ ಎಂದು ಜಮ್ಮು ಮತ್ತು ಕಾಶ್ಮೀರದ ಜನರು ಯಾತ್ರೆಯುದ್ದಕ್ಕೂ ಹೇಳಿದ್ದಾರೆ ಎಂದು ರಾಹುಲ್ ಗಾಂಧಿ ಅವರು ತಿಳಿಸಿದರು.

ಬಿಗಿ ಭದ್ರತೆ– ಭವ್ಯ ಸ್ವಾಗತ: ಭಯೋತ್ಪಾದಕರ ದಾಳಿಯ ಆತಂಕದ ಹಿನ್ನೆಲೆಯಲ್ಲಿ ಯಾತ್ರೆಗೆ ಭದ್ರತೆ ಒದಗಿಸಲು ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಯಾತ್ರೆಯು ಸಾಂಬಾ ಜಿಲ್ಲೆಯ ವಿಜಯ್‌ಪುರದಿಂದ ಆರಂಭಗೊಂಡು ಜಮ್ಮು–ಪಠಾನ್‌ಕೋಟ್ ಹೆದ್ದಾರಿಯ ಮೂಲಕ ಸಾಗಿ ಜಮ್ಮುವಿನ ಬರಿ ಬ್ರಾಹ್ಮಣ ನಗರಕ್ಕೆ ತಲುಪಿದಾಗ ಅಲ್ಲಿನ ಜನರು ರಾಹುಲ್ ಅವರನ್ನು ಬರಮಾಡಿಕೊಂಡರು.

ಜಮ್ಮುವಿನ ಕುಂಜ್ವಾನಿಗೆ ಯಾತ್ರೆ ತಲುಪಿದಾಗ ಪಿಡಿಪಿ ಪ್ರತಿನಿಧಿಗಳು ಕೂಡ ಪಾಲ್ಗೊಂಡರು.

‘ದೇಶದಲ್ಲಿ ದ್ವೇಷವನ್ನು ತೊಡೆದು ಹಾಕಿ ಏಕತೆಯನ್ನು ಬಲಪಡಿಸುವ ಸಂದೇಶದೊಂದಿಗೆ ಯಾತ್ರೆ ನಡೆಸುತ್ತಿರುವ ರಾಹುಲ್ ಅವರಿಗೆ ಬೆಂಬಲ ಸೂಚಿಸಲು ಬಂದಿದ್ದೇವೆ’ ಎಂದು ಪಿಡಿಪಿ ಮುಖಂಡ ಫಿರ್ದೋಸ್ ಅಹಮ್ಮದ್ ತಕ್ ಹೇಳಿದರು.

ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ದಿಗ್ವಿಜಯ ಸಿಂಗ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನಾ) ಕೆ.ಸಿ. ವೇಣುಗೋಪಾಲ್, ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್, ಜಮ್ಮು–ಕಾಶ್ಮೀರದ ಕಾಂಗ್ರೆಸ್ ಘಟಕದ ಅಧ್ಯಕ್ಷ ವಿಕಾರ್ ರಸೂಲ್ ವಾನಿ ಮತ್ತಿತರರು ಪಾಲ್ಗೊಂಡಿದ್ದರು.

ಸೂಕ್ತ ಹುಡುಗಿ ಸಿಕ್ಕಿದರೆ ಮದುವೆ: ‘ನನ್ನ ಪೋಷಕರು ಪ್ರೇಮ ವಿವಾಹವಾದವರು ಮತ್ತು ಪರಸ್ಪರ ಪ್ರೀತಿಯಿಂದ ಬದುಕಿದವರು. ನನಗೂ ಸೂಕ್ತ ಹುಡುಗಿ ಸಿಕ್ಕಿದರೆ ಮದುವೆಯಾಗುತ್ತೇನೆ’ ಎಂದು ‘ಕರ್ಲಿ ಟೇಲ್ಸ್’ ಯೂಟ್ಯೂಬ್ ಚಾನೆಲ್‌ಗೆ ನೀಡಿದ ಸಂದರ್ಶನದಲ್ಲಿ ರಾಹುಲ್ ಹೇಳಿದ್ದಾರೆ.

ಯಾತ್ರೆಯು ಸೋಮವಾರ ಜಮ್ಮುವಿಗೆ ತಲುಪಿದಾಗ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು —ಪಿಟಿಐ ಚಿತ್ರ

ನಿರ್ದಿಷ್ಟ ದಾಳಿ ಪ್ರಶ್ನಿಸಿದ ದಿಗ್ವಿಜಯ ಸಿಂಗ್

ಜಮ್ಮು/ನವದೆಹಲಿ: ನಿರ್ದಿಷ್ಟ ದಾಳಿಯನ್ನು (ಸರ್ಜಿಕಲ್ ಸ್ಟ್ರೈಕ್) ಪ್ರಶ್ನಿಸಿರುವ ಕಾಂಗ್ರೆಸ್ ಮುಖಂಡ ದಿಗ್ವಿಜಯ ಸಿಂಗ್ ಅವರು, ‘ಕೇಂದ್ರ ಸರ್ಕಾರವು ಈ ಕುರಿತು ಸುಳ್ಳು ಹೇಳುತ್ತಿದೆ’ ಎಂದು ಸೋಮವಾರ ಆರೋಪಿಸಿದ್ದಾರೆ.

ಭಾರತ್ ಜೋಡೊ ಯಾತ್ರೆಯ ಅಂಗವಾಗಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ‘ಸರ್ಕಾರವು ನಿರ್ದಿಷ್ಟ ದಾಳಿಯ ಬಗ್ಗೆ ಮಾತನಾಡುತ್ತಿದೆ. ಈ ದಾಳಿಯಲ್ಲಿ ಹಲವು ಮಂದಿ ಉಗ್ರರನ್ನು ಹತ್ಯೆ ಮಾಡಲಾಗಿದೆ ಎಂದೂ ಹೇಳಿದೆ. ಆದರೆ ಇದಕ್ಕೆ ಯಾವುದೇ ಪುರಾವೆಗಳನ್ನು ನೀಡಿಲ್ಲ’ ಎಂದು ಹೇಳಿದ್ದಾರೆ.

ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಬಿಜೆಪಿ ವಕ್ತಾರ ಗೌರವ್ ಭಾಟಿಯಾ, ‘ಪ್ರಧಾನಿ ನರೇಂದ್ರ ಮೋದಿ ಅವರ ಮೇಲಿನ ದ್ವೇಷದಿಂದ ಕಾಂಗ್ರೆಸ್ ಪಕ್ಷವು ಕುರುಡಾಗಿದೆ ಮತ್ತು ಸಶಸ್ತ್ರ ಪಡೆಗಳನ್ನು ಅಪಮಾನಿಸಿದೆ’ ಎಂದರು.

ಮೊರ್ಬಿ ಸೇತುವೆ: ಪಟೇಲ್ ವಿರುದ್ಧ ಬಂಧನ ವಾರಂಟ್

ಮೊರ್ಬಿ (ಪಿಟಿಐ): ಮೊರ್ಬಿ ತೂಗುಸೇತುವೆ ಕುಸಿತ ಪ್ರಕರಣ ಸಂಬಂಧ ಒರೆವಾ ಸಮೂಹದ ವ್ಯವಸ್ಥಾಪಕ ನಿರ್ದೇಶಕ ಜಯ್‌ಸುಖ್ ಪಟೇಲ್ ವಿರುದ್ಧ ಗುಜರಾತ್ ಕೋರ್ಟ್ ಬಂಧನ ವಾರಂಟ್ ಜಾರಿ ಮಾಡಿದೆ.

‘ನಿರೀಕ್ಷಣಾ ಜಾಮೀನು ಕೋರಿ ಪಟೇಲ್ ಜ.20ರಂದೇ ಮೊರ್ಬಿ ಸೆಷನ್ಸ್ ಕೋರ್ಟ್ ಮೊರೆ ಹೋಗಿದ್ದಾರೆ. ಪ್ರಕರಣದ ವಿಚಾರಣೆಯನ್ನು ಫೆ.1ಕ್ಕೆ ಮುಂದೂಡಲಾಗಿದೆ.

ನ್ಯಾಯಾಂಗದ ಮೇಲೆ ಸಚಿವ ರಿಜಿಜು ಮತ್ತೆ ವಾಗ್ದಾಳಿ

‘ಚುನಾವಣೆ ಹಂಗಿಲ್ಲದ ನ್ಯಾಯಮೂರ್ತಿಗಳು’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ನ್ಯಾಯಮೂರ್ತಿಗಳು ಚುನಾವಣೆಗೆ ನಿಲ್ಲುವುದಿಲ್ಲ. ಹೀಗಾಗಿ ಸಾರ್ವಜನಿಕರ ವಿಮರ್ಶೆಯನ್ನೂ ಎದುರಿಸುವುದಿಲ್ಲ’ ಎಂದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಸೋಮವಾರ ಹೇಳಿದ್ದಾರೆ. ಆ ಮೂಲಕ ನ್ಯಾಯಾಂಗ ವ್ಯವಸ್ಥೆ ಮೇಲಿನ ವಾಗ್ದಾಳಿ ಮುಂದುವರಿಸಿದ್ದಾರೆ.

ದೆಹಲಿ ವಕೀಲರ ಸಂಘ ಆಯೋಜಿಸಿದ್ದ ಕಾರ್ಯಕ್ರಮ ದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ‘ಜನ ನೋಡುತ್ತಿದ್ದಾರೆ. ನೀವು ಹೇಗೆ ಕೆಲಸ ನಿರ್ವಹಿಸುತ್ತೀರಿ? ಏನು ಮಾಡುತ್ತಿದ್ದೀರಿ? ನಿಮ್ಮ ತೀರ್ಪು ಹೇಗಿದೆ? ಇವೆಲ್ಲವನ್ನೂ ಗಮನಿಸುತ್ತಾರೆ. ಇವುಗಳ ಆಧಾರದಲ್ಲಿ ಅಭಿಪ್ರಾಯ ರೂಪಿಸುತ್ತಾರೆ. ಸಾಮಾಜಿಕ ಜಾಲತಾಣಗಳ ಈ ಕಾಲಘಟ್ಟದಲ್ಲಿ ಯಾರು ಏನನ್ನೂ ಮುಚ್ಚಿಡುವುದಕ್ಕೆ ಸಾಧ್ಯವಿಲ್ಲ’ ಎಂದಿದ್ದಾರೆ.

‘ನ್ಯಾಯಮೂರ್ತಿಗಳನ್ನು ಟೀಕಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯವರು (ಸಿಜೆಐ) ನಮಗೆ ಸೂಚಿಸಿದ್ದಾರೆ. ಅವರ ಸಲಹೆ ಸ್ವೀಕರಿಸಿದ್ದೇವೆ. ಆದರೆ ಜನರು ಸಾಮೂಹಿಕವಾಗಿ ಟೀಕೆ ನಡೆಸಿದರೆ ನಾವೇನು ಮಾಡಲು ಸಾಧ್ಯ’ ಎಂದು ಪ್ರಶ್ನಿಸಿದ್ದಾರೆ.

‘ಪ್ರತಿಯೊಬ್ಬ ನಾಗರಿಕರೂ ಸರ್ಕಾರವನ್ನು ಪ್ರಶ್ನಿಸುತ್ತಾರೆ. ಪ್ರಶ್ನಿಸಲೇಬೇಕು. ಸಾರ್ವಜನಿಕರು ಚುನಾಯಿತ ಸರ್ಕಾರವನ್ನು ಪ್ರಶ್ನಿಸದೆ ಇನ್ಯಾರನ್ನು ಪ್ರಶ್ನಿಸಲು ಸಾಧ್ಯ. ನಾವು ಜನಪ್ರತಿನಿಧಿಗಳು. ಹೀಗಾಗಿ ಅವರ ಪ್ರಶ್ನೆಗಳನ್ನು ಎದುರಿಸುತ್ತೇವೆ. ಈಗ ನಾನು ಕಾನೂನು ಸಚಿವನಾಗಿ ಕೆಲಸ ಮಾಡುತ್ತಿದ್ದೇನೆ. ಮುಂದಿನ ಚುನಾವಣೆಯಲ್ಲಿ ಜನರು ನಮಗೆ ಅಧಿಕಾರ ನೀಡದೆ ಹೋದರೆ ವಿರೋಧ ಪಕ್ಷದ ಸ್ಥಾನದಲ್ಲಿ ಕೂರುತ್ತೇವೆ. ಆಗ ನಾವೂ ಆಡಳಿತಾರೂಢ ಸರ್ಕಾರವನ್ನು ಪ್ರಶ್ನಿಸುತ್ತೇವೆ’ ಎಂದಿದ್ದಾರೆ.

ಸುದ್ದಿ 2 ನಿಮಿಷ

ಮೋದಿ ಕುರಿತ ಸಾಕ್ಷ್ಯಚಿತ್ರ ಪ್ರದರ್ಶನ: ಜೆಎನ್‌ಯು ವಿದ್ಯಾರ್ಥಿ ಸಂಘಟನೆ ಸಜ್ಜು

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಕುರಿತು ಬಿಬಿಸಿ ನಿರ್ಮಿಸಿರುವ ‘ಇಂಡಿಯಾ: ದಿ ಮೋದಿ ಕ್ವೆಶ್ಚನ್’ ಹೆಸರಿನ ಸಾಕ್ಷ್ಯಚಿತ್ರವನ್ನು ಮಂಗಳವಾರ ರಾತ್ರಿ ತನ್ನ ಕಚೇರಿಯಲ್ಲಿ ಪ್ರದರ್ಶಿಸುವುದಾಗಿ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘಟನೆಯು (ಜೆಎನ್‌ಯುಎಸ್‌ಯು) ತಿಳಿಸಿದೆ. ಈ ಸಂಬಂಧ ಸೋಮವಾರ ಭಿತ್ತಿಪತ್ರ ಹಂಚಲಾಗಿದೆ.

‘ಸಾಕ್ಷ್ಯಚಿತ್ರ ಪ್ರದರ್ಶಿಸಲು ವಿದ್ಯಾರ್ಥಿ ಸಂಘಟನೆಯು ತನ್ನ ಅನುಮತಿ ಪಡೆದಿಲ್ಲ. ಸಂಘಟನೆಯ ಈ ಬಗೆಯ ಅನಧಿಕೃತ ಚಟುವಟಿಕೆಗಳಿಂದ ವಿಶ್ವವಿದ್ಯಾಲಯದ ಶಾಂತಿ ಮತ್ತು ಸೌಹಾರ್ದತೆಗೆ ಧಕ್ಕೆ ಉಂಟಾಗುತ್ತದೆ. ಹೀಗಾಗಿ ಪ್ರದರ್ಶನ ರದ್ದುಪಡಿಸಬೇಕು’ ಎಂದು ವಿಶ್ವವಿದ್ಯಾಲಯದ ಆಡಳಿತವು ವಿದ್ಯಾರ್ಥಿ ಸಂಘಟನೆಗೆ ಸೂಚಿಸಿದೆ.

‘ಸಾಕ್ಷ್ಯಚಿತ್ರ ಪ್ರದರ್ಶಿಸುವ ಸಂಬಂಧ ಸಿದ್ಧಪಡಿಸಿರುವ ಭಿತ್ತಿಪತ್ರಗಳನ್ನು ಕೆಲ ವಿದ್ಯಾರ್ಥಿಗಳು ಹಂಚುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಇದನ್ನು ಕೂಡಲೇ ನಿಲ್ಲಿಸಬೇಕು. ಇಲ್ಲದಿದ್ದರೆ ವಿಶ್ವವಿದ್ಯಾಲಯದ ನಿಯಮಗಳ ಅನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ’ ಎಂದೂ ಎಚ್ಚರಿಸಿದೆ.

ಟಿಟನೊಸಾರಸ್‌ನ 90ಕ್ಕೂ ಅಧಿಕ ಗೂಡುಗಳ ತಾಣ ಪತ್ತೆ

ನವದೆಹಲಿ (ಪಿಟಿಐ): ಟಿಟನೊಸಾರಸ್‌ಗಳಿಗೆ (ಅತ್ಯಂತ ದೊಡ್ಡ ಡೈನೋಸಾರ್ ಸಂತತಿ) ಸಂಬಂಧಿಸಿದ 92 ಗೂಡುಕಟ್ಟುವ ತಾಣಗಳು ಹಾಗೂ ಆ ಸ್ಥಳಗಳಲ್ಲಿದ್ದ ಅವುಗಳ 256 ಮೊಟ್ಟೆಯ ಪಳೆಯುಳಿಕೆಗಳನ್ನು ಮಧ್ಯಪ್ರದೇಶದ ಧಾರ್ ಜಿಲ್ಲೆಯ ನರ್ಮದಾ ಕಣಿವೆಯಲ್ಲಿ ಸಂಶೋಧಕರು ಕೆಲದಿನಗಳ ಹಿಂದೆ ಪತ್ತೆ ಹಚ್ಚಿದ್ದಾರೆ.

‘ಪ್ಲಸ್ ಒನ್’ ನಿಯತಕಾಲಿಕೆಯಲ್ಲಿ ಈ ಕುರಿತ ಮಾಹಿತಿ ಪ್ರಕಟಿಸಲಾಗಿದೆ. ಭಾರತದ ಉಪಖಂಡದಲ್ಲಿ ಟಿಟನೊಸಾರಸ್‌ಗಳು ದೊಡ್ಡ ಸಂಖ್ಯೆಯಲ್ಲಿ ನೆಲೆಸಿದ್ದವು ಎಂಬುದು ಇದರಿಂದ ಬಹಿರಂಗವಾಗಿದೆ.

‘ಈ ಪ್ರದೇಶದಲ್ಲಿ ಒಟ್ಟು ಆರು ಬಗೆಯ ಮೊಟ್ಟೆಯ ಪಳೆಯುಳಿಕೆಗಳು ಪತ್ತೆಯಾಗಿವೆ. ಟಿಟನೊಸಾರಸ್‌ಗಳು ಮೊಸಳೆಗಳ ಹಾಗೆ ಆಳವಿಲ್ಲದ ಹೊಂಡಗಳಲ್ಲಿ ತಮ್ಮ ಮೊಟ್ಟೆಗಳನ್ನು ಅಡಗಿಸಿಡುತ್ತಿದ್ದವು ಎಂಬುದು ಗೂಡುಗಳ ವಿನ್ಯಾಸದ ಅಧ್ಯಯನದಿಂದ ತಿಳಿದು ಬಂದಿದೆ’ ಎಂದು ಸಂಶೋಧಕರು ಹೇಳಿದ್ದಾರೆ.

ನೇತಾಜಿ ಕೊಡುಗೆ ಕಡೆಗಣನೆ ಯತ್ನ: ಮೋದಿ

ಬೋಸ್ 126ನೇ ಹುಟ್ಟುಹಬ್ಬ • 21 ದ್ವೀಪಗಳಿಗೆ ಪರಮವೀರ ಚಕ್ರ ಪುರಸ್ಕೃತರ ಹೆಸರು

ಪೋರ್ಟ್ ಬ್ಲೇರ್ (ಪಿಟಿಐ): ‘ಸ್ವಾತಂತ್ರ್ಯ ಹೋರಾಟಕ್ಕೆ ನೇತಾಜಿ ಅವರ ಕೊಡುಗೆಯನ್ನು ಕಡೆಗಣಿಸುವ ಪ್ರಯತ್ನ ನಡೆಯುತ್ತಿದೆ. ಆದರೆ, ಇಡೀ ದೇಶ ಇಂದು ಅವರನ್ನು ನೆನಪಿಸಿಕೊಳ್ಳುತ್ತಿದೆ. ವಸಾಹತುಶಾಹಿ ಆಳ್ವಿಕೆಗೆ ತೋರಿದ ಪ್ರತಿರೋಧಕ್ಕಾಗಿ ನೇತಾಜಿ ಅವರನ್ನು ನೆನಪಿಸಿಕೊಳ್ಳಲಾಗುತ್ತಿದೆ. ಅವರ ಚಿಂತನೆಗಳಿಂದ ನಾನು ಭಾರಿ ಪ್ರಭಾವಕ್ಕೆ ಒಳಗಾಗಿದ್ದೇನೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ನೇತಾಜಿ ಸುಭಾಸ್ ಚಂದ್ರ ಬೋಸ್ ಅವರ ಹೆಸರಿನಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುವ ಸ್ಮಾರಕದ ಮಾದರಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಅನಾವರಣಗೊಳಿಸಿದ್ದಾರೆ. ಇದು ಅಂಡಮಾನ್–ನಿಕೋಬಾರ್ ದ್ವೀಪದಲ್ಲಿ ನಿರ್ಮಾಣ ಆಗಲಿದೆ. ಈ ಸ್ಮಾರಕವು ಜನರಲ್ಲಿ ದೇಶಪ್ರೇಮದ ಭಾವನೆಯನ್ನು ತುಂಬಲಿದೆ ಎಂದು ಮೋದಿ ಹೇಳಿದ್ದಾರೆ.

ನೇತಾಜಿ ಅವರ 126ನೇ ಜನ್ಮದಿನದ ಪ್ರಯುಕ್ತ ಈ ಕಾರ್ಯಕ್ರಮ ನಡೆದಿದೆ. ಮೋದಿ ಅವರು ವರ್ಚುವಲ್ ಆಗಿ ಕಾರ್ಯಕ್ರಮದಲ್ಲಿ ಭಾಗಿಯಾದರು. 21 ದ್ವೀಪಗಳಿಗೆ ಪರಮವೀರ ಚಕ್ರ ಪುರಸ್ಕೃತರ ಹೆಸರು ಇರಿಸಲಾಗಿದೆ.

‘ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಜನರನ್ನು ಉದ್ದೇಶಿಸಿ ಮಾತನಾಡುವ ಈ ಕ್ಷಣವು ನನಗೆ ಬಹಳ ಹೆಮ್ಮೆಯದ್ದಾಗಿದೆ. ಇಲ್ಲಿ 1943ರಲ್ಲಿ ಮೊದಲ ಬಾರಿಗೆ ನೇತಾಜಿ ಅವರು ಮೊದಲ ಬಾರಿಗೆ ಧ್ವಜಾರೋಹಣ ಮಾಡಿದ್ದರು’ ಎಂದು ಮೋದಿ ಹೇಳಿದರು.

ನೇತಾಜಿ ಅವರು 1943ರ ಡಿಸೆಂಬರ್ 30ರಂದು ಇಲ್ಲಿ ಧ್ವಜಾರೋಹಣ ಮಾಡಿದ್ದರು.

ನೇತಾಜಿ ಅವರಿಗೆ ಸಂಬಂಧಿಸಿದ ಗೋಪ್ಯ ಕಡತಗಳನ್ನು ಬಹಿರಂಗ ಮಾಡಬೇಕು ಎಂಬ ಬೇಡಿಕೆ ಬಹಳ ಹಿಂದಿನಿಂದಲೂ ಇತ್ತು. ಆದರೆ, ತಮ್ಮ ಸರ್ಕಾರ ಬಂದ ಮೇಲಷ್ಟೇ ಕಡತಗಳನ್ನು ಬಹಿರಂಗಪಡಿಸಲಾಯಿತು ಎಂದು ಮೋದಿ ಹೇಳಿದ್ದಾರೆ.

ಸ್ಮಾರಕದಲ್ಲಿ ಏನಿರಲಿದೆ?: ಸ್ಮಾರಕವು ಒಂದು ವಸ್ತುಸಂಗ್ರಹಾಲಯವನ್ನು ಹೊಂದಿರಲಿದೆ. ಜೊತೆಗೆ, ಇಲ್ಲಿಗೆ ರೋಪ್ ವೇ ಮೂಲಕ ಕೇಬಲ್ ಸಂಪರ್ಕ ಇರುತ್ತದೆ. ಲೇಸರ್ ಶೋ ವ್ಯವಸ್ಥೆ ಮಾಡಲಾಗುವುದು. ಮಕ್ಕಳ ಉದ್ಯಾನ ಇರಲಿದೆ. ಹೋಟೆಲ್ ಕೂಡ ತೆರೆಯಲಾಗುವುದು.

ಪ್ರಧಾನಿ ಮೋದಿ ಮತ್ತು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ನೇತಾಜಿ ಸುಭಾಸ್ ಚಂದ್ರ ಬೋಸ್ ಅವರಿಗೆ ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಸೋಮವಾರ ಪುಷ್ಪನಮನ ಸಲ್ಲಿಸಿದ ಬಳಿಕ ಕೆಲ ಕ್ಷಣಗಳನ್ನು ಆತ್ಮೀಯವಾಗಿ ಕಳೆದರು —ಪಿಟಿಐ ಚಿತ್ರ

ಜನಪ್ರಿಯತೆಗಾಗಿ ದ್ವೀಪಗಳ ಮರುನಾಮಕರಣ: ಮಮತಾ

ಕೋಲ್ಕತ್ತ: ದ್ವೀಪಗಳಿಗೆ ಮರುನಾಮಕರಣವು ಜನಪ್ರಿಯತೆ ಪಡೆದುಕೊಳ್ಳುವ ಹುನ್ನಾರ ಮಾತ್ರ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಿಗೆ ಶಹೀದ್ ಮತ್ತು ಸ್ವರಾಜ್ ದ್ವೀಪಗಳು ಎಂದು 1943 ರಲ್ಲಿಯೇ ನೇತಾಜಿ ಅವರು ಹೆಸರು ಇರಿಸಿದ್ದರು ಎಂದು ಮಮತಾ ಹೇಳಿದ್ದಾರೆ. ಮೋದಿ ಅವರು 21 ದ್ವೀಪಗಳ ಹೆಸರು ಬದಲಾಯಿಸಿದ್ದಕ್ಕೆ ಅವರು ಹೀಗೆ ಪ್ರತಿಕ್ರಿಯೆ ನೀಡಿದ್ದಾರೆ. ನೀಲ್ ಮತ್ತು ಹ್ಯಾವ್‌ಲಾಕ್ ದ್ವೀಪಗಳ ಹೆಸರನ್ನು 2018ರಲ್ಲಿಯೇ ಶಹೀದ್ ದ್ವೀಪ ಮತ್ತು ಸ್ವರಾಜ್ ದ್ವೀಪ ಎಂದು ಬದಲಿಸಲಾಗಿದೆ.

‘ದೇಶದ ಭವಿಷ್ಯಕ್ಕಾಗಿ ನೇತಾಜಿ ಅವರು ಯೋಜನಾ ಆಯೋಗವನ್ನು ರೂಪಿಸಿದ್ದರು. ಇಂದು ನಮ್ಮ ದುರದೃಷ್ಟ. ಯಾವ ಯೋಜನೆಯೂ ಇಲ್ಲದಂತಾಗಿದೆ. ಯೋಜನಾ ಆಯೋಗವನ್ನು ರದ್ದುಪಡಿಸಲಾಗಿದೆ. ಏಕೆ ಎಂಬುದನ್ನು ಹೇಳಬಹುದೇ? ನಾನು ಅಷ್ಟೊಂದು ಬುದ್ಧಿವಂತೆ ಅಲ್ಲ. ಯಾರಿಗಾದರೂ ಈ ಬಗ್ಗೆ ಏನಾದರೂ ಅರಿವಿದ್ದರೆ ತಿಳಿಸಿಕೊಡಿ’ ಎಂದು ಮಮತಾ ಹೇಳಿದ್ದಾರೆ.

ನೇತಾಜಿ, ಆರ್‌ಎಸ್‌ಎಸ್‌ನ ಗುರಿ ಒಂದೇ: ಭಾಗವತ್

ಕೋಲ್ಕತ್ತ (ಪಿಟಿಐ): ನೇತಾಜಿ ಸುಭಾಸ್ ಚಂದ್ರ ಬೋಸ್ ಹೊಂದಿದ್ದ ಗುರಿ ಮತ್ತು ಆರ್‌ಎಸ್‌ಎಸ್ ಹೊಂದಿರುವ ಗುರಿ ಒಂದೇ ಆಗಿದೆ. ಅದು ಭಾರತವನ್ನು ಮಹಾನ್ ದೇಶವಾಗಿ ಕಟ್ಟುವುದು ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ ಭಾಗವತ್ ಹೇಳಿದ್ದಾರೆ.

ಆರ್‌ಎಸ್‌ಎಸ್ ಮತ್ತು ನೇತಾಜಿ ಅವರ ಆದರ್ಶಗಳು ಪರಸ್ಪರ ವ್ಯತಿರಿಕ್ತ ಎಂಬ ಅಭಿಪ್ರಾಯವನ್ನು ನೇತಾಜಿ ಅವರ ಮಗಳು ಅನಿತಾ ಬೋಸ್ ಫಫ್ ಇತ್ತೀಚೆಗೆ ವ್ಯಕ್ತಪಡಿಸಿದ್ದರು.

ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ನೇತಾಜಿ ಅವರ ಕೊಡುಗೆಗಳನ್ನು ಭಾಗವತ್ ಕೊಂಡಾಡಿದರು. ಎಲ್ಲರೂ ನೇತಾಜಿ ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಮತ್ತು ಭಾರತವನ್ನು ವಿಶ್ವಗುರುವಾಗಿಸುವ ದಿಸೆಯಲ್ಲಿ ಕೆಲಸ ಮಾಡಬೇಕು ಎಂದರು.

ಇಲ್ಲಿನ ಶಹೀದ್ ಮಿನಾರ್ ಮೈದಾನದಲ್ಲಿ ಆರ್‌ಎಸ್‌ಎಸ್ ಆಯೋಜಿಸಿದ ನೇತಾಜಿ ಅವರ 126ನೇ ಜನ್ಮದಿನ ಕಾರ್ಯಕ್ರಮದಲ್ಲಿ ಭಾಗವತ್ ಮಾತನಾಡಿದರು. ‘ಸುಭಾಸ್ ಬಾಬು (ನೇತಾಜಿ) ಅವರು ಮೊದಲಿಗೆ ಕಾಂಗ್ರೆಸ್ ಜೊತೆಗೇ ಇದ್ದರು. ಸತ್ಯಾಗ್ರಹದ ಹಾದಿಯನ್ನು ಅನುಸರಿಸಿದ್ದರು. ಆದರೆ, ಸ್ವಾತಂತ್ರ್ಯ ಹೋರಾಟಕ್ಕೆ ಇಷ್ಟು ಸಾಲದು ಎಂಬುದು ಅರಿವಾದಾಗ, ಭಿನ್ನ ಹಾದಿ ಹಿಡಿದರು. ಸನ್ನಿವೇಶಗಳು ಮತ್ತು ದಾರಿಗಳು ಭಿನ್ನವಾಗಿದ್ದರೂ ಗುರಿ ಒಂದೇ. ನಮ್ಮ ಮುಂದೆ ಅವರ ಆದರ್ಶಗಳು ಇವೆ. ಅವರು ಹೊಂದಿದ್ದ ಗುರಿಗಳು ನಮ್ಮದೂ ಆಗಿವೆ ಎಂದರು. ಭಾರತವು ಜಗತ್ತಿನ ಸಣ್ಣ ರೂಪ. ಭಾರತವು ಜಗತ್ತಿನ ಸಮಸ್ಯೆಗಳಿಗೆ ಪರಿಹಾರ ಒದಗಿಸಬೇಕು ಎಂದು ನೇತಾಜಿ ಹೇಳಿದ್ದರು. ಆ ದಿಸೆಯಲ್ಲಿ ಕೆಲಸ ಮಾಡೋಣ’ ಎಂದು ಭಾಗವತ್ ಹೇಳಿದ್ದಾರೆ.

> **ಮಾರ್ಗಗಳು ಭಿನ್ನವಾಗಿ ಇರಬಹುದು. ಅವುಗಳನ್ನು ಸಿದ್ಧಾಂತಗಳೆಂದು ವಿವರಿಸುತ್ತಾರೆ. ಅವು ಬೇರೆ ಬೇರೆಯಾಗಿಯೇ ಇದ್ದರೂ ಗುರಿ ಎಂಬುದು ಮುಖ್ಯ**
> **ಮೋಹನ್ ಭಾಗವತ್**
> ಆರ್‌ಎಸ್‌ಎಸ್ ಮುಖ್ಯಸ್ಥ

ಗೋಹತ್ಯೆ ಕೊನೆಗಾಣಿಸಿ ಜಗತ್ತು ಉಳಿಸಿ: ನ್ಯಾಯಾಧೀಶ

ಅಹಮದಾಬಾದ್: ‘ಗೋಹತ್ಯೆ ಕೊನೆಗಾಣಿಸುವುದರಿಂದ ಇಡೀ ಜಗತ್ತನ್ನೇ ಕಾಪಾಡಬಹುದು’ ಎಂದು ದಕ್ಷಿಣ ಗುಜರಾತ್‌ನ ತಾಪಿ ಜಿಲ್ಲಾ ನ್ಯಾಯಾಲಯದ ಸೆಷನ್ಸ್ ನ್ಯಾಯಾಧೀಶ ಸಮೀರ್ ವಿನೋದ್‌ಚಂದ್ರ ವ್ಯಾಸ್ ಹೇಳಿದ್ದಾರೆ.

ಗೋವುಗಳ ಅಕ್ರಮ ಸಾಗಾಣೆ ಪ್ರಕರಣಕ್ಕೆ ಸಂಬಂಧಿಸಿದ ಅರ್ಜಿಯೊಂದರ ವಿಚಾರಣೆ ನಡೆಸಿದ ಅವರು, ಆರೋಪಿ ಮೊಹಮ್ಮದ್ ಅಮಿನ್ ಆರೀಫ್ ಅಂಜುಮ್ ಎಂಬಾತನಿಗೆ ಜೀವಾವಧಿ ಶಿಕ್ಷೆ ವಿಧಿಸಿದ್ದಾರೆ. ₹5 ಲಕ್ಷ ದಂಡವನ್ನೂ ಹೇರಿದ್ದಾರೆ.

‘ಭಾರತದಲ್ಲಿ ಈಗಾಗಲೇ ಶೇ 75ರಷ್ಟು ಗೋ ಸಂಪತ್ತು ನಾಶವಾಗಿದೆ. ಸದ್ಯ ದೇಶದಲ್ಲಿ ಇರುವ ಜಾನುವಾರುಗಳ ಪ್ರಮಾಣ ಶೇ 25ರಷ್ಟು ಮಾತ್ರ. ಗೋ ಹತ್ಯೆ ಹೀಗೆ ಮುಂದುವರಿದರೆ ಮುಂದೊಂದು ದಿನ ಜಾನುವಾರುಗಳ ಚಿತ್ರ ಹೇಗೆ ಬಿಡಿಸಬೇಕು ಎಂಬುದನ್ನೇ ಜನ ಮರೆತುಬಿಡಬಹುದು’ ಎಂದು ತೀರ್ಪಿನಲ್ಲಿ ತಿಳಿಸಿದ್ದಾರೆ.

‘ಹಸು ಕೇವಲ ಪ್ರಾಣಿಯಲ್ಲ. ಅದು ತಾಯಿ ಇದ್ದಂತೆ. ಹೀಗಾಗಿಯೇ ಅದನ್ನು ಗೋಮಾತೆ ಎಂದು ಕರೆಯುತ್ತೇವೆ. ಹಸುವಿನಷ್ಟು ಶ್ರೇಷ್ಠ ಹಾಗೂ ಕೃತಜ್ಞ ಪ್ರಾಣಿ ಮತ್ತೊಂದಿಲ್ಲ. ಯಾವಾಗ ಗೋವಿನ ಒಂದು ಹನಿ ರಕ್ತವೂ ಈ ಭೂಮಿ ಮೇಲೆ ಬೀಳುವುದಿಲ್ಲವೊ ಅಂದು ಈ ಜಗತ್ತಿನ ಎಲ್ಲಾ ಸಮಸ್ಯೆಗಳೂ ಬಗೆಹರಿದಂತೆ. ಗೋಹತ್ಯೆ ಹಾಗೂ ಅವುಗಳ ಅಕ್ರಮ ಸಾಗಾಣೆಯು ಅವ್ಯಾಹತವಾಗಿ ನಡೆಯುತ್ತಿದೆ. ಇದು ಇಡೀ ನಾಗರಿಕ ಸಮಾಜವೇ ತಲೆತಗ್ಗಿಸುವ ವಿಚಾರ’ ಎಂದಿದ್ದಾರೆ.

‘ಗುಣಪಡಿಸಲಾಗದ ಅನೇಕ ರೋಗಗಳು ಗೋಮೂತ್ರ ಸೇವನೆಯಿಂದ ವಾಸಿಯಾಗುತ್ತವೆ. ವೈಜ್ಞಾನಿಕವಾಗಿ ಇದು ಸಾಬೀತಾಗಿದೆ’ ಎಂದೂ ಅವರು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ತ್ರಿಪುರಾ: ಶೀಘ್ರ ಎಡಪಕ್ಷಗಳ ಅಭ್ಯರ್ಥಿ ಪಟ್ಟಿ

ಅಗರ್ತಲ (ಪಿಟಿಐ): ತ್ರಿಪುರಾ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಜತೆಗೆ ಸಿಪಿಎಂ ನೇತೃತ್ವದ ಎಡ ಪಕ್ಷಗಳ ಮೈತ್ರಿಕೂಟವು ಸೀಟು ಹಂಚಿಕೆಯ ಅಂತಿಮ ಹಂತಕ್ಕೆ ತಲುಪಿದ್ದು, ಅಭ್ಯರ್ಥಿಗಳ ಪಟ್ಟಿಯನ್ನು ಮಂಗಳವಾರ ಬಿಡುಗಡೆ ಮಾಡುವ ಸಾಧ್ಯತೆ ಇದೆ ಎಂದು ಪಕ್ಷದ ಹಿರಿಯ ನಾಯಕರೊಬ್ಬರು ತಿಳಿಸಿದರು.

‘ಕಾಂಗ್ರೆಸ್ ಜತೆಗೆ ಸ್ಥಾನ ಹೊಂದಾಣಿಕೆಗೆ ಎರಡನೇ ಸುತ್ತಿನ ಮಾತುಕತೆ ಮುಗಿದಿದೆ. ಪಕ್ಷದ ರಾಜ್ಯ ಸಮಿತಿ ಒಪ್ಪಿಗೆ ನೀಡುವ ನಿರೀಕ್ಷೆ ಇದೆ. ಎಲ್ಲವೂ ನಿಗದಿತ ಸಮಯಕ್ಕೆ ಮುಗಿದರೆ, ಮಂಗಳವಾರ ಅಭ್ಯರ್ಥಿಗಳ ಅಂತಿಮ ಪಟ್ಟಿ ಬಿಡುಗಡೆ ಮಾಡಲಾಗುವುದು’ ಎಂದು ಸಿಪಿಎಂನ ರಾಜ್ಯ ಸಮಿತಿ ಸದಸ್ಯ ಪವಿತ್ರ ಕರ್ ಹೇಳಿದರು.

ಕಾಂಗ್ರೆಸ್ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಇದೇ 25ರಂದು ಬಿಡುಗಡೆ ಮಾಡಲಾಗುವುದು ಎಂದು ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಬಿರಾಜಿತ್ ಸಿನ್ಹಾ ಹೇಳಿದ್ದಾರೆ.

ದೇವಸ್ಥಾನ ಉತ್ಸವ ವೇಳೆ ಕ್ರೇನ್ ಬಿದ್ದು ನಾಲ್ವರು ಸಾವು

ಚೆನ್ನೈ: ತಮಿಳುನಾಡಿನ ರಾಣಿಪೇಟ್ ಜಿಲ್ಲೆಯ ಅರಕ್ಕೋಣಂನ ದೇವಸ್ಥಾನದ ಉತ್ಸವದ ವೇಳೆ ಕ್ರೇನ್ ಬಿದ್ದ ಪರಿಣಾಮ ನಾಲ್ವರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಭಾನುವಾರ ತಡರಾತ್ರಿ ಈ ಅವಘಡ ಸಂಭವಿಸಿದ್ದು, ಆರು ಮಂದಿ ಗಾಯಗೊಂಡಿದ್ದಾರೆ.

ದೇವಸ್ಥಾನದ ಸುತ್ತ ಪ್ರದಕ್ಷಿಣೆ ಹಾಕಲು ಕೆಲ ಭಕ್ತರು ಕ್ರೇನ್ ಬಳಸಿದ್ದರು. ಈ ವೇಳೆ ಏಕಾಏಕಿ ಕ್ರೇನ್ ಬಿದ್ದಿತು ಎಂದು ಮಾಹಿತಿ ನೀಡಿದ್ದಾರೆ.

ಮೃತರನ್ನು ಎಸ್. ಭೂಪಾಲನ್ (40), ಬಿ. ಜೋತಿಬಾಬು (17), ಕೆ. ಮುತ್ತುಕುಮಾರ್ (39) ಮತ್ತು ಚಿನ್ನಸಾಮಿ (60) ಎಂದು ಗುರುತಿಸಲಾಗಿದೆ. ಘಟನೆಗೆ ಸಂಬಂಧಿಸಿದಂತೆ ಕ್ರೇನ್ ನಿರ್ವಾಹಕನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ನೌಕಾಪಡೆಗೆ ಜಲಾಂತರ್ಗಾಮಿ ‘ವಾಗಿರ್’ ಸೇರ್ಪಡೆ

ಮುಂಬೈ (ಪಿಟಿಐ): ಕಲ್ವರಿ ದರ್ಜೆಯ ಐದನೇ ಜಲಾಂತರ್ಗಾಮಿ ನೌಕೆ ‘ಐಎನ್‌ಎಸ್ ವಾಗಿರ್’ ಅನ್ನು ಭಾರತೀಯ ನೌಕಾಪಡೆಗೆ ಸೋಮವಾರ ಸಮರ್ಪಿಸಲಾಯಿತು.

ಐಎನ್‌ಎಸ್ ವಾಗಿರ್ ಅನ್ನು ಫ್ರಾನ್ಸ್ ತಂತ್ರಜ್ಞಾನದೊಂದಿಗೆ ಮಜಗಾನ್ ಡಾಕ್ ಶಿಪ್‌ಬಿಲ್ಡರ್ಸ್ ಲಿಮಿಟೆಡ್ ನಿರ್ಮಿಸಿದೆ. ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಆರ್. ಹರಿಕುಮಾರ್ ಉಪಸ್ಥಿತಿಯಲ್ಲಿ ಕಾರ್ಯಕ್ರಮ ನಡೆಯಿತು.

ಶತ್ರುಗಳ ದಾಳಿ ತಡೆಯಲು, ಸಾಗರದಲ್ಲಿ ಭಾರತದ ರಕ್ಷಣೆಯ ಬಲವರ್ಧನೆಗೆ, ಗುಪ್ತಚರ ಹಾಗೂ ನಿಗಾ ವಹಿಸಲು ವಾಗಿರ್ ನೆರವಾಗಲಿದೆ. ಅತ್ಯುತ್ತಮ ಸೆನ್ಸಾರ್‌ಗಳನ್ನು ಒಳಗೊಂಡಿವೆ. ವಾಗಿರ್ ಅಂದರೆ ‘ಸ್ಯಾಂಡ್ ಷಾರ್ಕ್’ ಎಂದಾಗಿದ್ದು, ರಹಸ್ಯ, ನಿರ್ಭಯತೆಯನ್ನು ಪ್ರತಿಬಿಂಬಿಸುತ್ತದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

8ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಲಿಂಗಪ್ಪ. ಎಲ್.
ಮರಣ : 24–01–2015
ಸದಾ ನಿಮ್ಮ ಸ್ಮರಣೆಯಲ್ಲಿ :
ಪತ್ನಿ, ಮಕ್ಕಳು, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು–ಮಿತ್ರರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ
Astrology
ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171
ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 7795544894.

ವಾಹನ
Four Wheelers Selling
Others

ಉದ್ಯೋಗಾವಕಾಶ
General
ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673
ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree-Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000- 56,000/- ವಸತಿಯೂಟದೊಂದಿಗೆ 9035520339/ 9036125229

Part-Time Jobs
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/ 9611225344
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611225388/ 9611225266
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಪ್ರವಾಸ
Travel
★07.02.2023 16ದಿನಗಳು★ 95ದಿವ್ಯದೇಶಂಪ್ರವಾಸ. 04.03.2023, 11.04.2023 8/13ದಿನಗಳು ಕಾಶಿ ಪ್ರವಾಸ, 20.04.2023 7ದಿನಗಳು ವೈಷ್ಣೋದೇವಿ, ಅಮೃತಸರ್ ಪ್ರವಾಸ.27.04.2023 16ದಿನಗಳು ಕಾಶಿ,ನೇಪಾಳ,ಮುಕ್ತಿನಾಥ ಜನಕಪುರ್ ಪ್ರವಾಸ.ಆರ್.ಗಾಂಧಿ ಟೂರ್ಸ್(ರಿ) 9902433500/ 9945445809/ 26760367
Pilgrimage Tours
ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 08/02/23 ಕಾಶಿ, ಗಯ, ಅಯೋಧ್ಯ. 11/02/23 ಪೂರಿ, ಕೊನಾರ್ಕ್, ಭುವನೇಶ್ವರ. 21/02/23 ದೆಹಲಿ, ವೈಷ್ಣೋದೇವಿ. 9964527782,9591017782

ಪ್ರಜಾವಾಣಿ
To place your ad in Prajavani Classifieds
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿರಿ:
9845114560 : 9731810277
9901641752 : 9886213331
080 - 45557163 / 164
ಓದುಗರ ಗಮನಕ್ಕೆ

TATA MOTORS
Connecting Aspirations
ಸಂಕ್ರಾಂತಿಯಂದು ಟಾಟಾ ವಾಹನ ಖರೀದಿಸಿ
ನಿಮ್ಮ ಬಾಳಿನ ಹೊಸ ಅಧ್ಯಾಯ ಪ್ರಾರಂಭಿಸಿ

₹45 000/-* ವರೆಗೆ ಗ್ರಾಹಕ ಕೊಡುಗೆಗಳು
+
₹1999 ಪಾವತಿಸಿ
2ವರ್ಷ/50000km ಸಿಲ್ವರ್ AMC ಪಡೆಯಿರಿ*
TATA ACE GOLD DIESEL+
81235 23146
*T&C Apply

ಷೇರುಪೇಟೆ ವಹಿವಾಟು 319



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,028
ಇಂದಿನ ಅಂತ್ಯ	18,118
▲	90
ದಿನದ ಗರಿಷ್ಠ	18,162

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹550
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹550

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610 (1610)
ಸೋಯಾ (ರಿಫೈನ್ಡ್)	₹1210 (1210)
ಸೂರ್ಯಕಾಂತಿ (ರಿಫೈನ್ಡ್)	₹1210 (1210)
ಪಾಮೋಲಿನ್	₹914 (914)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹138
ಆರ್‌ಎಸ್‌ಎಸ್-5	₹133
ಗುಡ್ ಲಾಟ್	₹128

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹489-678
ದ್ವಿತಳಿ (ಬಿ.ವಿ) ₹377-806

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹14200
ಎಸಿ	₹67750
ಆರ್‌ಪಿ	₹8500
ಆರ್‌ಸಿ	₹4565

ಪ್ರಸಕ್ತ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕ

ಕೆನರಾ ಬ್ಯಾಂಕ್ ಲಾಭ ಶೇ 92 ಜಿಗಿತ

ನವದೆಹಲಿ (ಪಿಟಿಐ): ಕೆನರಾ ಬ್ಯಾಂಕ್‌ನ ಡಿಸೆಂಬರ್ ತ್ರೈಮಾಸಿಕದ ಲಾಭದಲ್ಲಿ ಶೇಕಡ 92ರಷ್ಟು ಏರಿಕೆ ಆಗಿದೆ. ಬಡ್ಡಿಯಿಂದ ಸಿಗುವ ಆದಾಯವು ಹೆಚ್ಚಳ ಆಗಿದ್ದು ಹಾಗೂ ಅನುತ್ಪಾದಕ ಸಾಲಗಳ ಪ್ರಮಾಣವು ಕಡಿಮೆ ಆಗಿದ್ದು ಲಾಭ ಏರಿಕೆಗೆ ನೆರವಾಗಿವೆ.

2022–23ರ ಡಿಸೆಂಬರ್ ತ್ರೈಮಾಸಿಕದಲ್ಲಿ ಬ್ಯಾಂಕ್ ₹ 2,882 ಕೋಟಿ ಲಾಭ ದಾಖಲಿಸಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್‌ನ ಲಾಭ ₹ 1,502 ಕೋಟಿ ಆಗಿತ್ತು.

ಬಡ್ಡಿಯಿಂದ ಸಿಗುವ ಆದಾಯವು ₹ 22,231 ಕೋಟಿಗೆ ಹೆಚ್ಚಳವಾಗಿದೆ. ಹಿಂದಿನ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಇದು ₹ 17,701 ಕೋಟಿ ಮಾತ್ರ ಆಗಿತ್ತು. ಬ್ಯಾಂಕ್‌ನ ಒಟ್ಟು ಎನ್‌ಪಿಎ ಪ್ರಮಾಣವು ಹಿಂದಿನ ವರ್ಷದ ಇದೇ ಅವಧಿಯಲ್ಲಿ ಶೇ 7.80 ಇದ್ದಿದ್ದು, ಈಗ ಶೇ 5.89ಕ್ಕೆ ಇಳಿಕೆ ಆಗಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಎಸ್‌ಬಿಐಗೆ ಮಾರಾಟ: ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಜೊತೆಗೂಡಿ ಕೆನರಾ ಬ್ಯಾಂಕ್, ರಷ್ಯಾದಲ್ಲಿ ಆರಂಭಿಸಿದ 'ಕಮರ್ಷಿಯಲ್ ಇಂಡೊ ಬ್ಯಾಂಕ್'ಅನ್ನು ₹ 114 ಕೋಟಿಗೆ ಎಸ್‌ಬಿಐಗೆ ಮಾರಾಟ ಮಾಡುತ್ತಿರುವುದಾಗಿ ಕೆನರಾ ಬ್ಯಾಂಕ್ ಹೇಳಿದೆ.

ಜಂಟಿ ಪಾಲುದಾರಿಕೆಯ ಈ ಬ್ಯಾಂಕ್ ಮಾಸ್ಕೊದಲ್ಲಿ ಇದೆ. ಇದರಲ್ಲಿ ಕೆನರಾ ಬ್ಯಾಂಕ್ ಶೇ 40ರಷ್ಟು ಪಾಲು ಹೊಂದಿದೆ. ಈಗ ಕೆನರಾ ಬ್ಯಾಂಕ್, ಷೇರು ಮಾರಾಟ ಮಾಡುವ ಬಗ್ಗೆ ಎಸ್‌ಬಿಐ ಜೊತೆ ಒಪ್ಪಂದ ಮಾಡಿಕೊಂಡಿದೆ. ವಹಿವಾಟು ಈ ವರ್ಷದ ಮಾರ್ಚ್ 31ಕ್ಕೆ ಮೊದಲು ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಎಕ್ಸಿಸ್ ಬ್ಯಾಂಕ್ ಲಾಭ ಏರಿಕೆ

ನವದೆಹಲಿ (ಪಿಟಿಐ): ಡಿಸೆಂಬರ್ ತ್ರೈಮಾಸಿಕದಲ್ಲಿ ಎಕ್ಸಿಸ್ ಬ್ಯಾಂಕ್‌ನ ಲಾಭವು ಶೇ 62ರಷ್ಟು ಹೆಚ್ಚಾಗಿದ್ದು, ₹ 5,853 ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹ 3,614 ಕೋಟಿ ಲಾಭ ಆಗಿತ್ತು.

ಬ್ಯಾಂಕ್‌ನ ಒಟ್ಟು ಆದಾಯವು ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹ 21,101 ಕೋಟಿ ಇದ್ದಿದ್ದು ಈಗ ₹ 26,892 ಕೋಟಿಗೆ ಹೆಚ್ಚಾಗಿದೆ. ಬ್ಯಾಂಕ್‌ನ ಒಟ್ಟು ಎನ್‌ಪಿಎ ಪ್ರಮಾಣವು ಶೇ 2.38ಕ್ಕೆ ಇಳಿಕೆಯಾಗಿದೆ. ಹಿಂದೆ ಇದು ಶೇ 3.17ರಷ್ಟು ಇತ್ತು.

'ಮುಂದಿನ ವರ್ಷ ವಿಶ್ವಕ್ಕೆ 5ಜಿ ತಂತ್ರಜ್ಞಾನ'

ಗಾಂಧಿನಗರ (ಪಿಟಿಐ): ದೇಶೀಯವಾಗಿ ಅಭಿವೃದ್ಧಿಪಡಿಸಿರುವ 5ಜಿ ಮತ್ತು 4ಜಿ ತಂತ್ರಜ್ಞಾನವನ್ನು ದೇಶದಲ್ಲಿ ಈ ವರ್ಷ ಬಳಕೆಗೆ ತರಲಾಗುವುದು. ಮುಂದಿನ ವರ್ಷ ಜಾಗತಿಕ ಮಾರುಕಟ್ಟೆಗೆ ನೀಡಲಾಗುವುದು ಎಂದು ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಸೋಮವಾರ ಹೇಳಿದ್ದಾರೆ.

ಬಿ20 ಇಂಡಿಯಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಐದು ದೇಶಗಳು ಮಾತ್ರ 4ಜಿ–5ಜಿ ದೂರಸಂಪರ್ಕ ತಂತ್ರಜ್ಞಾನ ಹೊಂದಿವೆ. ಇದೀಗ ಭಾರತವು ಸರ್ಕಾರಿ–ಖಾಸಗಿ ಸಹಭಾಗಿತ್ವದಲ್ಲಿ ತನ್ನದೇ ಆದ ತಂತ್ರಜ್ಞಾನ ಅಭಿವೃದ್ಧಿಪಡಿಸಿದ್ದು, ಏಕಕಾಲಕ್ಕೆ 1 ಕೋಟಿ ಕರೆಗಳನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿದೆ' ಎಂದು ಅವರು ತಿಳಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

23–1–2023

ಜಾವಾ 70/80(ಹೊಸ)	12150-12200
ಜಾವಾ 80/90(ಹೊಸ)	11150-11200
ದಪ್ಪ ಮಧ್ಯಪ್ರದೇಶ(ಹೊಸ)	10500-10550
ದಪ್ಪ ಗುಜರಾತ್(ಹೊಸ)	11600-11650

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1625 (1620)
ಒಂದು ವಾರದ ಡೆಲಿವರಿ	1615 (1615)
ಸೋಯಾ ಕಚ್ಚಾ	1130 (1130)
ಪಾಮ್ ವಾರದ ಡೆಲಿವರಿ	912 (912)
ಸೂರ್ಯಕಾಂತಿ ಎಣ್ಣೆ ಕಚ್ಚಾ	1120 (1120)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
56,700 (56,700)
ಬೆಳ್ಳಿ ಕೆ.ಜಿ 68,200 (68,200)

ಆವರಣದಲ್ಲಿ ಶನಿವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	12500-25000
ಹಳತು	48000-54500
ಹೊಸತು	22500-40000
ಚಿತ್ರದುರ್ಗ	
ಅಪಿ	46439-46869
ಬೆಟ್ಟೆ	34619-35099
ಕೆಂಪುಗೋಟು	30009-30410
ರಾಶಿ	34029-46169
ಕಾರ್ಕಳ	
ಹೊಸತು	30000-40000
ಹಳತು	40000-54500
ಕುಮಟ	
ಚಿಪ್ಪು	27809-33019
ಕೋಕ	17509-29999
ಫ್ಯಾಕ್ಟರಿ	11569-19929
ಹಳೆಚಾಲಿ	37209-40599
ಹೊಸಚಾಲಿ	34209-36666
ಸಾಗರ	
ಬಿಳಿಗೋಟು	18119-31199
ಚಾಲಿ	27569-39599
ಕೋಕ	23399-30989
ಕೆಂಪುಗೋಟು	18989-37199
ರಾಶಿ	40269-47179
ಸಿಪ್ಪೆಗೋಟು	4690-20729
ಶಿವಮೊಗ್ಗ	
ಬೆಟ್ಟೆ	47399-52100
ಗೊರಬಲು	17001-36250
ರಾಶಿ	40138-47359
ಸರಕು	45009-80106
ಸಿದ್ದಾಪುರ	
ಬಿಳಿಗೋಟು	25699-32899
ಚಾಲಿ	38699-41339
ಕೋಕ	16899-30082
ಕೆಂಪುಗೋಟು	25699-33299
ರಾಶಿ	44899-47077
ತಟ್ಟಿಬೆಟ್ಟೆ	33199-40009
ಶಿರಸಿ	
ಬೆಟ್ಟೆ	32100-44409
ಬಿಳಿಗೋಟು	23699-33939
ಚಾಲಿ	32100-42531
ಕೆಂಪುಗೋಟು	32100-36999
ರಾಶಿ	37099-46650
ಯಲ್ಲಾಪುರ	
ಬಿಳಿಗೋಟು	24899-34269
ಕೋಕ	15601-31212
ಹಳೆಚಾಲಿ	35414-41641
ಹೊಸಚಾಲಿ	30899-35199
ಕೆಂಪುಗೋಟು	25499-34815
ರಾಶಿ	45009-51699
ತಟ್ಟಿಬೆಟ್ಟೆ	36899-44889

ಶೇ 25ರವರೆಗೆ ಹೆಚ್ಚಿಸಲು ಕಂಪನಿ ಗುರಿ: ಸಚಿವ ಪೀಯೂಷ್ ಗೋಯಲ್

'ಭಾರತದಲ್ಲಿ ತಯಾರಿಕೆ ಹೆಚ್ಚಿಸಲಿದೆ ಆ್ಯಪಲ್'

ಗಾಂಧಿನಗರ (ಪಿಟಿಐ): ಆ್ಯಪಲ್ ಕಂಪನಿಯು ಭಾರತದಲ್ಲಿ ತನ್ನ ತಯಾರಿಕೆಯನ್ನು ಹೆಚ್ಚಿಸಲು ಆಲೋಚಿಸುತ್ತಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಸೋಮವಾರ ತಿಳಿಸಿದ್ದಾರೆ.

'ಆ್ಯಪಲ್ ಕಂಪನಿಯ ಒಟ್ಟು ತಯಾರಿಕೆಯಲ್ಲಿ ಸದ್ಯ ಶೇಕಡ 5ರಿಂದ ಶೇ 7ರಷ್ಟು ಭಾರತದಲ್ಲಿಯೇ ಆಗುತ್ತಿದೆ. ನಾನು ಭಾವಿಸಿರುವುದು ತಪ್ಪಿಲ್ಲ ಎಂದಾದರೆ, ಭಾರತದಲ್ಲಿನ ತಯಾರಿಕೆಯನ್ನು ಶೇ 25ರವರೆಗೆ ಹೆಚ್ಚಿಸಿಕೊಳ್ಳುವ ಗುರಿಯನ್ನು ಆ್ಯಪಲ್ ಹೊಂದಿದೆ. ಕಂಪನಿಯ ಈಚಿನ ಬಹುತೇಕ ಎಲ್ಲ ಮಾದರಿಗಳು ಭಾರತದಲ್ಲಿ ತಯಾರಾಗುತ್ತಿವೆ' ಎಂದು ಗೋಯಲ್ ಹೇಳಿದ್ದಾರೆ.

ಮುಖ್ಯಾಂಶಗಳು

- ವಹಿವಾಟು ನಡೆಸಲು ಪೂರಕ ವಾತಾವರಣ
- ವಿದೇಶಿ ಹೂಡಿಕೆಗೆ ಭಾರತ ಆದ್ಯತೆಯ ತಾಣ
- ತಯಾರಿಕಾ ವಲಯದಲ್ಲಿ ಸ್ಪರ್ಧಾತ್ಮಕತೆ

ಭಾರತದಲ್ಲಿ ವಹಿವಾಟು ನಡೆಸಲು ಪೂರಕವಾದ ವಾತಾವರಣ ಇರುವುದು ಜಾಗತಿಕ ಕಂಪನಿಗಳಿಗೆ ಇಲ್ಲಿ ತಮ್ಮ ನೆಲೆ ಸ್ಥಾಪಿಸಲು ನೆರವಾಗುತ್ತಿದೆ. ಭಾರತವು ಎಲ್ಲರಿಗೂ ಒಂದೇ ಕಾನೂನು, ಪಾರದರ್ಶಕ ನೀತಿ ಮತ್ತು ವಹಿವಾಟು ಮಾದರಿಗಳನ್ನು ನೀಡುತ್ತದೆ. ಇದರಿಂದಾಗಿ ವಿದೇಶಿ ಹೂಡಿಕೆದಾರರಿಗೆ ಬಂಡವಾಳ ತೊಡಗಿಸಲು ಭಾರತವು ಆದ್ಯತೆಯ ತಾಣವಾಗಿದೆ ಎಂದು ಅವರು ಹೇಳಿದ್ದಾರೆ

ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ) ಆಯೋಜಿಸಿದ್ದ ಬಿ20 ಇಂಡಿಯಾ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಭಾರತದಲ್ಲಿ ವಿದೇಶಿ ಕಂಪನಿಗಳ ಯಶಸ್ಸಿನ ಕುರಿತು ವಿವರಿಸಿದರು. ಅರ್ಥ್ ಮೂವರ್ಸ್ ಮಷಿನ್ ವಲಯದಲ್ಲಿನ ವಿದೇಶಿ ಕಂಪನಿಯೊಂದರ ಉದಾಹರಣೆ ನೀಡಿದ ಅವರು, 'ಭಾರತದ ತಯಾರಿಕಾ ವಲಯವು ಸ್ಪರ್ಧಾತ್ಮಕತೆಯಿಂದ ಕೂಡಿದೆ. ಈ ಕಾರಣದಿಂದಲೇ ಆ ವಿದೇಶಿ ಕಂಪನಿಯು ಭಾರತದಲ್ಲಿ ತಯಾರಿಸಿರುವ ಉತ್ಪನ್ನಗಳನ್ನು ಸ್ಪರ್ಧಾತ್ಮಕ ಬೆಲೆಗೆ 110 ದೇಶಗಳಿಗೆ ಪೂರೈಸುವಂತೆ ಆಗಿದೆ. ಹೊಸ ಉತ್ಪನ್ನಗಳನ್ನೂ ಅದು ಬಿಡುಗಡೆ ಮಾಡುತ್ತಿದೆ' ಎಂದಿದ್ದಾರೆ.

ಆ್ಯಪಲ್ ಕಂಪನಿಯ ಅತಿದೊಡ್ಡ ತಯಾರಿಕಾ ಘಟಕವು ಬೆಂಗಳೂರು ಸಮೀಪದ ಹೊಸೂರಿನಲ್ಲಿ ಸ್ಥಾಪನೆ ಆಗಲಿದ್ದು, ಅದರಿಂದ ಸುಮಾರು 60 ಸಾವಿರ ಜನರಿಗೆ ಉದ್ಯೋಗ ಸಿಗಲಿದೆ ಎಂದು ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ 2022ರ ನವೆಂಬರ್‌ನಲ್ಲಿ ಹೇಳಿದ್ದರು. ಭಾರತದಲ್ಲಿ ಫಾಕ್ಸ್‌ಕಾನ್, ವಿಸ್ಟ್ರಾನ್ ಮತ್ತು ಪೆಗಟ್ರಾನ್ ಕಂಪನಿಗಳು ಐಫೋನ್ ತಯಾರಿಕೆ ಮಾಡುತ್ತಿವೆ.

ಸೆಬಿ ಆದೇಶ ರದ್ದುಪಡಿಸಿದ ಎಸ್‌ಎಟಿ

ನವದೆಹಲಿ (ಪಿಟಿಐ): ರಾಷ್ಟ್ರೀಯ ಷೇರುಪೇಟೆಯು (ಎನ್‌ಎಸ್‌ಇ) ಕೊ–ಲೊಕೇಷನ್ ಪ್ರಕರಣದಲ್ಲಿ ಗಳಿಸಿದ ₹ 625 ಕೋಟಿ ಲಾಭವನ್ನು ಮರಳಿಸಬೇಕು ಎಂದು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ನೀಡಿದ್ದ ಆದೇಶವನ್ನು ಷೇರುಪೇಟೆ ಮೇಲ್ಮನವಿ ನ್ಯಾಯಮಂಡಳಿ (ಎಸ್‌ಎಟಿ) ರದ್ದುಪಡಿಸಿದೆ.

ಎನ್‌ಎಸ್‌ಇ ಈ ಪ್ರಕರಣದಲ್ಲಿ ಪರಿಶೀಲನೆ ಪ್ರಕ್ರಿಯೆ ಸರಿಯಾಗಿ ನಡೆಸಿಲ್ಲದ ಕಾರಣಕ್ಕೆ ಸೆಬಿಗೆ ₹ 100 ಕೋಟಿ ಪಾವತಿ ಮಾಡಬೇಕು ಎಂದು ಎಸ್‌ಎಟಿ ಆದೇಶ ಹೇಳಿದೆ.

ಎನ್‌ಎಸ್‌ಇ ಆರಂಭಿಸಿದ ಕೊ–ಲೊಕೇಷನ್ ಸೌಲಭ್ಯವು ಷೇರು ಬ್ರೋಕರ್‌ಗಳಿಗೆ ತಮ್ಮ ಸರ್ವರ್‌ಗಳನ್ನು ಷೇರುಪೇಟೆಯಲ್ಲಿ ಇರಿಸಲು ಅವಕಾಶ ಕಲ್ಪಿಸುತ್ತದೆ. ಇದರ ಮೂಲಕ ಅವರು ಕೆಲವು ಬಗೆಯ ಷೇರು ವಹಿವಾಟುಗಳಲ್ಲಿ ವಿಳಂಬವಾಗುವುದನ್ನು ತಡೆಯಬಹುದು. ಈ ಸೇವೆಯಲ್ಲಿ ಕೆಲವರಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿತ್ತು ಎಂಬ ಆರೋಪ ಇದೆ. ಸಂಬಂಧಪಟ್ಟ ಯಾವುದೇ ನಿಯಮಗಳನ್ನು ಎನ್‌ಎಸ್‌ಇ ಉಲ್ಲಂಘಿಸಿಲ್ಲ ಎಂದು ಎಸ್‌ಎಟಿ ಹೇಳಿದೆ.

₹ 3.59 ಲಕ್ಷ ಕೋಟಿ ಸಾಲ ವಿತರಣೆ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ವಿವಿಧ ಬ್ಯಾಂಕ್‌ಗಳ ಮೂಲಕ 2023–24ನೇ ಆರ್ಥಿಕ ವರ್ಷದಲ್ಲಿ ₹ 3.59 ಲಕ್ಷ ಕೋಟಿ ಮೊತ್ತದ ಸಾಲ ವಿತರಿಸುವ ಗುರಿಯನ್ನು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ನಬಾರ್ಡ್) ಹೊಂದಿದೆ.

ಈ ಬಾರಿಯೂ ಕೃಷಿ ವಲಯಕ್ಕೆ ಆದ್ಯತೆ ನೀಡಲಾಗಿದೆ. ಒಟ್ಟು ಸಾಲದ ಗುರಿಯಲ್ಲಿ ಕೃಷಿ ಮತ್ತು ಪೂರಕ ಚಟುವಟಿಕೆಗಳಿಗೆ ₹ 1.79 ಲಕ್ಷ ಕೋಟಿ ಸಾಲ ನಿಗದಿಪಡಿಸಲಾಗಿದೆ.

ಸಾಲ ವಿತರಣೆಗೆ ಸಂಬಂಧಿಸಿದಂತೆ ರಾಜ್ಯದ ಎಲ್ಲ ಜಿಲ್ಲೆಗಳ ಸಮಗ್ರ ಮಾಹಿತಿಯನ್ನು ಸಂಗ್ರಹಿಸಿ, ಅಧ್ಯಯನ ನಡೆಸಿ ನಬಾರ್ಡ್ ಸಿದ್ಧಪಡಿಸಿರುವ 'ಸ್ಟೇಟ್ ಫೋಕಸ್ ಪೇಪರ್–2023–24' ಅನ್ನು ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತ ಐ.ಎಸ್.ಎನ್. ಪ್ರಸಾದ್ ಸೋಮವಾರ ನಗರದಲ್ಲಿ ಬಿಡುಗಡೆ ಮಾಡಿದರು. ವಲಯವಾರು ಸಾಲ ನಿಗದಿಪಡಿಸಿದ ಬಗ್ಗೆ ವಿವರ ನೀಡಿದ ನಬಾರ್ಡ್ ಮುಖ್ಯ ಮಹಾಪ್ರಬಂಧಕ ಟಿ. ರಮೇಶ್, 'ರೈತರ ಆದಾಯ ವೃದ್ಧಿಸುವ ಯೋಜನೆಗಳನ್ನು ಗಮನದಲ್ಲಿರಿಸಿಕೊಂಡು ಸಾಲ ವಿತರಿಸುವ ಗುರಿಯನ್ನು ಹೆಚ್ಚಿಸಲಾಗಿದೆ' ಎಂದು ಹೇಳಿದರು.

ಗ್ರ್ಯಾಂಡ್ ವಿಟಾರಾ ಸೀಟ್ ಬೆಲ್ಟ್ ಪಟ್ಟಿಯಲ್ಲಿ ದೋಷ

ನವದೆಹಲಿ (ಪಿಟಿಐ): ಗ್ರ್ಯಾಂಡ್ ವಿಟಾರಾ ಮಾದರಿಯ 11,177 ವಾಹನಗಳನ್ನು ಹಿಂದಕ್ಕೆ ಕರೆಸಿಕೊಂಡು, ಅವುಗಳ ಹಿಂದಿನ ಆಸನದ ಸೀಟ್ ಬೆಲ್ಟ್ ಅಳವಡಿಸುವ ಪಟ್ಟಿಯಲ್ಲಿ ಲೋಪ ಇದೆಯೇ ಎಂಬುದನ್ನು ಪರಿಶೀಲಿಸಲಿದೆ.

2022ರ ಆಗಸ್ಟ್ 8ರಿಂದ ನವೆಂಬರ್ 15ರ ನಡುವೆ ತಯಾರಾದ ಕಾರುಗಳನ್ನು ಕಂಪನಿ ಹಿಂದಕ್ಕೆ ಕರೆಸಿಕೊಳ್ಳಲಿದೆ. 'ಹಿಂದಿನ ಆಸನದ ಸೀಟ್ ಬೆಲ್ಟ್ ಅಳವಡಿಸುವ ಪಟ್ಟಿಯಲ್ಲಿ ಲೋಪ ಇರಬಹುದು ಎಂಬ ಅನುಮಾನ ಇದೆ. ಈ ಲೋಪವು ದೀರ್ಘಾವಧಿಯಲ್ಲಿ ಸೀಟ್ ಬೆಲ್ಟ್‌ನ ಕಾರ್ಯದ ಮೇಲೆ ಪರಿಣಾಮ ಬೀರಬಹುದು' ಎಂದು ಕಂಪನಿಯು ಷೇರುಪೇಟೆಗೆ ನೀಡಿದ ಮಾಹಿತಿಯಲ್ಲಿ ಹೇಳಿದೆ.

ಈ ಕುರಿತು ವಾಹನದ ಮಾಲೀಕರಿಗೆ ಕಂಪನಿಯ ಡೀಲರ್‌ಗಳಿಂದ ಪ್ರತ್ಯೇಕವಾಗಿ ಸಂದೇಶ ಬರಲಿದೆ. ಕಂಪನಿಯು ಕೆಲವು ಮಾದರಿಯ ಕಾರುಗಳನ್ನು ಹಿಂದಕ್ಕೆ ಕರೆಸಿಕೊಂಡು, ಅವುಗಳ ಏರ್‌ಬ್ಯಾಗ್ ನಿಯಂತ್ರಣ ವ್ಯವಸ್ಥೆಯಲ್ಲಿ ಇರಬಹುದಾದ ದೋಷವನ್ನು ಪರಿಶೀಲಿಸಿಕೊಡುವುದಾಗಿ ಹಿಂದಿನ ವಾರ ಹೇಳಿತ್ತು.

ಬ್ಯಾಂಕ್ ಲಾಕರ್: ಪರಿಷ್ಕೃತ ಒಪ್ಪಂದ ಜಾರಿ ಅವಧಿ ವಿಸ್ತರಣೆ

ಮುಂಬೈ (ಪಿಟಿಐ): ಬ್ಯಾಂಕ್ ಲಾಕರ್ ಸೌಲಭ್ಯಕ್ಕೆ ಸಂಬಂಧಿಸಿದ ಪರಿಷ್ಕೃತ ಒಪ್ಪಂದಗಳಿಗೆ ಇನ್ನೂ ಹೆಚ್ಚಿನ ಸಂಖ್ಯೆಯ ಗ್ರಾಹಕರು ಸಹಿ ಮಾಡಿಲ್ಲ. ಹೀಗಾಗಿ ಅದನ್ನು ಜಾರಿಗೊಳಿಸುವ ಗಡುವನ್ನು ಡಿಸೆಂಬರ್ ಅಂತ್ಯದವರೆಗೆ ವಿಸ್ತರಣೆ ಮಾಡಿರುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸೋಮವಾರ ತಿಳಿಸಿದೆ.

ಆರ್‌ಬಿಐನ ಈ ಹಿಂದಿನ ಆದೇಶದ ಪ್ರಕಾರ, ಜನವರಿ 1ರಿಂದಲೇ ಜಾರಿಗೆ ಬರಬೇಕಿತ್ತು. ಆದರೆ, ಹೆಚ್ಚಿನ ಸಂಖ್ಯೆಯ ಗ್ರಾಹಕರು ಒಪ್ಪಂದಕ್ಕೆ ಇನ್ನೂ ಸಹಿ ಹಾಕಿಲ್ಲ ಎನ್ನುವುದು ತಿಳಿದುಬಂದಿದೆ.

ಪರಿಷ್ಕೃತ ಒಪ್ಪಂದಗಳಿಗೆ ಸಹಿ ಮಾಡಬೇಕು ಎಂದು ಬ್ಯಾಂಕ್‌ಗಳು ಗ್ರಾಹಕರಿಗೆ ಇನ್ನಷ್ಟೇ ಮಾಹಿತಿ ನೀಡಬೇಕಿದೆ ಎಂದು ಆರ್‌ಬಿಐ ಹೇಳಿದೆ.

ಅಕ್ರಮವಾದ ಅಥವಾ ಅಪಾಯಕಾರಿಯಾದ ಯಾವುದೇ ವಸ್ತುವನ್ನು ಲಾಕರ್‌ನಲ್ಲಿ ಇರಿಸುವುದಿಲ್ಲ ಎಂಬ ಒಪ್ಪಂದಕ್ಕೆ ಬ್ಯಾಂಕ್‌ಗಳು ಲಾಕರ್ ಸೌಲಭ್ಯ ಪಡೆಯುವವರಿಂದ ಸಹಿ ಮಾಡಿಸಿಕೊಳ್ಳಬೇಕಾಗುತ್ತದೆ. ಹೊಸ ನಿಯಮಗಳು ಈಗಾಗಲೇ ಇರುವ ಲಾಕರ್‌ಗಳಿಗೂ, ಹೊಸ ಲಾಕರ್‌ಗಳಿಗೂ ಅನ್ವಯವಾಗಲಿವೆ.

ಜೂನ್ 30ರ ಒಳಗಾಗಿ ಶೇ 50ರಷ್ಟು ಗ್ರಾಹಕರು ಮತ್ತು ಸೆಪ್ಟೆಂಬರ್ 30ರ ಒಳಗಾಗಿ ಶೇ 75ರಷ್ಟು ಗ್ರಾಹಕರು ಒಪ್ಪಂದಕ್ಕೆ ಸಹಿ ಮಾಡಿರುವಂತೆ ನೋಡಿಕೊಳ್ಳಿ ಎಂದು ಬ್ಯಾಂಕ್‌ಗಳಿಗೆ ಆರ್‌ಬಿಐ ಸೂಚನೆ ನೀಡಿದೆ.

ಒಪ್ಪಂದಕ್ಕೆ ಸಹಿ ಮಾಡಿಲ್ಲ ಎನ್ನುವ ಕಾರಣಕ್ಕೆ ಒಂದೊಮ್ಮೆ ಲಾಕರ್ ಸೌಲಭ್ಯ ಸ್ಥಗಿಗೊಳಿಸಿದ್ದರೆ, ತಕ್ಷಣವೇ ಬಳಕೆಗೆ ಲಭ್ಯವಾಗುವಂತೆ ಮಾಡಿ ಎಂದೂ ಹೇಳಿದೆ.

ಪರಿಷ್ಕೃತ ನಿಯಮಗಳ ಪ್ರಕಾರ, ಅಗ್ನಿ ಅನಾಹುತ, ಕಳ್ಳತನ, ಕಟ್ಟಡ ಕುಸಿತ ಅಥವಾ ಬ್ಯಾಂಕ್‌ನ ಸಿಬ್ಬಂದಿಯಿಂದ ವಂಚನೆ ನಡೆದಲ್ಲಿ ಬ್ಯಾಂಕ್‌ಗಳು ಭರಿಸಬೇಕಾದ ಮೊತ್ತವು ಲಾಕರ್‌ನ ವಾರ್ಷಿಕ ಬಾಡಿಗೆ ಮೊತ್ತದ ನೂರು ಪಟ್ಟು ಮೊತ್ತಕ್ಕೆ ಸೀಮಿತ ಆಗಲಿದೆ.

ಉಕ್ರೇನ್ ಅಣುಸ್ಥಾವರಗಳಲ್ಲಿ ಶಸ್ತ್ರಾಸ್ತ್ರ ಸಂಗ್ರಹ: ರಷ್ಯಾ

ಕೀವ್/ಮಾಸ್ಕೊ (ರಾಯಿಟರ್ಸ್): ಪಾಶ್ಚಿಮಾತ್ಯ ರಾಷ್ಟ್ರಗಳು ಪೂರೈಸಿರುವ ಶಸ್ತ್ರಾಸ್ತ್ರಗಳನ್ನು ಉಕ್ರೇನ್ ದೇಶದಾದ್ಯಂತ ಅಣುಸ್ಥಾವರಗಳಲ್ಲಿ ಸಂಗ್ರಹಿಸಿಟ್ಟುಕೊಂಡಿದೆ ಎಂದು ರಷ್ಯಾದ ವಿದೇಶಿ ಗುಪ್ತಚರ ಸೇವೆ (ಎಸ್‌ವಿಆರ್) ಸೋಮವಾರ ಹೇಳಿದೆ.

'ಅಮೆರಿಕ ಪೂರೈಸಿರುವ ಹಿಮಾರ್ಸ್ ರಾಕೆಟ್ ಲಾಂಚರ್‌ಗಳು, ವಾಯು ರಕ್ಷಣಾ ವ್ಯವಸ್ಥೆಗಳು ಮತ್ತು ಫಿರಂಗಿ, ಮದ್ದುಗುಂಡುಗಳನ್ನು ಉಕ್ರೇನ್‌ನ ವಾಯವ್ಯದ ರಿವ್ನೆ ಅಣು ವಿದ್ಯುತ್ ಸ್ಥಾವರದಲ್ಲಿ ಉಕ್ರೇನ್ ಸೇನೆ ಸಂಗ್ರಹಿಸಿಟ್ಟುಕೊಂಡಿದೆ. ಈ ಸ್ಥಾವರಕ್ಕೆ ಡಿಸೆಂಬರ್ ಕೊನೆಯ ವಾರದಲ್ಲಿ ಶಸ್ತ್ರಾಸ್ತ್ರ ಪೂರೈಕೆಯಾಗಿದೆ' ಎಂದು ಎಸ್‌ವಿಆರ್ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಉಕ್ರೇನ್ ಸಂಘರ್ಷದ ಪ್ರಾರಂಭದಿಂದಲೂ ದೇಶದ ಅಣು ಸ್ಥಾವರಗಳನ್ನು ಹಿಡಿತಕ್ಕೆ ತೆಗೆದುಕೊಳ್ಳಲು ರಷ್ಯಾ ಪಡೆಗಳು ಗಮನ ಕೇಂದ್ರೀಕರಿಸಿವೆ. ಆಕ್ರಮಣ ಆರಂಭಿಸಿದ 48 ಗಂಟೆಗಳ ನಂತರ ರಷ್ಯಾ ಪಡೆಗಳು ನಿಷ್ಕ್ರಿಯವಾಗಿರುವ ಚರ್ನೊಬಿಲ್ ಅಣು ವಿದ್ಯುತ್ ಸ್ಥಾವರ ವಶಪಡಿಸಿಕೊಂಡವು. ನಂತರದ ದಿನಗಳಲ್ಲಿ ಯುರೋಪಿನ ಅತಿದೊಡ್ಡ ಝಪೊರಿಝಿಯಾ ಅಣು ಸ್ಥಾವರವನ್ನು ಸಹ ರಷ್ಯಾ ಸೇನೆ ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿತ್ತು. ಝಪೊರಿಝಿಯಾ ಅಣುಸ್ಥಾವರದ ಮೇಲೆ ಶೆಲ್ ದಾಳಿ ನಡೆದಿದೆ ಎಂದು ಉಭಯ ರಾಷ್ಟ್ರಗಳು ಪರಸ್ಪರ ಆರೋಪಿಸುತ್ತಿವೆ. ಈ ಅಣು ಸ್ಥಾವರವನ್ನು ರಷ್ಯಾ ಶಸ್ತ್ರಾಸ್ತ್ರಗಳ ಗೋದಾಮು ಮಾಡಿಕೊಂಡಿದೆ ಎನ್ನುವುದು ಉಕ್ರೇನ್‌ನ ಗಂಭೀರ ಆರೋಪ. ವಿಶ್ವಸಂಸ್ಥೆಯ ಅಣುಶಕ್ತಿ ಕಾವಲು ಸಂಸ್ಥೆ ಐಎಇಎ, ಅಣು ಸ್ಥಾವರಗಳ ಮೇಲಿನ ದಾಳಿಯ ಬಗ್ಗೆ ಕಳವಳ ವ್ಯಕ್ತಪಡಿಸಿದೆ. ಅಣು ದುರಂತ ಅಪಾಯದ ಬಗ್ಗೆ ಎಚ್ಚರಿಕೆಯನ್ನೂ ನೀಡಿದೆ. ಅಣು ಸ್ಥಾವರಗಳನ್ನು ನಿಶ್ಶಸ್ತ್ರೀಕರಣ ವಲಯವಾಗಿಸಲು ಒತ್ತಾಯಿಸಿದೆ.

> **ಉಕ್ರೇನ್ ಸಂಘರ್ಷ ಇನ್ನು ಮುಂದೆ 'ಹೈಬ್ರಿಡ್ ಯುದ್ಧ' ಅಲ್ಲ. ಶತಕೋಟಿ ಡಾಲರ್ ಮೌಲ್ಯದ ಶಸ್ತ್ರಾಸ್ತ್ರಗಳನ್ನು ಪಶ್ಚಿಮದ ರಾಷ್ಟ್ರ ಪೂರೈಸಿರುವುದರಿಂದ ನೈಜ ಯುದ್ಧ**
> **ಸೆರ್ಗೀ ಲಾವ್ರೊವ್,** ರಷ್ಯಾ ವಿದೇಶಾಂಗ ಸಚಿವ

ಉಕ್ರೇನ್‌ಗೆ ಲಿಯೊಪರ್ಡ್ ಟ್ಯಾಂಕರ್ ನೆರವು

ವಾರ್ಸಾ(ಪೋಲೆಂಡ್): ಉಕ್ರೇನ್‌ಗೆ ನೂತನ ಲಿಯೊಪರ್ಡ್ ಟ್ಯಾಂಕರ್‌ಗಳನ್ನು ಕಳುಹಿಸಲು ಪೋಲೆಂಡ್ ದೇಶವು ಜರ್ಮನಿಯ ಅನುಮತಿ ಕೋರಲಿದೆ ಎಂದು ಪ್ರಧಾನಿ ಮೇಟಸ್ಜ್ ಮೊರಾವಿಕಿ ಅವರು ಸೋಮವಾರ ತಿಳಿಸಿದರು.

ಈ ಸಂಬಂಧ ಯಾವಾಗ ಮನವಿ ಸಲ್ಲಿಸಲಾಗುವುದು ಎಂದು ನಿರ್ದಿಷ್ಟವಾಗಿ ತಿಳಿಸಲಿಲ್ಲ. 'ರಾಷ್ಟ್ರಗಳ ಜೊತೆಗೆ ಮೈತ್ರಿ ಸಾಧಿಸ ಬಯಸುತ್ತಿರುವ ಪೋಲೆಂಡ್ ಟ್ಯಾಂಕರ್ ಕಳುಹಿಸಲು ಸಿದ್ಧವಿದೆ. ಒಂದು ವೇಳೆ ಜರ್ಮನಿ ಅನುಮತಿ ನೀಡದೇ ಇದ್ದರೂ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳಲಾಗುವುದು' ಎಂದು ತಿಳಿಸಿದರು.

ಟಿ.ವಿ ವಾಹಿನಿ ಜೊತೆಗೆ ಮಾತನಾಡಿದ ಜರ್ಮನಿಯ ವಿದೇಶಾಂಗ ಸಚಿವ ಅನ್ನಲೆನಾ ಬೆರ್ಬಾಕ್, ಪೋಲೆಂಡ್ ಇನ್ನೂ ಔಪಚಾರಿಕವಾಗಿ ಅನುಮತಿ ಕೋರಿಲ್ಲ. ಕೇಳಿದರೂ ಈ ವಿಷಯದಲ್ಲಿ ಮಧ್ಯಪ್ರವೇಶಿಸುವುದಿಲ್ಲ' ಎಂದರು.

ಕರಾಚಿಯ ಶಾಲೆಯೊಂದರಲ್ಲಿ ಟಾರ್ಚ್ ಬೆಳಕಿನಲ್ಲಿ ಶಿಕ್ಷಕರು ಮಕ್ಕಳಿಗೆ ಪಾಠ ಮಾಡಿದರು –ಎಎಫ್‌ಪಿ ಚಿತ್ರ

ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಕಗ್ಗತ್ತಲಲ್ಲಿ ಮುಳುಗಿದ ಪಾಕಿಸ್ತಾನ

ಇಸ್ಲಾಮಾಬಾದ್ (ರಾಯಿಟರ್ಸ್): ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿರುವ ಪಾಕಿಸ್ತಾನದಲ್ಲಿ ಸೋಮವಾರ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದು, ಕರಾಚಿ, ಲಾಹೋರ್, ಪೇಶಾವರ ಸೇರಿದಂತೆ ಪ್ರಮುಖ ನಗರಗಳಲ್ಲಿ ವಿದ್ಯುತ್ ಪೂರೈಕೆ ಸ್ಥಗಿತಗೊಂಡಿದೆ.

ಪ್ರಾಥಮಿಕ ಮಾಹಿತಿ ಪ್ರಕಾರ, ಬೆಳಿಗ್ಗೆ 7.30ರ (ಸ್ಥಳೀಯ ಸಮಯ) ಹೊತ್ತಿಗೆ ರಾಷ್ಟ್ರೀಯ ಗ್ರಿಡ್‌ನಲ್ಲಿ ದೋಷ ಕಾಣಿಸಿಕೊಂಡ ಕಾರಣ ವಿದ್ಯುತ್ ಪೂರೈಕೆ ಸ್ಥಗಿತಗೊಂಡು ಇಡೀ ದೇಶ ಕಗ್ಗತ್ತಲ್ಲಲ್ಲಿ ಕಾಲ ಕಳೆಯುವಂತಾಗಿದೆ.

'ವಿದ್ಯುತ್ ಸೌಲಭ್ಯವನ್ನು ಮರಳಿ ನೀಡಲು ತ್ವರಿತವಾಗಿ ದುರಸ್ಥಿ ಕಾರ್ಯ ಮಾಡಲಾಗುತ್ತಿದೆ' ಎಂದು ಇಂಧನ ಸಚಿವ ಖುರ್ರಮ್ ದಸ್ತಗಿರ್ ಖಾನ್ ಅವರು ವಿಡಿಯೊ ಹೇಳಿಕೆಯಲ್ಲಿ ತಿಳಿಸಿದ್ದಾರೆ. 'ಘಟಕಗಳು ಮುಂಜಾನೆ ಕಾರ್ಯಾರಂಭಿಸಿದ ಬಳಿಕ ರಾಷ್ಟ್ರೀಯ ಗ್ರಿಡ್‌ನ ವಿದ್ಯುತ್ ಹರಿವಿನಲ್ಲಿ ಸಮಸ್ಯೆ ಉಂಟಾಗಿದೆ.

ಇಂಧನ ಉಳಿಸುವ ಉದ್ದೇಶದಿಂದ ರಾತ್ರಿ ಉತ್ಪಾದನಾ ಘಟಕಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗುತ್ತಿದೆ' ಎಂದು ಖಾನ್ ಮಾಧ್ಯಮಗಳಿಗೆ ತಿಳಿಸಿದರು.

ಪಾಕಿಸ್ತಾನದಲ್ಲಿ ವಿದ್ಯುತ್ ಕಡಿತ ಸಾಮಾನ್ಯ. ಹೀಗಾಗಿಯೇ ಇಲ್ಲಿನ ಆಸ್ಪತ್ರೆಗಳು, ಕಾರ್ಖಾನೆಗಳು ಮತ್ತು ಸರ್ಕಾರಿ ಸಂಸ್ಥೆಗಳು ಜನರೇಟರ್‌ಗಳನ್ನು ಹೊಂದಿವೆ.

ಆಸ್ಟ್ರೇಲಿಯಾ ಓಪನ್ ಟೆನಿಸ್: ರುಬ್ಲೆವ್ ಮುನ್ನಡೆ

ಎಂಟರಘಟ್ಟಕ್ಕೆ ಜೊಕೊವಿಚ್, ಸಬಲೆಂಕಾ

ಮೆಲ್ಬರ್ನ್ (ಎಎಫ್‌ಪಿ): ಸುಲಭ ಗೆಲುವು ಸಾಧಿಸಿದ ಸರ್ಬಿಯಾದ ನೊವಾಕ್ ಜೊಕೊವಿಚ್ ಮತ್ತು ಬೆಲಾರಸ್‌ನ ಅರಿನಾ ಸಬಲೆಂಕಾ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಕ್ರಮವಾಗಿ ಪುರುಷರ ಸಿಂಗಲ್ಸ್ ಮತ್ತು ಮಹಿಳಾ ಸಿಂಗಲ್ಸ್ ವಿಭಾಗಗಳಲ್ಲಿ ಕ್ವಾರ್ಟರ್‌ಫೈನಲ್ ತಲುಪಿದ್ದಾರೆ.

22ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ನಿರೀಕ್ಷೆಯಲ್ಲಿರುವ ಜೊಕೊವಿಚ್ ಪ್ರೀಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ 6-2, 6-1, 6-2ರಿಂದ ಆಸ್ಟ್ರೇಲಿಯಾದ ಅಲೆಕ್ಸ್ ಡಿ ಮಿನೌರ್ ಅವರನ್ನು ಪರಾಭವಗೊಳಿಸಿದರು.

ಆಸ್ಟ್ರೇಲಿಯಾ ಓಪನ್ ಟೂರ್ನಿಯಲ್ಲಿ 10ನೇ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಜೊಕೊವಿಚ್, ಎಂಟರಘಟ್ಟದಲ್ಲಿ ರಷ್ಯಾದ ಆ್ಯಂಡ್ರೆ ರುಬ್ಲೆವ್ ಅವರನ್ನು ಎದುರಿಸುವರು. ಮತ್ತೊಂದು ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ರುಬ್ಲೆವ್ 6-3, 3-6, 6-3, 4-6, 7-6 (11/9) ರಿಂದ ಡೆನ್ಮಾರ್ಕ್‌ನ ಹೋಲ್ಗರ್ ರೂನ್ ಅವರನ್ನು ಪರಾಭವಗೊಳಿಸಿದರು.

ಪುರುಷರ ಸಿಂಗಲ್ಸ್ ವಿಭಾಗದ ಇನ್ನುಳಿದ ಪ್ರೀಕ್ವಾರ್ಟರ್ ಹಣಾಹಣಿಗಳಲ್ಲಿ ಅಮೆರಿಕದ ಬೆನ್ ಶೆಲ್ಟನ್ 6-7 (5/7), 6-2, 6-7 (4/7), 7-6 (7/4), 6-2ರಿಂದ ತಮ್ಮದೇ ದೇಶದ ಜೆಜೆ ವೂಲ್ಫ್ ವಿರುದ್ಧ ಗೆದ್ದರು. ಈ ಮೂಲಕ 20 ವರ್ಷಗಳಲ್ಲಿ ಪದಾರ್ಪಣೆಯಲ್ಲೇ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದ ಮೊದಲ ಆಟಗಾರ ಎನಿಸಿಕೊಂಡರು.

ಅಮೆರಿಕದ ಟಾಮಿ ಪೌಲ್ 6-2, 4-6, 6-2, 7-5ರಿಂದ ಸ್ಪೇನ್‌ನ ರಾಬರ್ಟೊ ಬೌಟಿಸ್ಟಾ ಅಗುಟ್ ಅವರಿಗೆ ಆಘಾತ ನೀಡಿದರು.

ಸಬಲೆಂಕಾ ಜಯಭೇರಿ: ಮೊದಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಬೆನ್ನತ್ತಿರುವ ಸಬಲೆಂಕಾ ಅವರು ಪ್ರೀಕ್ವಾರ್ಟರ್ ಫೈನಲ್‌ನಲ್ಲಿ 7-5, 6-2ರಿಂದ 12ನೇ ಶ್ರೇಯಾಂಕದ, ಸ್ವಿಟ್ಜರ್ಲೆಂಡ್ ಆಟಗಾರ್ತಿ ಬೆಲಿಂದಾ ಬೆನ್ಸಿಚ್ ಅವರನ್ನು ಪರಾಭವಗೊಳಿಸಿದರು. ಅವರಿಗೆ ಎಂಟರಘಟ್ಟದಲ್ಲಿ ಡೊನ್ನಾ ವೆಕಿಕ್ ಸವಾಲು ಎದುರಾಗಿದೆ.

ಕ್ರೊವೇಷ್ಯಾದ 17 ವರ್ಷದ ಡೊನ್ನಾ, 16ರ ಘಟ್ಟದ ಹಣಾಹಣಿಯಲ್ಲಿ 6-2, 1-6, 6-3ರಿಂದ ಜೆಕ್ ಗಣರಾಜ್ಯದ ಲಿಂಡಾ ಫ್ರುಹ್‌ವಿರ್ಟೊವಾ ಎದುರು ಗೆದ್ದರು.

ಗಾರ್ಸಿಯಾಗೆ ಆಘಾತ: ಮಹಿಳಾ ಸಿಂಗಲ್ಸ್ ಮತ್ತೊಂದು ಪ್ರೀಕ್ವಾರ್ಟರ್ ಫೈನಲ್‌ನಲ್ಲಿ 4ನೇ ಶ್ರೇಯಾಂಕದ ಆಟಗಾರ್ತಿ ಫ್ರಾನ್ಸ್‌ನ ಕ್ಯಾರೊಲಿನ್ ಗಾರ್ಸಿಯಾ ಆಘಾತ ಅನುಭವಿಸಿದರು. ಪೋಲೆಂಡ್‌ನ ಮ್ಯಾಗ್ಡಾ ಲಿನೆಟ್ 7-6 (7/3), 6-4ರಿಂದ ಕ್ಯಾರೊಲಿನ್ ಅವರನ್ನು ಸೋಲಿಸಿದರು.

ಮತ್ತೊಂದು ಪಂದ್ಯದಲ್ಲಿ ಜೆಕ್ ಗಣರಾಜ್ಯದ ಕರೋಲಿನಾ ಪ್ಲಿಸ್ಕೊವಾ 6-0, 6-4ರಿಂದ ಚೀನಾದ ಜಾಂಗ್ ಶುಯಿ ಮೇಲೆ ಸುಲಭ ಗೆಲುವು ಸಾಧಿಸಿ ಎಂಟರಘಟ್ಟ ತಲುಪಿದರು.

ಪಂದ್ಯ ಗೆದ್ದ ಅರಿನಾ ಸಬಲೆಂಕಾ ಸಂಭ್ರಮ– ಎಎಫ್‌ಪಿ ಚಿತ್ರ

ಸಿಬ್ಬಂದಿ ಕಡಿತ: ಐ.ಟಿ ಕ್ಷೇತ್ರದ ವೃತ್ತಿಪರರು ಅತಂತ್ರ

ಒಂದನೇ ಪುಟದಿಂದ

ಭಾರತದ ಉದ್ಯೋಗಿಗಳ ಪೈಕಿ ಗಣನೀಯ ಸಂಖ್ಯೆಯ ಉದ್ಯೋಗಿಗಳು ವಲಸಿಗಯೇತರ ಕಾರ್ಯಕ್ಷೇತ್ರದಲ್ಲಿ ಎಚ್‌–1ಬಿ ಮತ್ತು ಎಲ್1 ವೀಸಾ ಆಧರಿಸಿ ಅಮೆರಿಕದಲ್ಲಿ ನೆಲೆಸಿದ್ದಾರೆ. ಈಗ ಅವರ ವೀಸಾ ಊರ್ಜಿತವಾಗಿ ಇರಬೇಕಾದರೆ ನಿಗದಿತ ಗಡುವಿನ ಒಳಗೆ ಹೊಸ ಕೆಲಸ ಹುಡುಕಿಕೊಳ್ಳಬೇಕಿದೆ.

ಅಮೆಜಾನ್‌ನಲ್ಲಿದ್ದು ಕೆಲಸ ಕಳೆದುಕೊಂಡಿರುವ ಯುವತಿಯೊಬ್ಬರು, 'ಮೂರು ತಿಂಗಳ ಹಿಂದೆ ಅಮೆರಿಕಕ್ಕೆ ಬಂದಿದ್ದೆ. ಮಾರ್ಚ್ 20 ನಿಮ್ಮ ಕೆಲಸದ ಕೊನೆಯ ದಿನ ಎಂದು ತಿಳಿಸಿದ್ದಾರೆ. ಏನು ಮಾಡಲಿ?' ಎಂದು ಅಳಲು ತೋಡಿಕೊಂಡರು.

ಎಚ್ –1ಬಿ ವೀಸಾ ಹೊಂದಿದವರ ಸ್ಥಿತಿ ಹೆಚ್ಚು ಶೋಚನೀಯವಾಗಿದೆ. 60 ದಿನದಲ್ಲಿ ಕೆಲಸ ಹುಡುಕಿಕೊಳ್ಳಲೇಬೇಕಾದ ಅನಿವಾರ್ಯತೆಯಿದೆ. ಈ ಅವಧಿಯಲ್ಲಿ ಕೆಲಸ ಸಿಗದಿದ್ದರೆ ಭಾರತಕ್ಕೆ ವಾಪಸಾಗದೆ ಬೇರೆ ದಾರಿಯೇ ಇಲ್ಲ.

ಬಹುತೇಕ ಐ.ಟಿ. ಕಂಪನಿಗಳು ಸಿಬ್ಬಂದಿ ಸಂಖ್ಯೆ ಕಡಿತಗೊಳಿಸುವುದಕ್ಕೆ ಈಗ ಹೆಚ್ಚು ಒತ್ತು ನೀಡಿವೆ. ಈಗಿನ ಸಂದರ್ಭದಲ್ಲಿ, ಅಲ್ಪಾವಧಿಯಲ್ಲಿ ಹೊಸ ಕೆಲಸ ಸಿಗುವುದು ಕಷ್ಟಕರ ಎಂಬುದು ಹೆಚ್ಚಿನವರ ಅಭಿಮತ.

'ನಾನು ಜ.18ರಂದು ಕೆಲಸ ಕಳೆದುಕೊಂಡಿದ್ದು ಪರಿಸ್ಥಿತಿ ಗಂಭೀರವಾಗಿದೆ. ಮಗ ಪ್ರೌಢಶಾಲೆಯಲ್ಲಿದ್ದು, ಕಾಲೇಜಿಗೆ ಸೇರಿಸಬೇಕಿದೆ ಎನ್ನುತ್ತಾರೆ' ಮೈಕ್ರೋಸಾಫ್ಟ್‌ನಲ್ಲಿದ್ದು ಕೆಲಸ ಕಳೆದುಕೊಂಡಿರುವ ಮತ್ತೊಬ್ಬ ಗೃಹಿಣಿ.

ಎಚ್‌–1ಬಿ ವೀಸಾ ಹೊಂದಿದ್ದ ಹೆಚ್ಚಿನವರು ಕೆಲಸ ಕಳೆದುಕೊಳ್ಳುತ್ತಿರುವುದು ದುರದೃಷ್ಟಕರ. ಇದರಿಂದ ಕುಟುಂಬ, ಮಕ್ಕಳ ಶಿಕ್ಷಣದ ಮೇಲೆ ಬೀರುತ್ತಿದೆ. ಉದ್ಯಮಿ ಅಜಯ್ ಜೈನ್ ಭುಟೋರಿಯ.

ತಾಂತ್ರಿಕ ಕ್ಷೇತ್ರದಲ್ಲಿ ದೊಡ್ಡಮಟ್ಟದ ಉದ್ಯೋಗಿಗಳ ಕಡಿತದಿಂದಾಗಿ 2023ರ ಜನವರಿ ತಿಂಗಳು ವೃತ್ತಿಪರರಿಗೆ ಕ್ರೂರವಾಗಿದೆ. ಅನೇಕ ಪ್ರತಿಭಾನ್ವಿತರು ಕೆಲಸ ಕಳೆದುಕೊಂಡಿದ್ದಾರೆ. ತಾಂತ್ರಿಕ ಕ್ಷೇತ್ರವು ಬಹುತೇಕ ಭಾರತೀಯರನ್ನೇ ಅವಲಂಬಿಸಿರುವ ಕಾರಣ, ಇದರ ಪರಿಣಾಮ ಅವರ ಮೇಲೆಯೇ ಬೀರುತ್ತಿದೆ ಎಂದು ಹೇಳಿದರು.

ಬಿಬಿಸಿ ಸಾಕ್ಷ್ಯಚಿತ್ರ: ತನಿಖೆಗೆ ಒತ್ತಾಯ

ಲಂಡನ್ (ಪಿಟಿಐ): ಭಾರತದ ಪ್ರಧಾನಿ ನರೇಂದ್ರ ಮೋದಿ ಬಗ್ಗೆ ವಿವಾದಾತ್ಮಕ ಸಾಕ್ಷ್ಯ ಚಿತ್ರ ನಿರ್ಮಿಸಿರುವ ಬ್ರಿಟನ್‌ನ ಬ್ರಿಟಿಷ್ ಬ್ರಾಡ್ ಕಾಸ್ಟಿಂಗ್ ಕಾರ್ಪೊರೇಶನ್ (ಬಿಬಿಸಿ) ವಿರುದ್ಧ ಸ್ವತಂತ್ರ ತನಿಖೆ ನಡೆಯಬೇಕು ಎಂದು ಒತ್ತಾಯಿಸಿ ಆನ್‌ಲೈನ್‌ನಲ್ಲಿ ಅರ್ಜಿಯೊಂದು ಸಲ್ಲಿಕೆಯಾಗಿದೆ.

ಮೋದಿ ಅವರ ಬಗ್ಗೆ ನಿರ್ಮಿಸಿರುವ ಸಾಕ್ಷ್ಯಚಿತ್ರದಲ್ಲಿ 'ನಿಷ್ಪಕ್ಷಪಾತ ಸಂಪಾದಕೀಯ'ದ ಮಾನದಂಡಗಳನ್ನು ಪಾಲಿಸುವಲ್ಲಿ ಬಿಬಿಸಿ ವಿಫಲವಾಗಿದೆ. ಇದು ಖಂಡನೀಯ. ಬಿಬಿಸಿ ವಿರುದ್ಧ ಸ್ವತಂತ್ರ ತನಿಖೆಯಾಗಬೇಕು' ಎಂದು 'ಚೇಂಜ್. ಆರ್ಗ್' ಹೆಸರಿನಲ್ಲಿ ಭಾನುವಾರ ರಾತ್ರಿ ಆನ್‌ಲೈನ್‌ನಲ್ಲಿ ಸಲ್ಲಿಕೆಯಾಗಿರುವ 2,500ಕ್ಕೂ ಹೆಚ್ಚು ಜನರ ಸಹಿ ಇರುವ ಅರ್ಜಿಯಲ್ಲಿ ಒತ್ತಾಯಿಸಲಾಗಿದೆ.

'ಇಂಡಿಯಾ: ದಿ ಮೋದಿ ಕ್ವೆಶ್ಚನ್' ಹೆಸರಿನ ಸಾಕ್ಷ್ಯಚಿತ್ರದ ಮೊದಲ ಭಾಗ ಕಳೆದ ವಾರ ಪ್ರಸಾರವಾಗಿದ್ದು, ಎರಡನೇ ಭಾಗ ಮಂಗಳವಾರ ಪ್ರಸಾರವಾಗಲಿದೆ. ಇದರಲ್ಲೂ ನಿಷ್ಪಕ್ಷಪಾತ ಸಂಪಾದಕೀಯದ ಅತ್ಯುನ್ನತ ಮಾನದಂಡಗಳನ್ನು ಪಾಲಿಸಿಲ್ಲ. 'ಇದು ಬಿಬಿಸಿಯು ತನ್ನ ವೀಕ್ಷಕರಿಗೆ ಉದ್ದೇಶಪೂರ್ವಕವಾಗಿ ತಪ್ಪು ಮಾಹಿತಿ ನೀಡುವ ಕುಟಿಲ ಪ್ರಚಾರದ ಪತ್ರಿಕೋದ್ಯಮ' ಎಂದು ಅರ್ಜಿಯಲ್ಲಿ ಟೀಕಿಸಲಾಗಿದೆ.

ಅರ್ಜಿಯಲ್ಲಿ ಸಹಿ ಮಾಡಿರುವ ಹಲವರು ಇದೇ ರೀತಿಯ ಭಾವನೆಗಳನ್ನು ವ್ಯಕ್ತಪಡಿಸಿದ್ದು, ಈ ಸಾಕ್ಷ್ಯಚಿತ್ರ ಸಂಪೂರ್ಣ ಅಪಪ್ರಚಾರ ಮತ್ತು ದುರುದ್ದೇಶಪೂರಿತ ಕಾರ್ಯಸೂಚಿಯಿಂದ ಕೂಡಿದೆ. ಬಿಬಿಸಿಯ ಈ ನಡೆ ಖಂಡನೀಯ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಆಸ್ಟ್ರೇಲಿಯಾ: ಮತ್ತೊಂದು ಹಿಂದೂ ದೇಗುಲ ಧ್ವಂಸ

ಮೆಲ್ಬರ್ನ್ (ಪಿಟಿಐ): ಖಾಲಿಸ್ತಾನ ಬೆಂಬಲಿಗರು ಆಸ್ಟ್ರೇಲಿಯಾದ ವಿಕ್ಟೋರಿಯಾ ರಾಜ್ಯದಲ್ಲಿ ಮತ್ತೊಂದು ಹಿಂದೂ ದೇಗುಲವನ್ನು ಧ್ವಂಸ ಮಾಡಿದ್ದಾರೆ. 15 ದಿನಗಳಲ್ಲಿ ಮೂರು ದೇಗುಲಗಳು ದುಷ್ಕರ್ಮಿಗಳಿಂದ ಭಗ್ನಗೊಂಡಿವೆ ಎಂದು ಮಾಧ್ಯಮವೊಂದು ಸೋಮವಾರ ವರದಿ ಮಾಡಿದೆ.

ಇಲ್ಲಿನ ಅಲ್ಬರ್ಟ್ ಪಾರ್ಕ್‌ನಲ್ಲಿರುವ ಇಸ್ಕಾನ್ ದೇಗುಲದ ಗೋಡೆಗಳನ್ನು ಕೆಡವಿ, 'ಹಿಂದೂಸ್ತಾನ್ ಮುರ್ದಾಬಾದ್' ಘೋಷಣೆ ಬರೆಯಲಾಗಿದೆ ಎಂದು 'ದಿ ಆಸ್ಟ್ರೇಲಿಯಾ ಟುಡೇ' ಮಾಧ್ಯಮ ವರದಿ ಮಾಡಿದೆ.

'ಘಟನೆಗೆ ಸಂಬಂಧಿಸಿ ವಿಕ್ಟೋರಿಯಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಟರ್ಕಿಯೆ: ಮೇ 14ರಂದು ಸಂಸತ್ ಚುನಾವಣೆ

ಇಸ್ತಾನ್‌ಬುಲ್(ಎ.ಪಿ): ಟರ್ಕಿಯೆ ದೇಶದ ಸಂಸತ್ತಿಗೆ ಹಾಗೂ ನೂತನ ಅಧ್ಯಕ್ಷರ ಆಯ್ಕೆಗೆ ಮೇ 14ರಂದು ಚುನಾವಣೆ ನಡೆಯಲಿದೆ ಎಂದು ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೊಗನ್ ಹೇಳಿದ್ದಾರೆ. ಬುರ್ಸಾ ಪ್ರಾಂತ್ಯದಲ್ಲಿ ಅವರು ಈ ಘೋಷಣೆ ಮಾಡಿದರು.

ಬ್ಯಾಸ್ಕೆಟ್‌ಬಾಲ್: ಕ್ವಾರ್ಟರ್ ಫೈನಲ್‌ಗೆ ಕರ್ನಾಟಕ ತಂಡ

ಬೆಂಗಳೂರು: ಕರ್ನಾಟಕದ ಬಾಲಕರ ತಂಡದವರು ಇಲ್ಲಿ ನಡೆಯುತ್ತಿರುವ 72ನೇ ರಾಷ್ಟ್ರೀಯ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಆದರೆ ಮಹಿಳಾ ತಂಡದವರು ಮುಂದಿನ ಹಂತ ಪ್ರವೇಶಿಸಲು ವಿಫಲರಾದರು.

ಕಂಠೀರವ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಕೊನೆಯ ಲೀಗ್ ಪಂದ್ಯದಲ್ಲಿ ಆತಿಥೇಯ ತಂಡ 83–80 ರಲ್ಲಿ ಪಂಜಾಬ್ ತಂಡವನ್ನು ಮಣಿಸಿತು. ಎನ್.ಎಂ. ವಿಷ್ಣು (23 ಪಾಯಿಂಟ್ಸ್) ಮತ್ತು ನಿತಿನ್ ಕುಮಾರ್ (20 ಪಾಯಿಂಟ್ಸ್) ಅವರು ಕರ್ನಾಟಕದ ರೋಚಕ ಗೆಲುವಿಗೆ ಕಾರಣರಾದರು. ಪಂಜಾಬ್ ತಂಡಕ್ಕೆ ಹರ್ಮನ್‌ಜೋತ್ 28 ಮತ್ತು ಶಾನು ಪ್ರತಾಪ್ 21 ಪಾಯಿಂಟ್ಸ್ ತಂದಿತ್ತರು.

ಕೊನೆಯ ಪಂದ್ಯದಲ್ಲಿ ಸೋತರೂ ಪಂಜಾಬ್ ತಂಡ ಕ್ವಾರ್ಟರ್ ಫೈನಲ್ ಪ್ರವೇಶಿಸಿತು. ಬಾಲಕರ ವಿಭಾಗದಲ್ಲಿ ತಮಿಳುನಾಡು, ರಾಜಸ್ಥಾನ, ಚಂಡೀಗಢ, ಮಿಜೋರಾಂ, ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶ ತಂಡಗಳೂ ಮುಂದಿನ ಹಂತಕ್ಕೆ ಲಗ್ಗೆಯಿಟ್ಟವು.

ಕರ್ನಾಟಕದ ನಿಹಾಲ್ (ಬಲ) ಪಾಯಿಂಟ್ ಗಳಿಸಲು ಪ್ರಯತ್ನಿಸಿದರು

ಮೋಟರ್‌ಸ್ಪೋರ್ಟ್ಸ್ ಸ್ಪರ್ಧಿ ಗೌತಮ್ ಕದಂ ನಿಧನ



ಬೆಂಗಳೂರು: ನಗರದ ಅನುಭವಿ ಮೋಟರ್‌ಸ್ಪೋರ್ಟ್ಸ್ ಸ್ಪರ್ಧಿ ಗೌತಮ್ ಕದಂ (66) ಭಾನುವಾರ ನಿಧನರಾದರು. ಅವರು ಕ್ಯಾನ್ಸರ್‌ನಿಂದ ಬಳಲುತ್ತಿದ್ದರು.

1978–86ರ ಅವಧಿಯಲ್ಲಿ ಹಲವು ರ‍್ಯಾಲಿಗಳಲ್ಲಿ ಅವರು ಭಾಗವಹಿಸಿದ್ದರು. 1982ರಲ್ಲಿ ಕರ್ನಾಟಕ 1000 ರ‍್ಯಾಲಿ, ಚಾರ್‌ಮಿನಾರ್ ಚಾಲೆಂಜ್, ಕಾಫಿ 500 ರ‍್ಯಾಲಿಗಳಲ್ಲಿ ಜಯ ಸಾಧಿಸಿದ್ದರು.

1983ರಲ್ಲಿ ಯಮಹಾ 350 ಬೈಕ್‌ನೊಂದಿಗೆ ನಂದಿ ಹಿಲ್ಸ್ ರೇಸ್‌ನಲ್ಲಿ ದಾಖಲೆಯ 1 ತಾಸು 30 ನಿಮಿಷ 5 ಸೆಕೆಂಡುಗಳಲ್ಲಿ ಗುರಿ ತಲುಪಿದ್ದರು.

ವನ್ಯಜೀವಿ ಪ್ರೇಮಿಯಾಗಿದ್ದ ಅವರು 36 ಸಾವಿರಕ್ಕೂ ಅಧಿಕ ಮರಗಳನ್ನು ಬೆಳೆಸಿದ್ದರು. ಅಲ್ಲದೆ ಖಾಸಗಿ ವನ್ಯಜೀವಿ ಅಭಯಾರಣ್ಯವನ್ನು ನಿರ್ಮಿಸಿದ್ದರು.

ಭಾರತಕ್ಕೆ ಸರಣಿ ಕ್ಲೀನ್‌ಸ್ವೀಪ್ ಗುರಿ

ಕ್ರಿಕೆಟ್: ನ್ಯೂಜಿಲೆಂಡ್ ವಿರುದ್ಧ ಕೊನೆಯ ಏಕದಿನ ಪಂದ್ಯ ಇಂದು; ಶುಭಮನ್ ಮೇಲೆ ನಿರೀಕ್ಷೆ

ಇಂದೋರ್ (ಪಿಟಿಐ): ಸರಣಿ ಕ್ಲೀನ್‌ಸ್ವೀಪ್ ಮೇಲೆ ಕಣ್ಣಿಟ್ಟಿರುವ ರೋಹಿತ್ ಶರ್ಮಾ ಬಳಗ, ಮೂರನೇ ಹಾಗೂ ಕೊನೆಯ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಮಂಗಳವಾರ ಇಲ್ಲಿ ನ್ಯೂಜಿಲೆಂಡ್ ವಿರುದ್ಧ ಪೈಪೋಟಿ ನಡೆಸಲಿದೆ.

ಮೂರು ಪಂದ್ಯಗಳ ಸರಣಿಯನ್ನು ಈಗಾಗಲೇ 2–0 ರಲ್ಲಿ ಕೈವಶಮಾಡಿಕೊಂಡಿರುವ ಭಾರತ ತಂಡ, ಈ ಪಂದ್ಯದಲ್ಲಿ ಕೆಲವು ಪ್ರಯೋಗಗಳಿಗೆ ಮುಂದಾಗುವ ನಿರೀಕ್ಷೆಯಿದೆ. ಮೊದಲ ಎರಡು ಪಂದ್ಯಗಳಲ್ಲಿ ಆಡಲು ಅವಕಾಶ ಸಿಗದ ಕೆಲವರು ಇಂದೋರ್‌ನಲ್ಲಿ ಕಣಕ್ಕಿಳಿಯುವ ಸಾಧ್ಯತೆಯಿದೆ.

ಆರಂಭಿಕ ಬ್ಯಾಟರ್ ಶುಭಮನ್ ಗಿಲ್ ಮತ್ತು ರೋಹಿತ್ ಅವರು ಅತ್ಯುತ್ತಮ ಫಾರ್ಮ್‌ನಲ್ಲಿದ್ದಾರೆ. ಮೊದಲ ಪಂದ್ಯದಲ್ಲಿ ದ್ವಿಶತಕ ಗಳಿಸಿದ್ದ ಗಿಲ್, ಎರಡನೇ ಪಂದ್ಯದಲ್ಲಿ ಅಜೇಯ 40 ರನ್ ಪೇರಿಸಿದ್ದರು. ಇಶಾನ್ ಕಿಶನ್, ಹಾರ್ದಿಕ್ ಪಾಂಡ್ಯ ಮತ್ತು ಸೂರ್ಯಕುಮಾರ್ ಯಾದವ್ ಅವರಿಗೆ 'ಬ್ಯಾಟಿಂಗ್ ಪ್ರಾಕ್ಟೀಸ್' ಮಾಡಲು ಈ ಪಂದ್ಯ ಉತ್ತಮ ಅವಕಾಶ ಕಲ್ಪಿಸಿದೆ.

ನಾಲ್ಕು ಇನಿಂಗ್ಸ್‌ಗಳಲ್ಲಿ ಮೂರು ಶತಕ ಗಳಿಸಿ ಮಿಂಚಿದ್ದ ವಿರಾಟ್ ಕೊಹ್ಲಿ, ಈ ಸರಣಿಯಲ್ಲಿ ವಿಫಲರಾಗಿದ್ದಾರೆ. ಎರಡೂ ಪಂದ್ಯಗಳಲ್ಲಿ ಅವರು ಮಿಚೆಲ್ ಸ್ಯಾಂಟನರ್‌ಗೆ ವಿಕೆಟ್ ಒಪ್ಪಿಸಿದ್ದರು.

ಶುಭಮನ್ ಗಿಲ್ (ಎಡ) ಮತ್ತು ಇಶಾನ್ ಕಿಶನ್

ಎಡಗೈ ಸ್ಪಿನ್ನರ್‌ಗಳನ್ನು ಎದುರಿಸುವಲ್ಲಿ ಅವರು ತಡಬಡಾಯಿಸುವರು ಎಂಬುದು ಮತ್ತೆ ಬಯಲಾಗಿದೆ.

ಹಾರ್ದಿಕ್ ಪಾಂಡ್ಯ ಮತ್ತು ಸೂರ್ಯಕುಮಾರ್ ಯಾದವ್ ಅವರಿಗೆ ಟಿ20ಯಲ್ಲಿ ತೋರಿದ್ದ ಅಬ್ಬರದ ಆಟವನ್ನು ಏಕದಿನ ಪಂದ್ಯಗಳಲ್ಲೂ ಮುಂದುವರಿಸಲು ಆಗಿಲ್ಲ. ಇಂದೋರ್‌ನಲ್ಲಿ ಅವರಿಂದ ಸ್ಫೋಟಕ ಆಟವನ್ನು ನಿರೀಕ್ಷಿಸಲಾಗುತ್ತಿದೆ.

ಆತಿಥೇಯ ತಂಡದ ಬೌಲಿಂಗ್ ವಿಭಾಗದಲ್ಲಿ ಕೆಲವೊಂದು ಬದಲಾವಣೆಗಳನ್ನು ನಿರೀಕ್ಷಿಸಬಹುದು. ಇದುವರೆಗೆ ಅವಕಾಶ ಪಡೆಯದಿರುವ ಉಮ್ರಾನ್ ಮಲಿಕ್ ಮತ್ತು ಯಜುವೇಂದ್ರ ಚಾಹಲ್ ಅವರನ್ನು ಆಡಿಸುವ ಸಾಧ್ಯತೆಯಿದೆ. ಕುಲದೀಪ್ ಯಾದವ್‌ಗೆ ವಿಶ್ರಾಂತಿ ನೀಡಬಹುದು. ಎರಡನೇ ಏಕದಿನ ಪಂದ್ಯದಲ್ಲಿ ಭಾರತದ ವೇಗಿಗಳು ಮತ್ತು ಸ್ಪಿನ್ನರ್‌ಗಳು ಶಿಸ್ತಿನ ದಾಳಿ ನಡೆಸಿದ್ದರು.

ಮತ್ತೊಂದೆಡೆ ನ್ಯೂಜಿಲೆಂಡ್ ತಂಡ ಅಂತಿಮ ಪಂದ್ಯದಲ್ಲಿ ಸಮಾಧಾನಕರ ಗೆಲುವು ಪಡೆಯಲು ಪ್ರಯತ್ನಿಸಲಿದೆ. ಅದು ಸಾಧ್ಯವಾಗಬೇಕಾದರೆ ಬ್ಯಾಟಿಂಗ್‌ನಲ್ಲಿನ ತಪ್ಪುಗಳನ್ನು ತಿದ್ದಿಕೊಳ್ಳಬೇಕು. ಮೈಕಲ್ ಬ್ರೇಸ್‌ವೆಲ್ ಮತ್ತು ಮಿಚೆಲ್ ಸ್ಯಾಂಟನರ್ ಹೊರತುಪಡಿಸಿ ಉಳಿದವರಿಗೆ ದೊಡ್ಡ ಇನಿಂಗ್ಸ್ ಕಟ್ಟಲು ಸಾಧ್ಯವಾಗಿಲ್ಲ.

ಹೋಳ್ಕರ್ ಕ್ರೀಡಾಂಗಣದ ಪಿಚ್ ಬ್ಯಾಟರ್‌ಗಳಿಗೆ ನೆರವಾಗುವ ಸಾಧ್ಯತೆಯಿರುವುದರಿಂದ ಬೌಲರ್‌ಗಳ ಮೇಲೆ ಹೆಚ್ಚಿನ ಸವಾಲು ಇದೆ.

ನ್ಯೂಜಿಲೆಂಡ್ ತಂಡದ ನಾಯಕ ಟಾಮ್ ಲಥಾಮ್ –ಎಎಫ್‌ಪಿ ಚಿತ್ರ

ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್, ಇಶಾನ್ ಕಿಶನ್ (ವಿಕೆಟ್‌ಕೀಪರ್), ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ಕೆ.ಎಸ್. ಭರತ್ (ವಿಕೆಟ್‌ಕೀಪರ್), ರಜತ್ ಪಾಟೀದಾರ್, ವಾಷಿಂಗ್ಟನ್ ಸುಂದರ್, ಶಹಬಾಜ್ ಅಹಮದ್, ಶಾರ್ದೂಲ್ ಠಾಕೂರ್, ಯಜುವೇಂದ್ರ ಚಾಹಲ್, ಕುಲದೀಪ್ ಯಾದವ್, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಉಮ್ರಾನ್ ಮಲಿಕ್

ನ್ಯೂಜಿಲೆಂಡ್: ಟಾಮ್ ಲಥಾಮ್ (ನಾಯಕ), ಫಿನ್ ಅಲೆನ್, ಡಗ್ ಬ್ರೇಸ್‌ವೆಲ್, ಮೈಕಲ್ ಬ್ರೇಸ್‌ವೆಲ್, ಮಾರ್ಕ್ ಚಾಪ್‌ಮನ್, ಡೆವೊನ್ ಕಾನ್ವೆ, ಜೇಕಬ್ ಡಫಿ, ಲಾಕಿ ಫರ್ಗ್ಯುಸನ್, ಡೆರಿಲ್ ಮಿಚೆಲ್, ಹೆನ್ರಿ ನಿಕೊಲ್ಸ್, ಗ್ಲೆನ್ ಫಿಲಿಪ್ಸ್, ಮಿಚೆಲ್ ಸ್ಯಾಂಟನರ್, ಹೆನ್ರಿ ಶಿಪ್ಲಿ, ಈಶ್ ಸೋಧಿ, ಬ್ಲೇರ್ ಟಿಕ್ನರ್

ಪಂದ್ಯ ಆರಂಭ: ಮಧ್ಯಾಹ್ನ 1.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಡಬ್ಲ್ಯುಎಫ್‌ಐ ಅಧ್ಯಕ್ಷರ ವಿರುದ್ಧದ ಆರೋಪಗಳ ತನಿಖೆ

ಸಮಿತಿಗೆ ಮೇರಿ ಕೋಮ್ ನೇತೃತ್ವ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಮೇಲಿನ ಆರೋಪಗಳ ತನಿಖೆಗೆ ಕ್ರೀಡಾ ಸಚಿವಾಲಯ ನೇಮಿಸಿರುವ ಐವರು ಸದಸ್ಯರ ಮೇಲುಸ್ತುವಾರಿ ಸಮಿತಿಯನ್ನು ಮಹಿಳಾ ಬಾಕ್ಸರ್ ಎಂ.ಸಿ.ಮೇರಿ ಕೋಮ್ ಮುನ್ನಡೆಸಲಿದ್ದಾರೆ.

ಒಲಿಂಪಿಕ್ ಪದಕ ವಿಜೇತ ಕುಸ್ತಿಪಟು ಯೋಗೇಶ್ವರ ದತ್, ಬ್ಯಾಡ್ಮಿಂಟನ್ ಆಟಗಾರ್ತಿ ಮತ್ತು ಮಿಷನ್ ಒಲಿಂಪಿಕ್ ಸೆಲ್ ಸದಸ್ಯರಾದ ತೃಪ್ತಿ ಮುರ್ಗುಂಡೆ, ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಸ್ಕೀಮ್ (ಟಾಪ್ಸ್) ಮಾಜಿ ಸಿಇಒ ರಾಜಗೋಪಾಲನ್ ಮತ್ತು ಭಾರತ ಕ್ರೀಡಾ ಪ್ರಾಧಿಕಾರದ ಮಾಜಿ ಕಾರ್ಯನಿರ್ವಾಹಕ ನಿರ್ದೇಶಕರಾದ ರಾಧಿಕಾ ಶ್ರೀಮನ್ ಅವರು ಸಮಿತಿಯ ಇತರ ಸದಸ್ಯರು.

ಮೇರಿ ಕೋಮ್

ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರು ಸಮಿತಿಯ ಸದಸ್ಯರ ಹೆಸರನ್ನು ಸೋಮವಾರ ಪ್ರಕಟಿಸಿದರು. ಮೇಲುಸ್ತುವಾರಿ ಸಮಿತಿ ರಚಿಸುವ ಭರವಸೆಯನ್ನು ಅವರು ಶನಿವಾರ ನೀಡಿದ್ದರು. ಇದರಿಂದ ಕುಸ್ತಿಪಟುಗಳು ಮೂರು ದಿನಗಳ ಪ್ರತಿಭಟನೆಯನ್ನು ಕೊನೆಗೊಳಿಸಿದ್ದರು.

'ಡಬ್ಲ್ಯುಎಫ್‌ಐ ಅಧ್ಯಕ್ಷರು ಫೆಡರೇಷನ್‌ನ ಎಲ್ಲ ಚಟುವಟಿಕೆಗಳಿಂದ ದೂರವುಳಿಯಲಿದ್ದಾರೆ. ಫೆಡರೇಷನ್‌ನ ದೈನಂದಿನ ಆಡಳಿತವನ್ನು ಮೇಲುಸ್ತುವಾರಿ ಸಮಿತಿ ನೋಡಿಕೊಳ್ಳಲಿದೆ. ಡಬ್ಲ್ಯುಎಫ್‌ಐ ಮತ್ತು ಅದರ ಅಧ್ಯಕ್ಷ ಮೇಲಿನ ಗಂಭೀರ ಆರೋಪಗಳ ಬಗ್ಗೆ ತನಿಖೆಯನ್ನೂ ನಡೆಸಲಿದೆ' ಎಂದು ಠಾಕೂರ್ ಹೇಳಿದರು.

'ಆರೋಪಗಳ ತನಿಖೆಗೆ ಸಮಿತಿಗೆ ಒಂದು ತಿಂಗಳ ಗಡುವು ನೀಡಲಾಗಿದೆ. ಸಮಗ್ರ ತನಿಖೆಯ ಬಳಿಕ ವರದಿ ಒಪ್ಪಿಸಲಿದೆ' ಎಂದು ಮಾಹಿತಿ ನೀಡಿದರು.

ಮೇರಿ ಕೋಮ್ ಮತ್ತು ಯೋಗೇಶ್ವರ್ ಅವರು ಆರೋಪಗಳ ಕುರಿತ ತನಿಖೆಗೆ ಭಾರತ ಒಲಿಂಪಿಕ್ ಸಂಸ್ಥೆ ನೇಮಿಸಿದ್ದ ಏಳು ಸದಸ್ಯರ ಸಮಿತಿಯಲ್ಲೂ ಇದ್ದಾರೆ.

ಹಾಕಿ: ಫ್ರಾನ್ಸ್ ತಂಡದ ವಿರುದ್ಧ ಭರ್ಜರಿ ಜಯ

ಕ್ವಾರ್ಟರ್‌ಫೈನಲ್‌ಗೆ ಜರ್ಮನಿ

ಭುವನೇಶ್ವರ (ಪಿಟಿಐ): ಫ್ರಾನ್ಸ್ ಎದುರು ಭರ್ಜರಿ ಜಯ ಗಳಿಸಿದ ಜರ್ಮನಿ ತಂಡವು ಎಫ್‌ಐಎಚ್ ಪುರುಷರ ವಿಶ್ವಕಪ್ ಹಾಕಿ ಟೂರ್ನಿಯ ಎಂಟರಘಟ್ಟ ತಲುಪಿತು.

ಇಲ್ಲಿಯ ಕಳಿಂಗ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಕ್ರಾಸ್‌ಓವರ್ ಪಂದ್ಯದಲ್ಲಿ ಜರ್ಮನಿ 5–1ರಿಂದ ಫ್ರಾನ್ಸ್ ತಂಡವನ್ನು ಮಣಿಸಿತು.

ಪಂದ್ಯದ ಆರಂಭದಿಂದಲೇ ಪಾರಮ್ಯ ಮೆರೆದ ಜರ್ಮನಿ ತಂಡದ ಪರ ಮಿಟ್‌ಕಾವು ಮಾರ್ಕೊ 14ನೇ ನಿಮಿಷದಲ್ಲಿ ಫೀಲ್ಡ್ ಗೋಲು ದಾಖಲಿಸಿ ಮುನ್ನಡೆ ತಂದುಕೊಟ್ಟರು. ವೆಲ್ಲೆನ್ ನಿಕ್ಲಾಸ್ (18ನೇ ನಿ.), ಗ್ರಾಂಬಸ್ ಮ್ಯಾಟ್ಸ್ (23ನೇ ನಿ.) ಗಳಿಸಿದ ಗೋಲುಗಳು ತಂಡದ ಮುನ್ನಡೆಯನ್ನು 3–0ಗೆ ಹೆಚ್ಚಿಸಿದವು.

ಫ್ರಾನ್ಸ್ ತಂಡದ ಪೀಟರ್ ವ್ಯಾನ್ ಸ್ಟ್ರಾಟೆನ್ (ಎಡ) ಮತ್ತು ಜರ್ಮನಿಯ ಹ್ಯಾನೆಸ್ ಮುಲ್ಲರ್ ನಡುವೆ ಚೆಂಡಿಗಾಗಿ ಪೈಪೋಟಿ– ಪಿಟಿಐ ಚಿತ್ರ

24ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಟ್ರಾಂಪರ್ಟ್ಜ್ ಮೊರಿಜ್ ಗೋಲಿನಲ್ಲಿ ಪರಿವರ್ತಿಸಿ ಜರ್ಮನಿ ಮುನ್ನಡೆಯನ್ನು ಹಿಗ್ಗಿಸಿದರು.

ಗೋಲಿಗಾಗಿ ಪ್ರಯತ್ನಿಸುತ್ತಲೇ ಇದ್ದ ಫ್ರಾನ್ಸ್ 57ನೇ ನಿಮಿಷದಲ್ಲಿ ಯಶಸ್ಸು ಸಾಧಿಸಿತು. ಪೆನಾಲ್ಟಿ ಕಾರ್ನರ್‌ನಲ್ಲಿ ಗೊಯೆತ್ ಫ್ರಾಂಕೊಯಿಸ್ ಚೆಂಡನ್ನು ಗುರಿ ಸೇರಿಸಿದರು. ಇದಾದ ಎರಡು ನಿಮಿಷಗಳ ಬಳಿಕ ಪೆಲ್ಲಾಟ್ ಗೊಂಜಾಲೊ ಜರ್ಮನಿ ತಂಡದ ಪರ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಐದನೇ ಗೋಲು ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಕೊರಿಯಾ ಪೆನಾಲ್ಟಿ ಶೂಟೌಟ್‌ನಲ್ಲಿ 3–2ರಿಂದ ಅರ್ಜೆಂಟೀನಾವನ್ನು ಮಣಿಸಿ ಎಂಟರಘಟ್ಟ ತಲುಪಿತು.

ಇಂದಿನ ಪಂದ್ಯಗಳು (ಕ್ವಾರ್ಟರ್‌ಫೈನಲ್ಸ್)

ಆಸ್ಟ್ರೇಲಿಯಾ– ಸ್ಪೇನ್

ಆರಂಭ: ಸಂಜೆ 4.30

ಬೆಲ್ಜಿಯಂ– ನ್ಯೂಜಿಲೆಂಡ್

ಆರಂಭ: ಸಂಜೆ 7

ಲೈವ್ ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



ದಾಂಪತ್ಯ ಜೀವನಕ್ಕೆ

ಭಾರತ ಕ್ರಿಕೆಟ್ ತಂಡದ ಬ್ಯಾಟರ್ ಕರ್ನಾಟಕದ ಕೆ.ಎಲ್.ರಾಹುಲ್ ಅವರ ವಿವಾಹವು ಬಾಲಿವುಡ್ ನಟ ಸುನಿಲ್ ಶೆಟ್ಟಿ ಅವರ ಪುತ್ರಿ ಅಥಿಯಾ ಶೆಟ್ಟಿ ಅವರೊಂದಿಗೆ ಸೋಮವಾರ ನೆರವೇರಿತು. ಮುಂಬೈ ಬಳಿಯ ಖಂಡಾಲಾದಲ್ಲಿರುವ ಸುನಿಲ್ ಶೆಟ್ಟಿ ಅವರ ಫಾರ್ಮ್‌ಹೌಸ್‌ನಲ್ಲಿ ನಡೆದ ಸಮಾರಂಭದಲ್ಲಿ ಕ್ರಿಕೆಟಿಗರು, ಬಾಲಿವುಡ್ ತಾರೆಯರು ಪಾಲ್ಗೊಂಡರು –ಪಿಟಿಐ ಚಿತ್ರ

ಡಬ್ಲ್ಯುಐಪಿಎಲ್ ತಂಡ ಹರಾಜು: ಬಿಸಿಸಿಐಗೆ ಜಾಕ್‌ಪಾಟ್?

₹4 ಸಾವಿರ ಕೋಟಿ ಗಳಿಕೆ ನಿರೀಕ್ಷೆ

ನವದೆಹಲಿ (ಪಿಟಿಐ): ಚೊಚ್ಚಲ ಮಹಿಳಾ ಐಪಿಎಲ್ (ಡಬ್ಲ್ಯುಐಪಿಎಲ್) ಟಿ20 ಟೂರ್ನಿಯಲ್ಲಿ ಪಾಲ್ಗೊಳ್ಳುವ ಐದು ತಂಡಗಳ ಹರಾಜು ಪ್ರಕ್ರಿಯೆ ಬುಧವಾರ ನಡೆಯಲಿದ್ದು, ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಜಾಕ್‌ಪಾಟ್ ನಿರೀಕ್ಷೆಯಲ್ಲಿದೆ.

'ಐದು ತಂಡಗಳ ಹರಾಜಿನಲ್ಲಿ ಬಿಸಿಸಿಐ ಸುಮಾರು ₹ 4 ಸಾವಿರ ಕೋಟಿ ಗಳಿಸಬಹುದೆಂದು ಅಂದಾಜಿಸಲಾಗಿದೆ. ತಂಡಗಳನ್ನು ಕೊಳ್ಳಲು ಕೆಲವು ಕಂಪನಿಗಳ ನಡುವೆ ತುರುಸಿನ ಪೈಪೋಟಿ ನಡೆಯುವ ಸಾಧ್ಯತೆಯಿದೆ' ಎಂದು ಮಾರುಕಟ್ಟೆ ತಜ್ಞರೊಬ್ಬರು ಹೇಳಿದ್ದಾರೆ.

'ಎಲ್ಲ ತಂಡಗಳೂ ₹ 500 ಕೋಟಿಗಿಂತ ಹೆಚ್ಚಿನ ಬೆಲೆಗೆ ಮಾರಾಟವಾಗಬಹುದು. ಕೆಲವು ತಂಡಗಳ ಮೌಲ್ಯ ₹ 800 ಕೋಟಿಯಷ್ಟಾದರೂ ಅಚ್ಚರಿ ಪಡಬೇಕಿಲ್ಲ' ಎಂದು ತಿಳಿಸಿದ್ದಾರೆ.

'30 ಕ್ಕೂ ಅಧಿಕ ಕಂಪನಿಗಳು ಹರಾಜಿನಲ್ಲಿ ಪಾಲ್ಗೊಳ್ಳಲು ₹ 5 ಲಕ್ಷ ನೀಡಿ ಅರ್ಜಿ ಪಡೆದುಕೊಂಡಿವೆ. ಐಪಿಎಲ್ ಟೂರ್ನಿಯ ಎಲ್ಲ 10 ತಂಡಗಳ ಒಡೆತನ ಹೊಂದಿರುವ ಕಂಪನಿಗಳು ಮಹಿಳಾ ಟೂರ್ನಿಯ ತಂಡಗಳನ್ನು ಖರೀದಿಸಲು ಸ್ಪರ್ಧೆಯಲ್ಲಿವೆ' ಎಂದು ಮೂಲಗಳು ಹೇಳಿವೆ.

ಪ್ರಮುಖ ಕಾರ್ಪೊರೇಟ್ ಸಂಸ್ಥೆಗಳಾದ ಅದಾನಿ ಸಮೂಹ, ಟೊರೆಂಟ್ ಸಮೂಹ, ಹಲ್ದಿರಾಮ್ಸ್, ಕ್ಯಾಪ್ರಿ ಗೋಬಲ್, ಕೊಟಕ್ ಮತ್ತು ಆದಿತ್ಯ ಬಿರ್ಲಾ ಸಮೂಹ ಕಂಪನಿಗಳು ತಂಡಗಳನ್ನು ಖರೀದಿಸಲು ಆಸಕ್ತಿ ತೋರಿವೆ.

ಐಪಿಎಲ್ ಫ್ರಾಂಚೈಸ್‌ಗಳಾದ ಮುಂಬೈ ಇಂಡಿಯನ್ಸ್, ರಾಜಸ್ತಾನ ರಾಯಲ್ಸ್, ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಕೋಲ್ಕತ್ತ ನೈಟ್ ರೈಡರ್ಸ್‌ನ ಮಾಲೀಕರು, ಪುರುಷರ ತಂಡದ ಜತೆ ಮಹಿಳಾ ತಂಡದ ಮಾಲೀಕತ್ವ ವಹಿಸಿಕೊಳ್ಳಲು ಪೈಪೋಟಿ ನಡೆಸಲಿದ್ದಾರೆ.

ಮಹಿಳಾ ಐಪಿಎಲ್‌ನ ಮೊದಲ ಆವೃತ್ತಿಯ ಟೂರ್ನಿ ಮಾರ್ಚ್‌ನಲ್ಲಿ ಮುಂಬೈನಲ್ಲಿ ನಡೆಸಲು ಉದ್ದೇಶಿಸಲಾಗಿದೆ. ಈ ಟೂರ್ನಿಯ ಮುಂದಿನ ಐದು ವರ್ಷಗಳ ಪ್ರಸಾರ ಹಕ್ಕನ್ನು ವಯಾಕಾಮ್ 18 ಸಂಸ್ಥೆ ₹ 951 ಕೋಟಿಗೆ ಈಚೆಗೆ ತನ್ನದಾಗಿಸಿಕೊಂಡಿತ್ತು.

ರಣಜಿ ಕ್ರಿಕೆಟ್: ಮಯಂಕ್ ಬಳಗಕ್ಕೆ ಗೆಲುವಿನ ವಿಶ್ವಾಸ

ಕರ್ನಾಟಕಕ್ಕೆ ಜಾರ್ಖಂಡ್ ಸವಾಲು

ಜಮ್ಶೆಡ್‌ಪುರ: ನಾಕೌಟ್ ಹಂತದಲ್ಲಿ ಈಗಾಗಲೇ ಸ್ಥಾನ ಖಚಿತಪಡಿಸಿಕೊಂಡಿರುವ ಕರ್ನಾಟಕ ತಂಡ, ಮಂಗಳವಾರ ಇಲ್ಲಿ ಆರಂಭವಾಗಲಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಾರ್ಖಂಡ್ ತಂಡದ ಸವಾಲು ಎದುರಿಸಲಿದೆ.

ಕೀನನ್ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಗೆದ್ದು ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳುವುದು ಮಯಂಕ್ ಅಗರವಾಲ್ ಬಳಗದ ಗುರಿ. ಕರ್ನಾಟಕ ತಂಡ ಆರು ಪಂದ್ಯಗಳಿಂದ 29 ಪಾಯಿಂಟ್ಸ್ ಗಳಿಸಿದ್ದು, 'ಸಿ' ಗುಂಪಿನಲ್ಲಿ ಅಗ್ರಸ್ಥಾನದಲ್ಲಿದೆ.

23 ಪಾಯಿಂಟ್ಸ್ ಹೊಂದಿರುವ ಜಾರ್ಖಂಡ್ ಎರಡನೇ ಸ್ಥಾನದಲ್ಲಿದೆ. ಕೇರಳ ಮತ್ತು ರಾಜಸ್ತಾನ ತಲಾ 20 ಪಾಯಿಂಟ್ಸ್ ಹೊಂದಿವೆ. ಗೋವಾ ತಂಡ 18 ಅಂಕಗಳನ್ನು ಗಳಿಸಿದೆ. ಮಂಗಳವಾರ ಆರಂಭವಾಗುವ 'ಸಿ' ಗುಂಪಿನ ಇತರ ಪಂದ್ಯಗಳಲ್ಲಿ ಕೇರಳ–ಪುದುಚೇರಿ, ರಾಜಸ್ಥಾನ– ಸರ್ವಿಸಸ್ ಮತ್ತು ಗೋವಾ– ಛತ್ತೀಸ್‌ಗಢ ತಂಡಗಳು ಎದುರಾಗಲಿವೆ.

ಕರ್ನಾಟಕದ ಬಳಿಕ ಎರಡನೇ ಸ್ಥಾನ ಪಡೆದು ನಾಕೌಟ್ ಹಂತ ಪ್ರವೇಶಿಸಲು ನಾಲ್ಕು ತಂಡಗಳ ನಡುವೆ ಪೈಪೋಟಿ ಇದೆ. ಆದ್ದರಿಂದ ಎರಡನೇ ಸ್ಥಾನ ಉಳಿಸಿಕೊಳ್ಳಲು, ಕರ್ನಾಟಕದ ವಿರುದ್ಧ ಉತ್ತಮ ಪ್ರದರ್ಶನ ನೀಡುವ ಸವಾಲು ಜಾರ್ಖಂಡ್ ಮುಂದಿದೆ.

ಕರ್ನಾಟಕ ತಂಡದ ವಿದ್ವತ್ ಕಾವೇರಪ್ಪ

ಆಟಗಾರರ 'ಕಾರ್ಯಭಾರ ನಿರ್ವಹಣೆ' ಭಾಗವಾಗಿ ಕರ್ನಾಟಕ ತಂಡದ ಆಡಳಿತವು ಕೆಲವರಿಗೆ ವಿಶ್ರಾಂತಿ ನೀಡುವ ಸಾಧ್ಯತೆಯೂ ಇದೆ. ಕೇರಳ ವಿರುದ್ಧದ ಪಂದ್ಯದಲ್ಲಿ ವೇಗದ ಬೌಲರ್ ವಿದ್ವತ್ ಕಾವೇರಪ್ಪ ಅವರಿಗೆ ವಿಶ್ರಾಂತಿ ನೀಡಲಾಗಿತ್ತು. ಈ ಪಂದ್ಯದಲ್ಲಿ ಇನ್ನೊಬ್ಬ ವೇಗಿಗೆ ವಿಶ್ರಾಂತಿ ನೀಡಿ, ರೋನಿತ್ ಮೋರೆ ಅವರನ್ನು ಕಣಕ್ಕಿಳಿಸುವ ಚಿಂತನೆ ನಡೆದಿದೆ.

6 ಪಂದ್ಯಗಳಿಂದ 27 ವಿಕೆಟ್ ಪಡೆದಿರುವ ವೈಶಾಖ ವಿಜಯಕುಮಾರ್ ಅವರು ಈ ಋತುವಿನಲ್ಲಿ ಕರ್ನಾಟಕದ ಅತ್ಯಂತ ಯಶಸ್ವಿ ವೇಗದ ಬೌಲರ್ ಎನಿಸಿಕೊಂಡಿದ್ದಾರೆ. ಅವರಿಗೆ ವಿಶ್ರಾಂತಿ ನೀಡಿದರೆ ವಿ.ಕೌಶಿಕ್, ವಿದ್ವತ್ ಮತ್ತು ಮೋರೆ ಅವರು ಜಾರ್ಖಂಡ್ ವಿರುದ್ಧ ಆಡಲಿದ್ದಾರೆ.

ಕೆ.ಗೌತಮ್ ಸೇರಿದಂತೆ ಇಬ್ಬರು ಸ್ಪಿನ್ನರ್‌ಗಳನ್ನು ಆಡಿಸಲು ನಿರ್ಧರಿಸಿದರೆ, ಶುಭಾಂಗ್ ಹೆಗ್ಡೆ ಮತ್ತು ಶ್ರೇಯಸ್ ಗೋಪಾಲ್ ಅವರಲ್ಲೊಬ್ಬರು ಅಂತಿಮ ಇಲೆವೆನ್‌ನಿಂದ ಹೊರಬೀಳಲಿದ್ದಾರೆ.

ಜಾರ್ಖಂಡ್ ತಂಡ ಸ್ಪಿನ್ನರ್‌ಗಳಾದ ಶಹಬಾಜ್ ನದೀಮ್ ಮತ್ತು ಅನುಕೂಲ್ ರಾಯ್ ಅವರನ್ನು ನೆಚ್ಚಿಕೊಂಡಿದೆ.

ಐಸಿಸಿ ಟಿ20 ತಂಡ: ಕೊಹ್ಲಿ, ಸೂರ್ಯಗೆ ಸ್ಥಾನ

ದುಬೈ (ಪಿಟಿಐ): ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್ ಮತ್ತು ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು 2022ರ ಸಾಲಿನ ಐಸಿಸಿ ಪುರುಷರ 'ವರ್ಷದ ಟಿ20 ತಂಡ'ದಲ್ಲಿ ಸ್ಥಾನ ಪಡೆದಿದ್ದಾರೆ. ಮಹಿಳಾ ತಂಡದಲ್ಲಿ ಭಾರತದ ನಾಲ್ವರಿಗೆ ಅವಕಾಶ ದೊರೆತಿದೆ.

ಏಷ್ಯಾ ಕಪ್ ಟೂರ್ನಿಯಲ್ಲಿ ಹಳೆಯ ಲಯಕ್ಕೆ ಮರಳಿದ್ದ ಕೊಹ್ಲಿ ಐದು ಪಂದ್ಯಗಳಿಂದ 276 ರನ್ ಕಲೆಹಾಕಿದ್ದರು. ಅಫ್ಗಾನಿಸ್ತಾನ ವಿರುದ್ಧ ಮೂರಂಕಿಯ ಗಡಿ ದಾಟಿ ಶತಕದ ಬರ ನೀಗಿಸಿದ್ದರು. ಟಿ20 ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನ ವಿರುದ್ಧ ಅಮೋಘ ಆಟವಾಡಿ 82 ರನ್ ಗಳಿಸಿದ್ದರಲ್ಲದೆ, ಟೂರ್ನಿಯಲ್ಲಿ ಒಟ್ಟು 296 ರನ್ ಪೇರಿಸಿದ್ದರು.

ವಿರಾಟ್ ಕೊಹ್ಲಿ

ಸೂರ್ಯಕುಮಾರ್ ಅವರು 2022ರ ಋತುವಿನಲ್ಲಿ 1,164 ರನ್ ಕಲೆಹಾಕಿದ್ದರು. ಎರಡು ಶತಕ ಮತ್ತು ಒಂಬತ್ತು ಅರ್ಧಶತಕ ಗಳಿಸಿದ್ದರು. ಮಾತ್ರವಲ್ಲ, ವಿಶ್ವ ರ‍್ಯಾಂಕಿಂಗ್‌ನಲ್ಲಿ ಟಿ20 ಬ್ಯಾಟರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ್ದರು. 11 ಸದಸ್ಯರ ತಂಡವನ್ನು ಮುನ್ನಡೆಸುವ ಗೌರವ ಇಂಗ್ಲೆಂಡ್‌ನ ಜೋಸ್ ಬಟ್ಲರ್‌ಗೆ ಲಭಿಸಿದೆ. ಪಾಕಿಸ್ತಾನದ ಮೊಹಮ್ಮದ್ ರಿಜ್ವಾನ್ ಮತ್ತು ಹ್ಯಾರಿಸ್ ರವೂಫ್ ಅವರು ತಂಡದಲ್ಲಿದ್ದಾರೆ.

ಐಸಿಸಿ ವರ್ಷದ ಮಹಿಳಾ ತಂಡದಲ್ಲಿ ಭಾರತದ ಸ್ಮೃತಿ ಮಂದಾನ, ದೀಪ್ತಿ ಶರ್ಮಾ, ರಿಚಾ ಘೋಷ್ ಮತ್ತು ರೇಣುಕಾ ಸಿಂಗ್ ಅವರಿಗೆ ಸ್ಥಾನ ಲಭಿಸಿದೆ.

ಐಸಿಸಿ ವರ್ಷದ ಟಿ20 ತಂಡ: ಪುರುಷರು: ಜೋಸ್ ಬಟ್ಲರ್ (ನಾಯಕ/ ವಿಕೆಟ್ ಕೀಪರ್), ಮೊಹಮ್ಮದ್ ರಿಜ್ವಾನ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ಗ್ಲೆನ್ ಫಿಲಿಪ್ಸ್, ಸಿಕಂದರ್ ರಜಾ, ಹಾರ್ದಿಕ್ ಪಾಂಡ್ಯ, ಸ್ಯಾಮ್ ಕರನ್, ವಣಿಂದು ಹಸರಂಗ, ಹ್ಯಾರಿಸ್ ರವೂಫ್, ಜೋಶ್ ಲಿಟ್ಲ್

ಮಹಿಳೆಯರು: ಸೋಫಿ ಡಿವೈನ್ (ನಾಯಕಿ), ಸ್ಮೃತಿ ಮಂದಾನ, ಬೆಥ್ ಮೂನಿ, ಆಶ್ ಗಾರ್ಡನರ್, ತಹ್ಲಿಯ ಮೆಕ್‌ಗ್ರಾ, ನಿದಾ ದರ್, ದೀಪ್ತಿ ಶರ್ಮಾ, ರಿಚಾ ಘೋಷ್ (ವಿಕೆಟ್ ಕೀಪರ್), ಸೋಫಿ ಎಕ್ಲೆಸ್ಟೋನ್, ಇನೊಕಾ ರಣವೀರ, ರೇಣುಕಾ ಸಿಂಗ್

ದಿವ್ಯಾ ಶತಕ: ಕರ್ನಾಟಕ ತಂಡ ಜಯಭೇರಿ

ಬೆಂಗಳೂರು: ದಿವ್ಯಾ ಜ್ಞಾನಾನಂದ (ಔಟಾಗದೆ 100) ಅವರು ಗಳಿಸಿದ ಶತಕದ ಬಲದಿಂದ ಕರ್ನಾಟಕ ತಂಡವು ಬಿಸಿಸಿಐ ಏಕದಿನ ಟ್ರೋಫಿ ಮಹಿಳಾ ಕ್ರಿಕೆಟ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಕರ್ನಾಟಕ ಒಂಬತ್ತು ವಿಕೆಟ್‌ಗಳಿಂದ ತಮಿಳುನಾಡು ತಂಡವನ್ನು ಸೋಲಿಸಿತು.

ದಿವ್ಯಾ

ಮೊದಲು ಬ್ಯಾಟ್ ಮಾಡಿದ ತಮಿಳುನಾಡು ತಂಡದವರು 50 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 157 ರನ್ ಗಳಿಸಿದರು. ಕರ್ನಾಟಕ ಈ ಗುರಿಯನ್ನು 27.3 ಓವರ್‌ಗಳಲ್ಲಿ 1 ವಿಕೆಟ್ ಕಳೆದುಕೊಂಡು ತಲುಪಿತು. 81 ಎಸೆತಗಳನ್ನು ಎದುರಿಸಿದ ದಿವ್ಯಾ 16 ಬೌಂಡರಿ ಮತ್ತು ಎರಡು ಸಿಕ್ಸರ್ ಸಿಡಿಸಿದರು.

ಸಂಕ್ಷಿಪ್ತ ಸ್ಕೋರು: ತಮಿಳುನಾಡು: 50 ಓವರ್‌ಗಳಲ್ಲಿ 8 ವಿಕೆಟ್‌ಗೆ 157 (ಎಸ್. ಅನುಷಾ ಔಟಾಗದೆ 57, ಕೆ.ಎನ್. ರಮ್ಯಶ್ರೀ 23; ಮೋನಿಕಾ ಸಿ. ಪಟೇಲ್ 28ಕ್ಕೆ 2, ಸಹನಾ ಎಸ್. ಪವಾರ್ 37ಕ್ಕೆ 2). ಕರ್ನಾಟಕ: 27.3 ಓವರ್‌ಗಳಲ್ಲಿ 1 ವಿಕೆಟ್‌ಗೆ 163 (ಶುಭಾ ಸತೀಶ್ ಔಟಾಗದೆ 38, ವೃಂದಾ ದಿನೇಶ್ 23, ದಿವ್ಯಾ ಜ್ಞಾನಾನಂದ ಔಟಾಗದೆ 100). ಫಲಿತಾಂಶ: ಕರ್ನಾಟಕ ತಂಡಕ್ಕೆ 9 ವಿಕೆಟ್‌ಗಳ ಜಯ

ಹಾಕಿ: ಓಂ ಸಾಯಿ ತಂಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧಾರವಾಡದ ಓಂ ಸಾಯಿ ಹಾಕಿ ಕ್ಲಬ್ ತಂಡದವರು ಕೆಎಸ್‌ಎಚ್‌ಎ 'ಎ' ಡಿವಿಷನ್ ಹಾಕಿ ಲೀಗ್‌ನಲ್ಲಿ ಗೆದ್ದರು.

ಸೋಮವಾರ ನಡೆದ ಪಂದ್ಯದಲ್ಲಿ ಓಂ ಸಾಯಿ ತಂಡ 5–4 ಗೋಲುಗಳಿಂದ ಬೆಂಗಳೂರು ಯುನೈಟೆಡ್ ಹಾಕಿ ಕ್ಲಬ್ ತಂಡವನ್ನು ಮಣಿಸಿತು. ವಿಜಯಿ ತಂಡದ ಎಂ.ಅರುಣ್ ನಾಲ್ಕು ಗೋಲುಗಳನ್ನು (29, 41, 53, 56ನೇ ನಿ.) ಗಳಿಸಿದರೆ, ಮತ್ತೊಂದು ಗೋಲನ್ನು ಯಶ್ವಿನ್ (23) ತಂದಿತ್ತರು.

ಬೆಂಗಳೂರು ಯುನೈಟೆಡ್ ಪರ ಮಹೇಶ್ವರನ್ (24, 26 ಮತ್ತು 46ನೇ ನಿ.) ಹಾಗೂ ಪವನ್ (35) ಚೆಂಡನ್ನು ಗುರಿ ಸೇರಿಸಿದರು.

ಇನ್ನೊಂದು ಪಂದ್ಯದಲ್ಲಿ ಬಾಂಬರ್ಸ್ ಹಾಕಿ ಕ್ಲಬ್ 2–1 ಗೋಲುಗಳಿಂದ ರೈಸಿಂಗ್ ಸ್ಟಾರ್ ಹಾಕಿ ಕ್ಲಬ್ ತಂಡವನ್ನು ಮಣಿಸಿತು.

ಮನೋಜ್ ಮಿಂಚಿನ ಬೌಲಿಂಗ್

ಪ್ರಜಾವಾಣಿ ವಾರ್ತೆ

ಮೈಸೂರು: ಮನೋಜ್ ಎಸ್. ಭಾಂಡಗೆ ಅವರು ಮಿಂಚಿನ ಬೌಲಿಂಗ್ ಮೂಲಕ ಹಿಮಾಚಲ ಪ್ರದೇಶ ತಂಡ ಭಾರಿ ಮುನ್ನಡೆ ಗಳಿಸುವುದನ್ನು ತಡೆದರು.

ಇಲ್ಲಿನ ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಹಿಮಾಚಲ ಪ್ರದೇಶ ಸೋಮವಾರ 214 ರನ್‌ಗಳಿಗೆ ಆಲೌಟಾಯಿತು. ಕರ್ನಾಟಕ ಮೊದಲ ಇನಿಂಗ್ಸ್‌ನಲ್ಲಿ 166 ರನ್ ಗಳಿಸಿತ್ತು. ಆರ್.ಐ.ಠಾಕೂರ್ (77 ರನ್, 4x5, 6x3) ಬ್ಯಾಟಿಂಗ್ ಬಲದಿಂದ ದೊಡ್ಡ ಮೊತ್ತ ಕಲೆ ಹಾಕುತ್ತಿದ್ದ ಎದುರಾಳಿ ತಂಡಕ್ಕೆ ಮನೋಜ್ (47ಕ್ಕೆ 4) ಆಘಾತ ನೀಡಿದರು. ಅವರಿಗೆ ಸಾಥ್ ನೀಡಿದ ರೋಹಿತ್ ಕುಮಾರ್ 37 ರನ್‌ಗಳಿಗೆ ಎರಡು ವಿಕೆಟ್ ಪಡೆದರು.

ಏಳನೇ ಕ್ರಮಾಂಕದಲ್ಲಿ ಆಡಲು ಬಂದ ಎ.ಎಸ್.ಜಾಮ್ವಾಲ್ (57 ರನ್, 4x2, 6x3) ತಂಡದ ಮೊತ್ತವನ್ನು 200ರ ಗಡಿ ದಾಟಿಸಿದರು.

ಮನೋಜ್

2ನೇ ಇನ್ನಿಂಗ್ಸ್ ಆರಂಭಿಸಿದ ಕೆಎಸ್‌ಸಿಎ ತಂಡ ಲೋಚನ್, ಪರೀಕ್ಷಿತ್ ವಿಕೆಟ್ ಕಳೆದುಕೊಂಡಿತು. ಆಗ ನಾಯಕ ಕಿಶನ್ ಎಸ್. ಬಿದರೆ (ಬ್ಯಾಟಿಂಗ್ 34) ಹಾಗೂ ಭಾಂಡಗೆ (ಬ್ಯಾಟಿಂಗ್ 14) ಆಸರೆಯಾದರು. ದಿನದಾಟದ ಅಂತ್ಯಕ್ಕೆ 4 ವಿಕೆಟ್ ನಷ್ಟಕ್ಕೆ 96 ರನ್ ಗಳಿಸಿದ ರಾಜ್ಯ 48 ರನ್‌ಗಳ ಮುನ್ನಡೆ ಪಡೆದಿದೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಕರ್ನಾಟಕ 166. ಹಿಮಾಚಲ ಪ್ರದೇಶ 67.4 ಓವರ್‌ಗಳಲ್ಲಿ 214 (ಆರ್.ಐ.ಠಾಕೂರ್ 77, ಎ.ಎಸ್. ಜಾಮ್ವಾಲ್ 57, ಎಂ.ಎಸ್.ಭಾಂಡಗೆ 47ಕ್ಕೆ 4). ಎರಡನೇ ಇನಿಂಗ್ಸ್: ಕರ್ನಾಟಕ 25 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 96 (ಕಿಶನ್ ಎಸ್.ಬಿದರೆ ಬ್ಯಾಟಿಂಗ್ 34, ಮನೋಜ್ ಭಾಂಡಗೆ ಬ್ಯಾಟಿಂಗ್ 14, ಮುಕುಲ್ ನೇಗಿ 27ಕ್ಕೆ 2)

ಹಾಕಿ: ಭಾರತ ಮಹಿಳೆಯರಿಗೆ ಸೋಲು

ಕೇಪ್‌ಟೌನ್ (ಪಿಟಿಐ): ಭಾರತ ಮಹಿಳಾ ಹಾಕಿ ತಂಡವು ನೆದರ್ಲೆಂಡ್ಸ್ ವಿರುದ್ಧ ಇಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ 1–3ರಿಂದ ನೆದರ್ಲೆಂಡ್ಸ್ ವಿರುದ್ಧ ಸೋತಿತು.

ಭಾರತದ ಪರ ಬ್ಯೂಟಿ ಡಂಗ್‌ಡಂಗ್ ಫೀಲ್ಡ್ ಗೋಲು ದಾಖಲಿಸಿ ಮುನ್ನಡೆ ತಂದುಕೊಟ್ಟರು. ಆದರೆ ಫೆಲಿಸ್ ಅಲ್ಬರ್ಸ್, ಯಿಬ್ಬಿ ಜಾನ್ಸೆನ್ ಮತ್ತು ಫ್ರೀಕ್ ಮೊಯಿಸ್ ಗಳಿಸಿದ ಗೋಲುಗಳಿಂದ ನೆದರ್ಲೆಂಡ್ಸ್ ಗೆದ್ದಿತು.

ದಕ್ಷಿಣ ಆಫ್ರಿಕಾ ಎದುರಿನ ನಾಲ್ಕು ಪಂದ್ಯಗಳ ಸರಣಿಯಲ್ಲಿ 3–0 ವಿಜಯ ಸಾಧಿಸಿದ್ದ ಭಾರತ ಇಲ್ಲಿ ನಿರಾಸೆ ಅನುಭವಿಸಿತು.